ಸಂಸ್ಕೃತ ವ್ಯಾಕರಣ ದೀಪಿಕಾ

ಪ್ರೊ. ಗುರುಪಾದ ಕೆ.ಹೆಗಡೆ

ಸಂಸ್ಕೃತ ವ್ಯಾಕರಣ ದೀಪಿಕಾ

ಪ್ರೊ. ಗುರುಪಾದ ಕೆ. ಹೆಗಡೆ, ಎಂ.ಎ.

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೨೦೦೨

Rarest Archiver

SAMSKRITA VYAKARANADEEPIKA by Prof. Gurupad K. Hegde, M.A. Rtd. Prof. of Sanskrit, Lal Bahadur College, Sagar ; Published by the Director, Prasaranga, University of Mysore, Manasagangothri, Mysore - 570006: First Edition : 1976; Second Edition -2002 Demy octavo, XIII + 400; Price : 100/-

ಮೊದಲನೆಯ ಆವೃತ್ತಿ : ೧೯೭೬

ಎರಡನೆಯ ಆವೃತ್ತಿ : ೨೦೦೨

© ಹಕ್ಕುಗಳು : ಲೇಖಕರವು

Published under the centrally sponsored scheme of production of books and literature in regional languages at the university level of the Government of India in the Ministry of Education and Social Welfare, Department of Culture, New Delhi

ಪ್ರಕಾಶಕರು : ನಿರ್ದೇಶಕರು, ಪ್ರಸಾರಾಂಗ, ಮೈಸೂರುವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು ೫೭೦೦೦೬

ಮುದ್ರಕರು : ವಿಶ್ವವಿದ್ಯಾನಿಲಯ ಮುದ್ರಣಾಲಯ, ಮಾನಸಗಂಗೋತ್ರಿ, ಮೈಸೂರು ೫೭೦೦೬

Rarest Archiver

ಸಂಸ್ಕೃತ ವ್ಯಾಕರಣದೀಪಿಕಾ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

Rarest Archiver

Rarest Archiver

ಪ್ರಕಾಶಕರ ಮಾತು

ಪ್ರಸಾರಾಂಗದ ವತಿಯಿಂದ ಶ್ರೀ ಗುರುಪಾದ ಕೆ. ಹೆಗಡೆಯವರ "ಸಂಸ್ಕೃತ ವ್ಯಾಕರಣ ದೀಪಿಕಾ" ಗ್ರಂಥದ ಎರಡನೆ ಮುದ್ರಣ ಹೊರಬರುತ್ತಿದೆ. 1976ರಲ್ಲಿ ಮೊದಲ ಬಾರಿಗೆ ಪ್ರಕಟವಾಗಿದ್ದ ಈ ಹೊತ್ತಗೆಯ ಪ್ರತಿಗಳು ಸಾಕಷ್ಟು ಹಿಂದೆಯೆ ಮುಗಿದುಹೋಗಿದ್ದು ಕಾರಣಾಂತರಗಳಿಂದ ಇದರ ಮರುಮುದ್ರಣವನ್ನು ಹೊರತರಲಾಗಿರಲಿಲ್ಲ. ಸಂಸ್ಕೃತ ವಾಙ್ಮಯವನ್ನು ಅಧ್ಯಯನ ಮಾಡುವವರಿಗೆ ವ್ಯಾಕರಣದ ಜ್ಞಾನ ಆವಶ್ಯಕ ಮತ್ತು ಅನಿವಾರ್ಯ. ಸಂಸ್ಕೃತ ಭಾಷಾಸಾಹಿತ್ಯ ಜಿಜ್ಞಾಸುಗಳು ಅಷ್ಟಾಧ್ಯಾಯೀ, ಸಿದ್ಧಾಂತಕೌಮುದೀ, ಲಘುಸಿದ್ಧಾಂತಕೌಮುದೀ ಇಂಥ ಕೃತಿಗಳನ್ನು ಸಹಜವಾಗಿ ಆಶ್ರಯಿಸುವುದುಂಟು. ಕನ್ನಡದ ಮೂಲಕ ಸಂಸ್ಕೃತ ವ್ಯಾಕರಣದ ಅಭ್ಯಾಸ ಮಾಡಬಯಸುವ ನಮ್ಮ ಶಾಲಾಕಾಲೇಜುಗಳ ವಿದ್ಯಾರ್ಥಿಗಳಿಗೆ ಪ್ರಸಕ್ತ ಹೊತ್ತಗೆ "ಸಂಸ್ಕೃತ ವ್ಯಾಕರಣ ದೀಪಿಕಾ" ತುಂಬಾ ಉಪಯುಕ್ತವೆನಿಸುವ ಒಂದು ಸಮಗ್ರ ಆಕರವೆನಿಸುತ್ತದೆ. ಇದನ್ನು ರಚಿಸಿಕೊಟ್ಟ ಪ್ರೊ. ಗುರುಪಾದ ಕೆ. ಹೆಗಡೆ ಅವರ ಪರಿಶ್ರಮ ಶ್ಲಾಘನೀಯವಾದುದು. ಈ ಕೃತಿಯನ್ನು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಮೂಲಕ ಹೊರತರಲು ಅನುವು ಮಾಡಿಕೊಟ್ಟ ಪ್ರೊ. ಹೆಗಡೆಯವರಿಗೆ ನಾನು ಆಭಾರಿಯಾಗಿದ್ದೇನೆ.

ಸಂಸ್ಕೃತ ಭಾಷಾ ಅಭ್ಯಾಸಕ್ಕೆ ಅವಶ್ಯಕವಾದ ವ್ಯಾಕರಣ ಅಂಶಗಳನ್ನು ಈ ಗ್ರಂಥದಲ್ಲಿ ಸರ್ವಜನಗ್ರಾಹ್ಯವಾಗುವಂತೆ ಸರಳವಾಗಿ ನಿರೂಪಿಸಲಾಗಿದೆ. ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಪ್ರಕರಣಗಳನ್ನು ವಿಂಗಡಿಸಿ ಕೊಡಲಾಗಿರುವುದಲ್ಲದೆ ಯಥೇಚ್ಛವಾಗಿ ಶಬ್ದರೂಪಗಳನ್ನೂ, ಧಾತುರೂಪಗಳನ್ನೂ ಕೊಡಲಾಗಿದೆ. ಅಗತ್ಯವಾದೆಡೆಗಳಲ್ಲಿ ವ್ಯಾಕರಣಸೂತ್ರ ಹಾಗೂ ಇನ್ನಿತರ ವಿವರಗಳನ್ನು ನೀಡಿರುವುದು ಉಪಯುಕ್ತವೆನಿಸುತ್ತದೆ. ಈ ಹೊತ್ತಗೆಯನ್ನು ಸಂಸ್ಕೃತ ವಿದ್ಯಾರ್ಥಿಗಳು ಹಾಗೂ ಸಂಸ್ಕೃತ ಭಾಷಾ ಸಾಹಿತ್ಯಪ್ರೇಮಿಗಳು ಸ್ವಾಗತಿಸುತ್ತಾರೆ ಎಂಬ ನಂಬಿಕೆ ನನಗಿದೆ. ಈ ಪುಸ್ತಕದ ಸಿದ್ಧತೆಯಲ್ಲಿ ಡಿ.ಟಿ.ಪಿ. ಕೆಲಸವನ್ನು ನಿರ್ವಹಿಸಿದ ಶ್ರೀ ಹರಿಪದ್ಮ ಆಫ್‌ಸೆಟ್, ಸಾಗರ ಅವರಿಗೆ ಮತ್ತು ಅಚ್ಚುಮಾಡಿಕೊಟ್ಟ ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದ ಡಾ. ಕೃಷ್ಣೇಗೌಡ ಹಾಗೂ ಸಿಬ್ಬಂದಿ ವರ್ಗದವರಿಗೆ ಮತ್ತು ಪ್ರಕಟಣೆಯಲ್ಲಿ ಸಹಕರಿಸಿದ ಪ್ರಸಾರಾಂಗದ ಉಪನಿರ್ದೇಶಕರಾದ ಶ್ರೀ ಬಾ. ವೇ. ಶ್ರೀಧರ ಹಾಗೂ ಸಹೋದ್ಯೋಗಿಗಳಿಗೆ ನನ್ನ ಕೃತಜ್ಞತೆಗಳು.

ಪ್ರೊ. ಲಕ್ಷ್ಮೀನಾರಾಯಣ ಅರೋರಾ

ನಿರ್ದೇಶಕ

Rarest Archiver

ವಿಜ್ಞಾಪನೆ

ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮದಲ್ಲಿ ಸಂಸ್ಕೃತ ವ್ಯಾಕರಣವನ್ನು ಕಲಿಸಲು ಅನುಕೂಲವಾಗುವಂತಹ ಪುಸ್ತಕದ ಕೊರತೆಯಿದೆ ಎಂದು ನನಗನ್ನಿಸುತ್ತಿತ್ತು. ಹತ್ತೊಂಬತ್ತು ನೂರಾ ಎಪ್ಪತ್ತನೇ ಇಸ್ವಿಯಲ್ಲಿ ನನ್ನ ವಿದ್ಯಾರ್ಥಿಗಳು ' ಸರ್, ನೀವೇ ಒಂದು ಪುಸ್ತಕವನ್ನು ಬರೆಯಿರಿ' ಎಂದು ಹೇಳಿದ್ದು ಪ್ರೇರಕಶಕ್ತಿಯಾಯಿತು. ಸಮಗ್ರ ಸಂಸ್ಕೃತ ವ್ಯಾಕರಣದ ಪರಿಚಯಾತ್ಮಕ ಪುಸ್ತಕವೊಂದನ್ನು ಬರೆಯಲು ಕೈಯಿಕ್ಕಿದೆ; ಹತ್ತೊಂಬತ್ತುನೂರಾ ಎಪ್ಪತ್ತೆರಡರ ಕೊನೆಯಲ್ಲಿ ಬರವಣಿಗೆ ಪೂರ್ತಿಯಾಯಿತು. ಪ್ರಕಟಣೆಗಾಗಿ ವಿನಂತಿಸಿಕೊಂಡಾಗ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ತಜ್ಞರ ಅನುಮತಿಯೊಂದಿಗೆ ಒಪ್ಪಿಕೊಂಡಿತು; 'ಸಂಸ್ಕೃತ ವ್ಯಾಕರಣ ದೀಪಿಕಾ' ಪ್ರಕಾಶಗೊಂಡಿತು.

ಇಲ್ಲಿ, ಸಂಸ್ಕೃತವ್ಯಾಕರಣದ ಅತ್ಯಾವಶ್ಯಕ ನಿಯಮಗಳನ್ನು ಹನ್ನೆರಡು ಪ್ರಕರಣಗಳಲ್ಲಿ ಕ್ರೋಢೀಕರಿಸಿದ್ದೇನೆ; ವಾಕ್ಯರಚನೆಗೆ ಸಹಾಯಕವಾಗುವ ಸಿದ್ಧಾಂತಕೌಮುದಿಯ ಕಾರಕಪ್ರಕರಣವನ್ನು ಅನುಬಂಧದಲ್ಲಿ ಇಟ್ಟಿದ್ದೇನೆ ; ಅಂತಸ್ಸಂಧಿಯೇ ಮುಂತಾದ ಕೆಲವೆಡೆ ಕಂಡುಬರುವ ಡಿ.ಕೆ.ರಾಜಗುರು ಅವರ "Manual of Sanskrit Grammar" ಮುಂತಾದ ಆಂಗ್ಲ ಮಾಧ್ಯಮದ ಪುಸ್ತಕಗಳ ಛಾಯೆಯನ್ನುಳಿದು ಸಾಮಾನ್ಯವಾಗಿ ಸಿದ್ಧಾಂತ ಕೌಮುದಿಯನ್ನು ಅನುಸರಿಸಿದ್ದೇನೆ ; ಕೆಲವೆಡೆ, ಸಂಸ್ಕೃತ ಕಾವ್ಯಗಳ ವಾಕ್ಯಗಳನ್ನು ಅನುಕೂಲಕ್ಕಾಗಿ ಪ್ರಯೋಗಗಳಲ್ಲಿ ಬಳಸಿದ್ದೇನೆ.

ಸಂಪೂರ್ಣ ಹಸ್ತಪ್ರತಿಯನ್ನು ಸಾಗರದಲ್ಲಿ ವಿದ್ವತ್ತಿಗೆ ಖ್ಯಾತರಾದ ವಿದ್ವಾನ್ ಭಾಸ್ಕರಭಟ್ಟರೆದುರು ಓದಿ ಅವರು ಸೂಚಿಸಿದ ತಿದ್ದುಪಡಿಗಳನ್ನು ಅಳವಡಿಸಿಕೊಂಡಿದ್ದೇನೆ ; ಸಹನೆಯಿಂದ ಕೇಳಿ ಸೂಕ್ತ ಸಲಹೆಗಳನ್ನಿತ್ತ ಅವರಿಗೆ ಅನಂತ ವಂದನೆಗಳು. ಆದರ್ಶ ಶಿಕ್ಷಕರೆಂದು ರಾಷ್ಟ್ರದಿಂದ ಗೌರವಿಸಲ್ಪಟ್ಟಂತಹ ಬೆಂಗಳೂರಿನ ಸಂಸ್ಕೃತ ಕಾಲೇಜಿನ ನಿವೃತ್ತ ವ್ಯಾಕರಣ ಪ್ರಾಧ್ಯಾಪಕರಾದ ವಿದ್ವಾನ್ ಎನ್. ರಂಗನಾಥಶರ್ಮಾ ಅವರು ಪ್ರಿಂಟಾದ ಪ್ರತಿಯನ್ನು ಪೂರ್ತಿಯಾಗಿ ಅವಲೋಕಿಸಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವರಿಗೆ ನನ್ನ ಸಾದರ ಪ್ರಣಾಮಗಳು.

ಪ್ರಸಾರಾಂಗದ ನಿರ್ದೇಶಕರಿಗೆ ಮತ್ತು ಪ್ರಕಾಶನ ಸಮಿತಿಗೆ ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈ ಸಂಸ್ಕೃತ ವ್ಯಾಕರಣ ದೀಪಿಕೆಯ ಪ್ರಕಟಣೆಗೆ ಒಪ್ಪಿಗೆಯನ್ನು ಪಡೆಯುವಾಗ ಪ್ರಸಾರಾಂಗದ ನಿರ್ದೇಶಕರಾಗಿದ್ದು ಈಗ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ವಿಜಿಟಿಂಗ್ ಪ್ರೊಫೆಸರರಾಗಿರುವ ಡಾ. ಪ್ರಭುಶಂಕರರನ್ನು ಕೃತಜ್ಞತೆಯಿಂದ ಸ್ಮರಿಸಬೇಕಾದದ್ದು ನನ್ನ ಆದ್ಯ ಕರ್ತವ್ಯ. ಹಾಗೆಯೇ, ಪ್ರಸಾರಾಂಗದ ಉಪನಿರ್ದೇಶಕರಾದ ಶ್ರೀ ಅನಂತರಾಮಯ್ಯನವರಿಗೂ ಪುಸ್ತಕವಿಭಾಗದ ಅಧಿಕಾರಿಗಳಾದ ಶ್ರೀ ಡಿ.ಕೆ. ಈರೇಗೌಡರಿಗೂ ಹೃತ್ಪೂರ್ವಕ ಕೃತಜ್ಞತೆಗಳು. ಉತ್ತಮವಾಗಿ ಪುಸ್ತಕವನ್ನು ಮುದ್ರಿಸಿಕೊಟ್ಟ 'ಸಂಸ್ಕೃತ ಸಾಹಿತ್ಯ ಸದನ'ದವರಿಗೆ ನನ್ನ ಅನಂತ ವಂದನೆಗಳು.

Rarest Archiver

ಮುದ್ರಣದಲ್ಲಿಯ ದೋಷಗಳನ್ನು ಸರಿಪಡಿಸಿದ ಪಟ್ಟಿಯನ್ನು ಕೊನೆಯಲ್ಲಿ ಕೊಟ್ಟಿದೆ ; ಅಭ್ಯಾಸಕ್ಕೆ ಮೊದಲು ಅದನ್ನು ಗಮನಿಸಬೇಕೆಂದು ಸೂಚನೆ. ಲೋಪದೋಷಗಳೇನಾದರೂ ಇನ್ನೂ ಇರುವುದಾದಲ್ಲಿ ಪುನರ್ಮುದ್ರಣದ ಯೋಗವೊದಗಿದಾಗ ಸರಿಪಡಿಸುವ ಭರವಸೆಯೊಂದಿಗೆ ಈ ಪುಸ್ತಕವನ್ನು ಸಾರಸ್ವತಲೋಕಕ್ಕೆ ಅರ್ಪಿಸುವೆ.

ಲಾಲ್‌ಬಹದ್ದೂರ್ ಮತ್ತು
ಎಸ್.ಬಿ.ಎಸ್. ಕಾಲೇಜು, ಸಾಗರ — **ಗುರುಪಾದ ಕೆ. ಹೆಗಡೆ**
30-7-1976

ದ್ವಿತೀಯ ಆವೃತ್ತಿಗಾಗಿ

ಮೊದಲನೆಯ ಮುದ್ರಣದ ಪ್ರತಿಗಳೆಲ್ಲ ತೀರಿ ಎಷ್ಟೋ ವರುಷಗಳ ಅನಂತರ, ಅನೇಕ ಕಡೆಗಳಿಂದ ಬಂದ ನಿರಂತರ ಬೇಡಿಕೆಗಳಿಗೆ ಓಗೊಟ್ಟು ದ್ವಿತೀಯ ಮುದ್ರಣಕ್ಕೆ ಪ್ರಸಾರಾಂಗವು ನಿರ್ಣಯಿಸಿ ಆರೇಳು ವರುಷಗಳೇ ಕಳೆದ ಮೇಲೆ ಈಗ, ಈಗಿನ ನಿರ್ದೇಶಕರಾದ ಮಾನ್ಯ ಡಾ. ಲಕ್ಷ್ಮೀನಾರಾಯಣ ಅರೋರಾರವರ ನೇತೃತ್ವದಲ್ಲಿ ಈ ಕೃತಿಯು ದ್ವಿತೀಯ ಆವೃತ್ತಿಯನ್ನು ಕಾಣುತ್ತಿದೆ. ಇದಕ್ಕೆ ಕಾರಣಕರ್ತೃಗಳಾದ ಡಾ. ಅರೋರಾರವನ್ನು ಮೊದಲುಗೊಂಡು ಮೈಸೂರು ವಿಶ್ವವಿದ್ಯಾಲಯ ಪ್ರಸಾರಾಂಗಕ್ಕೆ ಸಂಬಂಧಿಸಿದ ಎಲ್ಲರಿಗೂ ಹಾರ್ದಿಕ ಕೃತಜ್ಞತೆಗಳು. ಪ್ರಸಾರಾಂಗದ ಆದೇಶಕ್ಕೆ ಅನುಗುಣವಾಗಿ ಚೆನ್ನಾಗಿ ಡಿ.ಟಿ.ಪಿ. ಮಾಡಿಕೊಟ್ಟ ಸಾಗರದ ಹರಿಪದ್ಮ ಆಫ್‌ಸೆಟ್‌ದವರಿಗೆ, ಮುಖ್ಯವಾಗಿ, ಶ್ರೀಮತಿ ಶಾರದಾ ಬಾಪಟ್ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಕನ್ನಡ ನಾಡಿನ ಎಲ್ಲ ವಿದ್ಯಾಲಯಗಳಲ್ಲಿ ಹಾಗೂ ಸಂಸ್ಕೃತ ವ್ಯಾಕರಣವನ್ನು ಸಮಗ್ರವಾಗಿ ಸುಲಭವಾಗಿ ಕಲಿಯಬೇಕೆನ್ನುವವರಲ್ಲಿ ಅತ್ಯಂತ ಆತ್ಮೀಯತೆಯನ್ನು ದೊರಕಿಸಿಕೊಂಡ ಈ ಸಂಸ್ಕೃತವ್ಯಾಕರಣದೀಪಿಕಾ ಗ್ರಂಥವು ೧೯೭೬, ೭೭, ೭೮ನೇ ವರುಷಗಳಲ್ಲಿ ಪ್ರಕಟಿತ ಭಾಷಾವಿಷಯಕ ಸಂಶೋಧನ ಗ್ರಂಥಗಳಲ್ಲಿ ಉತ್ತಮೋತ್ತಮವೆಂದು ಆಯ್ಕೆಗೊಂಡು ಮೈಸೂರು ವಿಶ್ವವಿದ್ಯಾನಿಲಯದ ೧೯೮೦ರ ಸುವರ್ಣ ಮಹೋತ್ಸವ ಸಂಶೋಧನ ಪ್ರಶಸ್ತಿಯನ್ನು ನನಗೆ ದೊರಕಿಸಿಕೊಟ್ಟಿದ್ದನ್ನು ಸಂತೋಷದಿಂದ ಇಲ್ಲಿ ನೆನೆಯುತ್ತೇನೆ. ಈಗ ಸಾರಸ್ವತಲೋಕಕ್ಕೆ ಈ ಕೃತಿಯ ದ್ವಿತೀಯ ಆವೃತ್ತಿಯ ಅರ್ಪಣೆ.

"ಧೀಮತ್"
ಜೆ.ಸಿ. ರಸ್ತೆ, ಚಾಮರಾಜಪೇಟೆ, — **ಗುರುಪಾದ ಕೆ. ಹೆಗಡೆ**
ಸಾಗರ - ೫೭೭೪೦೧
೧೮ . ೫. ೨೦೦೨

Rarest Archiver

Rarest Archiver

ವಿಷಯಾನುಕ್ರಮಣಿಕೆ

ವಿಷಯ		ಪುಟ
೧.ಅಕ್ಷರ ಪ್ರಕರಣ		1 - 6
I	ಸ್ವರಗಳು	2 - 3
II	ವ್ಯಂಜನಗಳು	3 - 6
೨. ಸಂಧಿಪ್ರಕರಣ		7 - 25
I	ಸ್ವರಸಂಧಿ	7 - 13
II	ವ್ಯಂಜನ ಸಂಧಿ	13 - 19
III	ವಿಸರ್ಗ ಸಂಧಿ	19 - 23
IV	ಅಂತಸ್ಸಂಧಿ	23 - 25
೩.ವಿಭಕ್ತಿ ಪ್ರಕರಣ		26 - 84
I	ವಚನಗಳು	26 - 27
II	ಲಿಂಗಗಳು	27 - 29
III	ವಿಭಕ್ತಿ ಪ್ರತ್ಯಯಗಳ ಪರಿಚಯ	29 - 29
IV	ನಾಮಪದಗಳಿಗೆ ವಿಭಕ್ತಿ ಪ್ರತ್ಯಯಗಳು	30 - 66
V	ಸರ್ವನಾಮಗಳಿಗೆ ವಿಭಕ್ತಿ ಪ್ರತ್ಯಯಗಳು	66 - 76
VI	ಸಂಖ್ಯಾವಾಚಕ ಶಬ್ದಗಳು ಮತ್ತು ಅವುಗಳಿಗೆ ವಿಭಕ್ತಿ ಪ್ರತ್ಯಯಗಳು.	76 - 84
೪. ಕ್ರಿಯಾಪದ ಪ್ರಕರಣ		85- 220
I	ಧಾತು	85 - 85
II	ಮೂಲಧಾತುಗಳ ವರ್ಗೀಕರಣ	85 - 86
III	ಸಕರ್ಮಕ ಮತ್ತು ಅಕರ್ಮಕ ಧಾತುಗಳು.	87 - 87
IV	ದಶಲಕಾರಗಳು	87 - 88
V	ಪರಸ್ಮೈಪದ ಮತ್ತು ಆತ್ಮನೇಪದ	88 - 89
VI	ಕರ್ತರಿ, ಕರ್ಮಣಿ ಮತ್ತು ಭಾವೇಪ್ರಯೋಗಗಳು	89 - 90
VII	ಪುರುಷಗಳು	90 - 91
VIII	ಸಾರ್ವಧಾತುಕ ಮತ್ತು ಆರ್ಧಧಾತುಕಗಳು	91 - 91
IX	ಲಟ್, ಲಙ್, ಲೋಟ್, ವಿಧಿಲಿಙ್‌ಗಳಲ್ಲಿ ಧಾತುಗಳು	92 -155
X	ವರ್ತಮಾನ, ಅನದ್ಯತನಭೂತ, ಆಜ್ಞಾರ್ಥ ಮತ್ತು ವಿಧ್ಯರ್ಥ ಇವುಗಳು ಪ್ರಯೋಗಗಳಲ್ಲಿ	155 - 157

Rarest Archiver

XI ಲುಟ್, ಲೃಟ್, ಲೃಙ್, ಲಿಟ್, ಆಶೀರ್ಲಿಙ್, ಲುಙ್ ಇವುಗಳಲ್ಲಿ ಧಾತುಗಳು. 157 - 220
೧. ಸೇಟ್, ವೇಟ್ ಮತ್ತು ಅನಿಟ್ ಧಾತುಗಳು 157 - 159
೨. ಲುಟ್ -ಅನದ್ಯತನ ಭವಿಷ್ಯತ್ 159 - 161
೩. ಲೃಟ್ - ಸಾಮಾನ್ಯ ಭವಿಷ್ಯತ್ 161 - 162
೪. ಅನದ್ಯತನ ಭವಿಷ್ಯತ್ ಮತ್ತು ಸಾಮಾನ್ಯ ಭವಿಷ್ಯತ್ ಇವುಗಳ ಪ್ರಯೋಗ. 162 - 163
೫. ಲೃಙ್ -ಸಂಕೇತಾರ್ಥ 163 - 164
೬. ಸಂಕೇತಾರ್ಥದ ಪ್ರಯೋಗ 165 - 165
೭. ಲುಟ್, ಲೃಟ್, ಲೃಙ್‌ಗಳಿಗೆ ಕೆಲವು ಉದಾಹರಣೆಗಳು 165 - 175
೮. ಲಿಟ್- ಪರೋಕ್ಷಭೂತ 175 - 194
೧. ಲಿಟ್‌ದಲ್ಲಿ ಧಾತುಗಳು 175 - 191
೨. ಪರೋಕ್ಷಭೂತದಲ್ಲಿ ಅನುಪ್ರಯೋಗ 191 - 194
೯. ಲುಙ್ - ತೃತೀಯಭೂತ 194 - 217
೧೦. ಆಶೀರ್ಲಿಙ್ 217 - 220

೫. ಪ್ರತ್ಯಯಾಂತ ಧಾತು ಪ್ರಕರಣ 221 - 246
I ಣಿಜಂತ -ಪ್ರೇರಣಾರ್ಥಕ 221 - 230
II ಸನ್ನಂತ -ಇಚ್ಛಾರ್ಥಕ 230 - 236
III ಯಙಂತ -ಪೌನಃಪುನ್ಯಾರ್ಥಕ 236 - 240
IV ನಾಮಧಾತು 240 - 246

೬. ಕರ್ಮಣಿರೂಪ ಪ್ರಕರಣ 247 - 250

೭. ಕೃದಂತ ಪ್ರಕರಣ 251 - 285
I ವರ್ತಮಾನ ಕೃದಂತ 252 - 255
II ಭೂತಕೃದಂತ 256 - 260
III ಪರೋಕ್ಷಭೂತಕೃದಂತ 261 - 263
IV ಭವಿಷ್ಯತ್ ಕೃದಂತ 263 - 264
V ಕರ್ಮಣಿವಿಧ್ಯರ್ಥ ಕೃದಂತ 264 - 266
VI ತುಮನ್ನಂತ / ಣ್ವುಲ್ ಪ್ರತ್ಯಯ 266 - 267
VII ಭೂತ ಕೃದ್ವಾಚಕ / ಲ್ಯಬಂತ 268 - 270
ಣಮುಲಂತ 270 - 271
ಅಭ್ಯಾಸಕ್ಕೆ ಕೆಲವು ಕೃದಂತಗಳು 272 - 284
ಉಣಾದಿ ಕೃತ್‌ಪ್ರತ್ಯಯಗಳು 284 - 285

Rarest Archiver

೮. ತದ್ಧಿತಾಂತ ಪ್ರಕರಣ	286 - 306
೯. ಅತಿಶಯ ವಿಶಿಷ್ಟಾರ್ಥ ಪ್ರಕರಣ	307 - 310
೧೦. ಸ್ತ್ರೀ ಪ್ರತ್ಯಯ ಪ್ರಕರಣ	311 - 318
೧೧. ಅವ್ಯಯ ಪ್ರಕರಣ	319 - 327
I ಉಪಸರ್ಗಗಳು	319 - 321
II ಕ್ರಿಯಾವಿಶೇಷಣಗಳು	322 - 326
III ಸಮುಚ್ಚಯವಾಚಕ ಅವ್ಯಯಗಳು	326 - 327
IV ಭಾವವಾಚಕ ನಿಪಾತಗಳು	327 - 327
V ಪದಪೂರ್ಣಾರ್ಥಕ ನಿಪಾತಗಳು	327 - 327
೧೨. ಸಮಾಸ ಪ್ರಕರಣ	328 - 362
(i) ಸಮಾಸ ವೃತ್ತಿ	328 - 362
I ತತ್ಪುರುಷ ಸಮಾಸ	329 - 339
II ಕರ್ಮಧಾರಯ ಸಮಾಸ	339 - 344
III ದ್ವಿಗು ಸಮಾಸ	344 - 345
IV ದ್ವಂದ್ವ ಸಮಾಸ	345 - 348
V ಅವ್ಯಯೀಭಾವ ಸಮಾಸ	348 - 353
VI ಬಹುವ್ರೀಹಿ ಸಮಾಸ	353 - 362
VII ಕೇವಲ (ಸುಪ್ ಸುಪ್)ಸಮಾಸ	362 - 362
(ii) ಏಕಶೇಷವೃತ್ತಿ	362
ಅನುಬಂಧ	363 - 400
ವಿಭಕ್ತಿಗಳು ಪ್ರಯೋಗದಲ್ಲಿ	
೧. ಕಾರಕ ವಿಭಕ್ತಿಗಳು	363 - 392
೧. ಪ್ರಥಮಾ ವಿಭಕ್ತಿ	363 - 365
೨. ದ್ವಿತೀಯಾ ವಿಭಕ್ತಿ	365 - 371
೩. ತೃತೀಯಾ ವಿಭಕ್ತಿ	372 - 375
೪. ಚತುರ್ಥೀ ವಿಭಕ್ತಿ	375 - 381
೫. ಪಂಚಮೀ ವಿಭಕ್ತಿ	381 - 387
೬. ಸಪ್ತಮೀ ವಿಭಕ್ತಿ	387 - 392
೨. ಸಂಬಂಧ ಸಾಮಾನ್ಯಬೋಧಕ ವಿಭಕ್ತಿ - ಷಷ್ಠೀ ವಿಭಕ್ತಿ	392 - 400

Rarest Archiver

ಸಂಕ್ಷಿಪ್ತ ಸೂಚಿ

ಅ.ಶಾ. (ಶಾಕುಂ.)	- ಅಭಿಜ್ಞಾನ ಶಾಕುಂತಲಮ್
ಉತ್ತರ.	- ಉತ್ತರ ರಾಮಚರಿತ
ಕಾ.ಮೇಘ. (ಮೇಘ.)	- ಕಾಳಿದಾಸನ ಮೇಘದೂತ
ಕಾ. ರಘು. (ರಘು.)	- ಕಾಳಿದಾಸನ ರಘುವಂಶ
ಕು.ಸಂ.	- ಕುಮಾರ ಸಂಭವ
ಚಂಪೂ. ಭಾ.	- ಚಂಪೂಭಾರತ
ಚಂಪೂ.ರಾಮಾ.	- ಚಂಪೂ ರಾಮಾಯಣ
ದಶಕು.	- ದಶಕುಮಾರ ಚರಿತಮ್
ನಾಗಾ.	- ನಾಗಾನಂದ
ಪಾ.	- ಪಾಣಿನಿ
ಬಾ.ಕಾದಂ.	- ಬಾಣನ ಕಾದಂಬರೀ
ಭ.ಗೀ.	- ಭಗವದ್ಗೀತೆ
ಭಟ್ಟಿ.	- ಭಟ್ಟಿಕಾವ್ಯ.
ಮಾಘ.	- ಮಾಘನ ಶಿಶುಪಾಲವಧ
ಮುದ್ರಾ.	- ಮುದ್ರಾರಾಕ್ಷಸ
ಮೃಚ್ಛ	- ಮೃಚ್ಛಕಟಿಕಮ್
ರಾ.ಬಾ.ಕಾ.	- ರಾಮಾಯಣದ ಬಾಲಕಾಂಡ
ಸಿ.ಕೌ.	- ಸಿದ್ಧಾಂತ ಕೌಮುದೀ
ಸಿ.ಕೌ.ಬಾ.ಮ.	- ಸಿದ್ಧಾಂತ ಕೌಮುದೀ ಬಾಲಮನೋರಮಾ

Rarest Archiver

೧

ಅಕ್ಷರ ಪ್ರಕರಣ

ಅಕ್ಷರ ಮಾಲೆಗೆ 'ಲಿಪಿ'(Alphabet) ಎನ್ನುವುದು ಸಂಜ್ಞಾಪದ. ಸಂಸ್ಕೃತ ಲಿಪಿಯನ್ನು 'ದೇವನಾಗರೀಲಿಪಿ' ಎಂದು ಕರೆಯುತ್ತಾರೆ.

ದೇವನಾಗರೀ ಲಿಪಿಯು ಒಟ್ಟು ಹದಿಮೂರು ಸ್ವರ (Vowel) ಗಳನ್ನೂ ಮೂವತ್ತಮೂರು ವ್ಯಂಜನ(Consonants) ಗಳನ್ನೂ ಹೊಂದಿದೆ. ಅಂದರೆ , ಸಂಸ್ಕೃತ ಸ್ವರ ವ್ಯಂಜನಗಳ ಒಟ್ಟು ಸಂಖ್ಯೆ ೪೬. ಮೂಲದಲ್ಲಿ ಅವು ಹೇಗೆ ಅಸ್ತಿತ್ವಕ್ಕೆ ಬಂದವು ಅನ್ನುವುದನ್ನು ಪಾಣಿನಿಯೇ ಮೊದಲಾದವರು ಪೌರಾಣಿಕ ರೀತಿಯಲ್ಲಿ ಹೇಳುತ್ತಾರೆ. ಮಹೇಶ್ವರನು ತನ್ನ ತಾಂಡವನೃತ್ಯದಲ್ಲಿ ಡಮರನ್ನು ಬಾರಿಸಲು ಹದಿನಾಲ್ಕು ಅಕ್ಷರ ಸೂತ್ರಗಳು ಉದ್ಭವಿಸಿದವು ಅನ್ನುತ್ತಾ ಅವುಗಳನ್ನು ಮಾಹೇಶ್ವರ ಸೂತ್ರಗಳೆಂದು ಕರೆದರು.

ಅವು ಈ ರೀತಿ ಇವೆ :

१. अइउण्
२. ऋलृक्
} **अ , इ, उ, ऋ , लृ** ಇವುಗಳ ಪಾರಿಭಾಷಿಕ ಸಂಕ್ಷಿಪ್ತ ಸಂಜ್ಞೆ **'अक्'**

३. एओङ्
४. ऐऔच्
} **ए, ओ,ऐ, औ** ಇವುಗಳ ಪಾರಿಭಾಷಿಕ ಸಂಕ್ಷಿಪ್ತ ಸಂಜ್ಞೆ **'एच्'**

} **अ, इ , उ, ऋ, लृ , ए, ऐ, ओ , औ** ಇವುಗಳ ಪಾರಿಭಾಷಿಕ ಸಂಜ್ಞೆ **'अच्'**[1]

५. हयवरट् ६. लण् ७. ञमङणनम्
८. झभञ् ९. घढधष् १०. जबगडदश्
११. खफछठथचटतव् १२. कपय्
१३. शषसर् १४. हल्
} ಇವುಗಳ ಪಾರಿಭಾಷಿಕ ಸಂಕ್ಷಿಪ್ತ ಸಂಜ್ಞೆ **'हल्'**[2]

'अच्' ಅಥವಾ ಸ್ವರಾಕ್ಷರಗಳಿಗೆ ಹ್ರಸ್ವದೀರ್ಘಪ್ಲುತಗಳೆಂದು ಮೂರು ಅವಸ್ಥೆಗಳು.

ಹ್ರಸ್ವ : ಏಕಮಾತ್ರೆಯ ಕಾಲಾವಧಿಯಲ್ಲಿ ಉಚ್ಚರಿಸಬಹುದಾದ ಸ್ವರ ; ಉದಾ: **अ**

ದೀರ್ಘ : ಎರಡು ಮಾತ್ರೆಗಳ ಕಾಲಾವಧಿಯಲ್ಲಿ ಉಚ್ಚರಿಸಬಹುದಾದ ಸ್ವರ ; ಉದಾ: **आ**

---

[1] **अच्** ದಲ್ಲಿಯ **अ** ವು ಪ್ರಥಮ ಸೂತ್ರದ ಪ್ರಥಮ ಸ್ವರ; **च्** ವು ನಾಲ್ಕನೇ ಸೂತ್ರಾಂತ್ಯದಲ್ಲಿದ್ದದ್ದು. **अच्** ಎಂದಾಗ **अ** ದಿಂದ **च्** ದ ವರೆಗಿನ ಸಮಸ್ತ ಸ್ವರಗಳು. ಸೂತ್ರಾಂತ್ಯದಲ್ಲಿಯ **ण् , क्, ङ् , च्.** ಮುಂತಾದವುಗಳು **इत्** ಸಂಜ್ಞೆಗಳಿದ್ದು ಅರ್ಥಹೀನವಾಗಿರುತ್ತವೆ; ಇವು ಶಿವನ ಡಮರುವಿನ ಡಿಂಡಿಮಧ್ವನಿಯ ಅಂತ್ಯವ್ಯಾಪಾರವಾಗಿದ್ದು ಅಕ್ಷರಗಳಲ್ಲಿ ಗಣಿಸಲ್ಪಡುವುದಿಲ್ಲ **एषामन्त्या इतः** (ಸಿ.ಕೌ.)

[2] **हल्** ರೂಪುಗೊಳ್ಳುವುದು ಐದನೇ ಸೂತ್ರದ ಆದಿಯಲ್ಲಿರುವ **ह** ಮತ್ತು ಹದಿನಾಲ್ಕನೇ ಸೂತ್ರಾಂತ್ಯದ **इत्** ಸಂಜ್ಞೆಯಾದ **ल्** ಇವುಗಳಿಂದ. **हल्** ಎಂದರೆ ಸಮಸ್ತ ವ್ಯಂಜನಗಳು.

Rarest Archiver

ಪ್ಲುತ : ಮೂರು ಮಾತ್ರೆಗಳ ಕಾಲಾವಧಿಯಲ್ಲಿ ಉಚ್ಚರಿಸಬಹುದಾದ ಸ್ವರ ; ಉದಾ.: **आऽ.**
ಲೌಕಿಕ ಸಾಹಿತ್ಯದಲ್ಲಿ ಸ್ವರಗಳ ಹ್ರಸ್ವದೀರ್ಘಾವಸ್ಥೆಗಳು ಮಾತ್ರ ಬಳಕೆಯಲ್ಲಿವೆ. ಪ್ಲುತದ ಬಳಕೆ ಸಾಮಾನ್ಯವಾಗಿ ವೈದಿಕ ವಾಙ್ಮಯಕ್ಕೇ ಸೀಮಿತ.

'**अच्**' ಪ್ರತ್ಯಾಹಾರದಲ್ಲಿ ಸೇರಿರುವ ('**ऌ**' ವನ್ನು ಬಿಟ್ಟು ಉಳಿದ) ಸ್ವರಗಳಿಗೆ ಹ್ರಸ್ವ ದೀರ್ಘಾವಸ್ಥೆಗಳೆರಡೂ ಇವೆ. ಆದ್ದರಿಂದ ಸ್ವರಗಳು ಹದಿಮೂರು.

I ಸ್ವರಗಳು :

अ , आ, इ, ई, उ, ऊ, ऋ, ॠ , ऌ, ए, ऐ, ओ, औ
(ಅ, ಆ, ಇ, ಈ, ಉ, ಊ, ಋ, ೠ, ಌ , ಏ , ಐ, ಓ, ಔ)

ಇವುಗಳಲ್ಲಿ **अ, इ, उ, ऋ, ऌ,** ಇವುಗಳು ಹ್ರಸ್ವ **(Short)** ಸ್ವರಗಳು ; ಮತ್ತು **आ, ई, ऊ, ॠ, ए, ऐ, ओ, औ** ಇವುಗಳು ದೀರ್ಘಸ್ವರಗಳು **(Long Vowels)**

ए, ऐ, ओ, औ ಗಳಿಗೆ ಸಂಧ್ಯಕ್ಷರ **(Dipthong)** ಗಳೆನ್ನುತ್ತಾರೆ.

ಇವು ಈ ಕೆಳಗಿನಂತೆ ಅಸ್ತಿತ್ವಕ್ಕೆ ಬರುತ್ತವೆ ;

अ , आ + इ , ई = ए | **अ , आ + ए = ऐ**

अ , आ + उ, ऊ = ओ | **अ , आ + ओ = औ**

ಹೀಗೆ ಸಂಧಿಕ್ರಿಯೆಯಿಂದ ಅಸ್ತಿತ್ವಕ್ಕೆ ಬರುವುದರಿಂದ ಇವು ಸಂಧ್ಯಕ್ಷರಗಳು. ಇವಕ್ಕೆ ಹ್ರಸ್ವತ್ವವಿಲ್ಲ;[1] ಯಾವಾಗಲೂ ದೀರ್ಘವಾಗಿಯೇ ಉಚ್ಚರಿಸಲ್ಪಡುತ್ತವೆ.

ಉದಾಹರಣೆ : **मुखेनोदकम्** ----> ಮುಖೇನೋದಕಮ್

ಸ್ವರಗಳ ವಿಷಯದಲ್ಲಿ ಗಮನಿಸಬೇಕಾದ ಮೂರು ಅಂಶಗಳು :

i) ಹ್ರಸ್ವಸ್ವರಗಳಾದ **अ, इ, उ, ऋ,** ಗಳು ಸವರ್ಣವನ್ನೇ[2] ಪಡೆದಾಗ ದೀರ್ಘ ಸ್ವರಗಳಾದ **आ, ई, ऊ, ॠ** ಗಳು ಅಸ್ತಿತ್ವಕ್ಕೆ ಬರುತ್ತವೆ ; ಮತ್ತು

ii) **ए, ऐ, ओ, औ** ಗಳು ಅಸ್ತಿತ್ವಕ್ಕೆ ಬರುವುದು **अ , आ** ಗಳ ಮುಂದೆ ಅನುಕ್ರಮವಾಗಿ **इ , ई ; ए ; उ, ऊ ; ओ** ಗಳು ಬಂದಾಗ ಮಾತ್ರ. ಆದ್ದರಿಂದ ಸ್ವರಗಳಲ್ಲಿ **अ, इ, उ, ऋ** ಗಳ ಪಾತ್ರ ಮಹತ್ವದ್ದು.

iii) **ऋ** ಕಾರಕ್ಕೆ ದೀರ್ಘತ್ವವಿರುವಂತೆ **लृकार** ಕ್ಕೆ ದೀರ್ಘತ್ವವಿಲ್ಲ[3]

---

[1] **तेषां ह्रस्वाभावात्** (ಸಿ. ಕೌ. 9)

[2] **तुल्यास्य प्रयत्नं सवर्णम्** (ಪಾ. I, 1, 9) ಅವೇ ವರ್ಣಗಳನ್ನು ಅಥವಾ ತತ್ಸಮಾನವರ್ಣಗಳನ್ನು ಪಡೆದಾಗ.

[3] **लृवर्णस्य .... तस्य दीर्घाभावात्** (ಸಿ. ಕೌ. 9)

Rarest Archiver

ಅನುಸ್ವಾರ ವಿಸರ್ಗಗಳು

ಅನುಸ್ವಾರ (ಂ), ವಿಸರ್ಗ (ಃ), ಉಪಧ್ಮಾನೀಯ (ᳵ) ಮತ್ತು ಜಿಹ್ವಾಮೂಲೀಯ (ᳶ) ಗಳೆಂಬ ಧ್ವನಿಗಳು (Sounds) ಸಂಸ್ಕೃತದಲ್ಲಿಯ ವೈಶಿಷ್ಟ್ಯ. ವರ್ಣ ಸಮೂಹದಲ್ಲಿ ಸೇರದಿರುವುದರಿಂದಲೂ ಸ್ವತಂತ್ರವಾಗಿ ಉಚ್ಚರಿಸಲ್ಪಡದೇ ಇರುವುದರಿಂದಲೂ ಇವುಗಳಿಗೆ ಯೋಗವಾಹ ಗಳೆನ್ನುತ್ತಾರೆ. ಇವುಗಳಲ್ಲಿ, ಅನುಸ್ವಾರ ವಿಸರ್ಗಗಳು[1] ಉಚ್ಚರಿಸಲ್ಪಡಬೇಕಾದರೆ ಸ್ವರಾಕ್ಷರವು ಅವಶ್ಯವಾಗಿ ಹಿಂದೆ ಇರಬೇಕಾಗುತ್ತದ.

ಉದಾಹರಣೆ : **अं अः**

ಉಪಧ್ಮಾನೀಯ ಮತ್ತು ಜಿಹ್ವಾಮೂಲೀಯ[2]ಗಳು ವಿಸರ್ಗದ ವಿರೂಪಗಳು. ವಿಸರ್ಗವು **प् फ्** ಗಳ ಹಿಂದೆ ಬಂದಾಗ ಉಪಧ್ಮಾನೀಯವೆಂದೂ, **क् , ख्** ಗಳ ಹಿಂದೆ ಬಂದಾಗ ಜಿಹ್ವಾಮೂಲೀಯವೆಂದೂ ಹೆಸರು ಪಡೆಯುತ್ತದೆ. ಆಗ, ವಿಸರ್ಗವು ಅರ್ಧಾಕೃತಿಗಿಳಿಯುತ್ತದೆ.

ಉದಾಹರಣೆ : **कᳵ फलति ; कᳶ खनति**

II ವ್ಯಂಜನಗಳು:

ವ್ಯಂಜನಗಳ ಒಟ್ಟು ಸಂಖ್ಯೆ ಮೂವತ್ತುಮೂರು. ಇವುಗಳು ವರ್ಗೀಯ ಮತ್ತು ಅವರ್ಗೀಯಗಳೆಂದು ಮುಖ್ಯವಾಗಿ ಎರಡುವಿಧ.

ವರ್ಗೀಯ ವ್ಯಂಜನಗಳು :

ಕಾದಿ ಪಂಚವರ್ಗಗಳಿಗೆ ವರ್ಗೀಯ ವ್ಯಂಜನಗಳೆನ್ನುತ್ತಾರೆ. ಈ ವರ್ಗಗಳನ್ನು ಸೂಚಿಸುವ ಪಾರಿಭಾಷಿಕ ಸಂಜ್ಞೆ 'ಕುಚುಟುತುಪು'[3]

कु -> कवर्ग -> **क्** ಕ್, **ख्** ಖ್, **ग्** ಗ್, **घ्** ಘ್, **ङ्** ಙ್

चु -> चवर्ग -> **च्** ಚ್, **छ्** ಛ್, **ज्** ಜ್, **झ्** ಝ್, **ञ्** ಞ್

टु -> टवर्ग -> **ट्** ಟ್, **ठ्** ಠ್, **ड्** ಡ್, **ढ्** ಢ್ , **ण्** ಣ್

तु -> तवर्ग -> **त्** ತ್, **थ्** ಥ್, **द्** ದ್, **ध्** ಧ್, **न्** ನ್

पु -> पवर्ग -> **प्** ಪ್, **फ्** ಫ್, **ब्** ಬ್, **भ्** ಭ್, **म्** ಮ್

---

[1] **अं अः इत्यचः परावनुस्वारविसर्गौ** (ಸಿ. ಕೌ 12)

[2] ᳶक ᳵप **इति कपाभ्यां प्रागर्धविसर्गसदृशौजिह्वामूलीयापध्मानीयौ** (ಸಿ. ಕೌ 12)

[3] ಸಿ. ಕೌ. 14

Rarest Archiver

ಅವರ್ಗೀಯ ವ್ಯಂಜನಗಳು :

ಅಂತಸ್ಥವರ್ಣಗಳು[1] (Semivowels) - **य्** ಯ್, **र्** ರ್, **ल्** ಲ್, **व्** ವ್

ಊಷ್ಮವರ್ಣಗಳು[2] (Sibilants) - **श्** ಶ್, **ष्** ಷ್, **स्** ಸ್, **ह्** ಹ್

ವ್ಯಂಜನಗಳ ವಿಷಯದಲ್ಲಿ ಗಮನಿಸತಕ್ಕ ಒಂಭತ್ತು ಅಂಶಗಳು:

i) ಶಬ್ದಗಳಲ್ಲಿ ವ್ಯಂಜನಗಳು ಸಾಮಾನ್ಯವಾಗಿ ಸ್ವರಸಹಿತವಾಗಿರುತ್ತವೆ.

ಉದಾಹರಣೆ: **कमलम्** = **क्** + **अ** ; **म्** + **अ** ; **ल्** + **अ** ; **म्**

ಆದರೆ, ಸಂಯುಕ್ತಾಕ್ಷರಗಳಲ್ಲಿ ಒತ್ತಕ್ಷರವಾಗಿ ಉಪಯೋಗಿಸ್ಪಡುವ ವ್ಯಂಜನವು[3] ಸ್ವರರಹಿತವಾಗಿರುತ್ತದೆ.

ಉದಾಹರಣೆ **वक्तुम्** **व्** + **अ** ; **क्** + **त्** + **उ** ; **म्**

ii ಕೇವಲ ವ್ಯಂಜನವೆಂದು ಗುರುತಿಸುವುದು ವ್ಯಂಜನಕ್ಕೆ ಜೋಡಿಸುವ ' ् ' ಈ ಗುರುತಿನಿಂದ. ಈ ಗುರುತಿಗೆ '**हल्**'ಎನ್ನುವರು.

iii) ಕರ್ಕಶ ವ್ಯಂಜನಗಳು (Hard Consonants): ವರ್ಗೀಯ ವ್ಯಂಜನಗಳಲ್ಲಿಯ ಪ್ರತಿವರ್ಗದ ಮೊದಲಿನ ಎರಡು ಅಕ್ಷರಗಳು ಮತ್ತು ಊಷ್ಮ ವರ್ಣಗಳು - ಇವುಗಳಿಗೆ ಖರಾಕ್ಷರಗಳೆಂದೂ ಅನ್ನುವರು.

iv) ಮೃದು ವ್ಯಂಜನಗಳು (Soft Consonants): ವರ್ಗೀಯ ವ್ಯಂಜನಗಳಲ್ಲಿಯ ಪ್ರತಿವರ್ಗದ ಕೊನೆಯ ಮೂರು ಅಕ್ಷರಗಳು, ಅಂತಸ್ಥವರ್ಣಗಳು ಮತ್ತು ಮಹಾಪ್ರಾಣವಾದ **ह्** - ಇವಕ್ಕೆ 'ಹಶ್' ವರ್ಣಗಳೆಂದೂ ಪಾರಿಭಾಷಿಕವಾಗಿ ಕರೆಯುತ್ತಾರೆ.

v) ವರ್ಗೀಯ ವ್ಯಂಜನಗಳಲ್ಲಿಯ ಪ್ರತಿವರ್ಗದ ಒಂದನೇ, ಮೂರನೇ ಮತ್ತು ಐದನೇ ಅಕ್ಷರಗಳಿಗೂ ಅಂತಸ್ಥವರ್ಣಗಳಿಗೂ ಅಲ್ಪಪ್ರಾಣಗಳೆನ್ನುವರು. ಪ್ರತಿವರ್ಗದ ಎರಡನೇ ಮತ್ತು ನಾಲ್ಕನೇ ಅಕ್ಷರಗಳು ಮತ್ತು ಊಷ್ಮವರ್ಣಗಳು ಮಹಾಪ್ರಾಣಗಳು.

vi) ಐದೂ ವರ್ಗಗಳ ಕೊನೆಯ ವ್ಯಂಜನಗಳಿಗೆ ಅನುನಾಸಿಕ[4](Nasals)ಗಳೆನ್ನುವರು. ಏಕೆಂದರೆ, ಇವುಗಳನ್ನು ಉಚ್ಚರಿಸುವಾಗ ಮೂಗು ಮುಖಗಳೆರಡರಲ್ಲಿಯೂ[5] ಧ್ವನಿ ಹೊರಡುತ್ತದೆ. ಕೇವಲ ಮೂಗಿನಲ್ಲಿಯೇ ಉಚ್ಚಾರಗೊಳ್ಳುವ ಅನುಸ್ವಾರವನ್ನೂ[6] ಕೂಡ ಇವುಗಳ ಸಾಲಿಗೇ ಸೇರಿಸುತ್ತಾರೆ.

vii) ಕನ್ನಡದಲ್ಲಿ ಇರುವಂತೆ ಸಂಸ್ಕೃತದಲ್ಲಿ 'ಳ್' ಎಂಬ ಅಕ್ಷರವಿಲ್ಲ. ಋಗ್ವೇದಾದಿ ಸಂಹಿತೆಗಳಲ್ಲಿ ಕೆಲವು ಕಡೆ **ड्** ಕ್ಕೆ ಬದಲಾಗಿ ಳ್ ವನ್ನು ಉಪಯೋಗಿಸಿದ್ದು ಕಂಡುಬರುವುದು.

---

1 **यरलवा अन्तस्थाः** (ಸಿ. ಕೌ. 12) 2 **शषसहा ऊष्माणः** (ಸಿ. ಕೌ. 12)
3 **हलोऽनन्तराः संयोगः** (ಪಾ. I, 1, 7) 4 **ञमङणनानां नासिका च** (ಸಿ. ಕೌ. 10)
5 **मुखनासिकावचनोऽनुनासिकः** (ಪಾ. I, 1, 8) 6 **नासिकानुस्वारस्य** (ಸಿ. ಕೌ. 10)

Rarest Archiver

ಉದಾ. : '**अग्निमीळे पुरोहितम्** ' - ಮುಂದಿರುವ ಅಗ್ನಿಯನ್ನು ಪ್ರಾರ್ಥಿಸುತ್ತೇನೆ ; ಇಲ್ಲಿ ಡಕಾರಕ್ಕೆ ಬದಲಾಗಿ ಳಕಾರವು ಬಂದಿದ್ದನ್ನು ಗಮನಿಸಬಹುದು. ಆದರೆ, ಅಪೌರುಷೇಯವೆಂದು ಕರೆಯಲ್ಪಡುವ ವೈದಿಕವಾಙ್ಮಯಕ್ಕೂ ಲೌಕಿಕ ವ್ಯಾಕರಣಕ್ಕೂ ಮಹದಂತರವಿದೆ.

viii) **क्ष**(ಕ್ಷ್) ಮತ್ತು **ज्ञ** (ಜ್ಞ್) ಇವುಗಳು ಸ್ವತಂತ್ರ ವ್ಯಂಜನಗಳಲ್ಲ. ಇವು **क्** + **ष्** = **क्ष** ; **ज्** + **ञ्** = **ज्ञ** ಎಂದಾಗುತ್ತವೆ. ಆದ್ದರಿಂದ, ಇವುಗಳನ್ನು ಅಕ್ಷರಮಾಲೆಯಲ್ಲಿ ಲೆಕ್ಕಕ್ಕೆ ಸೇರಿಸುವುದಿಲ್ಲ.

ix) ಸರ್ವ ವ್ಯಂಜನಗಳನ್ನೂ ಅವುಗಳ ಉಚ್ಚಾರ ಸ್ಥಾನಗಳಿಗನುಗುಣವಾಗಿ ಅರ್ಥಾತ್ ಆಭ್ಯಂತರಬಾಹ್ಯಪ್ರಯತ್ನಗಳಿಗನುಗುಣವಾಗಿ ಐದು ವಿಧಗಳಲ್ಲಿ ವಿಭಾಗಿಸಿ ಈ ಕೆಳಗಿನಂತೆ ಪಾರಿಭಾಷಿಕವಾಗಿ ಗುರುತಿಸುತ್ತಾರೆ :

೧. ಕಂಠ್ಯ (Gutturals) - ಕವರ್ಗದ ವ್ಯಂಜನಗಳು; ಏಕೆಂದರೆ, ಇವು ಕಂಠದಲ್ಲಿಯೇ ಉಚ್ಚರಿಸಲ್ಪಡುತ್ತವೆ.

೨. ತಾಲವ್ಯ (Palatals) - ಚವರ್ಗದ ವ್ಯಂಜನಗಳು; ಏಕೆಂದರೆ, ಇವುಗಳನ್ನು ಉಚ್ಚರಿಸುವಾಗ ನಾಲಿಗೆ ತಾಲುವನ್ನು ಸ್ಪರ್ಶಿಸುತ್ತದೆ.

೩. ಮೂರ್ಧನ್ಯ (Linguals) - ಟವರ್ಗದ ವ್ಯಂಜನಗಳು ; ಏಕೆಂದರೆ, ಇಲ್ಲಿ ನಾಲಿಗೆ ಮಡಿಯುತ್ತದೆ ಮತ್ತು ಮೂರ್ಧನಿಯ ಮೇಲೆ ಒತ್ತಡ ಬೀಳುತ್ತದೆ.

೪. ದಂತ್ಯ (Dentals) - ತವರ್ಗದ ವ್ಯಂಜನಗಳು ; ಇವುಗಳನ್ನು ಉಚ್ಚರಿಸುವಾಗ ನಾಲಿಗೆ ಹಲ್ಲುಗಳನ್ನು ಸ್ಪರ್ಶಿಸುತ್ತದೆ.

೫. ಓಷ್ಠ್ಯ (Labials) - ಪವರ್ಗದ ವ್ಯಂಜನಗಳು ; ಇವು ಉಚ್ಚಾರಗೊಳ್ಳುವುದು ತುಟಿಯಲ್ಲಿ.

ಇನ್ನುಳಿದ ಅಂತಸ್ಥವರ್ಣ, ಊಷ್ಮವರ್ಣಗಳನ್ನು ಅವುಗಳ ಉಚ್ಚಾರಸ್ಥಾನಗಳಿಗನುಗುಣವಾಗಿ ಮೇಲಿನ ಐದು ವಿಭಾಗಗಳಿಗೇ ಸೇರಿಸುತ್ತಾರೆ. ಸ್ವರಗಳೂ ಕೂಡ ಈ ವಿಭಾಗಗಳಿಗೇ ಸೇರಿಕೊಳ್ಳುತ್ತವೆ.

ಕ ವರ್ಗದೊಡನೆ **अ, आ, ह्** ಮತ್ತು ವಿಸರ್ಗಗಳು ಕಂಠ್ಯದಲ್ಲಿಯೂ[1] ಚವರ್ಗದೊಡನೆ **इ, ई , य्** ಮತ್ತು **श्** ಗಳು ತಾಲವ್ಯದಲ್ಲಿಯೂ[2] ಟವರ್ಗದೊಡನೆ **ऋ , ॠ , ष्** ಮತ್ತು **र्** ಗಳು ಮೂರ್ಧನ್ಯದಲ್ಲಿಯೂ[3] ತವರ್ಗದೊಡನೆ **ऌ ल्** ಮತ್ತು **स्** ಗಳು ದಂತ್ಯದಲ್ಲಿಯೂ,[4] ಪವರ್ಗದೊಡನೆ **उ ऊ** ಮತ್ತು ಉಪಧ್ಮಾನೀಯಗಳು ಓಷ್ಠ್ಯದಲ್ಲಿಯೂ[5] ಸೇರಿಕೊಳ್ಳುತ್ತವೆ.

ए ऐ ಗಳು[6] ಕಂಠ್ಯ ಮತ್ತು ತಾಲವ್ಯಗಳಲ್ಲಿಯೂ **ओ औ** ಗಳು[7] ಕಂಠ್ಯ ಮತ್ತು ಓಷ್ಠ್ಯಗಳಲ್ಲಿಯೂ **व** ಕಾರವು [8] ದಂತ್ಯ ಮತ್ತು ಓಷ್ಠ್ಯಗಳಲ್ಲಿಯೂ ಸೇರುವವು.

---

1 **अकुहविसर्जनीयानां कण्ठः** (ಸಿ. ಕೌ. 10) 2 **इचुयशानां तालुः** (ಸಿ. ಕೌ. 10)
3 **ऋटुरषाणां मूर्धा** (ಸಿ. ಕೌ. 10) 4 **लृतुलसानां दन्ताः** (ಸಿ. ಕೌ. 10)
5 **उपूपध्मानीयानामोष्ठौ** (ಸಿ. ಕೌ. 10)
6 **एदैतोः कण्ठतालु** (ಸಿ. ಕೌ. 10)
7 **ओदौतोः कण्ठोष्ठम्** (ಸಿ. ಕೌ. 10) 8 **वकारस्य दन्तोष्ठम्** (ಸಿ. ಕೌ. 10)

Rarest Archiver

ಮುಂದಿನ ಕೋಷ್ಟಕವು ಇವುಗಳನ್ನು ಸ್ಫುಟವಾಗಿ ತೋರಿಸುತ್ತದೆ:

ವ್ಯಂಜನಗಳು									
		ಕರ್ಕಶ ವ್ಯಂಜನಗಳು (ಖರ್ ವರ್ಣಗಳು)			ಮೃದು ವ್ಯಂಜನಗಳು (ಹಶ್ ವರ್ಣಗಳು)				
ಪಾರಿಭಾಷಿಕ ಸಂಜ್ಞೆ	ಸ್ವರಗಳು	ಊಷ್ಮ ವರ್ಣ	ಅಲ್ಪ ಪ್ರಾಣ	ಮಹಾ ಪ್ರಾಣ	ಅಲ್ಪ ಪ್ರಾಣ	ಮಹಾ ಪ್ರಾಣ	ಅನುನಾಸಿಕ ಅನುಸ್ವಾರ	ಅಂತಸ್ಥ ವರ್ಣ	ಮಹಾಪ್ರಾಣ
कण्ठ्य	**अ, आ,ए, ऐ,ओ,औ अः**	--	**क्**	**ख्**	**ग्**	**घ्**	**ङ् अं**	--	**ह्**
तालव्य	**इ ई ए ऐ**	**श्**	**च्**	**छ्**	**ज्**	**झ्**	**ञ्**	**य्**	---
मूर्धन्य	**ऋ ॠ**	**ष्**	**ट्**	**ठ्**	**ड्**	**ढ्**	**ण्**	**र्**	---
दन्त्य	**लृ**	**स्**	**त्**	**थ्**	**द्**	**ध्**	**न्**	**ल् व्**	
ओष्ठ्य	**उ ऊ ओ औ**		**प्**	**फ्**	**ब्**	**भ्**	**म्**	**व्**	---

Rarest Archiver

೨

ಸಂಧಿ ಪ್ರಕರಣ

ಓದುವಾಗ ಸಂಹಿತೆಗೆ ಎಡೆಗೊಡುವ, ಪರಸ್ಪರ ಹೊಂದಾಣಿಕೆಗಳಿರುವ ಎರಡು ಅಥವಾ ಅನೇಕಾಕ್ಷರಗಳ ಸಮಾಗಮವೇ ಸಂಧಿ (Euphonic Combination) ಎನಿಸುತ್ತದೆ. ಉಚ್ಚರಿಸಲ್ಪಡುವಾಗ ಒಂದೇ ಶಬ್ದದಲ್ಲಿಯ ಅಕ್ಷರಗಳೂ ಕೂಡ ಪರಸ್ಪರ ಸಮ್ಯಕ್ ಹಿತವಾಗಿ ಹೊಂದಿಕೊಳ್ಳಬೇಕಾಗುತ್ತದೆ; ಅದು ಸಂಹಿತೆ.[1] ಧಾತುಗಳಿಗೆ [2] ಪ್ರತ್ಯಯಾದಿಗಳು ಸೇರುವಾಗಲೂ ಪ್ರಕೃತಿಗೆ[3] ಪ್ರತ್ಯಯಾದಿಗಳು ಸೇರುವಾಗಲೂ ಉಪಸರ್ಗಗಳು ಧಾತುಗಳಿಗೆ ಸೇರುವಾಗಲೂ ಸಂಹಿತೆಯು ನಿತ್ಯ ಅಥವಾ ಅನಿವಾರ್ಯ. ಇದೇ ರೀತಿ, ಸಮಾಸದಲ್ಲಿಯೂ ಸಂಧಿ ಅನಿವಾರ್ಯ. ವಾಕ್ಯದಲ್ಲಿಯಾದರೋ ಸಂಧಿಯು ಐಚ್ಛಿಕವಾಗುತ್ತದೆ. ಇವುಗಳನ್ನು ಬೋಧಿಸುವ ಕಾರಿಕೆಯಿದು:

संहितैकपदे नित्या नित्या धातूपसर्गयोः |
नित्या समासे वाक्ये तु सा विवक्षामपेक्षते ||

ಸಂಧಿಯಿಂದ ಸ್ವರವ್ಯಂಜನವಿಸರ್ಗಗಳಲ್ಲಿ ಆಗುವ ಪರಿಣಾಮವು ಲೋಪ, ಆಗಮ ಅಥವಾ ಆದೇಶ ಇವುಗಳಲ್ಲೊಂದು.

ಉದಾಹರಣೆ : ಲೋಪ : **सः + आगच्छति = स आगच्छति** --- ವಿಸರ್ಗಲೋಪ
ಆಗಮ : **लक्ष्मी + छाया = लक्ष्मीच्छाया** --- ಚಕಾರಾಗಮ
ಆದೇಶ : **दिक् + दर्शनम् = दिग्दर्शनम्** --- ಗಕಾರಾದೇಶ

ಸಂಧಿಯು ಮುಖ್ಯವಾಗಿ ಎರಡು ವಿಧ. ೧. **अच्** ಸಂಧಿ ಅಥವಾ ಸ್ವರಸಂಧಿ.
೨. **हल्** ಸಂಧಿ ಅಥವಾ ವ್ಯಂಜನ ಸಂಧಿ.

ಮೂರನೇ ವಿಧವೂ ಒಂದಿದೆ. ಅದು ವಿಸರ್ಗ ಸಂಧಿ. - ಇದು ವಿಸರ್ಗದ ಮುಂದೆ ಸ್ವರವ್ಯಂಜನಗಳು ಪರವಾದಾಗ ಸಂಭವಿಸುವುದು

ವಿ.ಸೂ. ಪ್ರಕೃತಿಭಾವಸಂಧಿ ಮತ್ತು ಸ್ವಾದಿಸಂಧಿ ಎಂದು ಇನ್ನೆರಡು ವಿಧಗಳನ್ನು ವೈಯಾಕರಣಿಗಳು ತೋರಿಸಿದ್ದಾರೆ. ಇಲ್ಲಿ ಮೇಲಿನ ಮೂರು ವಿಧಗಳಲ್ಲಿಯೇ ಇವುಗಳನ್ನು ಅಂತರ್ಗತಗೊಳಿಸಲಾಗಿದೆ.

I ಸ್ವರಸಂಧಿ :- ಇದನ್ನು ಅಚ್ ಸಂಧಿಯೆಂದೂ ಕರೆಯುವರು. ಪದಗಳ ಆದ್ಯಂತ್ಯಗಳಲ್ಲಿರುವ ಸ್ವರಗಳ ಸಮಾಗಮಕ್ಕನುಗುಣವಾಗಿ ಸ್ವರಸಂಧಿಯಲ್ಲಿ ಎಂಟು ವಿಧಗಳು.

---

[1] **परः सन्निकर्षः संहिता** (ಪಾ I, 4,109)

[2] ಧಾತು = ಕ್ರಿಯಾಪದದ ಮೂಲರೂಪ. ಕ್ರಿಯಾಪದ ಪ್ರಕರಣವನ್ನು ನೋಡಿರಿ.

[3] ಪ್ರಕೃತಿ = ಪ್ರಾತಿಪದಿಕ; ಉದಾಹರಣೆ : ರಾಮ, ಶಿವ ಮುಂತಾದ ನಾಮಪದಗಳು; ಶ್ವೇತ, ರಕ್ತ ಮುಂತಾದ ವಿಶೇಷಣಗಳು; ತದ್ , ಏತದ್ ಮುಂತಾದ ಸರ್ವನಾಮಗಳು.

Rarest Archiver

1) ಸವರ್ಣದೀರ್ಘ 2) ಗುಣಸಂಧಿ 3) ವೃದ್ಧಿ 4) ಯಣ್ ಸಂಧಿ 5) ಅಯಾದಿ
6) ಪೂರ್ವರೂಪಸಂಧಿ 7) ಪರರೂಪಸಂಧಿ 8) ಪ್ರಕೃತಿಭಾವಸಂಧಿ.

೧. ಸವರ್ಣದೀರ್ಘಸಂಧಿ.[1]

ಅಕ್ ಸ್ವರಾಕ್ಷರಗಳ ಮುಂದೆ ಅಂದರೆ **अ ,आ ; इ, ई ; उ, ऊ ; ऋ, ॠ** ಇವುಗಳ ಮುಂದೆ ಅನುಕ್ರಮವಾಗಿ ಇವೇ ಸ್ವರಗಳು ಪರವಾದಾಗ ಕ್ರಮವಾಗಿ **आ, ई, ऊ , ऋ** ಗಳಾಗುತ್ತವೆ. ಇಲ್ಲಿ ಅವೇ ಸ್ವರಗಳು ಬಂದು ದೀರ್ಘಗೊಳ್ಳುವುದರಿಂದ ಇದು ಸವರ್ಣದೀರ್ಘಸಂಧಿ.

ಉದಾಹರಣೆಗಳು:

अत्र + अरण्ये = अत्रारण्ये (अ + अ = आ)
मम + आनने = ममानने (अ + आ = आ)
एषा + आगता = एषागता (आ + आ = आ)
इति + इच्छामि = इतीच्छामि (इ + इ= ई)
नारी + इव = नारीव (ई + इ = ई)

इति + ईरायित्वा = इतीरयित्वा (इ + ई = ई)
सखी+ ईयात् = सखीयात् (ई + ई = ई)
मधु + उच्यते = मधूच्यते (उ + उ = ऊ)
वधू + उक्त्वा = वधूक्त्वा (ऊ + उ = ऊ)
चमू + ऊर्जिता = चमूर्जिता (ऊ + ऊ = ऊ)
होतृ + ऋकारः = होतृकारः (ऋ +ऋ = ॠ)
क्षातृ + लृकारः = क्षातृकारः[2] (ऋ + लृ = ॠ)
क्षातृ + लृकारः = क्षात्लृकारः[3] (ॠ + लृ = लृ)

ವಿ.ಸೂ.: ೧. ಋಕಾರಕ್ಕೆ ಸವರ್ಣ ಋ ಕಾರವು ಪರವಾದಾಗ ಉಂಟಾಗುವ ದೀರ್ಘ **ॠ** ಕಾರವು ವೈಕಲ್ಪಿಕವಾಗಿ ಹ್ರಸ್ವವಾಗಲೂಬಹುದು.[4]

ಉದಾಹರಣೆ: **पितृ + ऋणम् = पितॄणम् / पितृणम्**

೨. ಲೃಕಾರಕ್ಕೆ ದೀರ್ಘತ್ವ[5] ವಿಲ್ಲದ್ದರಿಂದ ಸವರ್ಣದೀರ್ಘಸಂಧಿ ನಿಯಮವು ಇದಕ್ಕೆ ಅನ್ವಯಿಸುವುದಿಲ್ಲ.

---

1 **अकः सवर्णे दीर्घः** (ಪಾ VI, 1,101)

2 **ऋकार लृकार** ಗಳಿಗೆ ಸಾವರ್ಣ್ಯವಿರುವುದರಿಂದ ಲೃಕಾರಕ್ಕೆ ದೀರ್ಘ **ॠकार** ವೇ ಆಗಬಹುದು.
ऋलृवर्णयोर्मिथः सावर्ण्यं वाच्यम् (ವಾ. 105)
पक्षे ऋकारः सावर्ण्यात् (ಸಿ. ಕೌ. 85)

3 **लृति लृ वा** (ಸಿ. ಕೌ. 85)

4 **ऋति ऋ वा** (ಸಿ. ಕೌ. 85)

5 **लृवर्णस्य .... तस्य दीर्घाभावात्**

Rarest Archiver

೨. ಗುಣಸಂಧಿ :[1]

ಅವರ್ಣದ ಮುಂದೆ (**अ , आ** ಗಳ ಮುಂದೆ) **इ , ई** ಗಳು ಬಂದಾಗ ಉಭಯ ಸ್ಥಾನಗಳಲ್ಲಿಯ ಸ್ವರಗಳು **ए** ಆಗಿಯೂ **उ , ऊ** ಗಳು ಬಂದಾಗ **ओ** ಆಗಿಯೂ **ऋ , ॠ** ಗಳು ಬಂದಾಗ **अर्** ಆಗಿಯೂ **ऌ** ಬಂದಾಗ **अल्** ಆಗಿಯೂ ಮಾರ್ಪಡುತ್ತವೆ. ಇವಕ್ಕೆ ಗುಣಸಂಧಿಯೆನ್ನುವರು.

ಉದಾಹರಣೆಗಳು:

मानव + इच्छा =मानवेच्छा (अ +इ =ए)
रमा + इति =रमेति (आ + इ = ए)
मम + ईप्सितम् =ममेप्सितम् (अ + ई = ए)
राजा + ईशः =राजेशः (आ + ई = ए)

अत्र + उदितम् = अत्रोदितम् (अ + उ = ओ)
मम + ऊरु = ममोरु (अ + ऊ = ओ)
गङ्गा + उदकम् = गङ्गोदकम् (आ +उ = ओ)
बाला + ऊर्जितम् = बालोर्जितम् (आ + ऊ = ओ)

सप्त + ऋषयः =सप्तर्षयः (अ + ऋ = अर्)
राजा + ऋषिः =राजर्षिः (आ + ऋ = अर्)
तव + ऌकारः =तवल्कारः (अ + ऌ = अल्)

ವಿ.ಸೂ. ಅವರ್ಣವನ್ನು ಋಕಾರವು ಸಂಧಿಸಿದಾಗ[2] ಯಾವುದೇ ಬದಲಾವಣೆಯೂ ಇಲ್ಲದೇ ವೈಕಲ್ಪಿಕವಾಗಿ ಪ್ರಕೃತಿಭಾವವೂ ಇರಬಹುದು.

ಉದಾಹರಣೆ **सप्त + ऋषयः ......> सप्तर्षयः / सप्तऋषयः**
राजा + ऋषिः ......> राजर्षिः / राजऋषिः

೩. ವೃದ್ಧಿ ಸಂಧಿ :[3]

ಅವರ್ಣವು **ए , ऐ; ओ, औ** ಗಳನ್ನು ಸಂಧಿಸಿದರೆ ಉಭಯ ಸ್ಥಾನಗಳಲ್ಲಿಯ ಸ್ವರಗಳು ಅನುಕ್ರಮವಾಗಿ **ऐ** ಮತ್ತು **औ** ಗಳಾಗುತ್ತವೆ.

ಉದಾಹರಣೆಗಳು :

अनेन + एकेन = अनेनैकेन (अ + ए = ऐ)

---

1 **आद्गुणः** (ಪಾ VI, I,87)
2 **ऋत्यकः** (ಪಾ IV, I,128) **ऋतिपरे अकः प्राग्वत्** (ಸಿ. ಕೌ. 92)
3 **वृद्धिरेचि** (ಪಾ VI, I,88)

Rarest Archiver

न + ऐच्छत् = नैच्छत् (अ + ऐ = ऐ)
मया + एतद् = मयैतत् (आ + ए = ऐ)
वन + ओषधिः = वनौषधिः (अ + ओ = औ)
कृष्णा + औत्कण्ठ्य = कृष्णौत्कण्ठ्य (आ+ औ = औ)

ವಿ.ಸೂ.: **आ** ದ ಮುಂದೆ **ॐ (ओम्)** ಬಂದಾಗ **अ** ಲೋಪಗೊಳ್ಳುತ್ತದೆ.
ಉದಾಹರಣೆ : **शिवाय +ओम् + नमः = शिवायों नमः**

೪. ಯಣ್‌ಸಂಧಿ[1]

इ , ई ; उ , ऊ ; ऋ, ॠ ಮತ್ತು **ऌ** ಇವುಗಳಿಗೆ ಅಸವರ್ಣ ಸ್ವರಗಳು ಪರವಾದರೆ ಇವುಗಳ ಸ್ಥಳದಲ್ಲಿ ಕ್ರಮವಾಗಿ **य् , व् , र् , ल्** ಗಳು ಆದೇಶಗೊಳ್ಳುತ್ತವೆ. ಈ ಯಕಾರಾದಿಗಳ ಆದೇಶದಿಂದಾಗಿ ಈ ಸಂಧಿಕ್ರಮಕ್ಕೆ **यण्** ಸಂಧಿಯೆಂದು ಹೆಸರು.

इति + अस्तु = इत्यस्तु (इ + अ =य)
इति + उक्त्वा = इत्युक्त्वा (इ + उ =य्)
सदसि + ऊचुः = सदस्यूचुः (इ + ऊ =य्)
वारि + एतत् = वार्येतत् (इ + ए = य)
भक्ति + ऐक्यम् = भक्त्यैक्यम् (इ + ऐ = य्)
नदी + एषा = नद्येषा (ई + ए = य्)
भुवि + ओजस्वी = भुव्योजस्वी (इ + ओ = य्)
मयि + औदार्यम् = मय्यौदार्यम् (इ + औ = य)

भानु + अस्ति = भान्वस्ति (उ + अ = व्)
वस्तु + आनयति = वस्त्वानयति (उ + आ = व्)
मधु + इति = मध्विति (उ + इ = व्)
चमू + ईशम् चम्वीशम् = (ऊ + ई = व्)
तनु + एतस्मिन् = तन्वेतस्मिन् (उ + ए = व्)
वसु + ऐश्वर्यम् = वस्वैश्वर्यम् (उ + ऐ = व्)
मधु + ओष्ठः = मध्वोष्ठः (उ + ओ = व्)

---

[1] **इको यणचि** (ಪಾ VI, 1, 77) **इकः स्थाने यण् स्यात् संहितानां विषये** (ಸಿ. ಕೌ. 47)

Rarest Archiver

बहु +औद्धत्य = बह्वौद्धत्य (उ + औ = व्)

पितृ +अर्जितम् = पित्रर्जितम् (ऋ + अ = र्)

मातृ +आशीर्वादः= मात्राशीर्वादः (ऋ + आ = र्)

भ्रातृ +ईप्सितम् = भ्रात्रीप्सितम् (ऋ + ई = र्)

सवितृ +उह्यते = सवित्रुह्यते (ऋ + उ = र्)

೫. ಅಯಾದಿ ಸಂಧಿ [1]

ಇದಕ್ಕೆ 'ಯಾಂತಾದೇಶ - ವಾಂತಾದೇಶ ಸಂಧಿ' ಎಂದೂ ಹೇಳುವರು.

ए, ओ , ऐ , औ (एच्) ಗಳಿಗೆ ಸ್ವರಾಕ್ಷರಗಳು **(अच्)** ಪರವಾದರೆ ಕ್ರಮವಾಗಿ **अय् , अव्, आय् , आव्** ಇವುಗಳು ಆದೇಶವಾಗುತ್ತವೆ.

ಉದಾಹರಣೆ : **हरे + ए = हरये (अय्)**

विष्णो + ए = विष्णवे (अव्)

नै + अकः = नायकः (आय्)

पौ + अकः = पावकः (आव्)

तौ + एतौ = तावेतौ (आव्)

ವಿ.ಸೂ.: 1. ಎರಡು ಶಬ್ದಗಳು ಸಂಧಿಸುವಾಗ ಪೂರ್ವಪದಾಂತ್ಯದ **एच्** ಸ್ವರಗಳು ಸ್ವರಾಕ್ಷರಗಳೇ ಪರವಾದಾಗ ವೈಕಲ್ಪಿಕವಾಗಿ ಅವರ್ಣ **(अ** ಅಥವಾ **आ)**ಗಳಾಗಬಹುದು.

ಉದಾಹರಣೆ :

ग्रामे + आसीत् = ग्रामयासीत् ಅಥವಾ **ग्राम आसीत्**

साधो + एहि = साधवेहि ಅಥವಾ **साध एहि**

शिक्षामहे+ इति = शिक्षामहायिति ಅಥವಾ **शिक्षामह इति**

कलौ + इति = कलाविति ಅಥವಾ **कला इति**

2. **ओ , औ** ಗಳಿಗೆ 'ಯಕಾರಾದಿ ಪ್ರತ್ಯಯಗಳು' ಪರವಾದರೆ ಕ್ರಮವಾಗಿ **अव्** ಮತ್ತು **आव्** ಗಳ ಆದೇಶವಾಗುತ್ತದೆ.

ಉದಾಹರಣೆ :

गो + य = गव्य ; नौ + य = नाव्य

---

[1] **एचोऽयवायावः** (ಪಾ VI, 1,78)

Rarest Archiver

೬. ಪೂರ್ವ ರೂಪ ಸಂಧಿ : [1]

ಪದಾಂತ್ಯ **ए , ओ (एङ्)** ಗಳಿಗೆ ಹ್ರಸ್ವ ಅವರ್ಣವು ಪರವಾದರೆ ಉಭಯ ಸ್ಥಾನಗಳಲ್ಲಿಯೂ ಪೂರ್ವರೂಪವು (ಪೂರ್ವ ಪದಾಂತ್ಯದಲ್ಲಿಯ ಸ್ವರಕ್ಕೆ ಸವರ್ಣವಾದ ಸ್ವರವು) ಆದೇಶವಾಗುತ್ತದೆ.

ಉದಾಹರಣೆ: **वने + अस्मिन् = वनेऽस्मिन्** **हरे + अव = हरेऽव**

विष्णो + अत्र = विष्णोऽत्र

ಇಲ್ಲಿ ಪರಪದದ ಆದಿಯಲ್ಲಿಯ ಅಕಾರವು ಪೂರ್ವಪದಗಳ ಅಂತ್ಯದಲ್ಲಿರುವ **ए , ओ** ಗಳಲ್ಲಿ ಒಂದಾಗಿ ಅವೇ(**एङ्**)ಆಗಿಬಿಡುತ್ತವೆ. ಬರವಣಿಗೆಯಲ್ಲಿ ತಿಳಿಯಲನುಕೂಲವಾಗುವಂತೆ '**अ**' ದ ಸ್ಥಾನದಲ್ಲಿ ಅವಗ್ರಹವು (ऽ) ಇಡಲ್ಪಡುತ್ತದೆ.

೭. ಪರರೂಪಸಂಧಿ : [2]

अ ಕಾರಂತ ಉಪಸರ್ಗಕ್ಕೆ ಏಜಾದಿ (**ए, ओ** ಗಳು ಆದಿಯಲ್ಲಿ ಬರುವ) ಧಾತುಗಳು ಪರವಾದಾಗ ಈ ಪರದಲ್ಲಿಯ **ए , ओ** ಗಳಿಗೆ ಸಜಾತೀಯ ಸ್ವರಗಳು ಪೂರ್ವದಲ್ಲಿಯೂ ಬರುತ್ತವೆ.

ಉದಾಹರಣೆ :- **प्र + एजते = प्रे + एजते = प्रेजते**

उप + ओषति = उपो + ओषति = उपोषति

ವಿ.ಸೂ. : ಕೆಲವು ಏಜಾದಿ **सुप्**[3] ಧಾತುಗಳು ಪರವಾದಾಗಲೂ ಈ ನಿಯಮವು ಅನ್ವಯಿಸುವುದು. ಸಮಾಸದಲ್ಲಿ '**ओष्ठ**' ಶಬ್ದವು ಪರವಾದಾಗ ಈ ನಿಯಮವು ಐಚ್ಛಿಕ.

೮. ಪ್ರಕೃತಿಭಾವ ಸಂಧಿ : [4]

೧. ಪದಾಂತ್ಯದಲ್ಲಿರುವ ದೀರ್ಘಸಹಿತ **इ, उ, ऋ** ಕಾರಗಳಿಗೆ ಮತ್ತು **ऌ** ಕಾರಕ್ಕೆ ಅಸವರ್ಣ ಸ್ವರಾಕ್ಷರಗಳು ಪರವಾದರೆ ಅವು ಸ್ವಸ್ವಭಾವಗಳಲ್ಲಿಯೇ ಇರುತ್ತವೆ. ಆಗ ಐಚ್ಛಿಕವಾಗಿ ಹ್ರಸ್ವವಾಗಲೂಬಹುದು.

ಉದಾಹರಣೆ : **चक्री + अत्र = चक्रयत्र / चक्री अत्र / चक्रि अत्र**

ವಿ.ಸೂ. **वापी + अश्व = वाप्यश्व ; गौरी + औ = गौर्यौ** ಇವು ಅಪವಾದಗಳು.

೨. ಪದಾಂತ್ಯದಲ್ಲಿರುವ ದೀರ್ಘಸಹಿತ ಅಕಾರ, ಇಕಾರ, ಉಕಾರ, ಋಕಾರಗಳಿಗೆ ಋಕಾರವು ಪರವಾದರೆ, ಸಂಬೋಧನೆಯನ್ನು ನಿವೇದಿಸುವ (ಸಂಬುದ್ಧಿ ನಿಮಿತ್ತಕ) ಓಕಾರಕ್ಕೆ '**इति**' ಶಬ್ದವು ಪರವಾದರೆ ಮತ್ತು '**गो**' ಶಬ್ದಕ್ಕೆ ಹ್ರಸ್ವ ಅಕಾರವು ಪರವಾದರೆ ವೈಕಲ್ಪಿಕವಾಗಿ ಪ್ರಕೃತಿಭಾವವು ಬರುತ್ತದೆ.

---

1 एङः पदान्तादति (ಪಾ VI, 1,109)

2 एङि पररूपम् (ಪಾ VI, I,94)

3 ನಾಮಧಾತುಗಳಿವು. ಇವುಗಳನ್ನು ಪ್ರತ್ಯಯಾಂತ ಧಾತುಪ್ರಕರಣದಲ್ಲಿ ವಿವರಿಸಲಾಗಿದೆ.

4 प्लुतप्रगृह्या अचि नित्यम् (ಪಾ VI, I,125)

Rarest Archiver

ಉದಾಹರಣೆ :

सप्त + **ऋषयः** = **सप्तर्षयः** ಅಥವಾ **सप्त ऋषयः**

विष्णो + **इति** = **विष्णविति** ಅಥವಾ **विष्णो इति**

गो + **अग्रम्** = **गोऽग्रम्** ಅಥವಾ **गोअग्रम्** ಅಥವಾ **गवाग्रम्**

೩. ಪ್ರಗೃಹ್ಯ :

(i) ಈಕಾರಂತ, ಊಕಾರಾಂತ ಮತ್ತು ಏಕಾರಾಂತ ದ್ವಿವಚನಗಳಿಗೆ ಪ್ರಗೃಹ್ಯವೆನ್ನುತ್ತಾರೆ.[1] ಪ್ರಗೃಹ್ಯವೆಂದರೆ ಸ್ವರಪರವಾದರೂ ಸಂಧಿಯಾಗದೆ ಹಾಗೆಯೇ ಪ್ರಕೃತಿಭಾವದಲ್ಲಿರುವುದು ಎಂದರ್ಥ.

ಉದಾಹರಣೆ :

तरू + **एतौ** = **तरू एतौ** **दस्यू** + **इमौ** = **दस्यू इमौ**

हरी + **एतौ** = **हरी एतौ** **पचेते** + **इमौ** = **पचेते इमौ**

(ii) ಆಶ್ಚರ್ಯ ಮತ್ತು ವಿತರ್ಕಾರ್ಥಗಳನ್ನು ನಿಬೋಧಿಸುವ ನಿಪಾತ(ಅವ್ಯಯ)ಗಳೂ ಪ್ರಗೃಹ್ಯಗಳಾಗಿರುತ್ತವೆ. ಉದಾಹರಣೆ :

आ + **एवम्** = **आ एवम्** [ಆಶ್ಚರ್ಯ]

अहो + **अग्ने** = **अहो अग्ने** [ಆಶ್ಚರ್ಯ]

इ + **इन्द्र** = **इ इन्द्र** [ಆಶ್ಚರ್ಯ]

उ + **उमेश** = **उ उमेश** [ವಿತರ್ಕ]

ವಿ.ಸೂ.: ನಿಪಾತವು ಆಶ್ಚರ್ಯವಿತರ್ಕಾರ್ಥಸೂಚಕವಾಗಿರದ ಪಕ್ಷದಲ್ಲಿ ಅದು ಸ್ವರಾದಿ ಪದಗಳೊಡನೆ ಸಮಾಗಮವನ್ನು ಹೊಂದುತ್ತದೆ.

ಉದಾಹರಣೆ: **आ** + **उष्णम्** = **ओष्णम्** = ಕಡಿಮೆ ಬೆಚ್ಚಗಿರುವ

II ವ್ಯಂಜನ ಸಂಧಿ

ವ್ಯಂಜನಸಂಧಿಗೆ '**हल्सन्धि**' ಎಂದೂ ಅನ್ನುವರು. ಪದಾಂತ್ಯ ವ್ಯಂಜನವು ವ್ಯಂಜನದೊಡನೆ ಅಥವಾ ಸ್ವರದೊಡನೆ ಸಮ್ಯಕ್‌ಹಿತವಾಗಿ ಸಮಾಗಮಿಸಿದರೆ ಅದು ವ್ಯಂಜನಸಂಧಿ. ಬಹುವಿಧವಾದ ವ್ಯಂಜನಸಂಧಿಯು ಸಾಮಾನ್ಯವಾಗಿ ಈ ಕೆಳಗಿನಂತೆ ವಿಭಾಗಿಸಲ್ಪಡುತ್ತದೆ.

೧. ಜಸ್ತ್ವ ಸಂಧಿ :[2]

ಪದಾಂತ್ಯದಲ್ಲಿರುವ ಅನುನಾಸಿಕವಲ್ಲದ ವರ್ಗೀಯ ವ್ಯಂಜನಗಳಿಗೆ ಸವರ್ಣವರ್ಗದ ತೃತೀಯಾಕ್ಷರ[3]ಗಳು ಆದೇಶಗೊಳ್ಳುತ್ತವೆ.

---

[1] **ईदूदेद्द्विवचनं प्रगृह्यम्** (ಪಾ II, 1,7)

[2] **झलां जशोऽन्ते** (ಪಾ VIII, 2. 39)

पदान्ते झलां जशस्युः (ಸಿ. ಕೌ 84)

[3] **जश्** ವರ್ಣಗಳು, ಮಾಹೇಶ್ವರ ಅಕ್ಷರಸೂತ್ರಗಳಲ್ಲಿ ಹತ್ತನೆಯದಿದು. '**जबगडदश्**'

Rarest Archiver

ಉದಾಹರಣೆ :

वाक्	+	**ईशः**	=	**वागीशः**	**वाक्**	+	**यत्र**	=	**वाग्यत्र**
षट्	+	**अङ्गम्**	=	**षडङ्गम्**	**तत्**	+	**रूपम्**	=	**तद्रूपम्**
अच्	+	**अन्तः**	=	**अजन्तः**	**विराट्**	+	**रूपम्**	=	**विराड्रूपम्**
ककुभ्	+	**मार्गः**	=	**ककुब्मार्गः**	**अप्**	+	**जातम्**	=	**अब्जातम्**

೨.ಚರ್ತ್ವಸಂಧಿ :[1]

ಇವೇ ವ್ಯಂಜನಗಳಿಗೆ ಯಾವುದೇ ಕರ್ಕಶ ವ್ಯಂಜನವು ಪರವಾದಾಗ ಸವರ್ಣವರ್ಗದ ಪ್ರಥಮಾಕ್ಷರಗಳು ಆದೇಶಗೊಳ್ಳುತ್ತವೆ.

ಉದಾಹರಣೆ :

क्षुध्	+	**पिपासा**	=	**क्षुत्पिपासा**	**तत्**	+	**समागमः**	=	**तत्समागमः**
ककुभ्	+	**पतिः**	=	**ककुप्पतिः**	**वाक्**	+	**पटुः**	=	**वाक्पटुः**
सम्पद्	+	**प्राप्तिः**	=	**सम्पत्प्राप्तिः**	**षड्**	+	**शास्त्रम्**	=	**षट्शास्त्रम्**

೩. ಅನುನಾಸಿಕ ಸಂಧಿ: [2]

ಪದಾಂತ್ಯ **यर्**[3] ವರ್ಣಗಳು ಅರ್ಥಾತ್ **ह्** ಮತ್ತು ಅನುನಾಸಿಕಗಳನ್ನು ಬಿಟ್ಟು ಉಳಿದ ಎಲ್ಲಾ ವ್ಯಂಜನಾಕ್ಷರಗಳು ಮುಂದೆ ಅನುನಾಸಿಕಗಳು ಬಂದಾಗ ಸವರ್ಣ ವರ್ಗದ ಅನುನಾಸಿಕವಾಗಿ ಮಾರ್ಪಡುತ್ತವೆ.

ಉದಾಹರಣೆ :

वाक्	+	**मयम्**	=	**वाङ्मयम्**	**षट्**	+	**मासाः**	=	**षण्मासाः**
तत्	+	**नयनम्**	=	**तन्नयनम्**	**विट्**	+	**मात्रम्**	=	**विण्मात्रम्**
तत्	+	**मानसम्**	=	**तन्मानसम्**	**अप्**	+	**नयनम्**	=	**अम्नयनम्**

---

[1] **खरि च** (ಪಾ VIII, 4, 55)
खरि परे झलां चरः स्युः इति जकारस्य चकारः (ಸಿ. ಕೌ 121)

[2] **यरोऽनुनासिकेऽनुनासिको वा** (ಪಾ VIII, 4, 45)
यरः पदान्तस्य अनुनासिके परेऽनुनासिको वा स्यात् (ಸಿ. ಕೌ 116)

[3] ಮಾಹೇಶ್ವರ ಅಕ್ಷರಸೂತ್ರಗಳಲ್ಲಿಯ ಐದನೆ ಸೂತ್ರದಲ್ಲಿಯ **य्** ದಿಂದ ಹದಿಮೂರನೆಯ ಸೂತ್ರದ ಇತ್ಸಂಜ್ಞೆಯಾದ **र्** ವರೆಗಿನ ವರ್ಣಗಳು.

Rarest Archiver

೪. ಅನುಸ್ವಾರ ಸಂಧಿ :[1]

೧. ಪದಾಂತ್ಯವಲ್ಲದ ಮಕಾರ ನಕಾರ[2]ಗಳಿಗೆ ಝಲ್ ವರ್ಣಗಳನ್ನು ಅರ್ಥಾತ್, ಅನುನಾಸಿಕಗಳನ್ನು ಬಿಟ್ಟು ಉಳಿದ ಎಲ್ಲಾ ವ್ಯಂಜನಾಕ್ಷರಗಳು ಪರವಾದರೆ ಅನುಸ್ವಾರವು ಆದೇಶವಾಗುತ್ತದೆ.

ಉದಾಹರಣೆ :

आक्रम् + स्यते = आक्रंस्यते   यशान् + सि = यशांसि

೨. ಮಕಾರಾಂತ್ಯ ಪದಕ್ಕೆ ಸಮಸ್ತ ವ್ಯಂಜನಾಕ್ಷರಗಳು (ಹಲ್) ಪರವಾದರೆ ಅನುಸ್ವಾರವು ಆದೇಶವಾಗುತ್ತದೆ.

ಉದಾಹರಣೆ :

देवम् + नमामि = देवं नमामि   कृष्णम् + मन्यते = कृष्णं मन्यते

पितरम् + वन्दे = पितरं वन्दे   असुरम् + हन्ति = असुरं हन्ति

तम् + सत्करोति = तं सत्करोति

೫. ಪರಸವರ್ಣ ಸಂಧಿ :[3]

೧. ಪದಾಂತ್ಯವಲ್ಲದ ಅನುಸ್ವಾರಕ್ಕೆ ಊಷ್ಮ ವರ್ಣಗಳನ್ನು ಮತ್ತು ಮಹಾ ಪ್ರಾಣವನ್ನು ಬಿಟ್ಟು ಉಳಿದ ವ್ಯಂಜನಾಕ್ಷರಗಳು (= **यय्** ವರ್ಣಗಳು) ಪರವಾದರೆ ಪರವರ್ಣದ ಸವರ್ಣಾಕ್ಷರವು ಅನಿವಾರ್ಯವಾಗಿ ಆದೇಶವಾಗುತ್ತದೆ.

ಉದಾಹರಣೆ :

अं + कितः ... अंकितः = अङ्कितः   कुं + ठितः ...कुंठितः = कुण्ठितः

कं + पितः ... कंपितः = कम्पितः   नं + दितः ...नंदितः = नन्दितः

೨. ಪದಾಂತ್ಯದಲ್ಲಿಯ ಅನುಸ್ವಾರಕ್ಕೆ ಪರಸವರ್ಣವು ವೈಕಲ್ಪಿಕವಾಗಿ ಆದೇಶವಾಗುವುದು; ಅಂದರೆ, ಐಚ್ಛಿಕವಾಗಿ ಅನುಸ್ವಾರವು ಹಾಗೆಯೇ ಉಳಿಯಬಹುದು.

ಉದಾಹರಣೆ :

अहं + करोमि = अहङ्करोमि ಅಥವಾ **अहंकरोमि**

त्वं + जानासि = त्वञ्जानासि ಅಥವಾ **त्वं जानासि**

೩. ತವರ್ಗಕ್ಕೆ ಲಕಾರವು[4] ಪರವಾದರೆ ನಿತ್ಯವಾಗಿ ಪರಸವರ್ಣ ಬರುವುದು; ಅಂದರೆ, ತವರ್ಗ ವ್ಯಂಜನಗಳು **ल्** ಆಗಿ ಮಾರ್ಪಡುವವು.

---

1 **मोऽनुस्वारः** (ಪಾ VIII, 2, 23)

2 **नश्चापदान्तस्य झलि** (ಪಾ VIII, 3, 34)

नस्य मस्य चापदान्तस्य झल्यनुस्वारः (ಸಿ. ಕೌ 123)

3 **अनुस्वारस्य ययि परसवर्णः** (ಪಾ VIII, 4, 58)

4 **तोर्लि** (ಪಾ VIII, 4, 60) **तवर्गस्य लकारे परे परसवर्णः स्यात्** (ಸಿ. ಕೌ 117)

Rarest Archiver

ಉದಾಹರಣೆ :

तत् + लीनम् = तल्लीनम्   विद्वान् + लिखति = विद्वांल्लिखति [1]

यद् + लोकम् = यल्लोकम्   अस्मिन् + लोके = अस्मिंल्लोके

೬. ಙಮುಡಾಗಮ ಸಂಧಿ :[2]

ङ्, ण्, न् ಗಳು ಪದಾಂತ್ಯದಲ್ಲಿದ್ದು ಇವುಗಳ ಉಪಾಂತ್ಯದಲ್ಲಿ ಹ್ರಸ್ವಸ್ವರವಿದ್ದರೆ ಇವು ಮುಂದೆ ಯಾವುದೇ ಸ್ವರಬಂದರೂ ದ್ವಿತ್ವಗೊಳ್ಳುತ್ತವೆ. ಅಂದರೆ, ಅನುಕ್ರಮವಾಗಿ ಇವೇ ಅಕ್ಷರಗಳು ಪುನರುಕ್ತಗೊಳ್ಳುತ್ತವೆ.

ಉದಾಹರಣೆ :

सुगण् + ईशः = सुगण्णीशः   अस्मिन् + अवकाशे = अस्मिन्नवकाशे

प्रत्यङ् + आत्मा = प्रत्यङ्ङात्मा   सन् + अच्युतः = सन्नच्युतः

೭. ತುಗಾಗಮ ಸಂಧಿ: [3]

೧. **न्** ದ ಮುಂದೆ **श्** ಬಂದರೆ **न्** ವು **ञ्** ಆಗುತ್ತದೆ. **ञ् - श्** ಗಳ ಮಧ್ಯದಲ್ಲಿ ಚಕಾರಾಗಮವಾಗುತ್ತದೆ. ನಂತರ **ञ्** ವು ಅನುಸ್ವಾರವಾಗಿಯೂ **श्** ವು **छ्** ಆಗಿಯೂ ಮಾರ್ಪಡುತ್ತವೆ. ಇಲ್ಲಿ **च्** ವನ್ನು ವೈಕಲ್ಪಿಕವಾಗಿ ಲೋಪಗೊಳಿಸಬಹುದು.

ಉದಾಹರಣೆ :

देवान् + शिरसा = देवाञ् + शिरसा =

देवाञ् + च् + शिरसा = देवाञ्चिशिरसा / देवाञ्च्छिरसा / देवाञ्छिरसा

೨. **न्** ದ ಮುಂದೆ **श्** ಬಂದಾಗ ವೈಕಲ್ಪಿಕವಾಗಿ **त्** ವನ್ನುಸೇರಿಸಬಹುದು.

ಉದಾಹರಣೆ :

देवान् + शिरसा = देवान्त्शिरसा / देवाञ्च्छिरसा / देवाञ्छिरसा

सन् + शम्भुः = सन्त्शम्भुः / सञ्च्छम्भुः / सञ्छम्भुः

೩. ಹ್ರಸ್ವಸ್ವರಾಂತ್ಯ ಪದಗಳ ಮುಂದೆ ಮತ್ತು **आ**, **मा** ಅವ್ಯಯಗಳ ಮುಂದೆ **छादि**(**छ**ವುಆದಿಯಲ್ಲುಳ್ಳ) ಪದವು ಬಂದಾಗ **छ्** ಕ್ಕೆ ಪೂರ್ವದಲ್ಲಿ **च्** ವನ್ನು ಸೇರಿಸಲಾಗುವುದು.

ಉದಾಹರಣೆ :

इक्षु + छाया = इक्षुच्छाया   मा + छादय = माच्छादय

शिव + छाया = शिवच्छाया   आ + छादनम् = आच्छादनम्

---

[1] **न्** ದ ಮುಂದೆ **ल्** ಬಂದಾಗ **न्** ವು ಅನುಸ್ವಾರ ಮತ್ತು ಪರಸವರ್ಣಗಳೆರಡೂ ಆಗುವುದು.

[2] **ङम्** ಆಗಮ ಎಂದರ್ಥ. **ङम्** ಎಂದರೆ ಮಾಹೇಶ್ವರ ಏಳನೆಯ ಸೂತ್ರದಲ್ಲಿಯ **ङ्** ದಿಂದ **म्** ಇತ್ಸಂಜ್ಞೆಯವರೆಗೆ ;
ङमो ह्रस्वादचिङ्मुण्नित्यम् (ಪಾ VIII, 3, 32)

[3] **नश्च ; शि तुक्** (ಪಾ VIII, 3, 30-31)

Rarest Archiver

ವಿ.ಸೂ.: **छ्** ಕ್ಕೆ ಪೂರ್ವದಲ್ಲಿ ಹ್ರಸ್ವಸ್ವರಕ್ಕೆ ಬದಲಾಗಿ ದೀರ್ಘ ಸ್ವರಾಂತ್ಯ ಪದವಿದ್ದಲ್ಲಿ ಸಂಧಿಯೇರ್ಪಡುವುದೇ ಐಚ್ಛಿಕ. ಸಂಧಿಮಾಡುವುದೇ ಆದಲ್ಲಿ **च्** ದ ಸೇರ್ಪಡೆ ಅನಿವಾರ್ಯ.

ಉದಾಹರಣೆ:

सा + **छाया** = **सा छाया** ಅಥವಾ **साच्छाया**

लक्ष्मी + **छाया** = **लक्ष्मी छाया** ಅಥವಾ **लक्ष्मीच्छाया**

೮. ಧುಡಾಗಮ ಸಂಧಿ:[1]

ट् , **ड्** ಗಳ ಮುಂದೆ ಸಕಾರಾದಿಪದ ಬಂದಾಗ ವೈಕಲ್ಪಿಕವಾಗಿ **स्** ದ ಪೂರ್ವದಲ್ಲಿ **ध्** (**धुड्**) ವನ್ನು ಸೇರಿಸಲಾಗುವುದು. ಈ **ध्** ವು ಸಂಧಿ ನಿಯಮಕ್ಕನುಸಾರವಾಗಿ ತಕಾರವಾಗುವುದು.

ಉದಾಹರಣೆ:

षट् / **षड्** } + **सन्तः** → **षट्ध्** / **षड्ध्** } + **सन्तः** → **षट्त्सन्तः** / **षड्त्सन्तः**

सन् + **सन्तः** = **सनध्** + **सन्तः** = **सन्त्सः** ಅಥವಾ **सन्सः**

೯. ಸತ್ವ ಸಂಧಿ:[2]

೧. ನಕಾರಾಂತ ಪದಕ್ಕೆ **अम्**[3] ಪರಕ **छय्**[4] ಪರವಾದರೆ ನಕಾರವು ರಕಾರವಾಗುತ್ತದೆ. ಮತ್ತು ರಕಾರ ಪೂರ್ವದಲ್ಲಿ ಅನುಸ್ವಾರವು ಆಗಮಿಸುತ್ತದೆ. ನಂತರ, ರಕಾರವು ಮುಂದೆ ಸಕಾರವಾಗುವುದು.

ಉದಾಹರಣೆ :

तान् + **चोरान्** = **तां** + **र्** + **चोरान्** = **तां** + **स्** + **चोरान्** = **तांश्चोरान्**[5]

हारान् + **तान्** = **हारां** + **र्** + **तान्** = **हारां** + **स्** + **तान्** = **हारांस्तान्**

೨. '**अम्**' ಪರಕವಾಗಿರುವ **खय्** (**ख्**, **फ्** , **छ्** , **ठ्**, **थ्** , **च्** , **ट्** , **त्** , **क्** , **प्**) ಪರವಾದರೆ **पुम्** ಶಬ್ದಕ್ಕೆ **रुत्व** ಬರುತ್ತದೆ.[6]

ಉದಾಹರಣೆ : **पुम्** + **कोकिलः** = **पुं** + **रु** + **कोकिलः**

पुं + **स्** + **कोकिलः** = **पुंस्कोकिलः**[7]

---

[1] **डः सि धुट्** (ಪಾ VIII, 3, 29) **डात्परस्य सस्य धुड् वा स्यात्** (ಸಿ. ಕೌ 131)

[2] **विसर्जनीयस्य सः** (ಪಾ VIII, 3, 34)

[3] '**अम्** ಪರಕ' ಎಂದರೆ ಸಮಸ್ತ ಸ್ವರಗಳು, ಅಂತಸ್ಥವರ್ಣಗಳು, ಮಹಾಪ್ರಾಣ ಅಥವಾ ಅನುನಾಸಿಕಗಳುಳ್ಳ ಎಂದರ್ಥ. ಮಾಹೇಶ್ವರ ಸೂತ್ರಗಳಲ್ಲಿಯ ಒಂದನೆಯ ಸೂತ್ರದ **अ** ದಿಂದ ಏಳನೆಯ ಸೂತ್ರಾಂತ್ಯದ ಇತ್ಸಂಜ್ಞೆಯವರೆಗೆ ಇರುವ ಯಾವುದೇ ಅಕ್ಷರವನ್ನು ಹೊಂದಿದೆ.

[4] **च् , छ् , ट् , ठ् , त्, थ् , क्, प्** ಎಂದರ್ಥ. [5] **स्** ವು ಚವರ್ಗವನ್ನು ಸಂಧಿಸುವಾಗ **श्** ಆಗುವುದು. [6] **अम् परे खयि पुम् शब्दस्य रुः स्यात्** (ಸಿ. ಕೌ 139)

[7] **पुंस्कोकिलानां ऋतम्** (ಅ. ಶಾ.ಏಳನೆಯ ಅಂಕ)

Rarest Archiver

೩. **कान्** ಪದಕ್ಕೆ **कान्** ಪದವೇ ಪರವಾದಾಗ ವೈಕಲ್ಪಿಕವಾಗಿ ನಕಾರಕ್ಕೆ ರುತ್ವ ಬರುತ್ತದೆ.

ಉದಾಹರಣೆ : **कान् + कान् = कां + रु + कान्**

कां + स् + कान् = कांस्कान्[1] ಅಥವಾ **कान्कान्**

೧೦. ಶ್ಚುತ್ವ ಸಂಧಿ:[2]

ಪೂರ್ವದಲ್ಲಾಗಲೀ ಪರದಲ್ಲಾಗಲೀ ಶಕಾರ ಅಥವಾ ಚವರ್ಗದ ಯೋಗವಿದ್ದಾಗ ಸಕಾರ, ತವರ್ಗಗಳಿಗೆ ಕ್ರಮವಾಗಿ ಶಕಾರ, ಚವರ್ಗಗಳೇ ಆದೇಶಗೊಳ್ಳುತ್ತವೆ.

ಉದಾಹರಣೆ : **रामस् + चिनोति = रामश्चिनोति**

अकस्मात् + चलति = अकस्माच्चलति

तद् + जगत् = तज्जगत्

೧೧. ಛತ್ವ ಸಂಧಿ :[3]

ವರ್ಗೀಯ (**झय्**)ವ್ಯಂಜನಗಳಿಗೆ ಪರವಾಗಿರುವ ಮತ್ತು ಸ್ವರ, ಅಂತಸ್ಥವರ್ಣ, ಮಹಾಪ್ರಾಣಗಳಿಗೆ (= **अम्** ವರ್ಣಗಳಿಗೆ) ಪೂರ್ವದಲ್ಲಿರುವ ಶಕಾರಕ್ಕೆ ಛಕಾರವು ವಿಕಲ್ಪವಾಗಿ ಬರುತ್ತದೆ.

ಉದಾಹರಣೆ : **दूरात् + शिरः = दूराच्शिरः** ಅಥವಾ **दूराच्छिरः**

तद् + श्लोकः = तच्श्लोकः ಅಥವಾ **तच्छ्लोकः**

तत् + शिवः = तच्शिवः ಅಥವಾ **तच्छिवः**

೧೨. ಪೂರ್ವಸವರ್ಣ ಸಂಧಿ :[4]

ವರ್ಗೀಯ ವ್ಯಂಜನಗಳಲ್ಲಿ ಅನುನಾಸಿಕಗಳನ್ನು ಬಿಟ್ಟು ಉಳಿದ ಯಾವುದೇ ವ್ಯಂಜನಕ್ಕೆ ಪರವಾಗಿರುವ ಹಕಾರಕ್ಕೆ ವೈಕಲ್ಪಿಕವಾಗಿ ಪೂರ್ವ ಸವರ್ಣವು ಆದೇಶವಾಗುತ್ತದೆ ; ಮತ್ತು ಪೂರ್ವವರ್ಣವು ಸ್ವವರ್ಗದ ತೃತೀಯಾಕ್ಷರವಾಗುತ್ತದೆ.

ಉದಾಹರಣೆ : **तत् + हुंकारम् = तद्हुङ्कारम्** ಅಥವಾ **तद्धुङ्कारम्**

सम्यक् + हि = सम्यग्हि ಅಥವಾ **सम्यग्घि**

वाक् + हरिः = वाग्हरिः ಅಥವಾ **वाग्घरिः**

तत् + हितम् = तद्हितम् ಅಥವಾ **तद्धितम्**

---

[1] **कांस्कान् देशान् अटित्वा आगतो भवान्** =ನೀನು ಯಾವ ಯಾವ ದೇಶಗಳನ್ನು ತಿರುಗಿ ಬಂದೆ.

[2] **स्तोः श्चुना श्चुः** (ಪಾ VIII, 4, 40) **सकारतवर्गयोः शकारचवर्गाभ्यां योगे** ....(ಸಿ. ಕೌ 111)

[3] **शश्छोटि** (ಪಾ VIII, 4, 63) **खरि च** (ಪಾ VIII, 4, 55)

पदान्ताज्झयः परस्य शस्य छो वा स्यात् अटि (ಸಿ. ಕೌ 120)

[4] **झयो होऽन्यतरस्याम्** (ಪಾ VIII, 4, 62)

झयः परस्य हस्य पूर्वसवर्णो वा स्यात् (ಸಿ. ಕೌ 119)

Rarest Archiver

೧೩. ಷ್ಟುತ್ವ ಸಂಧಿ :[1]

ಸಕಾರ, ತವರ್ಗ ಇವುಗಳಿಗೆ ಷಕಾರ, ಟವರ್ಗಗಳ ಯೋಗವಿದ್ದರೆ, ಕ್ರಮವಾಗಿ , ಷಕಾರ ಟವರ್ಗಗಳು ಬರುತ್ತವೆ.

ಉದಾಹರಣೆ : **रामस् + षष्टः = रामष्षष्टः** **रामस् + टीकते = रामष्टीकते**

दुस् + त = दुष्ट **तत् + टीका = तट्टीका**

III ವಿಸರ್ಗ ಸಂಧಿ :

ವಿಸರ್ಗವೆಂದರೆ ಲಂಬರೇಖೆಯಲ್ಲಿ ಬರೆಯಲ್ಪಡುವ ಎರಡು ಬಿಂದುಗಳು (ঃ) . ಸ್ವತಂತ್ರವಾಗಿ ಕಾಣಿಸಿಕೊಳ್ಳಲಾರದ ಇದು ಯಾವುದಾದರೂ ಸ್ವರವನ್ನು ಆಶ್ರಯಿಸುತ್ತದೆ. ಆಗಲೇ ಇದಕ್ಕೆ ಜೀವ ; ಆದ್ದರಿಂದ, ಇದು ಯೋಗವಾಹ. ಈ ವಿಸರ್ಗವು ಸಮ್ಯಕ್ ಹಿತವಾಗಿ ಗಮಿಸುವುದನ್ನು ಇಲ್ಲಿ ನಿರ್ದೇಶಿಸಲಾಗಿದೆ.

ವಿಸರ್ಗವು ರೂಪುಗೊಳ್ಳುವ ಬಗೆ :

ಪದಾಂತ್ಯ ಸಕಾರಕ್ಕೆ ರೇಫವು (**र्**) ಆದೇಶವಾಗುತ್ತದೆ. ಆ ರೇಫಕ್ಕೆ ಕರ್ಕಶ (**खर्**)[2] ವ್ಯಂಜನಗಳು ಪರವಾಗಿದ್ದರೆ ಅಥವಾ ರೇಫವು ಅವಸಾನ[3]ದಲ್ಲಿದ್ದರೆ ಆಗ ವಿಸರ್ಗವು ಆದೇಶವಾಗುತ್ತದೆ.

ಉದಾಹರಣೆ :

रामस् + खादति = रामर् + खादति = रामः खादति = राम ≍[4] खादति

वृक्षस् + फलति = वृक्षर् + फलति = वृक्षः फलति = वृक्ष ≍ फलति

रामस् + पठति = रामर् + पठति = रामः पठति = राम ≍ पठति

एषस् + करोति = एषर् + करोति = एषः करोति = एष ≍[4] करोति

रामस् = रामर् = रामः **पुनस् = पुनर् = पुनः**

भुवस् = भुवर् = भुवः **हरिस् = हरिर् = हरिः**

प्रातस् = प्रातर् = प्रातः **भोस् = भोर् = भोः**

---

[1] **ष्टुना ष्टुः** (ಪಾ VIII, 4, 44) **स्तोः ष्टुनायोगे ष्टुः स्यात्** (ಸಿ. ಕೌ 113)

[2] ಮಾಹೇಶ್ವರ ಅಕ್ಷರಸೂತ್ರಗಳಲ್ಲಿಯ ೧೧, ೧೨ ಮತ್ತು ೧೩ನೇ ಸೂತ್ರಗಳ ಅಕ್ಷರಗಳು ಪರವಾದರೆ.

खर् परे विसर्जनीयः (ಪಾ VIII, 3, 35) **शर्परे खरि विसर्जनीयस्य विसर्जनीयः**

[3] **विरामोऽवसानम्** (ಪಾ I, 4, 10) (ಸಿ. ಕೌ 113)

वर्णानां अभावः अवसानम् (ಸಿ. ಕೌ 27)

[4] ವಿಸರ್ಗಕ್ಕೆ **ख्** ಪರವಾದಾಗ ಜಿಹ್ವಾಮೂಲೀಯ **फ्** ಪರವಾದಾಗ ಉಪಧ್ಮಾನೀಯ (≍)ಗಳ ಆದೇಶವೆಂದು ಹಿಂದೆ ಹೇಳಲಾಗಿದೆ. ಆದರೆ ಸಾಮಾನ್ಯವಾಗಿ ಇವುಗಳನ್ನೂ (ঃ) ಎಂದೇ ಬರೆಯುವ ರೂಢಿಯಿರುವುದು ಕಂಡುಬರುತ್ತದೆ.

Rarest Archiver

① ಪಂಚವರ್ಗಗಳಲ್ಲಿರುವ ೩,೪,೫ನೇ ವರ್ಣಗಳು.

೧. ಹ್ರಸ್ವ ಅಕಾರಕ್ಕೆ ಪರವಾಗಿರುವ ವಿಸರ್ಗಕ್ಕೆ (= ರೇಫವಾಗಿ ವಿಸರ್ಗಕ್ಕೆ ತಿರುಗಿದ ಪದಾಂತ್ಯ ಸಕಾರಕ್ಕೆ) ಹ್ರಸ್ವ ಅಕಾರವು ಅಥವಾ ಮೃದು ವ್ಯಂಜನ (**झश्** ವರ್ಣ) ಗಳು ಪರವಾದರೆ ಉಕಾರಾದೇಶವು ಬರುತ್ತದೆ.

ಉದಾಹರಣೆ : **रामः + अस्मि = राम + उ + अस्मि = रामो + अस्मि = रामोऽस्मि**

देवः + अस्ति = देव + उ + अस्ति = देवो + अस्ति = देवोऽस्ति

राघवः + गच्छति = राघव + उ + गच्छति = राघवो गच्छति

देवः + वन्द्यः = देव + उ + वन्द्यः = देवो वन्द्यः

೨. **अ** ಪರಕ ವಿಸರ್ಗಕ್ಕೆ **अ**ನ್ನು ಬಿಟ್ಟು ಉಳಿದ ಯಾವುದೇ ಸ್ವರವು ಪರವಾದರೆ ಮತ್ತು **आ** ಪರಕ ವಿಸರ್ಗಕ್ಕೆ ಸ್ವರ ಮತ್ತು ಮೃದು ವ್ಯಂಜನಗಳು (**अश्**)[1] ವರ್ಣಗಳು ಪರವಾದರೆ **य** ವು ಆದೇಶವಾಗುತ್ತದೆ. ನಂತರ ಈ ಆದೇಶಗೊಂಡ **य** ವು ಲೋಪಗೊಳ್ಳುತ್ತದೆ. ಉದಾಹರಣೆ :

रामः	**+ आगतः**	**= राम**	**+ य**	**+ आगतः**	**= राम आगतः**
देवः	**+ उवाच**	**= देव**	**+ य**	**+ उवाच**	**= देव उवाच**
सञ्जयः	**+ एष्यति**	**= सञ्जय**	**+ य**	**+ एष्यति**	**= सञ्जय एष्यति**
सः	**+ ओमित्युक्त्वा**	**= स**	**+ य**	**+ ओमित्युक्त्वा**	**= स ओमित्युक्त्वा**
जनाः	**+ अनृत्यन्**	**= जना**	**+ य**	**+ अनृत्यन्**	**= जना अनृत्यन्**
मालाः	**+ इति**	**= माला**	**+ य**	**+ इति**	**= माला इति**
नृपाः	**+ गच्छन्ति**	**= नृपा**	**+ य**	**+ गच्छन्ति**	**= नृपा गच्छन्ति**
लताः	**+ वने**	**= लता**	**+ य**	**+ वने**	**= लता वने**

೩. ವಿಸರ್ಗಕ್ಕೆ **शर्** (**श्** , **ष्** , **स्**) ವರ್ಣಗಳನ್ನು ಹೊಂದಿದ ಕರ್ಕಶ (**खर्**) ವ್ಯಂಜನಗಳು ಪರವಾದರೆ ವಿಸರ್ಗವು ಹಾಗೆಯೇ ಉಳಿಯುತ್ತದೆ.

ಉದಾಹರಣೆ : **समुद्रः + क्षु[2]भ्यति = समुद्रः क्षुभ्यति**

೪. **अच्** (ಸಮಸ್ತಸ್ವರ) ಪರಕ ವಿಸರ್ಗಕ್ಕೆ **च्**, **छ्** ಗಳು ಪರವಾದಾಗ ಶಕಾರವೂ **ट्** , **ठ्** ಗಳು ಪರವಾದಾಗ ಷಕಾರವೂ, **त्** , **थ्** ಗಳು ಪರವಾದಾಗ ಸಕಾರವೂ ಆದೇಶವಾಗುತ್ತದೆ.

ಉದಾಹರಣೆ :

रामः + चरति = रामश्चरति ; **रामः + टीकते = रामष्टीकते**

वृक्षः + तनोति = वृक्षस्तनोति ; **हरिः + चिनोति = हरिश्चिनोति**

धनुः + ठेङ्कारम् = धनुष्ठेङ्कारम् ; **गुरुः + तारयति = गुरुस्तारयति**

दुष्टः + थूत्करोति = दुष्टस्थूत्करोति

---

[1] ಮಾಹೇಶ್ವರ ಅಕ್ಷರ ಸೂತ್ರಗಳಲ್ಲಿಯ ಒಂದನೇ ಸೂತ್ರ **अ** ದಿಂದ ೧೦ನೆ ಸೂತ್ರದ ಕೊನೆಯ **श्** ದವರೆಗಿನ ವರ್ಣಗಳು.

[2] **क् + ष् = क्ष**

Rarest Archiver

೫. ಅವ್ಯಯ ಸಂಬಂಧಿಯಲ್ಲದ ವಿಸರ್ಗಕ್ಕೆ ಪರದಲ್ಲಿ **पाश, कल्प, क, काम्य** ಇವುಗಳು ಬಂದಾಗ ವಿಸರ್ಗಪೂರ್ವದಲ್ಲಿ **अ** ಇದ್ದರೆ ಸಕಾರಾದೇಶವೂ **इ, ई , उ , ऊ** ಗಳಿದ್ದರೆ ಷಕಾರಾದೇಶವೂ ಉಂಟಾಗುತ್ತದೆ. ಉದಾಹರಣೆ :

पयः + पाशम् = पयस्पाशम् **यशः + कल्पम् = यशस्कल्पम्**

यशः + कामः = यशस्कामः **सर्पिः + पाशम् = सर्पिष्पाशम्**

धनुः + कपालम् = धनुष्कपालम् **यशः + काम्यति = यशस्काम्यति**

ವಿ.ಸೂ.: ವಿಸರ್ಗವು ಅವ್ಯಯ ಸಂಬಂಧಿಯಾಗಿದ್ದಾಗ ಪಾಶ, ಕಲ್ಪಾದಿಗಳು ಬಂದಾಗ ಏನೂ ಬದಲಾವಣೆಯಾಗುವುದಿಲ್ಲ. ಉದಾಹರಣೆ :

प्रातः + कल्पम् = प्रातःकल्पम् **पुनः + काम्यति = पुनःकाम्यति**

೬. ವಿಸರ್ಗಕ್ಕೆ **श् ष् स्** ಗಳು ಪರವಾದಾಗ ಅನುಕ್ರಮವಾಗಿ ಪರರೂಪವೇ ಆದೇಶವಾಗುತ್ತದೆ; ಅಥವಾ ವೈಕಲ್ಪಿಕವಾಗಿ ವಿಸರ್ಗವು ಬದಲಾಗದೆಯೂ ಇರಬಹುದು. ಉದಾಹರಣೆ :

रामः + शेते = रामश्शेते ಅಥವಾ **रामः शेते**

मूर्खः + ष्ठीवति = मूर्खष्ष्ठीवति ಅಥವಾ **मूर्खःष्ठीवति**

सर्पः + सरति = सर्पस्सरति ಅಥವಾ **सर्पः सरति**

೭. **नमः, पुरः** ಇವುಗಳಿಗೆ ಗತಿ ಸಂಜ್ಞೆ[1] ಯಿರುವಾಗ ಇವುಗಳ ವಿಸರ್ಗಕ್ಕೆ **क्, ख् , प्, फ्** ಗಳು ಪರವಾದಲ್ಲಿ ಸಕಾರಾದೇಶವು ನಿತ್ಯವಾಗಿ ಬರುತ್ತದೆ. **पुरः** ಪದದಲ್ಲಿರುವ ವಿಸರ್ಗಕ್ಕೆ ಗತಿ ಸಂಜ್ಞೆಯು ನಿತ್ಯವಾದುದು ; **कृ** ಧಾತು ಸಂಬಂಧವಿರುವಾಗ ಇದಕ್ಕೆ ಗತಿ ಸಂಜ್ಞೆಯು ಐಚ್ಛಿಕ.

ಉದಾಹರಣೆ : **पुरः + प्रकर्षति = पुरस्प्रकर्षति ; पुरः प्रकर्षति**

नमः + करोति = नमस्करोति ; नमः करोति

पुरः + पश्यति = पुरस्पश्यति ; पुरः पश्यति

೮. **द्वि , त्रि, चतुः** ಇವುಗಳ ಮುಂದೆ ಇಮ್ಮಡಿ , ಮುಮ್ಮಡಿ, ನಾಲ್ಮಡಿ ಎಂಬ ಕೃತ್ವೋऽರ್ಥವಿರುವ[2] **क्, ख्, प् , फ्** ಗಳಿಂದ ಪ್ರಾರಂಭವಾಗುವ ಪದಗಳು ಬಂದಾಗ ಇವುಗಳ ವಿಸರ್ಗಗಳ ಸ್ಥಾನಗಳಲ್ಲಿ ಷಕಾರಾದೇಶವು ಬರುತ್ತದೆ.

ಉದಾಹರಣೆ : **द्विः + करोति = द्विष्करोति ; त्रिः + कोटिः = त्रिष्कोटिः**

चतुः + करोति = चतुष्करोति ; द्विः + पादम् = द्विष्पादम्

---

[1] **प , परा** ಮುಂತಾದ ಉಪಸರ್ಗಗಳಿಗೆ ಕ್ರಿಯಾಸಂಬಂಧವಿರುವಾಗ ಗತಿಸಂಜ್ಞೆ ಬರುತ್ತದೆ.

[2] ಆವೃತ್ತ್ಯರ್ಥವಿರುವ ಎಂದರ್ಥ.

Rarest Archiver

೯. **अधः** , **शिरः** ಶಬ್ದಗಳಲ್ಲಿಯ ಅಂತ್ಯವಿಸರ್ಗಕ್ಕೆ **क्**, **ख्** , **प्** , **फ्** ಗಳು ಪರವಾದಾಗ ವೈಕಲ್ಪಿಕವಾಗಿ ಸಕಾರಾದೇಶವಾಗುತ್ತದೆ. ಉದಾಹರಣೆ :

अधः + पदम् = अधस्पदम् ಅಥವಾ **अधः पदम्**

शिरः + पदम् = शिरस्पदम् ಅಥವಾ **शिरः पदम्**

೧೦. ಅವರ್ಣವನ್ನು ಬಿಟ್ಟು ಉಳಿದ ಸ್ವರಗಳಿಗೆ ಪರವಾಗಿರುವ ವಿಸರ್ಗಕ್ಕೆ **अश्** (=ಸಮಸ್ತ ಸ್ವರಗಳೂ ಮೃದು ವ್ಯಂಜನಗಳೂ) ಪರವಾದರೆ ರೇಫಾದೇಶವಾಗುತ್ತದೆ.

ಉದಾಹಾರಣೆ :

भूपतिः + आगच्छति = भूपतिर् + आगच्छति = भूपतिरागच्छति

नदीः + अत्र = नदीर् + अत्र = नदीरत्र

धेनुः + गच्छति = धेनुर् + गच्छति = धेनुर्गच्छति

रवेः + मार्गम् = रवेर् + मार्गम् = रवेर्मार्गम्

भानोः + महिमा = भानोर् + महिमा = भानोर्महिमा

೧೧. **अकच्** **(अक)** ಪ್ರತ್ಯಯಾಂತವಾಗಿರದ **एतद्** ಮತ್ತು **तद्** ಸರ್ವನಾಮಗಳ **सुप्** ಪ್ರತ್ಯಯ (ವಿಭಕ್ತಿ ಪ್ರತ್ಯಯ) ಸಂಬಂಧೀ ವಿಸರ್ಗಕ್ಕೆ ವ್ಯಂಜನಾಕ್ಷರಗಳು ಪರವಾದಾಗ ವಿಸರ್ಗ ಲೋಪವಾಗುತ್ತದೆ.

ಉದಾಹರಣೆ : **एषः + रूद्रः = एष रूद्रः** **एषः + नरः = एष नरः**

೧೨. **भोस्** **(भोः)**, **भगोस्** **(भगोः)**, **अघोस्** **(अघोः)** ಇವುಗಳ ಸಕಾರಕ್ಕೆ ರೇಫಾದೇಶವಾಗಿ, ಇವು **भोर्**, **भगोर्**, **अघोर्** ಎಂದಾಗುತ್ತವೆ ; ನಂತರ ವರ್ಣಗಳು ಪರವಾದಾಗ ಆ ರೇಫಗಳಿಗೆ ಯಕಾರಾದೇಶವಾಗುತ್ತದೆ ಹಾಗೂ ಆ ಯಕಾರವು ಲೋಪಗೊಳ್ಳುತ್ತದೆ.

ಉದಾಹರಣೆ : **भोस् + अग्ने = भोर् + अग्ने = भोय + अग्ने = भो अग्ने**

भोस् + उमेश = भोर् + उमेश = भोय + उमेश = भो उमेश

भोस् + नराः = भोर् + नराः = भोय + नराः = भो नराः

೧೩. **अहन्** ಪದದ ನಕಾರಕ್ಕೆ **रूप** ,**रात्रि** , **रात्र** ,**रथन्तर** ಶಬ್ದಗಳು ಪರವಾದರೆ ರೇಫಾದೇಶವಾಗುತ್ತದೆ. ಈ ರೇಫವು ಉಕಾರಾದೇಶದಲ್ಲಿ ಪರಿವರ್ತಿತವಾಗುತ್ತದೆ. **अहन्** ಪದದ ನಕಾರಕ್ಕೆ **सुप्** (ವಿಭಕ್ತಿ ಪ್ರತ್ಯಯಗಳು) ಪರವಾದರೂ ಕೂಡ ಉಕಾರಾದೇಶವಾಗುತ್ತದೆ.

ಉದಾಹರಣೆ :

अहन् + रात्रि = अहर् + रात्रि = अह + उ + रात्रि =अहोरात्रि

अहन् + रूपम् = अहर् + रूपम् = अह + उ + रूपम् = अहोरूपम्

अहन् + भ्याम् = अहर् + भ्याम् = अह + उ + भ्याम् = अहोभ्याम्

अहन् + भिः = अहर् + भिः = अह + उ + भिः = अहोभिः

Rarest Archiver

೧೪. **अहन्** ಪದಕ್ಕೆ **अहन्** ಪದವೇ ಪರವಾದರೆ ಪೂರ್ವಪದಾಂತ್ಯ ನಕಾರವು ರೇಫಾದೇಶ ಹೊಂದಿ ಹಾಗೆಯೆ ಉಳಿಯುತ್ತದೆ ; ಉತ್ತರಪದದ ನಕಾರವು ರೇಫಾದೇಶ ಹೊಂದಿ ವಿಸರ್ಗವಾಗುತ್ತದೆ.

ಉದಾಹರಣೆ: **अहन्** + **अहन्** = **अहर्** + **अहर्** = **अहरहः**

೧೫. **अहन्** , **गिर्** , **धुर्** ಮುಂತಾದವುಗಳಿಗೆ ಪ್ರತ್ಯಾದಿ ಶಬ್ದಗಳು ಪರವಾದಾಗ ರೇಫವು ವಿಕಲ್ಪವಾಗಿ ಬರುತ್ತದೆ. ಉದಾಹರಣೆ:

अहन् + **पतिः** = **अहर्पतिः** ; **गीर्** + **पतिः** = **गीर्पतिः** ; **धूर्** + **जटिः** = **धूर्जटिः**

೧೬. ರೇಫಕ್ಕೆ ರಕಾರವೇ ಪರವಾದರೆ ರೇಫವು ಲೋಪಗೊಳ್ಳುತ್ತದೆ ಮತ್ತು ಈ ರೇಫದ ಉಪಾಂತ್ಯದಲ್ಲಿ ಹ್ರಸ್ವಸ್ವರವಿದ್ದರೆ ಅದು ದೀರ್ಘಗೊಳ್ಳುವುದು.

ಉದಾಹರಣೆ : **पुनर्** + **रचना** = **पुना रचना** ; **धूर्जटिर्** + **रक्षति** = **धूर्जटी रक्षति**

*****

ಪ್ರಾತಿಪದಿಕಕ್ಕೆ ವಿಭಕ್ತಿ ಪ್ರತ್ಯಯಗಳು ಸೇರುವಾಗ, ಧಾತುಗಳು ಆಖ್ಯಾತ ಪ್ರತ್ಯಯಗಳನ್ನು ಹೊಂದುವಾಗ ಸಂಹಿತೆಯು ಅನಿವಾರ್ಯವೆಂದು ಹಿಂದೆ ಹೇಳಿದೆ. ಈ ಸಂಹಿತೆಯು ಹೇಗೆ ಮೈದಾಳುತ್ತದೆ ಎನ್ನುವುದನ್ನು ನೆನಪಿನಲ್ಲಿಡಲು ಅನುಕೂಲವಾಗುವಂತೆ ಕೆಲವು ನಿಯಮಗಳನ್ನು ರೂಪಿಸಲಾಗಿದೆ. ಅವುಗಳನ್ನು ಅಂತಃಸಂಧಿ[1] ಎಂಬ ನವ್ಯ ಶಿರೋನಾಮೆಯೊಡನೆ ಈ ಕೆಳಗಿನಂತೆ ನಿರೂಪಿಸಲಾಗುವುದು.

IV ಅಂತಃಸಂಧಿಃ :

೧. ಧಾತುಗಳ ಅಂತ್ಯ **इ** , **ई** ಗಳು ಮತ್ತು **उ**, **ऊ** ಗಳು ಧಾತುವಿಕರಣ **अ** ಪ್ರತ್ಯಯದೊಡನೆ ಅನುಕ್ರಮವಾಗಿ **अय, अव** ಎಂದಾಗುತ್ತವೆ.

ಉದಾಹರಣೆ : **जि** + **अ** = **जय** ; **नी** + **अ** = **नय** ; **भू** + **अ** = **भव**

೨. ಸಂಯುಕ್ತಾಕ್ಷರಯುಕ್ತ ಧಾತುಗಳ ಅಂತ್ಯ **इ** , **ई** , **उ**, **ऊ** ಗಳು ಪರದಲ್ಲಿ ಅಕಾರಾದಿ ಪ್ರತ್ಯಯಗಳು ಬಂದಾಗ ಅನುಕ್ರಮವಾಗಿ **इय** ಮತ್ತು **उव** ಎಂದಾಗುತ್ತವೆ.

ಉದಾಹರಣೆ : **जिह्री** + **अति** = **जिह्रियति** **स्तु** + **अन्ति** = **स्तुवन्ति**

೩. ಧಾತುವಿಕರಣ ಪ್ರತ್ಯಯಕ್ಕೆ ವಾದಿ ಮತ್ತು ಮಾದಿ ಪ್ರತ್ಯಯಗಳು ಸೇರುವಾಗ ಧಾತುವಿಕರಣ ಪದಾಂತ್ಯದಲ್ಲಿ ಹ್ರಸ್ವಸ್ವರವಿದ್ದರೆ ದೀರ್ಘಗೊಳ್ಳುವುದು.

ಉದಾಹರಣೆ : **(नी + अ =) नय + मि = नयामि**

(भू + अ =)भव + मि = भवामि ; (नी + अ) नय + व = नयाव

---

[1] ಇಲ್ಲಿ ಡಿ.ಕೆ.ರಾಜಗುರು ಅವರ ' ಮೇನ್ಯುಯಲ್ ಆಫ್ ಸಂಸ್ಕೃತ ಗ್ರಾಮರ್ ' ಎಂಬ ಪುಸ್ತಕವನ್ನು ಅನುಸರಿಸಲಾಗಿದೆ.

Rarest Archiver

೪. **अ** , **आ** ಗಳನ್ನುಳಿದು ಇತರ ಸ್ವರಗಳ ಮುಂದೆ ಮತ್ತು ಅಂತಸ್ಥವರ್ಣಗಳ ಮುಂದೆ ಬಂದ ಸಕಾರಕ್ಕೆ ಷಕಾರಾದೇಶವಾಗುವುದು.

ಉದಾಹರಣೆ : **नृपे** + **सु** = **नृपेषु** ಆದರೆ **माला** + **सु** = **मालासु**

೫. ಸಕಾರಕ್ಕೆ ಪರವಾಗಿ **अ** , **आ** ಗಳನ್ನು ಹೊರತುಪಡಿಸಿ ಯಾವುದೇ ಸ್ವರ ಬಂದರೂ ಷಕಾರಾದೇಶವಾಗುವುದು.

ಉದಾಹರಣೆ : **ज्योतिस्** + **इ** = **ज्योतिषि**

೬. **क्** ವು ಸಂಯುಕ್ತಾಕ್ಷರವಾಗಿ ಇರುವ ಧಾತುವಿನ ಮುಂದೆ ಅಂತಸ್ಥವರ್ಣ ಮತ್ತು ಅನುನಾಸಿಕಗಳನ್ನು ಬಿಟ್ಟು ಯಾವುದೇ ವ್ಯಂಜನವು ಬಂದರೂ **क्** ವು ಲೋಪಗೊಳ್ಳುತ್ತದೆ ;

ಉದಾಹರಣೆ : **चक्ष्** + **ते** = **चष्टे**

೭. **घ्** , **ध्** , **भ्** ಗಳಿಗೆ **त्** , **ध्** ಗಳು ಪರವಾದರೆ ಪೂರ್ವದಲ್ಲಿ **ग्** , **द्** , **ब्** ಗಳೂ ಪರದಲ್ಲಿ **ध्** ವೂ ಆದೇಶಗೊಳ್ಳುತ್ತವೆ.

ಉದಾಹರಣೆ : **दोघ्** + **ति** = **घोग्** + **धि** = **धोग्धि**

೮. ಜಕಾರಕ್ಕೆ ಪರದಲ್ಲಿ ಅಂತಸ್ಥವರ್ಣ ಮತ್ತು ಅನುನಾಸಿಕಗಳನ್ನು ಬಿಟ್ಟು ಯಾವುದೇ ವ್ಯಂಜನವು ಬಂದಾಗ ಷಕಾರಾದೇಶವಾಗುತ್ತದೆ;

ಉದಾಹರಣೆ : **मृज्** + **ति** = **मार्ज्** + **ति** = **मार्ष्** + **ति** = **मार्ष्टि**

೯. ಟಕಾರಕ್ಕೆ ಸಕಾರವು ಪರವಾದಲ್ಲಿ ವೈಕಲ್ಪಿಕವಾಗಿ ತಕಾರದ ಆಗಮವಾಗುತ್ತದೆ.

ಉದಾಹರಣೆ : **प्रावृट्** + **सु** = **प्रावृट्सु** ; **प्रावृट्त्सु** **षट्** + **सु** = **षट्सु** ; **षट्त्सु**

೧೦. ಢಕಾರಕ್ಕೆ ಪರವಾದ **त्** , **थ्** , **ध्** ಗಳು ಪೂರ್ವರೂಪವನ್ನು ಪಡೆಯುತ್ತವೆ. ಆಗ ಢಕಾರಕ್ಕೆ ಢಕಾರವೇ ಪರವಾಗುವುದರಿಂದ ಪೂರ್ವ ಢಕಾರವು ಲೋಪಗೊಳ್ಳುತ್ತದೆ.

ಉದಾಹರಣೆ : **लेढ्** + **ति** = **लेढ्** + **ढि** = **लेढि**

೧೧. ಢಕಾರಕ್ಕೆ ಸಕಾರವು ಪರವಾದರೆ ಅನುಕ್ರಮವಾಗಿ ಪೂರ್ವಾಪರಗಳಲ್ಲಿ ಕಕಾರ ಷಕಾರಗಳ ಆದೇಶವಾಗುತ್ತದೆ.

ಉದಾಹರಣೆ : **लेढ्** + **सि** = **लेक्** + **षि** = **लेक्षि**

೧೨. **च्** , **ग्** , **द्** ಗಳು ಆದಿಯಲ್ಲುಳ್ಳ ಧಾತುಗಳು ವರ್ಗಚತುರ್ಥಾಕ್ಷರಗಳನ್ನು ಅಂತ್ಯದಲ್ಲಿ ಹೊಂದಿರಲು ಪರದಲ್ಲಿ **स्** , **ध्वम्** ಗಳು ಬಂದಾಗ ಧಾತುಗಳ ಆದಿಯಲ್ಲಿಯ **ब्** , **ग्** , **द्** ಗಳು ಮಹಾಪ್ರಾಣವನ್ನು ಪಡೆಯುತ್ತವೆ.

ಉದಾಹರಣೆ : **दोघ्** + **सि** = **धोघ्** + **सि** = **धोक्षि**

दोघ् + **ध्वम्** = **धोघ्** + **ध्वम्** = **धोग्ध्वम्** = **धुग्ध्वम्**

Rarest Archiver

೧೩. ಪದದಲ್ಲಿಯ ऋ, ॠ , र् ಮತ್ತು ष् ಇವುಗಳ ಮುಂದೆ ಯಾವುದೇ ಸ್ವರ, ल् ವನ್ನು ಬಿಟ್ಟು ಯಾವುದೇ ಅಂತಸ್ಥವರ್ಣ, ह्, ತವರ್ಗದ ವ್ಯಂಜನಗಳು ಮತ್ತು ಪವರ್ಗದ ವ್ಯಂಜನಗಳು ಇವುಗಳಲ್ಲಿ ಯಾವುದೇ ವರ್ಣವು ಬಂದಿದ್ದರೂ ಪರದಲ್ಲಿಯ ನಕಾರಕ್ಕೆ ಣಕಾರಾದೇಶವಾಗುವುದು.

ಉದಾಹರಣೆ : **ऋषि + ना = ऋषिणा** **नरे + न = नरेण**

೧೪. ಚವರ್ಗ ವ್ಯಂಜನಗಳಿಗೆ ಪರವಾಗಿರುವ ನಕಾರಕ್ಕೆ ಞಕಾರಾದೇಶವಾಗುವುದು.

ಉದಾಹರಣೆ : **याच् + ना = याञ्चा ; यज् + न = यज्ञ**

೧೫. ಕೊನೆಯಲ್ಲಿ ನಿಲ್ಲುವ ನಕಾರಕ್ಕೆ ಯಾವುದೇ ಬದಲಾವಣೆಯಿಲ್ಲ.

ಉದಾಹರಣೆ : **नृपान्** , **गुरून्**

೧೬. ಸಕಾರಕ್ಕೆ ಸಕಾರಾದಿ ಆರ್ಧಧಾತುಕ ಪ್ರತ್ಯಯ ಬಂದಾಗ ತಕಾರವು ಆದೇಶಗೊಳ್ಳುತ್ತದೆ ;

ಉದಾಹರಣೆ : **वस् + स्यति = वत्स्यति**

೧೭. ದಕಾರಕ್ಕೆ ಪರವಾಗಿರುವ **स्था** , **स्थम्भ्** ಗಳಲ್ಲಿಯ ಸಕಾರವು ಲೋಪಗೊಳ್ಳುತ್ತದೆ.

ಉದಾಹರಣೆ : **उद् + स्थाय = उत्थाय ; उद् + स्थंभनम् = उत्थंभनम्**

೧೮. ಹಕಾರಕ್ಕೆ ಅನುನಾಸಿಕ, ಅಂತಸ್ಥವರ್ಣಗಳನ್ನು ಬಿಟ್ಟು ಬೇರೆ ಯಾವುದೇ ವ್ಯಂಜನವು ಪರವಾದರೂ ಢಕಾರಾದೇಶವಾಗುತ್ತದೆ.

ಉದಾಹರಣೆ : **लेह् + ति = लेढ् + ति (= लेढि)**

೧೯. ಸ್ವರಾಂತ್ಯ ನಾಮಪದ ವಿಶೇಷಣಗಳಿಗೆ ಸ್ವರಾದಿ ತದ್ಧಿತಾವ್ಯಯಗಳನ್ನು ಜೋಡಿಸುವಾಗ ಅಂತ್ಯಸ್ವರವು ಲೋಪಗೊಳ್ಳುತ್ತದೆ. ಉದಾಹರಣೆ :

शक + अन्धुः = शक् + अन्धुः = शकन्धुः

सार + अङ्गः = सार् + अङ्गः = सारङ्गः

धन + इकः = धन् + इकः = धनिकः

Rarest Archiver

೩

ವಿಭಕ್ತಿ ಪ್ರಕರಣ

'ಪ್ರಾತಿಪದಿಕ'[1] (crude form of a declinable word) ಎಂದು ಪಾರಿಭಾಷಿಕವಾಗಿ ಕರೆಸಿಕೊಳ್ಳುವ **राम, शिव** ಮುಂತಾದ ನಾಮಪದ (Nouns) ಗಳಿಗೆ **एतद् , तद्** ಮುಂತಾದ ಸರ್ವನಾಮ (Pronouns) ಗಳಿಗೆ **धीमत् , गत** ಮುಂತಾದ ವಿಶೇಷಣ (Adjectives) ಗಳಿಗೆ ವಿವಕ್ಷಿತ ರೂಪಗಳು ವಿಭಕ್ತಿ ಪ್ರತ್ಯಯಗಳ (case terminations) ಸೇರ್ಪಡೆಯಿಂದ ಉಂಟಾಗುತ್ತವೆ.

ಸಂಸ್ಕೃತದಲ್ಲಿ ವಿಭಕ್ತಿ ಪ್ರತ್ಯಯಗಳು ಏಳು. ವಿಭಕ್ತಿಗಳು ನಿಶ್ಚಿತವಾದ ಕಾರಕಾರ್ಥಗಳನ್ನು ಬೋಧಿಸುತ್ತವೆ. ಕಾರಕ ಎಂದರೆ ಕ್ರಿಯಾಜನಕ ಎಂದರ್ಥ. ಆಯಾ ಕಾರಿಕೆಗಳೊಡನೆ ವಿಭಕ್ತಿಗಳು ಈ ಕೆಳಗಿನಂತಿವೆ.

ವಿಭಕ್ತಿ ಸಂಜ್ಞೆ (Case)	ಕಾರಕ	ಸೂಚಕವೃತ್ತಿ[2]
ಪ್ರಥಮಾ (Nominative)	ಕರ್ತೃ	ಕ್ರಿಯಾನಿಷ್ಪತ್ತಿಗೆ ಸ್ವತಂತ್ರವಾದುದು
ದ್ವಿತೀಯಾ (Accusative)	ಕರ್ಮ	ಈಪ್ಸಿತತಮ ವಸ್ತು ಅಥವಾ ವ್ಯಕ್ತಿ
ತೃತೀಯಾ (Instrumental)	ಕರಣ	ಸಾಧನ
ಚತುರ್ಥೀ (Dative)	ಸಂಪ್ರದಾನ	ಉದ್ದಿಷ್ಟ ವಸ್ತು ಅಥವಾ ವ್ಯಕ್ತಿ
ಪಂಚಮೀ (Ablative)	ಅಪಾದಾನ	ವಿಶ್ಲೇಷ
ಷಷ್ಠೀ (Genitive)	ಇದಕ್ಕೆ ಕಾರಕತ್ವವಿಲ್ಲ	ಸಂಬಂಧ ಸಾಮಾನ್ಯ ಬೋಧಕ
ಸಪ್ತಮೀ (Locative)	ಅಧಿಕರಣ	ಆಶ್ರಯಸೂಚಕ
ಸಂಬೋಧನೆ (Vocative)	ಇದು ಪ್ರಥಮಾ ವಿಭಕ್ತಿಯೊಡನೆ ಸೇರುತ್ತದೆ.	ಅಭಿಮುಖೀಕರಣ

ವಿಭಕ್ತಿ ಪ್ರತ್ಯಯಗಳು ವಚನಾನುಸಾರವಾಗಿ ಬೇರೆಬೇರೆಯಾಗಿವೆ.

I ವಚನಗಳು :

ಸಂಸ್ಕೃತದಲ್ಲಿ ವಚನಗಳು (Numbers) ಮೂರು.[3]

೧. ಏಕವಚನ (Singular) : ಇದು ಸೂಚಿಸುವುದು ಒಂದು ವಸ್ತುವನ್ನು ಅಥವಾ ವ್ಯಕ್ತಿಯನ್ನು .

ಉದಾಹರಣೆ : **रामः , नदी , वनम् , अश्वः**

---

[1] **अर्थवदधातुरप्रत्ययः प्रातिपदिकम्। कृत्तद्धितसमासाश्च** (ಪಾ I, 2, 45-46)

ಅರ್ಥವುಳ್ಳ , ಆದರೆ ಪ್ರತ್ಯಯವೂ ಧಾತುವೂ ಅಲ್ಲದ ಶಬ್ದವು ಪ್ರಾತಿಪದಿಕವು. ಕೃದಂತ , ತದ್ಧಿತಾಂತ ಮತ್ತು ಸಮಾಸಗಳೂ ಪ್ರಾತಿಪದಿಕಗಳ ಸಾಲಿಗೆ ಸೇರುತ್ತವೆ.

[2] ವಿವರಣೆಗೆ ಅನುಬಂಧದಲ್ಲಿಯ ವಿಭಕ್ತಿಗಳ ಅರ್ಥನಿರೂಪಣೆ ಯನ್ನು ನೋಡಿರಿ.

[3] **द्व्येकयोर्द्विवचनैकवचने। बहुषु बहुवचनम्** (ಪಾ I, 4, 22-21)

Rarest Archiver

೨. ದ್ವಿವಚನ (Dual) : ಇದು ಸೂಚಿಸುವುದು ಎರಡು ವ್ಯಕ್ತಿ ಅಥವಾ ವಸ್ತುಗಳನ್ನು.

ಉದಾಹರಣೆ : **अश्वौ** = ಎರಡು ಕುದುರೆಗಳು ; **पितरौ** = ತಂದೆ ತಾಯಿಯರು

೩. ಬಹುವಚನ (Plural) : ಇದು ಸೂಚಿಸುವುದು ಮೂರು ಅಥವಾ ಮೂರಕ್ಕೂ ಹೆಚ್ಚು ವಸ್ತುಗಳನ್ನು.

ಉದಾಹರಣೆ : **जनाः** = ಜನರು **नद्यः** = ನದಿಗಳು

ವಚನಗಳ ವಿಷಯದಲ್ಲಿ ಗಮನಿಸಬೇಕಾದ ಅಂಶಗಳು :

೧. **'उभ '** ಶಬ್ದವು ದ್ವಿತ್ವವಿಶಿಷ್ಟವಾಚಕವುಳ್ಳದ್ದಾದ್ದರಿಂದ ನಿತ್ಯದ್ವಿವಚನಾಂತವಾದುದು; ಆದರೆ,**उभय** ಪದವು ದ್ವಿವಚನರಹಿತವಾದುದು ; ಅರ್ಥಾತ್, ಏಕವಚನ ಮತ್ತು ಬಹುವಚನಗಳನ್ನು ಮಾತ್ರ ಹೊಂದಿರುವಂಥಾದ್ದು.

ಉದಾಹರಣೆ : **उभये मणयः** = ಎರಡು ಅವಯವಗಳುಳ್ಳ ಮಣಿಗಳು.

೨. **द्वयम् , द्वितयम्** ಮುಂತಾದವುಗಳು 'ಜೋಡಿ' ಎಂಬ ಅರ್ಥವನ್ನು ಬೋಧಿಸುತ್ತವೆ.

೩. ಕೆಲವು ಶಬ್ದಗಳು ಯಾವಾಗಲೂ ಬಹವಚನದಲ್ಲಿಯೇ ಪ್ರಯೋಗಿಸಲ್ಪಡುತ್ತವೆ ; ಆದರೆ, ಅರ್ಥದಲ್ಲಿ ಮಾತ್ರ ಏಕವಚನ. ಉದಾಹರಣೆ : **दाराः** = ಹೆಂಡತಿ, **प्राणाः** = ಜೀವ, **वर्षाः** = ಮಳೆ

आपः = ನೀರು , **अक्षताः** = ಅಕ್ಷತೆ

ಇಂತಹ ಪದಗಳಿಗೆ ನಿತ್ಯಬಹುವಚನಗಳೆನ್ನುತ್ತಾರೆ.

ಯಾವುದೇ ದೇಶದ ಜನರನ್ನು ಸಾಮೂಹಿಕವಾಗಿ ಗುರುತಿಸುವಾಗಲೂ ನಿತ್ಯ ಬಹುವಚನವೇ ಪ್ರಯೋಗಿಸ್ಪಡುತ್ತದೆ. ಉದಾಹರಣೆ :

कलिङ्गाः = ಕಲಿಂಗದೇಶದ ಜನತೆ ; **कर्णाटकाः** = ಕರ್ನಾಟಕದ ಜನತೆ ; **मराठाः** = ಮರಾಠಿಗರು

II ಲಿಂಗಗಳು:

ಪ್ರತಿಯೊಂದು ಪ್ರಾತಿಪದಿಕವೂ ಲಿಂಗ (Gender) ವನ್ನು ಹೊಂದಿದೆ. ಸಂಸ್ಕೃತದಲ್ಲಿ ಮೂರು ಲಿಂಗಗಳಿವೆ.

೧. ಪುಲ್ಲಿಂಗ (Masculine) ೨.ಸ್ತ್ರೀಲಿಂಗ (Feminine) ೩. ನಪುಂಸಕಲಿಂಗ (Neuter)

ಪ್ರಾತಿಪದಿಕಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಜೋಡಿಸುವಾಗ ಅವುಗಳ ಲಿಂಗಗಳನ್ನು ಅರಿತಿರುವುದು ಅತ್ಯವಶ್ಯಕ. ಈ ಲಿಂಗಗಳನ್ನು ಗುರುತಿಸಲು ನಾಮಲಿಂಗಾನುಶಾಸನವೆಂಬ ಪ್ರಸಿದ್ಧ ಅಮರಕೋಶವಿದೆ.

ಅಕಾರಾಂತ ಪ್ರಾತಿಪದಿಕಗಳು ಸಾಮಾನ್ಯವಾಗಿ ಪುಲ್ಲಿಂಗ ಮತ್ತು ನಪುಂಸಕಲಿಂಗಗಳಲ್ಲಿರುತ್ತವೆ. **आबन्त**[1] ಪದಗಳೂ **ङ्यन्त**[2] ಪದಗಳೂ (ಕೆಲವು ಅಪವಾದಗಳನ್ನುಳಿದು) ಸ್ತ್ರೀಲಿಂಗಕ್ಕೆ ಸೇರಿದವುಗಳೆಂದು ತಿಳಿಯಬೇಕು.

ಉದಾಹರಣೆ : **राम, कर , कुक्कुट, जीव** ಮುಂತಾದವುಗಳು ಪುಲ್ಲಿಂಗ ಪ್ರಾತಿಪದಿಕಗಳು.

वन, नयन, करण, भवन ಮುಂತಾದವುಗಳು ನಪುಂಸಕಲಿಂಗ ಪ್ರಾತಿಪದಿಕಗಳು.

माला, रमा, नदी , कुक्कुटी ಮುಂತಾದವುಗಳು ಸ್ತ್ರೀಲಿಂಗ ಪ್ರಾತಿಪದಿಕಗಳು.

---

[1] **टाप् , डाप् , चाप** ಇವುಗಳಲ್ಲಿ ಉಳಿಯುವುದು **आप्** . (**आप्** + **अन्त** = **आबन्त**).
आबन्त ಪದಗಳು ಎಂದರೆ ಆಕಾರಾಂತ ಪದಗಳು ಎಂದರ್ಥ.

[2] **ङीप् , ङीष्, ङीन्** ಇವುಗಳಲ್ಲಿ ಉಳಿಯುವುದು **ङी** (**ङी** + **अन्त** = **ङ्यन्त**).
ङ्यन्त ಪದಗಳು = ಈಕಾರಾಂತ ಪದಗಳು ಎಂದರ್ಥ.

Rarest Archiver

ग्रन्थ् , दंश्, बन्ध्, रञ्ज्, स्तम्भ् ಮುಂತಾದ ಧಾತುಗಳ ಉಪಾಂತ್ಯ ಅನುನಾಸಿಕವು ಯಕ್ ಪೂರ್ವದಲ್ಲಿ ಲೋಪಗೊಳ್ಳುತ್ತದೆ.

ಉದಾಹರಣೆ : ग्रन्थ् + य = ग्रथ्यते दंश् + य = दश्यते

बन्ध् + य = बध्यते रञ्ज् + य = रज्यते

ಕೆಲವು ವಿಶೇಷ ಧಾತುಗಳೂ ಇವೆ.

ಉದಾಹರಣೆ : ऋ + य = अर्यते खन् + य = खायते / खन्यते

शि + य = शिष्यते / शय्यते जन् + य = जायते / जन्यते

वस् + य = उष्यते (ವಾಸಾರ್ಥ) वस् + य = वस्यते (ಧಾರಣಾರ್ಥ)

ದಶಲಕಾರಗಳಲ್ಲಿಯ ಕರ್ಮಣಿ, ಭಾವೇ ಪ್ರಯೋಗಗಳಲ್ಲಿ ಧಾತುಗಳು -

ಉದಾಹರಣೆ : दा - दीय = ಕೊಡಲ್ಪಡು

ಲಟ್ - ವರ್ತಮಾನ | ಲಙ್ - ಅನದ್ಯತನ ಭೂತ

	ಏಕವಚನ	ದ್ವಿವಚನ	ಬಹುವಚನ	ಏಕವಚನ	ದ್ವಿವಚನ	ಬಹುವಚನ
ಪ್ರ. ಪು.	दीयते	दीयेते	दीयन्ते	अदीयत्	अदीयेताम्	अदीयन्त
ಮ.ಪು.	दीयसे	दीयेथे	दीयध्वे	अदीयथाः	अदीयेथाम्	अदीयध्वम्
ಉ.ಪು.	दीये	दीयावहे	दीयामहे	अदीये	अदीयावहि	अदीयामहि

ಲೋಟ್- ಆಜ್ಞಾರ್ಥ | ವಿಧಿಲಿಙ್ - ವಿಧ್ಯರ್ಥ

	ಏಕವಚನ	ದ್ವಿವಚನ	ಬಹುವಚನ	ಏಕವಚನ	ದ್ವಿವಚನ	ಬಹುವಚನ
ಪ್ರ. ಪು.	दीयताम्	दीयेताम्	दीयन्ताम्	दीयेत	दीयेयाताम्	दीयेरन्
ಮ.ಪು.	दीयस्व	दीयेथाम्	दीयध्वम्	दीयेथाः	दीयेयाथाम्	दीयेध्वम्
ಉ.ಪು.	दीयै	दीयावहै	दीयामहै	दीयेय	दीयेवहि	दीयेमहि

ಲಿಟ್ ಪರೋಕ್ಷ ಭೂತ

ಆರ್ಧಧಾತುಗಳಿಗೆ ಯಕ್ ಬರುವುದಿಲ್ಲ. ಆದ್ದರಿಂದ ಪರೋಕ್ಷಭೂತದಲ್ಲಿಯ ಕರ್ಮಣಿ ಪ್ರಯೋಗದಲ್ಲಿ ಲಿಟ್‌ದ ಆತ್ಮನೇಪದದ ರೂಪಗಳನ್ನೇ ಪ್ರಯೋಗಿಸಲಾಗುವುದು.

ಧಾತು	ಪ್ರ.ಏ.ವ.	ದ್ವಿ.ವ.	ಬ.ವ.
नी	निन्ये	निन्याते	निन्यिरे
बुध्	बुबुधे	बुबुधाते	बुबुधिरे
हन्	जघ्ने	जघ्नाते	जघ्निरे
युध्	युयुधे	युयुधाते	युयुधिरे

Rarest Archiver

ಪರೋಕ್ಷಭೂತದ ಅನುಪ್ರಯೋಗದಲ್ಲಿಯೂ ಕೂಡ......

विद् - विदाञ्चक्रे विदाञ्चक्राते विदाञ्चक्रिरे ಎಂದು ಮುಂತಾಗಿ.

ಲುಙ್ ತೃತೀಯ ಭೂತ

ಲುಙ್‌ದಲ್ಲಿ ಪ್ರಥಮಪುರುಷ ಏಕವಚನದಲ್ಲಿ ಸರ್ವಧಾತುಗಳಿಗೂ इ ಪ್ರತ್ಯಯವನ್ನು ಜೋಡಿಸಲಾಗುವುದು.

ಉದಾಹರಣೆ : **निन्द् - अनिन्दि** **तुद् - अतुन्दि**

कृ - अकारि **स्मृ - अस्मारि** ಎಂದು ಮುಂತಾಗಿ.

निन्द् - ನಿಂದಿಸು

	ಏಕವಚನ	ದ್ವಿವಚನ	ಬಹುವಚನ
ಪ್ರ. ಪು.	**अनिन्दि**	**अनिन्दिषाताम्**	**अनिन्दिषत**
ಮ. ಪು.	**अनिन्दिष्ठाः**	**अनिन्दिषाथाम्**	**अनिन्दिषध्वम्** / **अनिन्दिध्वम्**
ಉ. ಪು.	**अनिन्दिषि**	**अनिन्दिष्वहि**	**अनिन्दिष्महि**

ಲುಟ್ - ಅನದ್ಯತನ ಭವಿಷ್ಯತ್

ಇಲ್ಲಿಯೂ ಕರ್ತರಿ ಆತ್ಮನೇಪದದಂತೆ.........

ಉದಾಹರಣೆ : **दा** - ಧಾತು

	ಏಕವಚನ	ದ್ವಿವಚನ	ಬಹುವಚನ
ಪ್ರ. ಪು.	**दाता**	**दातारौ**	**दातारः**
ಮ. ಪು.	**दातासे**	**दातासाथे**	**दाताध्वे**
ಉ. ಪು.	**दाताहे**	**दातास्वहे**	**दातास्महे**

ಲೃಟ್ -ಸಾಮಾನ್ಯ ಭವಿಷ್ಯತ್, ಲೃಙ್ -ಸಂಕೇತಾರ್ಥ ಮತ್ತು ಆಶೀರ್ಲಿಙ್ ಇವುಗಳಲ್ಲಿಯೂ ಕೂಡ ಕರ್ಮಣಿಯಲ್ಲಿ ಕರ್ತರಿಯಲ್ಲಿಯ ಆತ್ಮನೇಪದದ ರೂಪಗಳೇ ಬರುತ್ತವೆ.

Rarest Archiver

೭

ಕೃದಂತ ಪ್ರಕರಣ

ಕ್ರಿಯಾಪದ ಪ್ರಕರಣದಲ್ಲಿಯೂ, ಪ್ರತ್ಯಯಾಂತ ಧಾತುಪ್ರಕರಣದಲ್ಲಿಯೂ ಮತ್ತು ಕರ್ಮಣಿರೂಪ ಪ್ರಕರಣದಲ್ಲಿಯೂ ದಶಲಕಾರಗಳಲ್ಲಿ ಧಾತುಗಳ ಮೇಲೆ ಬರುವ ತಿಬಾದಿ ಅಷ್ಟಾದಶ ಲಾದೇಶಗಳ ವಿವಿಧ ರೂಪಗಳನ್ನು ನೋಡಲಾಯಿತು. ಈ ಮೂರೂ ಪ್ರಕರಣಗಳಲ್ಲಿ ಕಂಡದ್ದು 'ಧಾತು ವ್ಯಾಪಾರ' ; ಇದನ್ನು ವೈಯಾಕರಣಿಗಳು ಪಾರಿಭಾಷಿಕವಾಗಿ 'ಧಾತುವೃತ್ತಿ' ಎಂದು ಗುರುತಿಸುತ್ತಾರೆ.

ಪ್ರಸ್ತುತ 'ಕೃದಂತ ಪ್ರಕರಣದಲ್ಲಿ' 'ಕೃದ್ವೃತ್ತಿ' ಎಂದು ಪಾರಿಭಾಷಿಕವಾಗಿ ಕರೆಯಲ್ಪಟ್ಟ ಕೃದಂತದ (Primary affixes) ವಿವಿಧರೂಪಗಳನ್ನು ನಿರೂಪಿಸಲಾಗುವುದು.

ಧಾತುವಿನ ಮೇಲೆ ತಿಙ್ ಪ್ರತ್ಯಯಗಳಿಗೆ ಹೊರತಾಗಿ ಇನ್ನುಳಿದ ಪ್ರತ್ಯಯಗಳು ಬಂದಾಗ 'ಕೃತ್' ಸಂಜ್ಞೆಯನ್ನು ಹೇಳಬೇಕು. '**कृत् अन्ते वर्तते यस्य सः - कृदन्त**' - ಕೃತ್ ಅಂತ್ಯದಲ್ಲಿ ಇರುವುದರಿಂದ ಕೃದಂತಗಳೆಂದಾಗುತ್ತವೆ. ಈ ಕೃತ್ ಪ್ರತ್ಯಯಾಂತ ಶಬ್ದಗಳಿಗೆ **कृत्तद्धितसमासाश्च** ಎಂಬ ವಿಶೇಷ ಸೂತ್ರದಿಂದ ಪ್ರಾತಿಪದಿಕ ಸಂಜ್ಞೆಯನ್ನು ವಿಧಿಸಲಾಗಿದೆ. ಅಂದರೆ ಕೃದಂತಗಳು ಸುಬಾದಿ ವಿಭಕ್ತಿಪ್ರತ್ಯಯಗಳನ್ನು ಪಡೆದು ಸುಬಂತಗಳಾಗುತ್ತವೆ ' ಅರ್ಥಾತ್ , ಕೃದಂತಗಳು ನಾಮಪದ ವಿಶೇಷಣಗಳು.

ಕೃತ್ ಪ್ರತ್ಯಯವು ಕರ್ತ್ರಾರ್ಥದಲ್ಲಿ ಬಂದಾಗ ಶಬ್ದಗಳು ಕರ್ತರಿ ಕೃದಂತ, ಕರ್ಮಾರ್ಥದಲ್ಲಿ ಬಂದಾಗ ಕರ್ಮಣಿ ಕೃದಂತ ಮತ್ತು ಭಾವಾರ್ಥದಲ್ಲಿ ಬಂದಾಗ ಭಾವೇ ಕೃದಂತಗಳಾಗುತ್ತವೆ.

ಕೃದಂತದಲ್ಲಿ ಮುಖ್ಯವಾಗಿ ಏಳು ವಿಧಗಳಿವೆ :

I ವರ್ತಮಾನ ಕೃದಂತ (Present Participle)

II ಭೂತಕೃದಂತ (Past participle)

III ಪರೋಕ್ಷ ಭೂತ ಕೃದಂತ (Perfect Participle)

IV ಭವಿಷ್ಯತ್ ಕೃದಂತ (Future Participle)

V ಕರ್ಮಣಿ ವಿಧ್ಯರ್ಥ ಕೃದಂತ (Potential Passive Participle)

VI ತುಮನ್ನಂತ (Infinitives)

VII ಲ್ಯಬಂತ - ಭೂತಕೃದ್ವಾಚಕ (Indeclinable Past participle or absolutive or Gerund)

ಇವುಗಳಲ್ಲಿ ತುಮನ್ನಂತ ಲ್ಯಬಂತಗಳು ಅವ್ಯಯಗಳು ; ಆದ್ದರಿಂದ ಇವುಗಳಿಗೆ ಸುಪ್ ಪ್ರತ್ಯಯಗಳು ಬರುವುದಿಲ್ಲ. ವರ್ತಮಾನ ಕೃದಂತದಿಂದ ಕರ್ಮಣಿ ವಿಧ್ಯರ್ಥ ಕೃದಂತವನ್ನೊಳಗೊಂಡ ಐದು ವಿಧಗಳಲ್ಲಿಯ ಕೃತ್ ಪ್ರತ್ಯಯಾಂತ ಶಬ್ದಗಳು ಮಾತ್ರ ಸುಬಂತಗಳಾಗುತ್ತವೆ. ಈ ಐದು ವಿಧಗಳಿಗೆ ಮಾತ್ರ ಪ್ರಾತಿಪದಿಕ ಸಂಜ್ಞೆಯಿರುತ್ತದೆ.

Rarest Archiver

ಮುಂದೆ ಕೃದಂತದ ಈ ಎಲ್ಲ ವಿಧಗಳನ್ನೂ ಸ್ಥೂಲವಾಗಿ ನಿರೂಪಿಸಲಾಗಿದೆ.

I ವರ್ತಮಾನ ಕೃದಂತ (Present Participle)

೧. ಕರ್ತರಿ ವರ್ತಮಾನ ಕೃದಂತ (Active Present participle) ಅಥವಾ

ವರ್ತಮಾನ ಶತೃ-ಶಾನಜಂತ ಶಬ್ದಗಳು :

ಪರಸ್ಮೈಪದಿ

ಕರ್ತರಿ ವರ್ತಮಾನ ಕೃದಂತದಲ್ಲಿ ಸಕರ್ಮಕ ಪರಸ್ಮೈಪದಿ ಧಾತುಗಳ ಮೇಲೆ **शतृ**[1] **(अत्)** ಪ್ರತ್ಯಯವು ಬರುತ್ತದೆ. ಆದ್ದರಿಂದ ಕರ್ತರಿ ವರ್ತಮಾನ ಕೃದಂತಗಳಿಗೆ ಶತ್ರಂತ ಶಬ್ದಗಳೆನ್ನುವರು. ಮುಖ್ಯ ಕ್ರಿಯೆಯೊಡನೆ ಮತ್ತೊಂದು ಕ್ರಿಯೆ ನಡೆಯುತ್ತಿರುವುದು ಇಲ್ಲಿ ಕಂಡುಬರುತ್ತದೆ.

ಉದಾಹರಣೆ : **देवदत्तो गायन् गच्छति** - ದೇವದತ್ತನು ಹಾಡುತ್ತಾ ಹೋಗುತ್ತಾನೆ.

इति चिन्तयन्नेवासौ व्याघेण व्यापादितः

- ಈ ರೀತಿ ಚಿಂತಿಸುತ್ತಿರುವಾಗಲೇ ಅವನು ಹುಲಿಯಿಂದ ಕೊಲ್ಲಲ್ಪಟ್ಟನು.

ಇಲ್ಲಿ **गायन्, चिन्तयन्** ಇವು **गै, चिन्त्** ಧಾತುಗಳ ವರ್ತಮಾನ ಕೃದಂತದ ಪುಲ್ಲಿಂಗ ಪ್ರಥಮಾ ವಿಭಕ್ತಿಯ ರೂಪಗಳು. ಧಾತುಗಳಿಗೆ **शतृ** ಪ್ರತ್ಯಯವನ್ನು ಜೋಡಿಸಿದಾಗ.....

गै - गा + अत = गायत् - गायति इति { **गायन्**[2] (ಪು), **गायन्ती** (ಸ್ತ್ರೀ), **गायत्** (ನ) }

चिन्त् + अत् = चिन्तयत् - चिन्तयति इति { **चिन्तयन्** (ಪು), **चिन्तयन्ती** (ಸ್ತ್ರೀ), **चिन्तयत्** (ನ) }

ವಿವಕ್ಷಿತ ಕೃದಂತದ ರೂಪವು ಈ ರೀತಿಯಾಗಿ ಇಲ್ಲಿ ಉಂಟಾಯಿತು.

ಇಲ್ಲಿ ಧಾತುಗಳು **शतृ(अत्)** ಪ್ರತ್ಯಯಪೂರ್ವದಲ್ಲಿ ವಿಕರಣ ಪ್ರತ್ಯಯಗಳನ್ನು ಹೊಂದಿದ್ದನ್ನೂ ಗಮನಿಸಬಹುದು. ಸಂಗಡ, ಧಾತ್ವಂತ್ಯ ಅಕಾರವೂ ಲೋಪಗೊಂಡಿರುತ್ತದೆ. ಉದಾಹರಣೆಗಳಿಗಾಗಿ ಮತ್ತೆ ಕೆಲವು ಶತ್ರಂತಗಳು.

---

[1] **शतृ** ದಲ್ಲಿಯ ಇತ್ ಸಂಜ್ಞೆಗಳಾದ ಶಕಾರ, ಋಕಾರಗಳನ್ನು ತೆಗೆದರೆ ಉಳಿಯುವುದು **अत्** ಮಾತ್ರ.

[2] **गायत्** ಮುಂತಾದವುಗಳು ಪುಲ್ಲಿಂಗದಲ್ಲಿ **गायन्, गायन्तौ, गायन्तः** ಎಂದು ಮುಂತಾಗಿ ಮುಂದೆ **भगवत्** ಶಬ್ದವು ನಡೆದಂತೆ ನಡೆಯುತ್ತವೆ. ನಪುಂಸಕಲಿಂಗದಲ್ಲಿ **भगवत्** ಶಬ್ದವು ನಪುಂಸಕದಲ್ಲಿ ನಡೆದಂತೆ. ಸ್ತ್ರೀಲಿಂಗದಲ್ಲಿ **नदी** ಶಬ್ದದಂತೆ.

Rarest Archiver

ಧಾತು ಅಂಗ	+ ಶತೃ (अत्)	ಕೃದಂತ	ಕೃದಂತ ವಿಗ್ರಹವಾಕ್ಯ	ಪುಂ. ಸ್ತ್ರೀ. ನಪುಂಸಕಗಳ ಪ್ರ.ವಿ.ಏ.ವ.
नी-नय	+ अत् = नय् + अत्	= नयत्	नयति इति	नयन् (ಪು) नयन्ती (ಸ್ತ್ರೀ) नयत् (ನ)
नृत्-नृत्य्	+ अत् = नृत्य् + अत्	= नृत्यत्	नृत्यति इति	नृत्यन् (ಪು) नृत्यन्ती (ಸ್ತ್ರೀ) नृत्यत् (ನ)
कथ्-कथय	+ अत् = कथय् + अत्	= कथयत्	कथयति इति	कथयन् (ಪು) कथयन्ती (ಸ್ತ್ರೀ) कथयत् (ನ)
गम्-गच्छ	+ अत् = गच्छ् + अत्	= गच्छत्	गच्छति इति	गच्छन् (ಪು) गच्छन्ती (ಸ್ತ್ರೀ) गच्छत् (ನ)
दा-ददा	+ अत् = दद् + अत्	= ददत्[1]	ददाति इति	ददन् (ಪು) ददती (ಸ್ತ್ರೀ) ददत् (ನ)
पा-पिब	+ अत् = पिब् + अत्	= पिबत्	पिबति इति	पिबन् (ಪು) पिबन्ती (ಸ್ತ್ರೀ) पिबत् (ನ)
चि-चिनु	+ अत्	= चिन्वत्	चिनोति इति	चिन्वन् (ಪು) चिन्वन्ती (ಸ್ತ್ರೀ) चिन्वत् (ನ)
प्रच्छ्-पृच्छ	+ अत् = पृच्छ् + अत्	= पृच्छत्	पृच्छति इति	पृच्छन् (ಪು) पृच्छन्ती (ಸ್ತ್ರೀ) पृच्छत् (ನ)
गृह्-गृह्ण	+ अत् = गृह्ण + अत्	= गृह्णत्	गृह्णाति इति	गृह्णन् (ಪು) गृह्णन्ती (ಸ್ತ್ರೀ) गृह्णत् (ನ)

---

[1] **ददत्** ಇದು ಪುಲ್ಲಿಂಗದಲ್ಲಿ **मरुत्** ಶಬ್ದದಂತೆ, ಸ್ತ್ರೀಲಿಂಗದಲ್ಲಿ **नदी** ಶಬ್ದದಂತೆ ಮತ್ತು ನಪುಂಸಕಲಿಂಗದಲ್ಲಿ **जगत्** ಶಬ್ದದಂತೆ ನಡೆಯುತ್ತದೆ.

Rarest Archiver

ಆತ್ಮನೇಪದಿ

ಆತ್ಮನೇಪದಿ ಧಾತುಗಳಿಗೆ ಕರ್ತ್ರರ್ಥದಲ್ಲಿ **शानच्** (ಆನ) ಪ್ರತ್ಯಯವು ಬರುತ್ತದೆ. ಅದಂತಾಂಗಕ್ಕೆ (ಧಾತುವಿನ ಅಂಗದ ಅಂತ್ಯದಲ್ಲಿ ಅಕಾರವಿದ್ದರೆ) ಮಾತ್ರ ಮುಗಾಗಮ (**मुक् + आगम - मुक् = म्**)ವು ಶಾನಚ್ ಪ್ರತ್ಯಯ ಪೂರ್ವದಲ್ಲಿ ಬರುತ್ತದೆ.

ಧಾತು	ಅಂಗ	ಶಾನಚ್ (**आन**)	ಕೃದಂತ	ಕೃದಂತ ವಿಗ್ರಹವಾಕ್ಯ	ಪುಂ. ಸ್ತ್ರೀ. ನಪುಂಸಕಗಳ ಪ್ರ.ವಿ.ಏ.ವ.
चि	**- चिनु +**	**आन**	**= चिन्वान**	**चिनुत इति**	**चिन्वानः** (ಪು) **चिन्वाना** (ಸ್ತ್ರೀ) **चिन्वानम्** (ನ)
कृ	**- कुरु +**	**आन**	**= कुर्वाण**	**कुरुत इति**	**कुर्वाणः** (ಪು) **कुर्वाणा** (ಸ್ತ್ರೀ) **कुर्वाणम्** (ನ)
रुध्	**- रुन्ध् +**	**आन**	**= रुन्धान**	**रुन्धत इति**	**रुन्धानः** (ಪು) **नुन्धाना** (ಸ್ತ್ರೀ) **रुन्धानम्** (ನ)
दा	**-दद् +**	**आन**	**= ददान्**	**दत्त इति**	**ददानः** (ಪು) **ददाना** (ಸ್ತ್ರೀ) **ददानम्** (ನ)
स्तु	**- स्तुव् +**	**आन**	**= स्तुवान**	**स्तुवीत इति**	**स्तुवानः** (ಪು) **स्तुवाना**(ಸ್ತ್ರೀ) **स्तुवानम्** (ನ)
ग्रह्	**-गृह्ण् +**	**आन**	**= गृह्णान**	**गृह्णीत इति**	**गृह्णानः** (ಪು) **गृह्णाना** (ಸ್ತ್ರೀ) **गृह्णानम्**(ನ)
पच्	**-पच + आन = पच्+ म् + आन**		**= पचमान**	**पचत इति**	**पचमानः** (ಪು) **पचमाना** (ಸ್ತ್ರೀ) **पचमानम्** (ನ)
यत्	**-यत + आन = यत+ म् +आन्**		**= यतमान**	**यतत इति**	**यतमानः** (ಪು) **यतमाना** (ಸ್ತ್ರೀ) **यतमानम्** (ನ)

Rarest Archiver

एध् -एध + आन = एध+ म् + आन् = एधमान **एधत इति** { **एधमानः** (ಪು) / **एधमाना** (ಸ್ತ್ರೀ) / **एधमानम्** (ನ)

ಇದೇ ರೀತಿ ಇನ್ನುಳಿದ ಆತ್ಮನೇಪದಿ ಧಾತುಗಳ ಮೇಲೂ ಶಾನಚ್ ಪ್ರತ್ಯಯವು ಬರುತ್ತದೆ.

पू ಮತ್ತು **यज्** ಧಾತುಗಳಿಗೆ **शानन्** **(आन)** ಪ್ರತ್ಯಯವು ಬರುತ್ತದೆ.

ಧಾತು	ಅಂಗ	ಶಾನನ್	ಆನ	ಕೃದಂತ	ಕೃದಂತ ವಿಗ್ರಹವಾಕ್ಯ	ಪುಂ. ಸ್ತ್ರೀ. ನಪುಂಸಕಗಳ ಪ.ವಿ.ಏ.ವ.
पू -	**पव +**	**आन = पव+ म् + आन**		**= पवमान**	**पूत इति**	**पवमानः** (ಪು) **पवामाना** (ಸ್ತ್ರೀ) **पवमानम्** (ನ)
यज्	**+**	**आन = यज् + म् + आन**		**= यजमान**	**यजत इति**	**यजमानः** (ಪು) **यजमानाः** (ಸ್ತ್ರೀ) **यजमानम्** (ನ)

ತಾಚ್ಛೀಲ್ಯ (ತತ್‌ಶೀಲ), ವಯಸ್ಸು , ಶಕ್ತಿ ಇವುಗಳನ್ನು ಬೋಧಿಸಲು ಕೇವಲ ಆತ್ಮನೇಪದಿಗಳಿಗಲ್ಲದೆ ಪರಸ್ಮೈಪದಿ ಧಾತುಗಳಿಗೂ **चानश्** **(आन)** ಎಂಬ ಪ್ರತ್ಯಯ ಬರುತ್ತದೆ. ಉದಾಹರಣೆ :

ಧಾತು	ಚಾನಶಂತ	ಕೃದಂತ ವಿಗ್ರಹ
भुज् -	**भुञ्जान**	**- भुङ्क्त इति > भोगं भुञ्जानः** - ಭೋಗಿಸುವ ಹವ್ಯಾಸವುಳ್ಳವ
भृ -	**बिभ्राण**	**- बिभर्ति इति > कवचं बिभ्राणः** -ಕವಚ ಧರಿಸುವ (ವಯಸ್ಸಿನ) ವನು
नि + हन् -	**निघ्नान-**	**निहन्ति इति > शत्रुं निघ्नानः**-ಶತ್ರುವನ್ನು ಕೊಲ್ಲುವ(ಶಕ್ತಿಯುಳ್ಳ) ವ

ಮುಂತಾದವುಗಳು.

೨. ಕರ್ಮಣಿ ವರ್ತಮಾನ ಕೃದಂತ (Passive Present Participle) :

ಉಭಯಪದಿ ಧಾತುಗಳ ಮೇಲೂ **यक्** **(य)** ಪ್ರತ್ಯಯ ಬಂದು ಶಾನಚ್ **(आन)** ಪ್ರತ್ಯಯವು ಬರುತ್ತದೆ. ಅದಂತಾಂಗವಾಗಿರುವಾಗ ಮುಗಾಗಮವು ಬರುತ್ತದೆ. ಉದಾಹರಣೆ :

अनु + भू = अनुभू + य = अनुभूय + म् + आन =
अनुभूयमान - अनुभूयत इति { **अनुभूयमानः** (ಪು) / **अनुभूमाना** (ಸ್ತ್ರೀ) / **अनुभूयमानम्** (ನ)

बुध् + य + म् + आन = बुध्यमान = बुध्यत इति { **मुध्यमानः** (ಪು) / **बुध्यमाना** (ಸ್ತ್ರೀ) / **बुध्यमानम्** (ನ)

ಮುಂತಾದವುಗಳು.

Rarest Archiver

II ಭೂತ ಕೃದಂತ (Past participle) ಅಥವಾ ಕ್ತಕ್ತವತ್[1] ಪ್ರತ್ಯಯಾಂತ ಶಬ್ದಗಳು :

೧. ಕರ್ಮಣಿ ಭೂತಕೃದಂತ (Past Passive Participle)

ಕರ್ಮಾರ್ಥದಲ್ಲಿ ಪೂರ್ಣಗೊಂಡ ಕ್ರಿಯೆಯನ್ನು ಬೋಧಿಸಲು ಧಾತುವಿನ ಮೇಲೆ ಕೃತ್ ಪ್ರತ್ಯಯವು ಬಂದಾಗ ಕರ್ಮಣಿ ಭೂತಕೃದಂತ ಶಬ್ದವು ಸಂಭವಿಸುತ್ತದೆ.

अर्जितं धनम् - ಗಳಿಸಲ್ಪಟ್ಟ ಹಣ **कृतं कार्यम्** - ಮಾಡಲ್ಪಟ್ಟ ಕೆಲಸ

भुक्तम् ओदनम् - ಉಣಿಸಲ್ಪಟ್ಟ ಅನ್ನ

ಇಲ್ಲಿ **अर्ज्, कृ, भुज्** ಧಾತುಗಳ ಮೇಲೆ **क्त**[2] **(त)** ಪ್ರತ್ಯಯ ಬಂದಿದೆ. ಈ ಕ್ತ (ತ) ಪ್ರತ್ಯಯ ಜೋಡಣೆಗೆ ಪೂರ್ವದಲ್ಲಿ ಸೇಟ್ ಧಾತುಗಳ ಮೇಲೆ ಇಡಾಗಮ (ಇ) ಬರುತ್ತದೆ.

ಉದಾಹರಣೆ : **कथ् + त = कथित**[3] - ಹೇಳಲ್ಪಟ್ಟ

मुद् + त् = मुदित - ಸಂತೋಷ ಹೊಂದಿದ

लिख् + त = लिखित - ಬರೆಯಲ್ಪಟ್ಟ

अर्ज् + त = अर्जित - ಗಳಿಸಲ್ಪಟ್ಟ

ಅನಿಟ್ ಧಾತುಗಳಿಗೆ **क्त** ವು ಹಾಗೆಯೇ ಸೇರಿಕೊಳ್ಳುತ್ತದೆ.

ಉದಾಹರಣೆ :

जि + त = जित	**कृ + त = कृत**
नी + त = नीत	**श्रु + त = श्रुत**
ज्ञा + त = ज्ञात	**श्रि + त = श्रित**

ಸಂಪ್ರಸಾರಣ ಕ್ರಿಯೆಗೆ ಒಳಗಾಗುವಂತಹ **स्वप् , वे** ಮುಂತಾದ ಧಾತುಗಳು ಸಂಪ್ರಸಾರಣಗೊಳ್ಳುತ್ತವೆ.

ಉದಾಹರಣೆ :

स्वप् + त = सुप्त	**वे + त = उत**
वच् + त = उक्त	**वद् + त = उदित**
वह् + त = ऊढ	**वस् + त = उषित**
यज् + त = इष्ट	**व्यध् + त = विद्ध**
प्रच्छ् + त = पृष्ट	**ग्रह् + त = गृहीत**

ह्वे + त = हूत

ಮುಂತಾದವುಗಳು.

---

[1] **क्तक्तवतू निष्ठा** (ಪಾ I. 1. 26)ಈ ಸೂತ್ರದಿಂದಾಗಿ ಭೂತ ಕೃದಂತಕ್ಕೆ ' ನಿಷ್ಠಾ ' ಎಂಬ ಸಂಜ್ಞೆಯೂ ಇದ್ದುದು ತಿಳಿಯುವುದು.

[2] **क्त** ದಲ್ಲಿ ಇತ್ಸಂಜ್ಞೆಯನ್ನು ತೆಗೆದರೆ ಉಳಿಯುವುದು **त** ಮಾತ್ರ.

[3] **क्तान्त** (ಕರ್ಮಣಿ ಭೂತಕೃದಂತ) ಶಬ್ದಗಳು ಪುಲ್ಲಿಂಗ ನಪುಂಸಕಗಳಲ್ಲಿ ಅಕಾರಾಂತ ಶಬ್ದಗಳಂತೆಯೂ ಸ್ತ್ರೀಲಿಂಗದಲ್ಲಿ ಆಕಾರಾಂತವಾಗಿ **माला** ಶಬ್ದದಂತೆಯೂ ನಡೆಯುತ್ತವೆ.

Rarest Archiver

ಹ್ರಸ್ವ ಮತ್ತು ದೀರ್ಘ ಉಕಾರಾಂತ , ಋಕಾರಾಂತ ಸೇಟ್ ಧಾತುಗಳಿಗೆ **क्त(त)** ಪ್ರತ್ಯಯ ಪೂರ್ವದಲ್ಲಿ ಇಡಾಗಮ ಬರುವುದಿಲ್ಲ.

ಉದಾಹರಣೆ : **नु + त = नुत** **भू + त = भूत**

कृ + त = कीर्ण **तॄ + त = तीर्ण**

'ಕ್ತ' ಪೂರ್ವದಲ್ಲಿ 'ಏ', 'ಐ' ಮತ್ತು 'ಓ' ಕಾರಾಂತ ಧಾತುಗಳು ಆಕಾರಾಂತಗೊಳ್ಳುತ್ತವೆ.

ಉದಾಹರಣೆ : **ध्यै + त = ध्यात** **त्रै + त = त्रात / त्राण**

ಆದರೆ **वे** ಮತ್ತು **ह्वे** ಧಾತುಗಳು ಈ ನಿಯಮಕ್ಕೆ ಅಪವಾದಗಳು.

वे + त = वीत **ह्वे + त = हूत** ಎಂದಾಗುತ್ತವೆ.

ಅಮಂತ (**अम् + अन्त**) ಧಾತುಗಳು ಇಡಾಗಮ ಪಡೆಯದಿದ್ದಲ್ಲಿ ಅವುಗಳ ಉಪಾಂತ್ಯ ಸ್ವರವು **क्त(त)** ಪೂರ್ವದಲ್ಲಿ ದೀರ್ಘಗೊಳ್ಳುತ್ತದೆ.

ಉದಾಹರಣೆ : **क्रम् + त = क्रान्त** **क्षम् + त = क्षान्त**

दम् + त = दान्त **शम् + त = शान्त**

ಇವೇ ಇಡಾಗಮವನ್ನು ಹೊಂದುವಾಗ ಇವುಗಳ ಉಪಾಂತ್ಯ ಸ್ವರವು ದೀರ್ಘಗೊಳ್ಳುವುದಿಲ್ಲ.

ಉದಾಹರಣೆ : **दम् + त = दमित** **शम् + त = शमित**

'ಕ್ತ' ಪೂರ್ವದಲ್ಲಿ **गम्, नम्, यम्, रम्, हन्, तन्, मन्, वन्, ऋण्, क्षण्, क्षिण्, घृण्, तृण्** ಮುಂತಾದವುಗಳ ಅನುನಾಸಿಕವು ಲೋಪಗೊಳ್ಳುತ್ತದೆ.

ಉದಾಹರಣೆ :

गम् + त = गत	**नम् + त = नत**	**यम् + त = यत**
रम् + त = रत	**हन् + त = हत**	**तन् + त = तत**
मन् + त = मत	**वन् + त = वत**	**क्षण् + त = क्षत**

ಮುಂತಾದವುಗಳು.

खन्, जन्, सन् ಧಾತುಗಳ ಅನುನಾಸಿಕಗಳು ಲೋಪಗೊಳ್ಳುವುದಲ್ಲದೆ ಅವುಗಳ ಉಪಾಂತ್ಯ ಅಕಾರವು ದೀರ್ಘಗೊಳ್ಳುತ್ತದೆ.

खन् + त = खात **जन् + त = जात** **सन् + त = सात**

ದಕಾರಾಂತ , ರಕಾರಾಂತ ಧಾತುಗಳಿಗೆ **क्त** ಪ್ರತ್ಯಯದ ಸ್ಥಳದಲ್ಲಿ ನಕಾರಾದೇಶ ಬರುತ್ತದೆ.

ಉದಾಹರಣೆ : **भिद् + त = भिन्न** **पद् + त = पन्न**

पूर् + त = पूर्ण **शॄ + त = शीर्ण**

Rarest Archiver

ವಿ.ಸೂ. : (i) ಶಕಲಾರ್ಥ (ಭಾಗ, ತುಂಡು) ವನ್ನು ನಿರ್ದೇಶಿಸುವಾಗ **भिद्** ಧಾತುವು **भित्त** ಎಂದು ಆಗುತ್ತದೆ.

(ii) 'ಐಶ್ವರ್ಯ' ಮತ್ತು 'ಕೀರ್ತಿ ' ಎನ್ನುವ ಅರ್ಥಗಳನ್ನು ಕೊಡುವಾಗ **विद्** ಧಾತುವಿಗೆ ಬರುವ **त** ಹಾಗೆಯೇ ಉಳಿಯುತ್ತದೆ-

ಉದಾ : **इदं वित्तमिति यूयं वित्त** - ಇದು ಐಶ್ವರ್ಯವೆಂದು ನೀವು ತಿಳಿಯಿರಿ.

पण्डित इति स वित्तः- ಪಂಡಿತನೆಂದು ಅವನು ಕೀರ್ತಿವಂತನಾಗಿದ್ದಾನೆ.

(iii) **नुद्, उन्द्, त्रै,** घ्रा ಮತ್ತು **ह्री** ಧಾತುಗಳಿಗೆ **क्त** ಕ್ಕೆ ಬದಲು ವೈಕಲ್ಪಿಕವಾಗಿ **न** ಬರಬಹುದು.

नुद् - नुत्त / नुन्न   उन्द् - उत्त / उन्न   त्रै - त्रात / त्राण
घ्रा - घ्रात / घ्राण   ह्री - ह्रीत / ह्रीण

ಈ ಕೆಳಗಿನ ಧಾತುಗಳು 'ಕ್ತ' ಪ್ರತ್ಯಯಕ್ಕೆ ಬದಲಾಗಿ **न** ವನ್ನೇ ಪಡೆಯುತ್ತವೆ.

ऋ	ईर्ण	मस्ज्	मग्न
कृ	कीर्ण	मी	मीन
गृ	गीर्ण	री	रीण
जृ	जीर्ण	रुज्	रुग्ण
दृ	दीर्ण	लज्	लग्न
पृ	पूर्ण	लस्ज्	लग्न
भृ	भूर्ण	ली	लीन
वृ	वूर्ण	लू	लून
शृ	शीर्ण	विज्	विग्न
स्तृ	स्तीर्ण	उद् + विज्	उद्विग्न
गु	गून	वृश्च	वृक्ण
ज्या	जीन	व्री	व्रीण
डी	डीन	वै	वान
दी	दीन	व्ली	व्लीन
दू	दून	श्वि	शून
धी	धीन	सू	सून
पू	पून	स्कन्द्	स्कन्न
प्ली	प्लीन	हा (ಹೋಗು)	हान
भञ्ज्	भग्न	हा (ಬಿಡು)	हीन

ಉಪಾಂತ್ಯದಲ್ಲಿ ಅನುಸ್ವಾರಯುಕ್ತ ಧಾತುವಿನ ಉಪಾಂತ್ಯ ಅನುಸ್ವಾರವು **क्त** ಪ್ರತ್ಯಯ ಪೂರ್ವದಲ್ಲಿ ಇಡಾಗಮವನ್ನು ಹೊಂದದಿದ್ದಾಗ ಲೋಪಗೊಳ್ಳುತ್ತದೆ.

ಉದಾಹರಣೆ : **अञ्ज् + त = अक्त   सञ्ज् + त = सक्त**
रञ्ज् + त = रक्त

Rarest Archiver

ಕೆಲವು ವಿಶೇಷ ಧಾತುಗಳು ಪ್ರತ್ಯಯದೊಡನೆ ....

ಧಾತು	क्त ಪ್ರತ್ಯಯಾಂತ
अद्	अन्न , जग्ध
सम्+ अर्द्	समर्ण
नि + अर्द्	न्यर्ण
अभि + अद्	अभ्यर्ण
इन्ध्	इद्ध
ऊय्	ऊत
ऋ	ऋण (ಸಾಲ)
ऋ	ऋत (ಹೋದ)
कष्	कष्ट (ಅಸಾಧ್ಯ)
कष्	कषित (ಘರ್ಷಿತ)
कृश्	कृश
क्षि	क्षित , क्षीण
क्षीब्	क्षीब
क्षुभ्	क्षुब्ध
गै	गीत
ग्रह्	गूढ (ಅಡಗಿಸಿದ)
ग्रह्	गृहीत (ಹಿಡಿದ)
ज्यो	जीत
दा	दत्त
आ + दा	आत्त
दिव्	द्यूत, द्यून
दो	दित
दृंह्	दृढ
धा	हित
धाव्	धावित (ಓಡಿದ)
धाव्	धौत ಸ್ವಚ್ಛ ಮಾಡಿದ
धे	धीत
नह्	नग्ध
पच्	पक्व
पा	पीत
पूय्	पूत
प्याय्	प्यान, पीत
फल्	फुल्ल (ಅರಳಿದ)
फल्	फलित (ಹಣ್ಣಾದ)
मन्	मूत
मा	मित
मुह्	मुग्ध, मूढ
मूर्च्छ्	मूर्त, मूर्च्छित
वे	उत
व्ये	वीत
व्रश्च्	वृक्ण
शुष्	शुष्क
शो	शात, शीत
श्ये	श्यान, शीत, शीन
श्रा	श्राण, श्रत
श्वि	शून
ष्ठिव्	ष्ठ्यूत
सह्	सोढ
स्फाय्	स्फीत
हृ	हृष्ट , हर्षित , हृषित

Rarest Archiver

೨. **ಕರ್ತರಿ ಭೂತಕೃದಂತ** (Past Active Participle) ಧಾತುಗಳಿಗೆ **क्तवत्** (ತವತ್) ಪ್ರತ್ಯಯವನ್ನು ಜೋಡಿಸಿದರೆ ಕರ್ತರಿ ಭೂತಕೃದಂತವಾಗುವವು. ಉಳಿದ ನಿಯಮಗಳೆಲ್ಲಾ ಕರ್ಮಣಿ ಭೂತಕೃದಂತಗಳಿಗೆ ಹೇಳಿದವುಗಳೇ ಇಲ್ಲಿ ಅನ್ವಯಿಸುತ್ತವೆ.

कृ + तवत् = कृतवत् ಮಾಡಿದವನಾದ ಮುಂ.	**कृतवान्** (ಪು) **कृतवती** (ಸ್ತ್ರೀ) **कृतवत्** (ನ)
भू + तवत् = भूतवत् ಇರುವಂತಹ ಮುಂ.	**भूतवान्** (ಪು) **भूतवती** (ಸ್ತ್ರೀ) **भूतवत्** (ನ)
नी + तवत् = नीतवत् ತರಲ್ಪಟ್ಟವನಾದ ಮುಂ.	**नीतवान्** (ಪು) **नीतवती** (ಸ್ತ್ರೀ) **नीतवत्** (ನ)
कथ्+ तवत् = कथ् + इ+ तवत् = कथितवत् - ಹೇಳಿದವನಾದ ಮುಂ.	**कथितवान्** (ಪು) **कथितवती** (ಸ್ತ್ರೀ) **कथितवत्** (ನ)
स्वप्+ तवत् = सुप् + तवत् = सुप्तवत् - ಮಲಗಿದವನಾದ ಮುಂ.	**सुप्तवान्** (ಪು) **सुप्तवती** (ಸ್ತ್ರೀ) **सुप्तवत्** (ನ)
पृ + तवत् = पूर् + तवत् = पूर्णवत् - ತುಂಬಿರುವಂತಹ	**पूर्णवान्** (ಪು) **पूर्णवती** (ಸ್ತ್ರೀ) **पूर्णवत्** (ನ)
नम् + तवत् = नतवत् - ನಮಸ್ಕರಿಸಿದಂತಹ	**नतवान्** (ಪು) **नतवती** (ಸ್ತ್ರೀ) **नतवत्** (ನ)

ಎಂದು ಮುಂತಾಗಿ ಸಮಸ್ತ ಧಾತುಗಳಿಗೂ ಕ್ತವತ್ ಪ್ರತ್ಯಯ ಬಂದು ಕರ್ತರಿಭೂತ ಕೃದಂತ ಶಬ್ದಗಳು ಸಂಭವಿಸುತ್ತವೆ.

Rarest Archiver

III ಪರೋಕ್ಷ ಭೂತ ಕೃದಂತ (Perfect Participle) ಅಥವಾ ಕ್ವಸ್ವಂತ - ಕಾನಜಂತ ಶಬ್ದಗಳು:

ಕ್ವಸು[1] (**वस्**) ಕಾನಚ್ (**आन**) ಇವು ಪರೋಕ್ಷಭೂತದ ಕೃತ್ ಪ್ರತ್ಯಯಗಳು. 'ಕ್ವಸು' ಪ್ರತ್ಯಯವು ಪರಸ್ಮೈಪದಿ ಧಾತುಗಳ ಮೇಲೂ 'ಕಾನಚ್' ಪ್ರತ್ಯಯವು ಆತ್ಮನೇಪದಿ ಧಾತುಗಳ ಮೇಲೂ ಬರುತ್ತದೆ.

ಲಿಟ್ - ಪರೋಕ್ಷಭೂತ ಕೃದಂತವನ್ನು ಪ್ರಯೋಗಿಸಿದ ಉದಾಹರಣೆಗಳು ವೇದಾದಿಗಳಲ್ಲಿ ದೊರಕುತ್ತವೆ. ಲೌಕಿಕ ಸಾಹಿತ್ಯದಲ್ಲಿ ಅರ್ಥಾತ್, ಕಾವ್ಯಾದಿಗಳಲ್ಲಿ ಇದನ್ನು ಪ್ರಯೋಗಿಸಿದ ಉದಾಹರಣೆಗಳು ಬಹಳ ಕಡಿಮೆ ಮಹಾಕವಿಗಳ ಕಾವ್ಯದಲ್ಲಿ ಮಾತ್ರ ಎಲ್ಲೋ ಒಂದೊಂದು ಕಡೆ ಪರೋಕ್ಷಭೂತದ ಬಳಕೆಯಿರುವುದು ಕಂಡುಬರುತ್ತದೆ.

ಉದಾಹರಣೆ : **तं तस्थिवांसं नगरोपकण्ठे प्रत्युज्जगाम क्रथकैशिकेन्द्रः** (ರಘು.V. 61 - ನಗರದ ಹೊರವಲಯದಲ್ಲಿ ಬೀಡುಬಿಟ್ಟಿರುವ (ನಿಂತಿರುವ)ಅವನನ್ನು ಎದುರುಗೊಳ್ಳಲು ಕ್ರಥಕೈಶಿಕರೊಡೆಯನು ಹೋದನು.

ಇಲ್ಲಿ **तस्थिवांसं** ಶಬ್ದವು **तस्थिवस्** ಶಬ್ದದ ಪುಲ್ಲಿಂಗ, ದ್ವಿತೀಯಾ ವಿಭಕ್ತಿ, ಏಕವಚನದ ರೂಪವು ; **स्था** ಧಾತುವಿನ ಮೇಲೆ **क्वसु (वस्)** ಪ್ರತ್ಯಯವಿಲ್ಲಿ ಬಂದಿದೆ.

ಧಾತುಗಳ ಪರೋಕ್ಷಭೂತದ ಪರಸ್ಮೈಪದಿ ಮತ್ತು ಆತ್ಮನೇಪದಿ ಪ್ರಥಮಪುರುಷ ಬಹುವಚನ ಪ್ರತ್ಯಯಗಳನ್ನು ತೆಗೆದುಹಾಕಿ ಕ್ರಮವಾಗಿ **क्वसु** , **कानच्** ಪ್ರತ್ಯಯಗಳನ್ನು ಜೋಡಿಸಿ ಪರೋಕ್ಷ ಭೂತ ಕೃದಂತ ಶಬ್ದಗಳನ್ನು ಸುಲಭವಾಗಿ ರಚಿಸಬಹುದು.

अस् - आसुः आस् + वस् = आस् + इ + वस् = आसिवस् - ಒಗೆದ

नी - निन्यिरे निन्य् + आन = निन्यान - ಒಯ್ದ

ಏಕಾಕ್ಷರಿ ಧಾತುಗಳಿಗೆ ಮತ್ತು ಆಕಾರಾಂತ ಧಾತುಗಳಿಗೆ **क्वसु** ಪ್ರತ್ಯಯ ಪೂರ್ವದಲ್ಲಿ ಇಡಾಗಮವುಂಟಾಗುತ್ತದೆ. **गम्, हन्, दृश्, विश्, विद्** ಧಾತುಗಳಿಗೆ **क्वसु** ಪ್ರತ್ಯಯ ಪೂರ್ವದಲ್ಲಿ ವೈಕಲ್ಪಿಕವಾಗಿ ಇಡಾಗಮವುಂಟಾಗುತ್ತದೆ.

ಧಾತು	ಅಂಗ	ಪರೋಕ್ಷ ಭೂತ ಕೃದಂತ	ಅರ್ಥ
अञ्ज्	**आज्**	**आजिवस्**	ಹಚ್ಚಿದಂತಹ
अज्	**आस्**	**आसिवस्**	ಒಗೆದಂತಹ
इ	**ईय**	**ईयिवस् / ईयान**	ಹೋದಂತಹ
ऋ	**आर्**	**आरिवस्**	ಹೋದಂತಹ
कृ	**चकृ**	**चकृवस् / चक्राण**	ಮಾಡಿದಂತಹ
कॄ	**चिकिर्**	**चिकीर्वस् / चकिराण**	ಹರಡಿದಂತಹ

---

[1] **क्वसु , कानच्** ಗಳಲ್ಲಿ ಇತ್ಸಂಜ್ಞೆಗಳನ್ನು ತೆಗೆದರೆ ಉಳಿಯುವುದು **वस्** ಮತ್ತು **आन** .

Rarest Archiver

क्रम्	चक्रम्	चक्रण्वस्	ಕ್ರಮಿಸಿದಂತಹ
खन्	चखन्	चखन्वस्	ಅಗೆದಂತಹ
गम्	जगम् , जग्म	जग्मिनस् , जगन्वस्	ಹೋದಂತಹ
घस्	जक्ष्	जक्षिवस्	ತಿಂದಂತಹ
जन्	जजन्	जजन्वस् / जज्ञान	ಹುಟ್ಟಿದಂತಹ
तन्	तेन्	तेनिवल् / तेनान	ಚಾಚಿದಂತಹ
तृ	तितिर्	तितीर्वस् / ततिराण	ದಾಟಿದಂತಹ
दा	दद्	ददिवस् / ददान	ಕೊಟ್ಟಂತಹ
दृश्	ददृश्	ददृशिवस् / ददृश्वस्	ನೋಡಿದಂತಹ
नी	निनी	निनीवस् / निन्यान	ಒಯ್ದದಂತಹ
पच्	पेच्	पेचिवस् / पेचान	ಅಟ್ಟಂತಹ, ಬೇಯಿಸಿದಂತಹ
पत्	पेत्	पेतिवस्	ಬೀಳಿಸಿದಂತಹ
पद्	पेद्	पेदान	ಪಡೆದಂತಹ
पृ	पुपुर्	पुपूर्वस् / पपुराण	ತುಂಬಿದಂತಹ
बन्ध्	बबद्	बबद्वस्	ಬಂಧಿಸಿದಂತಹ
भञ्ज्	बभञ्ज्	बभञ्ज्वस्	ಮುರಿದಂತಹ
भिद्	बिभिद्	बिभिद्वस् / बिभिदान	ಒಡೆದಂತಹ
यज्	ईज	ईजिवस् / ईजान	ಯಜ್ಞ ಮಾಡಿದಂತಹ
वच्	ऊच्	ऊचिवस् / ऊचान	ಹೇಳಿದಂತಹ
वह्	ऊह्	ऊहिवस् / ऊहान	ಒಯ್ದದಂತಹ
विद्	विविद्	विविदिवस् / विविद्वस्	ಅರಿತಂತಹ
श्रु	शुश्रु	शुश्रुवस् / शुश्रुवाण	ಕೇಳಿದಂತಹ
स्तु	तुष्ट	तुष्टुवस् / तुष्टुवान	ಹೊಗಳಿದಂತಹ
स्मृ	सस्मृ	सस्मृवस्	ನೆನಪು ಮಾಡಿದಂತಹ
[illegible]	जह	जह्वस् / जह्राण	ಅಪಹರಿಸಿದಂತಹ

Rarest Archiver

ಪರೋಕ್ಷ ಭೂತದ ಅನುಪ್ರಯೋಗ ಕೃದಂತ

ಇಲ್ಲಿ **कृ, भू, अस्** ಧಾತುಗಳ ಲಿಟ್ - ಕೃದಂತವನ್ನೇ ಲಿಟ್‌ದಲ್ಲಿ ಧಾತುಗಳಿಗೆ ಜೋಡಿಸಿದಂತೆಯೇ ಜೋಡಿಸಿದರಾಯಿತು.

ಉದಾಹರಣೆ **:**

कथ् {
कथयाञ्चकृवस्
कथयाञ्चक्राण
कथयामासिवस्
कथयाम्बभूवस्

जागृ {
जागरञ्चकवस्
जागरमासिवस्
जागराम्बभूवस्

ಎಂದು ಮುಂತಾಗಿ.

ಈ ಪರೋಕ್ಷ ಭೂತ ಕೃದಂತಗಳು **विद्वस्** ಶಬ್ದದಂತೆ ವಿಭಕ್ತಿ ಪ್ರತ್ಯಯಗಳನ್ನು ಹೊಂದುತ್ತವೆ.

IV ಭವಿಷ್ಯತ್ ಕೃದಂತ (Future Participle) ಅಥವಾ ಭವಿಷ್ಯತ್ ಶತೃ - ಶಾನಜಂತಗಳು.

ವರ್ತಮಾನ ಕೃದಂತದಲ್ಲಿಯ ಕೃತ್ ಪ್ರತ್ಯಯಗಳಾದ **शतृ - शानच्** ಪ್ರತ್ಯಯಗಳೇ ಭವಿಷ್ಯತ್ ಕೃತ್ ಪ್ರತ್ಯಯಗಳಿರುತ್ತವೆ. ಲೃಟ್ ಲಕಾರದಲ್ಲಿ (ಸಾಮಾನ್ಯ ಭವಿಷ್ಯತ್ ಕಾಲದಲ್ಲಿ) ಧಾತುಗಳ ಮೇಲೆ ಬರುವ ಇಡಾಗಮ ಮತ್ತು **स्य** ಇವು **शतृ (अत्), शानच् (आन)** ಪ್ರತ್ಯಯಗಳ ಪೂರ್ವದಲ್ಲಿ ಇಲ್ಲಿಯೂ ಬರುತ್ತವೆ. ಇನ್ನುಳಿದ ಪ್ರಕ್ರಿಯೆಗಳೆಲ್ಲಾ ವರ್ತಮಾನ ಕೃದಂತ ಪ್ರಕ್ರಿಯೆಗಳಂತೆ.

ಉದಾಹರಣೆ :

ಧಾತು ಅಂಗ **शतृ/ शानच्** ಭವಿಷ್ಯತ್ಕಾಲ ಅರ್ಥ

कृ - {
करिष्य + अत् = करिष्य् + अत् = करिष्यत्
करिष्य + आन = करिष्य + म् + आन् = करिष्यमाण
} -ಮಾಡುವಂತಹ

भू - भविष्य + अत् = भविष्य् + अत् = भविष्यत् - ಸಂಭವಿಸುವಂತಹ

गम् - गमिष्य + अत् = गमिष्य् + अत् = गमिष्यत् -ಹೋಗುವಂತಹ

ಎಂದು ಮುಂತಾಗಿ ಸಮಸ್ತ ಧಾತುಗಳ ಮೇಲೆ ಭವಿಷ್ಯದರ್ಥದಲ್ಲಿ ಶತೃ - ಶಾನಚ್‌ಗಳು ಬರುತ್ತವೆ.

ಇವುಗಳ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗ ರೂಪಗಳೂ ಅವು ವಿಭಕ್ತಿ ಪ್ರತ್ಯಯಗಳನ್ನು ಹೊಂದುವುದೂ ವರ್ತಮಾನ ಕೃದಂತ ಶಬ್ದಗಳಿಗೆ ಹೇಳಿದಂತೆಯೇ ಇರುತ್ತವೆ. ಉದಾಹರಣೆ :

करिष्यति इति {
करिष्यन् (ಪು)
करिष्यन्ती (ಸ್ತ್ರೀ)
करिष्यत् (ನ)

करिष्यते इति {
करिष्यमाणः (ಪು)
करिष्यमाणा (ಸ್ತ್ರೀ)
करिष्यमाणम् (ನ)

Rarest Archiver

ಆತ್ಮನೇಪದಿ ಕರ್ತರಿ ಭವಿಷ್ಯತ್ ಕೃದಂತಗಳೇ ಕರ್ಮಣಿ ಭವಿಷ್ಯತ್ ಕೃದಂತಗಳು. ಪರಸ್ಮೈಪದಿ ಧಾತುಗಳೂ ಕರ್ಮಾರ್ಥದಲ್ಲಿ ಭವಿಷ್ಯತ್ ಕೃದಂತಗಳಾಗುವಾಗ ಆತ್ಮನೇಪದಿ ಪ್ರಕ್ರಿಯೆಗಳನ್ನು ಹೊಂದುತ್ತವೆ.

V ಕರ್ಮಣಿ ವಿಧ್ಯರ್ಥ ಕೃದಂತ (Potential Passive Participle).

ಆಜ್ಞಾದ್ಯರ್ಥಗಳಲ್ಲಿ ವಿಧ್ಯರ್ಥಕೃದಂತವು ಬರುತ್ತದೆ. ವಿಧ್ಯರ್ಥಕ ಕೃದಂತವು ಕ್ರಿಯೆಯ ಅತ್ಯವಶ್ಯಕತೆಯನ್ನು ಬೋಧಿಸುತ್ತದೆ.

ಉದಾಹರಣೆ :

राजरक्षितव्यानि तपोवनानि नाम- (ಅ.ಶಾ. I)

- ತಪೋವನಗಳು ರಾಜನಿಂದಲೇ ರಕ್ಷಿಸಲ್ಪಡಬೇಕು.

कथयितव्यं कथय - ಹೇಳಬೇಕಾದದ್ದನ್ನು ಹೇಳು.

द्वयमप्यनतिक्रमणीयम् - (ಅ.ಶಾ. II) ಎರಡೂ ಮೀರುವಂಥವಲ್ಲ.

यथा नौ प्रियसखी बन्धुजनशोचनीया न भवति तथा निर्वर्तय-(ಅ.ಶಾ. III)

- ನಮ್ಮ ಪ್ರಿಯ ಗೆಳತಿಯು ಬಂಧು ಜನರ ಪಶ್ಚಾತ್ತಾಪಕ್ಕೆ ಪಾತ್ರಳಾಗದಿರುವಂತೆ ನಡೆದುಕೋ.

त्वदीयं कवचं देयम् - ನಿನ್ನ ಕವಚವು ಕೊಡಲ್ಪಡಬೇಕು.

भाग्यायत्तमतः परं न खलु तत् वाच्यं वधूबन्धुभिः - (ಅ.ಶಾ. IV, 17)

- ಮುಂದಿನದು ಭಾಗ್ಯಕ್ಕೆ ಸೇರಿದ್ದು ; ವಧೂ ಬಂಧುಗಳಿಂದ ಅದು ಹೇಳಲ್ಪಡಬಾರದು.

ಈ ಉದಾಹರಣೆಗಳಲ್ಲಿ :

रक्षितव्य, कथयितव्य ಗಳಲ್ಲಿ **तव्यत्** ಪ್ರತ್ಯಯವೂ

अनतिक्रमणीय, शोचनीय ಗಳಲ್ಲಿ **अनीयर्** ಪ್ರತ್ಯಯವೂ

देय, वाच्य ಗಳಲ್ಲಿ **य** ಪ್ರತ್ಯಯವೂ ಕರ್ಮಣಿ ವಿಧ್ಯರ್ಥದಲ್ಲಿ ಧಾತುಗಳ ಮೇಲೆ ಬಂದಿದ್ದನ್ನು ಗಮನಿಸಬಹುದು.

ಹೀಗೆ ಕ್ರಿಯೆಯ ಅತ್ಯವಶ್ಯಕತೆಯನ್ನೂ , ಆಜ್ಞಾದ್ಯರ್ಥಗಳನ್ನೂ ಬೋಧಿಸಲು ಧಾತುಗಳ ಮೇಲೆ ವೈಕಲ್ಪಿಕವಾಗಿ **तव्यत् (तव्य)** ಅಥವಾ **अनीयर् (अनीय)** ಅಥವಾ **य** ಪ್ರತ್ಯಯ ಬರುತ್ತದೆ.

ಸೇಟ್ ಧಾತುಗಳಿಗೆ ಈ ಕರ್ಮಣಿ ವಿಧ್ಯರ್ಥಕೃತ್ ಪ್ರತ್ಯಯ ಪೂರ್ವದಲ್ಲಿ ಇಡಾಗಮ ಬರುತ್ತದೆ ; ವೇಟ್ ಧಾತುಗಳಿಗೆ ಇಡಾಗಮವು ವೈಕಲ್ಪಿಕ . ಅನಿಟ್ ಧಾತುಗಳಿಗೆ ಇಡಾಗಮ ಬರುವುದಿಲ್ಲ.

ಇಕಾರಾಂತ, ಉಕಾರಾಂತ, ಋಕಾರಾಂತ (ಹ್ರಸ್ವ ಅಥವಾ ದೀರ್ಘ) ಧಾತುಗಳ ಅಂತ್ಯಸ್ವರವು ವಿಧ್ಯರ್ಥಕೃತ್ ಪ್ರತ್ಯಯ ಪೂರ್ವದಲ್ಲಿ ಗುಣವನ್ನು ಹೊಂದುತ್ತದೆ. ವ್ಯಂಜನಾಂತ ಧಾತುಗಳಲ್ಲಿಯ ಉಪಾಂತ್ಯ ಸ್ವರಕ್ಕೂ ಇದೇ ನಿಯಮವು ಅನ್ವಯಿಸುತ್ತದೆ. ಉಪಾಂತ್ಯ ಸ್ವರವು ಅಕಾರವಿದ್ದರೆ ಅದು ಆಕಾರವನ್ನು ಪಡೆಯುತ್ತದೆ. ಆದರೆ ಓಷ್ಠ್ಯ (ಪವರ್ಗ) ವ್ಯಂಜನಾಂತ ಧಾತುವಿನ ಉಪಾಂತ್ಯ **अ** ವು ದೀರ್ಘಗೊಳ್ಳುವುದಿಲ್ಲ.

Rarest Archiver

ಧಾತುಗಳ ಅಂತ್ಯದಲ್ಲಿಯ **आ, ए, ऐ, ओ** ಇವುಗಳು ಆಕಾರಗೊಳ್ಳುತ್ತವೆ. ಈ ವಿಧ್ಯರ್ಥ ಕೃದಂತಗಳು ಪುಲ್ಲಿಂಗ , ನಪುಂಸಕಲಿಂಗಗಳಲ್ಲಿ ಅಕಾರಾಂತ ಶಬ್ದದಂತೆಯೂ ಸ್ತ್ರೀಲಿಂಗದಲ್ಲಿ ಆಕಾರಾಂತ ಶಬ್ದದಂತೆಯೂ ನಡೆಯುತ್ತವೆ.

ಕೆಲವು ಉದಾಹರಣೆಗಳು :

ಧಾತು	+ ತವ್ಯತ್	+ ಅನೀಯರ್	+ ಯ
दा	दातव्य	दानीय	देय
पा	पातव्य	पानीय	पेय
चि	चेतव्य	चयनीय	चेय
जि	जेतव्य	जयनीय	जेय / जय्य
नी	नेतव्य	नयनीय	नेय
श्रु	श्रोतव्य	श्रवणीय	श्रव्य / श्राव्य
स्तु	स्तोतव्य	स्तवनीय	स्तुत्य
भू	भवितव्य	भवनीय	भव्य / भाव्य
लू	लवितव्य	लवनीय	लव्य / लाव्य
कृ	कर्तव्य	करणीय	कार्य / कृत्य
भृ	भर्तव्य	भरणीय	भार्य / भृत्य
कॄ	करितव्य करीतव्य	करणीय	कार्य
तॄ	तरितव्य तरीतव्य	तरणीय	तार्य
पॄ	पूरितव्य पूरीतव्य	पूरणीय	पूर्य
धे	धातव्य	धानीय	धेय
ध्यै	ध्यातव्य	ध्यानीय	ध्येय
शो	शातव्य	शानीय	शेय
खन्	खनितव्य	खननीय	खेय
त्यज्	त्यक्तव्य	त्यजनीय	त्याज्य
शास्	शासितव्य	शासनीय	शास्य / शिष्य

Rarest Archiver

निन्द्	**निन्दितव्य**	**निन्दनीय**	**निन्द्य**
भिद्	**भेत्तव्य**	**भेदनीय**	**भेद्य**
बुध्	**बोधितव्य** **बोद्धव्य**	**बोधनीय**	**बोध्य**
भुज्	**भोक्तव्य**	**भोजनीय**	**भोज्य / भोग्य**
दृश्	**द्रष्टव्य**	**दर्शनीय**	**दृश्य**
मृज्	**मार्जितव्य** **मार्ष्टव्य**	**मार्जनीय**	**मृज्य / मृग्र्य / मार्ग्र्य**
सृज्	**सृष्टव्य**	**सर्जनीय**	**सृज्य / सर्ग्र्य**
क्लृप्	**कल्पितव्य**	**कल्पनीय**	**कल्प्य**
भ्रस्ज्	**भ्रष्टव्य** **भर्ष्टव्य**	**भर्जनीय** **भ्रज्जनीय**	**भर्ज्य** **भृज्य / भर्ज्य**

ಹೀಗೆಯೇ ಸಮಸ್ತ ಧಾತುಗಳಿಗೂ ವಿಧ್ಯರ್ಥಕ ಪ್ರತ್ಯಯಗಳು ಬರುತ್ತವೆ.

VI ತುಮನ್ನಂತ (The Infinitive)

ಕ್ರಿಯಾಪ್ರಯೋಜನಕ ಕ್ರಿಯೆಯು[1] ಉಪಪದವಾಗಿರುವಾಗ ಧಾತುವಿನ ಮೇಲೆ ಭವಿಷ್ಯದರ್ಥದಲ್ಲಿ ತುಮನ್ (**तुम्**) ಮತ್ತು ಣ್ವುಲ್(**व**) ಪ್ರತ್ಯಯಗಳು ಬರುತ್ತವೆ. ಹೇತ್ವರ್ಥಕಗಳಾದ ಈ ಕೃತ್ ಪ್ರತ್ಯಯಾಂತ ಶಬ್ದಗಳು ಅವ್ಯಯಗಳು. ಆದ್ದರಿಂದ ತುಮನ್ನಂತಗಳಿಗೆ 'ಹೇತ್ವರ್ಥಕ ಧಾತುಸಾಧಿತ ಅವ್ಯಯ' ಗಳೆಂದೂ ಅನ್ನುವರು; ಇವು ಕ್ರಿಯಾವಿಶೇಷಣಗಳು (Adverbs).

ಉದಾರಣೆಗಳು : **फलानि आहर्तुं याति** - ಹಣ್ಣುಗಳನ್ನು ತರಲು ಹೋಗುತ್ತಾನೆ

- ಇಲ್ಲಿ ಹೋಗುತ್ತಾನೆ ಎಂಬ ಕ್ರಿಯಾವಾಚಕ ಶಬ್ದವು ಬೋಧಿಸುವುದು 'ಹಣ್ಣನ್ನು ತರಲಿಕ್ಕಾಗಿ' ಎಂಬ ಹೇತ್ವರ್ಥಕವನ್ನು.

ಹೀಗೆಯೇ **वक्तुम् आरभत्** - ಮಾತನಾಡಲು ತೊಡಗಿದನು.

निर्गन्तुम् आज्ञापयति - ಹೊರಹೊರಡಲು ಆಜ್ಞಾಪಿಸುತ್ತಾನೆ.

ಇಲ್ಲಿ, **आहर्तुम्** - **आ + हृ + तुम्**[2] = **आहर्तुम्**

वक्तुम् - **वच् + तुम् = वक्तुम्**

निर्गन्तुम् - **निर् + गम् + तुम् = निर्गन्तुम्**

ಮುಂತಾಗಿ ತುಮನ್ನಂತಗಳು ಸಿದ್ಧಿಸಿವೆ.

---

[1] **ण्वुलौ क्रियां क्रियार्थायाम्** (ಪಾ III, 3, 10)

[2] **तुमन्** ದಲ್ಲಿ ಇತ್ ಸಂಜ್ಞೆಯನ್ನು ತೆಗೆದ ಮೇಲೆ ಉಳಿಯುವುದು **तुम्**

Rarest Archiver

ಧಾತುಗಳಿಗೆ ಜೋಡಿಸುವ ಇಡಾಗಮದ ನಿಯಮವನ್ನು ಇಲ್ಲಿಯೂ ಪಾಲಿಸಲಾಗುವುದು. ಋಕಾರವನ್ನು ಬಿಟ್ಟು ಧಾತುಗಳ ಇನ್ನಾವ ಸ್ವರವೂ ತುಮನ್ನಂತದಲ್ಲಿ ಸಾಮಾನ್ಯವಾಗಿ ಗುಣತ್ವವನ್ನು ಹೊಂದುವುದಿಲ್ಲ. ಉದಾಹರಣೆಗಾಗಿ ಕೆಲವು ಧಾತುಗಳಿಗೆ ತುಮನ್ನಂತ ರೂಪ........

ಧಾತು	ತುಮನ್ನಂತ	ಧಾತು	ತುಮನ್ನಂತ
इ	**एतुम्**	**दृप्**	**दर्पितुम् / द्रप्तुम् / दर्प्तुम्**
एध्	**एधितुम्**	**दृश्**	**द्रष्टुम्**
कुट्	**कुटितुम्**	**धू**	**धवितुम्**
कृ	**कर्तुम्**	**नश्**	**नशितुम् / नष्टुम्**
गम्	**गन्तुम्**	**नी**	**नेतुम्**
गुह्	**गूहितुम्**	**पच्**	**पक्तुम्**
गै	**गातुम्**	**बुध्**	**बोधयितुम्**
ग्रन्थ्	**ग्रन्थितुम्**	**भू**	**भवितुम्**
ग्रह्	**ग्रहीतुम्**	**मृज्**	**मर्जितुम् / मार्ष्टुम्**
चुर्	**चोरयितुम्**	**वृ**	**वरितुम् / वरीतुम्**
तृप्	**तर्पितुम् / त्रप्तुम् / तर्प्तुम्**	**व्रश्च**	**व्रश्चितुम्**
		सह	**सहितुम् / सोढुम्**
त्रुट्	**त्रुटितुम्**	**सृज्**	**स्रष्टुम्**
दा	**दातुम्**	**हृ**	**हर्तुम्**

ಣ್ವುಲ್ ಪ್ರತ್ಯಯ :

ತುಮನ್ ಪ್ರತ್ಯಯಾಂತ ಪದವು ಕೊಡುವ ಅರ್ಥವನ್ನೇ **ण्वुल् (वु)** ಪ್ರತ್ಯಯಾಂತ ಪದವು ಕೊಡುತ್ತದೆ.

ಉದಾರಣೆಗಳು : **कृष्णं दृष्टुं याति** - ಕೃಷ್ಣನನ್ನು ನೋಡಲು ಹೋಗುತ್ತಾನೆ.

कृष्णं दर्शकः याति -ಎಂದೂ ಹೇಳಬಹುದು.

दर्शक ಇದು **दृश** ಧಾತುವಿನ **ण्वुलन्त** ರೂಪ. ಇಲ್ಲಿ **दृश् + वु = दर्श + अक**[1]**= दर्शक** ಎಂದಾಗುತ್ತದೆ. ಇದೇ ರೀತಿ ಸಮಸ್ತ ಣ್ವುಲಂತಗಳು ಸಿದ್ಧಿಸುತ್ತವೆ.

---

[1] ವಕಾರಕ್ಕೆ **अक** ಆದೇಶ ಬಂದಿದೆ.

Rarest Archiver

VII ಭೂತ ಕೃದ್ವಾಚಕ , ಲ್ಯಬಂತ ಅಥವಾ ಪೂರ್ವಕಾಲ ಧಾತು ಸಾಧಿತ ಅವ್ಯಯ (Indeclinable past participle or Gerund or Absolutive):

ಸಮಾನ ಕರ್ತೃವನ್ನು ಹೊಂದಿರುವ ಧಾತ್ವರ್ಥಗಳಲ್ಲಿ ಪೂರ್ವಕಾಲ ವೃತ್ತಿ ವಾಚಕ[1] ಧಾತುವಿಗೆ **क्त्वा (त्वा)** ಪ್ರತ್ಯಯವು ಬರುತ್ತವೆ. 'ಕ್ತ್ವಾ' ಪ್ರತ್ಯಯಾಂತ ಪದದಲ್ಲಿ ಬೋಧಿಸಲ್ಪಟ್ಟ ಕ್ರಿಯೆಯು ಮತ್ತೊಂದು ಕ್ರಿಯಾವಾಚಕ ಶಬ್ದವನ್ನು ಅನಿವಾರ್ಯವಾಗಿ ಬಯಸುತ್ತದೆ. ಆದ್ದರಿಂದ ಈ **क्त्वा** ಪ್ರತ್ಯಯಾಂತ ಶಬ್ದಗಳಿಗೆ 'ಪೂರ್ವಕಾಲ ಧಾತು ಸಾಧಿತ ಅವ್ಯಯಗಳು' ಅಥವಾ ಭೂತಕೃದ್ವಾಚಕಗಳು ಎಂದೂ ಸಂಜ್ಞೆಗಳಿವೆ. ಇವು ಕ್ರಿಯಾವಿಶೇಷಣಗಳು (Adverbs)

ಉದಾಹರಣೆ : **एतत् श्रुत्वा सः कथयति** - ಇದನ್ನು ಕೇಳಿ ಅವನು ಹೇಳುತ್ತಾನೆ.

ज्ञात्वा सः गतः - ತಿಳಿದುಕೊಂಡು ಅವನು ಹೋದನು.

ಇಲ್ಲಿ **श्रु** ಮತ್ತು **ज्ञा** ಧಾತುಗಳಿಗೆ **श्रु + त्वा = श्रुत्वा** **ज्ञा + त्वा = ज्ञात्वा** ಎಂದು **क्त्वा** ಪ್ರತ್ಯಯ ಬಂದಿದೆ.

ಈ **क्त्वा (त्वा)** ಪ್ರತ್ಯಯವನ್ನು ಧಾತುಗಳಿಗೆ ಜೋಡಿಸುವಾಗ ಕರ್ಮಣಿ ಭೂತಕೃದಂತದ ಕೃತ್ ಪ್ರತ್ಯಯವಾದ **क्त (त)** ವನ್ನು ಧಾತುಗಳಿಗೆ ಜೋಡಿಸುವಾಗ ಹೇಳಲ್ಪಟ್ಟ ನಿಯಮಗಳನ್ನೇ ಅನುಸರಿಸಬೇಕು.

ಯಾವುದೇ ಧಾತುವು ಉಪಸರ್ಗವನ್ನು ಹೊಂದಿದ್ದರೆ **क्त्वा** ಕ್ಕೆ **ल्यप् (य)** ಆದೇಶ ಬರುತ್ತದೆ.

ಉದಾಹರಣೆ ; **ज्ञा + त्वा = ज्ञात्वा** **वि + ज्ञात्वा = विज्ञा + य = विज्ञाय**

नम् + त्वा = नत्वा **प्रनम् + त्वा = प्रणम् + य = प्रणम्य**

ಕ್ರಿಯಾವಾಚಕ ಪದದೊಡನೆ ಸಮಾನಕರ್ತೃಕತ್ವವನ್ನು ಹೊಂದಿದ ಪೂರ್ವಕಾಲ ವೃತ್ತಿಸೂಚಕ **क्त्वा** ಪ್ರತ್ಯಯಾಂತ ಶಬ್ದಗಳು ವಾಕ್ಯದಲ್ಲಿ ಒಂದಕ್ಕಿಂತ ಹೆಚ್ಚಿಗೆ ಕೂಡ ಬರಬಹುದು -

ಉದಾಹರಣೆ : **इत्यालोच्य तेन ग्रामं गत्वा विश्वासं कृत्वा दधिकर्णो नाम बिडालः यत्नेनानीय मांसाहारं दत्वा स्वकन्धरे स्थापितः** - ಹೀಗೆ **ಆಲೋಚಿಸಿ** ಅದರಿಂದ ಹಳ್ಳಿಗೆ **ಹೋಗಲ್ಪಟ್ಟು** ವಿಶ್ವಾಸವನ್ನು **ಹುಟ್ಟಿಸಿ** ದಧಿಕರ್ಣ ಎನ್ನುವ ಬೆಕ್ಕು ಯತ್ನದಿಂದ **ತರಲ್ಪಟ್ಟು** ಮಾಂಸಾಹಾರವು **ಕೊಡಲ್ಪಟ್ಟು** ಅದರ ಗುಹೆಯಲ್ಲಿ **ಸ್ಥಾಪಿಸಲ್ಪಟ್ಟಿತು.**

ಉದಾಹರಣೆಗೆ **क्त्वा** ಪ್ರತ್ಯಯದೊಡನೆ ಕೆಲವು ಧಾತುಗಳು -

ಧಾತು	ಭೂ. ಕೃದ್ವಾಚಕ	ಅರ್ಥ	ಧಾತು	ಭೂ. ಕೃದ್ವಾಚಕ	ಅರ್ಥ
ज्ञा	**ज्ञात्वा**	ತಿಳಿದು	**जि**	**जित्वा**	ಗೆದ್ದು
स्था	**स्थित्वा**	ನಿಂತು	**नु**	**नुत्वा**	ಹೊಗಳಿ
दा	**दत्वा**	ಕೊಟ್ಟು	**पू**	**पूत्वा** / **पवित्वा**	ಪವಿತ್ರಗೊಂಡು

[1] **समानकर्तृकयोः पूर्वकाले** (ಪಾ III, 4, 21)

Rarest Archiver

कृ	**कृत्वा**	ಮಾಡಿ	**शास्**	**शिष्ट्वा**	ಆಳಿ
तॄ	**तीर्त्वा**	ದಾಟಿ	**बुध्**	**बुद्ध्वा**	ತಿಳಿದು
पॄ	**पूर्त्वा**	ತುಂಬಿ	**दृश्**	**दृष्ट्वा**	ನೋಡಿ
त्रै	**त्रात्वा**	ರಕ್ಷಿಸಿ	**वच्**	**उक्त्वा**	ಹೇಳಿ
छो	**छात्वा** / **छित्वा**	ತುಂಡುಮಾಡಿ	**वह्**	**ऊढ्वा**	ಹೊತ್ತು
			शी	**शयित्वा**	ಮಲಗಿ
अद्	**जग्ध्वा**	ತಿಂದು	**जागृ**	**जागरित्वा**	ಎಚ್ಚತ್ತು

तृष् , मृष्, कृष्, ऋत् ಧಾತುಗಳು **क्त्वा** ಪೂರ್ವದಲ್ಲಿ ಇಡಾಗಮವನ್ನು ಹೊಂದಿದ್ದರೂ ಇವುಗಳ ಉಪಾಂತ್ಯ ಋಕಾರಕ್ಕೆ ಗುಣವು ವಿಕಲ್ಪವಾಗಿ ಬರುತ್ತದೆ.

ಉದಾಹರಣೆ : **तृष्** **तृपित्वा** **तर्पित्वा**

कृष् **कृषित्वा** **कर्षित्वा**

ಹತ್ತನೇ ಗಣದ ಧಾತುಗಳ ಮತ್ತು ಪ್ರೇರಣಾರ್ಥಕ ಧಾತುಗಳ **अय** ಇಲ್ಲಿ ಲೋಪಗೊಳ್ಳುವುದಿಲ್ಲ ಮತ್ತು ಸಮಸ್ತ ಸೇಟ್ ಧಾತುಗಳೂ ಪ್ರತ್ಯಯಾಂತ ಧಾತುಗಳೂ ಇಡಾಗಮವನ್ನು ಪಡೆಯುತ್ತವೆ.

ಉದಾಹರಣೆ : **चुर्- चोरयित्वा** **नृत् - नर्तित्वा**

कथ - कथयित्वा **बुध् - बोधय (प्रे . धा) बोधयित्वा**

बुबोधिष् - बुबोधिषित्वा **बोबुध् - बोबुधित्वा**

भञ्ज्, रञ्ज्, सञ्ज्, ಮುಂತಾದ ಉಪಾಂತ್ಯದಲ್ಲಿ ಅನುನಾಸಿಕವುಳ್ಳ ಜಕಾರಾಂತ ಧಾತುಗಳ ಮತ್ತು **तञ्च्** ಧಾತುವಿನ ಅನುನಾಸಿಕವು ವೈಕಲ್ಪಿಕವಾಗಿ ಲೋಪಗೊಳ್ಳುತ್ತದೆ.

ಉದಾಹರಣೆ : **भञ्ज्** **भङ्क्त्वा** ಅಥವಾ **भक्त्वा**

तञ्च् **तङ्क्त्वा** ಅಥವಾ **तक्त्वा**

ಉಪಸರ್ಗಯುಕ್ತ ಧಾತುವಿನ ಮೇಲೆ ಬರುವ **क्त्वा** ಪ್ರತ್ಯಯದ ಮೇಲೆ **ल्यप् (य)** ಆದೇಶ ಬರುವಾಗ ಧಾತುವು ಹ್ರಸ್ವಸ್ವರಾಂತ್ಯವಾಗಿದ್ದಲ್ಲಿ ಲ್ಯಪ್ ಪೂರ್ವದಲ್ಲಿ **तुक् (त्)** ಆಗಮಿಸುತ್ತದೆ.

ಉದಾಹರಣೆ :

ಧಾತು **क्त्वा** **ल्यप्** **तुक्** **ल्यप्**

अधि + इ + त्वा = अधी + य = अधी + त + य = अधीत्य = ಕಲಿತುಕೊಂಡು

प्रति + श्रु + त्वा = प्रतिश्रु + य = प्रतिश्रु + त् + य = प्रतिश्रुत्य ತಿರುಗಿ ಕೇಳಿ

ಹೀಗೆಯೇ **निस् + चि = निश्चित्य** = ನಿಶ್ಚಯಿಸು

Rarest Archiver

सम् + कृ = संस्कृत्य = ಸಂಸ್ಕರಿಸಿ

परा + जि = पराजित्य = ಪರಾಜಯಿಸಿ

ದೀರ್ಘಸ್ವರಾಂತ ಅಥವಾ ವ್ಯಂಜನಾಂತ ಧಾತುಗಳಿಗೆ ಈ ತುಗಾಗಮದ ನಿಯಮವು ಅನ್ವಯಿಸುವುದಿಲ್ಲ.

ಉದಾಹರಣೆ :

आ + दा = आदाय **अनु + भू = अनुभूय**

वि + ली = विलीय **आ + ह्वे = आहूय**

वि + कृ = विकीर्य **आ + पृ = आपूर्य**

आ + प्रच्छ् = आपृच्छ्य **प्र + वच् = प्रोच्य**

वि + ग्रह् = विगृह्य **वि + बुध् = विबुध्य** ಮುಂತಾದವುಗಳು.

सन् ಧಾತುವನ್ನು ಬಿಟ್ಟು ಇನ್ನುಳಿದ ೮ನೇ ಗಣದ ಅನುನಾಸಿಕಾಂತ ಧಾತುಗಳ ಮತ್ತು **मन्, वन्, हन्** ಧಾತುಗಳ ಅನುನಾಸಿಕವು ಲೋಪಗೊಳ್ಳುತ್ತದೆ. **गम् , नम्, रम्, यम्** ಧಾತುಗಳಿಗೆ ಈ ನಿಯಮವು ಐಚ್ಛಿಕ.

ಉದಾಹರಣೆ :

अव + मन् = अवमत्य **वि + रम् = विरत्य / विरम्य**

प्र + नम् = प्रणत्य / प्रणम्य **सम् + यम् = संयत्य / संयम्य**

सन्, जन्, खन् ಧಾತುಗಳು...

प्र + सन् = प्रस्य / प्रसाय

प्र + जन् = प्रजन्य / प्रजाय

नि + खन् = निखन्य / निखाय ಎಂದಾಗುತ್ತವೆ.

ಹತ್ತನೇ ಗಣದ ಮತ್ತು ಪ್ರೇರಣಾರ್ಥಕ ಧಾತುಗಳ **अय** ದ **अ** ವು ತನ್ನ ಉಪಾಂತ್ಯದಲ್ಲಿ ದೀರ್ಘಸ್ವರವಿದ್ದದ್ದಾದರೆ ಲೋಪಗೊಳ್ಳುವುದು.

ಉದಾಹರಣೆ : **प्र + बोधय = प्रबोध्य** **आ + नायय = आनाय्य**

वि + कारय = विकार्य

ಹ್ರಸ್ವ ಸ್ವರವಿದ್ದರೆ **अय** ಆಗಿ ಉಳಿಯುವುದು.

ಉದಾಹರಣೆ : **वि + गणय = विगणय्य** **प्र + नमय = प्रणमय्य** ಎಂದು ಮುಂತಾಗಿ.

ಣಮುಲಂತ ಭೂತ ಕೃದ್ವಾಚಕಾವ್ಯಯ :

ಪೌನಃಪುನ್ಯಾರ್ಥವು ತೋರುವಾಗ ಪೂರ್ವಕಾಲವೃತ್ತಿಯಾದ ಧಾತುವಿನ ಮೇಲೆ **णमुल् (अम्)**[1] ಪ್ರತ್ಯಯವು ಬರುತ್ತದೆ. ಆಗ **क्त्वा** ಪ್ರತ್ಯಯವು ಬರಬೇಕಾಗಿಲ್ಲ. ಣಮುಲಂತ ಶಬ್ದವು ಪ್ರಯೋಗದಲ್ಲಿ ನಿತ್ಯವಾಗಿ ದ್ವಿರುಕ್ತಗೊಳ್ಳುವುದು.

Rarest Archiver

ಈ ಣಮುಲ್ (ಅಮ್) ಪ್ರತ್ಯಯವನ್ನು ಧಾತುಗಳಿಗೆ ಜೋಡಿಸುವಾಗ ಧಾತುಗಳು ಕರ್ಮಣಿ ತೃತೀಯಭೂತದ (ಲುಙ್ - ಲಕಾರ) ದಲ್ಲಿ ಪ್ರತ್ಯಯಗಳನ್ನು ಹೊಂದುವಾಗ ಒಳಪಡುವ ಪ್ರಕ್ರಿಯೆಗಳನ್ನು ಅನುಸರಿಸುತ್ತವೆ. ಆದರೆ ಧಾತುಪೂರ್ವದಲ್ಲಿ ಅಡಾಗಮ ಮಾತ್ರ ಬರುವುದಿಲ್ಲ.

ಉದಾಹರಣೆ :

ಧಾತು	ಣಮುಲಂತಾವ್ಯಯ	ಧಾತು	ಣಮುಲಂತಾವ್ಯಯ
दा	**दायम्**	**नी**	**नीयम्**
भू	**भावम्**	**श्रु**	**श्रावम्**
भुज्	**भोजम्**	**गम्**	**गामम्**
ध्यै	**ध्यायम्**		

ಎಂದು ಮುಂತಾಗಿ.

ಣಮುಲಂತಾವ್ಯಯ ಪ್ರಯೋಗಕ್ಕೆ ಉದಾಹರಣೆಗಳು :

ध्यायं ध्यायं नमति - ಧ್ಯಾನಿಸುತ್ತಾ ಧ್ಯಾನಿಸುತ್ತಾ ನಮಿಸುತ್ತಾನೆ.

स्मारं स्मारं हसति - ನೆನಪಿಸಿ ನೆನಪಿಸಿಕೊಂಡು ನಗುತ್ತಾಳೆ.

धावं धावं श्राम्यति - ಓಡಿ ಓಡಿ ದಣಿಯುತ್ತಾನೆ.

श्रावं श्रावं जुगुप्सते - ಕೇಳಿ ಕೇಳಿ ಬೇಸರಪಡುತ್ತಾನೆ.

ಪೌನಃ ಪುನ್ಯಾರ್ಥವು ಇಲ್ಲದಿದ್ದಾಗ **अग्र , प्रथम , पूर्व** ಪದಗಳು ಉಪಪದವಾಗಿರುವಾಗ ಸಮಾನ ಕರ್ತೃತ್ವವುಳ್ಳ ಪೂರ್ವಕಾಲವಾಚಕ ಧಾತುವಿನ ಮೇಲೆ **क्त्वा** ಪ್ರತ್ಯಯಕ್ಕೆ ವಿಕಲ್ಪವಾಗಿ ಣಮುಲ್ ಪ್ರತ್ಯಯ ಬರುತ್ತದೆ.

ಉದಾಹರಣೆ :

अग्रे भुक्त्वा व्रजति ಅಥವಾ **अग्रे भोजं व्रजति** ಮೊದಲು ಉಂಡು ಹೋಗುತ್ತಾನೆ.

ಹೀಗೆಯೇ **प्रथमं भोजम्** ಅಥವಾ **पूर्वं भोजम्** ಮುಂತಾದವುಗಳು.

ಅಭ್ಯಾಸಕ್ಕನುಕೂಲವಾಗುವಂತೆ ಕರ್ತರಿ ವರ್ತಮಾನ ಕೃದಂತ, ಕರ್ಮಣಿ ಭೂತಕೃದಂತ, ಲ್ಯಬಂತ, ತುಮನ್ನಂತ ಮತ್ತು ಕರ್ಮಣಿ ವಿಧ್ಯರ್ಥಕೃದಂತಗಳಲ್ಲಿ ಕೆಲವು ಧಾತುಗಳು - -

[1] **णमुल्** ದಲ್ಲಿ ಇತ್ಸಂಜ್ಞೆಗಳನ್ನು ತೆಗೆದರೆ ಉಳಿಯುವುದು **अम्** ಮಾತ್ರ.

Rarest Archiver

ಧಾತು ಮತ್ತು ಅರ್ಥ (ಗಣ ಪದ)	ಕರ್ತರಿ ಪ.	ಕರ್ಮಣಿಭೂತ ಕೃದಂತ	ಲ್ಯಬಂತ ಕೃದಂತ	ತುಮನ್ನಂತ ಅವ್ಯಯ	ಕರ್ಮಣಿ ವಿಧ್ಯರ್ಥ ಅವ್ಯಯ ಕೃದಂತ
अक्ष् (೧ ಪ.) ವ್ಯಾಪಿಸು	अक्षत्	अष्ट	अष्ट्वा अक्षित्वा	अष्टुम् अक्षितुम्	अष्टव्य, अक्षणीय अक्षितव्य, अक्ष्य
अक्ष् (೫ ಪ.) ವ್ಯಾಪಿಸು	अक्षणुवत्	अष्ट	अजित्वा अञ्जित्वा अक्त्वा	अष्टुम् अक्षितुम्	अञ्जितव्य अजितव्य अङ्क्तव्य अञ्जनीय अजनीय, अङ्ग्य , अग्य
अर्ज् (೧ ಪ.) ಗಳಿಸು	अर्जत्	अर्जित	अर्जित्वा (उपार्ज्य)	अर्जितुम्	अर्जितव्य अर्जनीय, अर्ज्य
अद् (೨ ಪ.) ತಿನ್ನು	अदत्	जग्ध अन्न	जग्ध्वा (प्रजग्ध्य)	अत्तुम्	अत्तव्य अर्जनीय, आर्ज्य
अश् (೯ ಪ.) ತಿನ್ನು	अश्नत्	अशित	अशित्वा	अशितुम्	अशितव्य अशनीय, अश्य
अस् (೪ ಪ.) ಒಗೆ	अस्यत्	अस्त	असित्वा अस्त्वा (प्रास्य)	असितुम्	असितव्य, असनीय , अस्य
अर्ह् (೧೦ ಪ.) ಯೋಗ್ಯನಾಗು	अर्हयत् अर्हयमाण	अर्हित	अर्हयित्वा	अर्हयितुम्	अर्हयितव्य अर्हणीय, अर्ह्य
आप् (೫ ಪ.) ಪಡೆ	आप्नुवत्	आप्त	आप्त्वा (प्राप्य)	आप्तुम्	आप्तव्य, आपनीय, आप्य
आस् (೨ ಆ.) ಕೂಡು	आसान	आसित	आसित्वा	आसितुम्	आसितव्य आसनीय, आस्य
इन्ध् (೭ ಆ.) ಹೊತ್ತಿಸು	इन्धान	इद्ध	इन्धित्वा	इन्धितुम्	इन्धितव्य, इन्धनीय, इन्ध्य
उन्द् (೭ ಪ.) ಒದ್ದೆಯಾಗು	उन्दत्	उत्त उन्न	उन्दित्वा	उन्दितुम्	उन्दितव्य, उन्दनीय, उन्द्य

Rarest Archiver

ऊर्णु (೨ ಉ.) ಮುಚ್ಚು	ऊर्णुवत् ऊर्णुवान	ऊर्णुत	ऊर्णुवित्वा ऊर्णवित्वा	ऊर्णुवितुम् ऊर्णवितुम्	ऊर्णुवितव्य ऊर्णवितव्य ऊर्णुनीय ऊर्णनीय, ऊर्ण्य
ऋ (೧ ಪ.) ಹೋಗು , ಕೊಡು	ऋच्छत्	ऋण ऋत	ऋत्वा (समृत्य)	अर्तुम्	अर्तव्य, आर्य अरणीय , अर्य
ऋ (೩ ಪ.) ಹೋಗು	इयर्त्	ऋत	ऋत्वा (समृत्य)	अर्तुम्	अर्तव्य, अरणीय अर्य , आर्य
ऋज् (೧ ಆ.) ಹೋಗು, ಪಡೆ	अर्जमान	अर्जित ऋजित	अर्जित्वा	अर्जितुम्	अर्जितव्य, अर्जनीय, ऋज्य
कम् (೧ ಆ.) ಬಯಸು	कामयमान	कान्त	कमित्वा कामयित्वा कान्त्वा (संकाम्य)	कमितुम् कामयितुम्	कामयितव्य कमितव्य कमनीय, काम्य
कुप् (೪ ಪ.) ಕೋಪಿಸು	कुप्यत्	कुपित	कुपित्वा कोपित्वा	कोपितुम्	कोपितव्य, कोपनीय, कुप्य
कृ (೮ ಉ.) ಮಾಡು	कुर्वत् कुर्वाण	कृत	कृत्वा	कर्तुम्	कर्तव्य, करणीय, कार्य
कृत् (೬ ಪ.) ಕಡಿ	कृन्तत्	कृत्त	कर्तित्वा उत्कृत्य	कर्तितुम्	कर्तितव्य, कर्तनीय, कर्त्य
कृ (೬ ಪ.) ಹರಡು	किरत्	कीर्ण	करित्वा करीत्वा	करितुम्	करितव्य, कार्य करणीय , करीतव्य
कृत् (೧೦ ಉ) ಕೀರ್ತಿಸು	कीर्तयत् कीर्तयमान	कीर्तित	कीर्तयित्वा (संकीर्त्य)	कीर्तयितुम्	कीर्तयितव्य कीर्तनीय, कीर्त्य
क्रम् (೧ ಉ.) ಮುನ್ನಡೆ	क्रामत् क्रममाण	क्रान्त	क्रमित्वा क्रन्त्वा क्रान्त्वा (संक्रम्य)	क्रमितुम्	क्रमितव्य, क्रमणीय, क्रम्य
क्री (೯ ಉ.) ಕೊಂಡುಕೊಳ್ಳು	क्रीणत् क्रीणान	क्रीत	क्रीत्वा (विक्रीय)	क्रेतुम्	क्रेतव्य, क्रय्य क्रेय, क्रयणीय

Rarest Archiver

क्लम् (೪ ಪ.) ಬಳಲು	क्लामत्, क्लाम्यत्	क्लान्त	क्लमित्वा, क्लान्त्वा	क्लमितुम्	क्लमितव्य, क्लमनीय, क्लम्य
क्लिश् (೯ ಪ.) ನೋಯು	क्लिश्नत्	क्लिशित	क्लिशित्वा	क्लेशितुम्	क्लेशितव्य, क्लेशनीय, क्लेश्य
क्षम् (೪ ಪ.) ಕ್ಷಮಿಸು	क्षाम्यत्	क्षान्त	क्षमित्वा, क्षान्त्वा	क्षन्तुम्, क्षमितुम्	क्षमितव्य, क्षम्य, क्षन्तव्य, क्षमनीय
क्षै (೧ ಪ.) ಕ್ಷಯಿಸು	क्षायत्	क्षाम	क्षान्त्वा	क्षातुम्	क्षातव्य, क्षयणीय, क्षेय
खन् (೧ ಉ.) ಅಗೆ	खनत्, खनमान	खात	खनित्वा, खात्वा	खनितुम्	खनितव्य, खननीय, खन्य
खिद् (೬ ಪ.) ಖೇದಗೊಳ್ಳು	खिन्दत्	खिन्न	खित्त्वा (परिखिद्य)	खेत्तुम्	खेत्तव्य, खेदनीय, खेद्य
गुप् (೧ ಪ.) ರಕ್ಷಿಸು	गोपायत्	गोपायित, गुप्त	गोपायित्वा, गोपित्वा, गुपित्वा, गुप्त्वा	गोपायितुम्, गोपितुम्, गोप्तुम्	गोपायितव्य, गोपितव्य, गोप्तव्य, गोपनीय, गोप्य
गुह् (೧ ಉ.) ಅಡಗಿಸು	गूहत्, गूहमान	गूढ	गुहित्वा, गूहित्वा, गूढ्वा	गूहितुम्, गोढुम्	गूहीतव्य, गोढव्य, गूहनीय, गुह्य
घ्रा (೧ ಪ.) ಮೂಸು	जिघ्रत्	घ्रात, घ्राण	घ्रात्वा (विघ्राय)	घ्रातुम्	घ्रातव्य, घ्राणीय, घ्रेय
आ + चम् (೧ ಪ.) ಆಚಮನ ಮಾಡು	आचामत्	आचान्त	आचम्य	आचमितुम्	आचमितव्य, आचमनीय, आचाम्य
चित्(೧೦ ಆ.) ಚಿಂತನೆಮಾಡು	चेतयमान	चेतित	चेतयित्वा	चेतयितुम्	चेतयितव्य, चेतनीय, चेत्य
छो (೪ ಪ.) ಕತ್ತರಿಸು	छ्यत्	छित, छात	छात्वा, छित्वा	छातुम्	छातव्य, छानीय, छेय

Rarest Archiver

जन्(೪ ಆ.)	जायमान	जात	जानित्वा	जनितुम्	जनितव्य,
ಹುಟ್ಟು					जननीय, जन्य
जागृ (೨ ಪ.)	जाग्रत्	जागरित	जागरित्वा	जागरितुम्	जागरितव्य
ಜಾಗೃತನಾಗು			(प्रजागर्य)		जागरणीय, जागर्य
जि (೧ ಪ.)	जयत्	जित	जित्वा	जेतुम्	जेतव्य, जयनीय
ಗೆಲ್ಲು			(विजित्य)		जेय, जय्य
जृ (೪ ಪ.)	जीर्यत्	जीर्ण	जरित्वा	जरीतुम्	जरि (री) तव्य
ಜೀರ್ಣಗೊಳ್ಳು			जरीत्वा	जरितुम्	जरणीय, जार्य
ज्ञप (೧೦ ಉ.)	ज्ञपयत्	ज्ञपित	ज्ञपयित्वा	ज्ञपयितुम्	ज्ञपयितव्य
ತಿಳಿ	ज्ञपयमान	ज्ञप्त	(विज्ञपय्य)		ज्ञपनीय, ज्ञप्य
ज्ञा (೯ ಉ.)	जानत्	ज्ञात	ज्ञात्वा	ज्ञातुम्	ज्ञातव्य,
ತಿಳಿ	जानान		(विज्ञाय)		जाननीय, ज्ञेय
डी(೧,೪, ಆ.)	डयमान	डयित	डयित्वा	डयितुम्	डयितव्य,
ಹಾರು					डयनीय, डय्य
तक्ष् (೧ ಪ.)	तक्षत्	तष्ट	तक्षित्वा	तक्षितुम्	तक्षितव्य, ताक्ष्य
ಕಟ್ಟು			तष्ट्वा		तक्षणीय, तष्टव्य
			(सन्तक्ष्य)		
तन् (ಉ.)	तन्वत्	तत	तनित्वा	तनितुम्	तनितव्य,
ಹರಡು	तन्वान		तत्वा		तननीय, तान्य
			(वितत्य)		
तप् (೧೦ ಉ.)	तापयत्	तापित	तापयित्वा	तापयितुम्	तापयितव्य
ಸುಡು	तापयमान्		(सन्ताप्य)		तापनीय, तप्य
तम् (೪ ಪ.)	ताम्यत्	तान्त	तमित्वा	तमितुम्	तमितव्य,
ಬಯಸು			तान्त्वा		तमनीय, तम्य
तिज् (೧ ಆ.)	तेजमान	तितिक्षित	तितिक्षित्वा	तितिक्षितुम्	तितिक्षितव्य
ಸಹಿಸು					तितिक्षणीय
					तितिक्ष्य
तुष् (೪ ಪ.)	तुष्यत्	तुष्ट	तुष्ट्वा	तोष्टुम्	तोष्टव्य,
ಸಂತೋಷಿಸು					तोषणीय, तोष्य

Rarest Archiver

तृप् (೧ ಪ.)	तर्पत्	तृपित	तर्पित्वा	तर्पितुम्	तर्पितव्य,
ತೃಪ್ತಿಪಡು					तर्पणीय, तृप्य
तृप् (೪ ಪ.)	तृप्यत्	तृप्त	तर्पित्वा	तर्प्तुम्	तर्पितव्य, तर्प्तव्य
ತೃಪ್ತಿಪಡು			तृप्त्वा	तृप्तुम्	तृप्तव्य, तृप्य
तृप् (೧೦ ಉ.)	तर्पयत्	तर्पित	तर्पयित्वा	तर्पयितुम्	तर्पयितव्य,
ತೃಪ್ತಿಪಡು	तर्पयमान				तर्पणीय, तृप्य
तर्ज् (೧೦ ಪ.)	तर्जयत्	तर्जित	तर्जयित्वा	तर्जयितुम्	तर्जयितव्य,
ಬಯ್ಯು, ಹೆದರಿಸು					तर्जनीय, तर्ज्य
त्रस् (೧ ಪ.)	त्रसत्	त्रस्त	त्रसित्वा	त्रसितुम्	त्रसितव्य,
ಹೆದರು			(सन्त्रस्य)		त्रसनीय, त्रस्य
त्रस् (೪ ಪ.)	त्रस्यत्	त्रस्त	त्रसित्वा	त्रसिसुम्	त्रसितव्य,
ಹೆದರು			(सन्त्रस्य)		त्रसनीय, त्रस्य
त्रुट् (೬ ಪ.)	त्रुटत्	तृटित	त्रुटित्वा	त्रुटितुम्	त्रुटितव्य,
ಕಡಿ ; ಮುರಿ					त्रुटनीय, त्रुट्य
त्रुट् (೪ ಪ.)	त्रुट्यत्	तृटित	त्रुटित्वा	त्रुटितुम्	त्रुटितव्य,
ಕಡಿ ; ಮುರಿ					त्रुटनीय, त्रुट्य
त्रै (೧ ಆ.)	त्रायमाण	त्रात	त्रात्वा	त्रातुम्	त्रातव्य,
ರಕ್ಷಿಸು		त्राण			त्रयणीय, त्रेय
त्वर् (೧ ಆ.)	त्वरमाण	त्वरित	त्वरित्वा	त्वरितुम्	त्वरितव्य,
ಗಡಬಡಿಸು		तूर्ण			त्वरणीय, त्वार्य
दंश् (೧ ಪ.)	दंशत्	दष्ट	दष्ट्वा	दष्टुम्	दष्टव्य,
ಕಚ್ಚು					दंशनीय, दंश्य
दंश् (೧೦ ಆ.)	दंशमान	दंशित	दंशयित्वा	दंशयितुम्	दंशयितव्य,
ಕಚ್ಚು					दंशनीय, दंश्य
[illegible]म् (೪ ಪ.)	दाम्यत्	दमित	दमित्वा	दमितुम्	दमितव्य,
[illegible]ಸು		दान्त	दान्त्वा		दमनीय, दम्य
दिव् (೪ ಪ.)	दीव्यत्	द्यून्	देवित्वा	देवितुम्	देवितव्य,
ದ್ಯೂತವಾಡು		द्यूत	द्यूत्वा		देवनीय, देव्य

Rarest Archiver

दृप् (೧ ಪ.)	दर्पत्	दृपित	दर्पित्वा	दर्पितुम्	दर्पितव्य,
ಬೆಳಗಿಸು			दृप्त्वा		दर्पणीय, दृप्य
दृप् (೪ ಪ.)	दृप्यत्	दृप्त	दर्पित्वा	दर्पितुम्	दर्पितव्य, दर्प्तव्य
ಗರ್ವಗೊಳ್ಳು			दृप्त्वा		दृप्तव्य, दृप्य
दृप् (೧೦ ಉ.)	दर्पयत्	दर्पित	दर्पयित्वा	दर्पयितुम्	दर्पयितव्य,
ಬೆಳಗು					दर्प्तव्य, दृप्तव्य
दो (೪ ಪ.)	द्यत्	दित	दित्वा	दातुम्	दातव्य,
ತುಂಡುಮಾಡು			(अवदाय)		दानीय, देय
धा (೩ ಉ.)	दधत्	हित	हित्वा	धातुम्	धातव्य,
ಇಡು ; ಹೇರು	दधान		(निधाय)		धानीय , धेय
धाव (೧ ಉ.)	धावत्	धावित	धावित्वा	धावितुम्	धावितव्य,
ಓಡು ; ತೊಳೆ	धावमान	धौत	धौत्वा		धावनीय , धेव्य
धू (೬ ಪ.)	धुवत्	धूत	धूत्वा	धुवितुम्	धुवितव्य, धुवनीय
ಅಲುಗಾಡು ; ತೊಡಗು			(विधूय)		धाव्य
धू (೫ ಉ.)	धुन्वत्	धूत	धूत्वा	धोतुम्	धवितव्य, धोतव्य
ಅಲುಗಾಡು ; ತೊಡಗು	धुन्वान		(विधूय)	धवितुम्	धवनीय, धाव्य
ध्यै (೧ ಪ.)	ध्यायत्	ध्यात	ध्यात्वा	ध्यातुम्	ध्यातव्य,
ಧ್ಯಾನಮಾಡು					ध्यानीय, ध्येय
नद् (೧ ಪ.)	नदत्	नदित	नदित्वा	नदितुम्	नदितव्य,
ಶಬ್ದಮಾಡು					नदनीय, नाद्य
नम् (೧ ಪ.)	नमत्	नत	नत्वा	नन्तुम्	नन्तव्य,
ನಮಿಸು			(प्रणम्य)		नमनीय, नम्य
नश् (೪ ಪ.)	नश्यत्	नष्ट	नशित्वा	नशितुम्	नशितव्य,
ನಾಶವಾಗು			नष्ट्वा	नंष्टुम्	नशनीय, नाश्य
			नंष्ट्वा		
नु (೨ ಪ.)	नुवत्	नुत	नुत्वा	नवितुम्	नवितव्य,
ಹೊಗಳು					नवनीय, नाव्य

Rarest Archiver

नृत्(४ प.) ನರ್ತಿಸು	नृत्यत्	नृत्त	नर्तित्वा	नर्तितुम्	नर्तितव्य, नर्त्य नर्तनीय, नृत्य
पच् (१ प.) ಅಡಿಗೆ ಮಾಡು	पचत्	पक्व	पक्त्वा	पक्तुम्	पक्तव्य, पाक्य पचनीय, पाच्य
पण् (१ आ.) ಹೊಗಳು	पणायत् पणायमान	पणायित पणित	पणायित्वा पणित्वा	पणायितुम् पणितुम्	पणायितव्य पणितव्य, पणनीय, पणाय
पा (१ प.) ಕುಡಿ	पिबत्	पीत	पीत्वा	पातुम्	पातव्य, पानीय पेय
पुष् (१ प.) ಪೋಷಿಸು	पोषत्	पुष्ट	पुष्ट्वा	पोष्टुम्	पोष्टव्य, पोषणीय पोष्य
पुष् (९ प.) ಪೋಷಿಸು	पुष्णत्	पुष्ट	पुष्ट्वा	पोष्टुम्	पोष्टव्य, पोषणीय पोष्य
पुष् (४ प.) ಪೋಷಿಸು	पुष्यत्	पोषित पुषित	पोषित्वा पुषित्वा	पोषितुम्	पोषितव्य, पोषणीय, पोष्य
भर्त्स् (१० आ) ನಿಂದಿಸು	भर्त्सयमान	भर्त्सित	भर्त्सयित्वा (निर्भर्त्स्य)	भर्त्सयितुम्	भर्त्सयितव्य भर्त्सनीय, भर्त्स्य
भ्रंश् (४ प.) ಬೀಳು	भ्रश्यत्	भ्रष्ट	भ्रंशित्वा भ्रष्ट्वा	भ्रंशितुम्	भ्रंशितव्य, भ्रंशनीय, भ्रंश्य
भ्रम् (४ प.) ತಿರುಗಾಡು	भ्राम्यत्	भ्रान्त	भ्रमित्वा भ्रांत्वा (सम्भ्रम्य)	भ्रमितुम्	भ्रमितव्य, भ्रमणीय, भ्रम्य
भ्रस्ज् (६ उ.) ಹುರಿ	भृज्जत् भृज्जमान	भृष्ट	भृष्ट्वा (संभ्रज्य)	भ्रष्टुम् भर्ष्टुम्	भ्रज्जयितव्य, भर्ज्य भ्रज्जनीय, भ्राज्य
भ्राश् (१ आ.) ಹೊಳೆ	भ्राशमान	भ्राशित	भ्रशित्वा	भ्राशितुम्	भ्रशितव्य, भ्राशनीय, भ्राश्य
भ्राश् (४ आ.) ಹೊಳೆ	भ्राश्यमान	भ्राशित	भ्रशित्वा	भ्राशितुम्	भ्रशितव्य, भ्राशनीय, भ्राश्य

Rarest Archiver

भ्लाश् (೧ ಆ.) ಹೊಳೆ	भ्लाशमान	भ्लाशित	भ्लाशित्वा	भ्लाशितुम्	भ्लाशितव्य भ्लाशनीय, भ्लाश्य
भ्ला(೪ ಆ.) ಹೊಳೆ	भ्लाश्यमान	भ्लाशित	भ्लाशित्वा	भ्लाशितुम्	भ्लाशितव्य, भ्लाशनीय, भ्लाश्य
मद्(೪ ಪ.) ಗರ್ವಪಡು	माद्यत्	मत्त	मदित्वा	मदितुम्	मदितव्य, मदनीय, माद्य
मन्थ् (೯ ಪ.) ಕಡೆ	मथ्नत्	मथित	मथित्वा मन्थित्वा	मथितुम्	मन्थितव्य, मन्थनीय, मन्थ्य
मन् (೪ ಆ.) ತಿಳಿ	मन्यमान	मत	मत्वा	मन्तुम्	मन्तव्य, मननीय, मान्य
मस्ज् (೬ ಪ.) ಮುಳುಗು	मज्जत्	मग्न	मङ्क्त्वा (निमज्य)	मङ्क्तुम्	मङ्क्तव्य, मज्जनीय, मज्य
म्ना(೧ ಪ.) ಅಭ್ಯಸಿಸು	मनत्	म्नात	म्नात्वा (आम्नाय)	म्नातुम्	म्नातव्य म्नानीय, म्नेय
मृज् (೧ ಪ.) ಒರೆಸು	मार्जत्	मृष्ट	मृष्ट्वा मार्जित्वा	मार्जितुम् मार्ष्टुम्	मार्जितव्य, मृज्य मार्ष्टव्य, मार्जनीय
मृष् (೧ ಪ.) ಸಹಿಸು	मार्षत्	मर्षित	मर्षित्वा	मर्षितुम्	मर्षितव्य, मर्षणीय, मृष्य
यज् (೧ ಉ.) ಪೂಜಿಸು, ಯಜಿಸು	यजत् यजमान	इष्ट	इष्ट्वा	यष्टुम्	यष्टव्य, यजनीय यज्य
यत् (೧ ಆ.) ಯತ್ನಿಸು	यतमान	यत्त	यतित्वा	यतितुम्	यतितव्य, यतनीय, यत्य
यस् (೪ ಪ.) ಪ್ರಯತ್ನಿಸು	यस्यत्	यस्त	यसित्वा यस्त्वा	यसितुम्	यसितव्य, यसनीय, यस्य
युज् (೧ ಪ.) ಸಹಿಸು	योजत्	युक्त	युक्त्वा (नियुज्य)	योक्तुम्	योक्तव्य, योज्य योजनीय, योग्य
युज् (೧೦ ಉ.) ಕೂಡಿಸು	योजयत् योजयमान	योजित	योजयित्वा (नियोज्य)	योजयितुम्	योजयितव्य योजनीय, योज्य योग्य

Rarest Archiver

रञ्ज् (೧ ಉ.) ಕೆಂಪಾಗು, ರಂಜಿಸು	रजत् रञ्जमान	रक्त	रङ्क्त्वा रक्त्वा	रङ्क्तुम्	रंक्तव्य, रञ्जनीय, रञ्ज्य
रञ्ज् (೪ ಉ.) ಹೊಂದಿಕೊಳ್ಳು	रज्यत् रज्यमान	रक्त	रङ्क्त्वा रक्तवा	रङ्तुम्	रंक्तव्य, रञ्जनीय, रञ्ज्य
रि (೬ ಪ.) ಹೋಗು ; ಚಲಿಸು	रियत्	रित	रित्वा	रेतुम्	रेतव्य, रयणीय रेय
रिच् (೧ ಪ.) ಬೇರ್ಪಡು	रेचत्	रिक्त	रिक्त्वा	रेक्तुम्	रेक्तव्य, रेचनीय रेच्य
रिच् (೧೦ ಉ.) ಬೇರ್ಪಡು	रेचयत् रेचयमाण	रेचित	रेचयित्वा	रेचयितुम्	रेचयितव्य, रेचनीय, रेच्य
रु (೨ ಪ.) ಅಳು	रुवत्	रुत	रुत्वा	रवितुम्	रवितव्य, रव्य, राव्य
लग् (೧ ಪ.) ಹೊಂದು	लगत्	लग्न लगित	लगित्वा	लगितुम्	लगितव्य, लगनीय, लग्य
लष् (೧ ಉ.) ಬಯಸು	लषत् लषमाण	लषित	लषित्वा	लषितुम्	लषितव्य, लषणीय, लाष्य
लष् (೪ ಉ.) ಬಯಸು	लष्यत् लष्यमाण	लषित	लषित्वा	लषितुम्	लषितव्य, लषणीय, लाष्य
लस्ज् (೬ ಆ.) ನಾಚು	लज्जमान	लज्जित	लज्जित्वा	लज्जितुम्	लज्जितव्य, लज्जनीय, लज्ज्य
लिप् (೬ ಉ.) ಹಚ್ಚು, ಬಳಿ	लिम्पत् लिम्पमान	लिप्त	लिप्त्वा (संलिप्य)	लेप्तुम्	लेप्तव्य, लेपनीय लेप्य
लुप् (೪ ಪ.) ಲೋಪಗೊಳ್ಳು	लुप्यत्	लुप्त	लुप्त्वा लुपित्वा लोपित्वा	लोपितुम्	लोपितव्य, लोपनीय, लोप्य
लुप् (೬ ಉ.) ಲೋಪಗೊಳ್ಳು	लुम्पत् लुम्पमान	लुप्त	लुप्त्वा लुपित्वा लोपित्वा	लोप्तुम्	लोपितव्य, लोपनीय, लोप्य

Rarest Archiver

लू (೯ ಉ.) ಕತ್ತರಿಸು	लुनत् लुनान	लून	लूत्वा	लवितुम्	लवितव्य, लव्य लवनीय, लाव्य
वच् (೨ ಪ.) ಹೇಳು	ब्रुवत्	उक्त	उक्त्वा	वक्तुम्	वक्तव्य, वाच्य वचनीय, वाक्य
वप् (೧ ಉ.) ಬಿತ್ತು, ಕ್ಷೌರಮಾಡು	वपत् वपमान	उप्त	उप्त्वा (प्रोप्य)	वप्तुम्	वप्तव्य वपनीय, वाप्य
वश् (೨ ಪ.) ಬಯಸು	उशत्	उशित	वशित्वा	वशितुम्	वशितव्य वशनीय, वाश्य
वह् (೧ ಉ.) ಹೊರು	वहत् वहमान	ऊढ	ऊढ्वा (प्रोह्य)	वोढुम्	वोढव्य वहनीय, वाह्य
विज् (೩ ಉ.) ವಿಭಾಗಿಸು	वेविजत् वेविजान	विक्त	विक्त्वा	वेक्तुम्	वेक्तव्य वेजनीय, वेज्य
विज् (೬ ಆ.) ನಡುಗು	विजमान	विग्न	विजित्वा (उद्विज्य)	विजितुम्	विजितव्य विजनीय, वेग्य
विद् (೨ ಪ.) ತಿಳಿ	विदत्	वित्त विन्न	वित्वा	वेत्तुम्	वेत्तव्य वेदनीय, वेद्य
विद् (೬ ಉ.) ಪಡೆ	विन्दत् विन्दमान	वित्त विन्न	वित्वा विदित्वा वेदित्वा	वेत्तुम् वेदितुम्	वेत्तव्य, वेदितव्य वेदनीय, वेद्य
विद् (೧೦ ಆ.) ಅನಿಸು	वेदयमान	वेदित	वेदयित्वा	वेदयितुम्	वेदयितव्य वेदनीय, वेद्य
विश् (೬ ಪ.) ಪ್ರವೇಶಿಸು	विशत्	विष्ट	विष्ट्वा	वेष्टुम्	वेष्टव्य, वेश्य
वृ (೧ ಉ.) ಮುಚ್ಚು	वरत् वरमाण	वृत	वृत्वा (अनुवृत्य)	वरितुम् वरीतुम्	वरितव्य, वरणीय वरीतव्य, वृत्य, वार्य
वृ (೧೦ ಉ) ಮುಚ್ಚು	वरयत् वरयमाण	वारित	वारयित्वा (निवार्य)	वारयितुम्	वारयितव्य वारणीय, वार्य

Rarest Archiver

वृज् (೧ ಪ.) ಪರಿಹರಿಸು	वर्जत्	वृक्त	वर्जित्वा	वर्जितुम्	वर्जितव्य वर्जनीय, वृज्य
वृत् (೧ ಆ.) ಇರು	वर्तमान	वृत्त	वर्तित्वा वृत्वा	वर्तितुम्	वर्तितव्य वर्तनीय, वृत्य
वृष् (೧ ಪ.) ಮಳೆಗರೆ	वर्षत्	वृष्ट	वृष्ट्वा वर्षित्वा	वर्षितुम्	वर्षितव्य वर्षणीय, वृष्य
वे (೧ ಉ.) ನೆಯ್ಯಿ	वयत् वयमान	उत	उत्वा	वातुम्	वातव्य वानीय, वेय
व्याच् (೬ ಪ.) ಮೋಸಗೊಳಿಸು	विचत्	विचित	विचित्वा (विविच्य)	व्यचितुम्	व्यतितव्य व्यचनीय, व्याच्य
व्यध् (೪ ಪ.) ಹೊಡಿ	विध्यत्	विद्ध	विद्ध्वा (आविध्य)	व्यद्धुम्	व्यद्धव्य व्यधनीय, व्याध्य
व्ये (೧ ಉ) ಮುಚ್ಚು	व्ययत् व्ययमान	वीत	वीत्वा	व्यातुम्	व्यातव्य व्यानीय, व्येय
वृश्च् (೬ ಪ.) ತುಂಡುಮಾಡು	वृश्चत्	वृष्ण	वृश्चित्वा	वृश्चितुम् वृष्टुम्	वृश्चितव्य, वृश्चव्य व्रश्चनीय, व्रश्च्य
शद्[1] (೧ ಪ.) ಹಾಳಾಗು	शीयमान	शन्न	शत्त्वा (आशद्य)	शत्तुम्	शत्तव्य, शदनीय शाद्य
शप् (೧೦ ಉ.) ಶಪಿಸು	शपत् शपमान	शप्त	शप्त्वा	शप्तुम्	शप्तव्य, शप्य
शी (೨ ಆ.) ಮಲಗು	शयान	शयित	शयित्वा	शयितुम्	शयितव्य, शयनीय, शेय
शो (೪ ಪ.) ಮಸೆ	श्यत्	शित शात	शात्वा शित्वा (निशाय)	शातुम्	शातव्य शानीय, शेय
ಪ.) ಸು	श्रयत्	श्रित	श्रित्वा (आश्रित्य)	श्रयितुम्	श्रयितव्य श्रयनीय, श्रेय

---

[1] शद् ಧಾತುವು ಪರಸ್ಮೈಪದಿಯಾಗಿದ್ದರೂ ಲಕಾರಗಳಲ್ಲಿ ಆತ್ಮನೇಪದಿ ಪ್ರತ್ಯಯಗಳನ್ನು ಹೊಂದುತ್ತದೆ.

Rarest Archiver

शिव (೧ ಪ.) ಹೋಗು, ಉಬ್ಬು	श्वयत्	शून	श्वयित्वा	श्वयितुम्	श्वयितव्य श्वयनीय, शेय
ष्ठिव् (೧ ಪ.) ಉಗುಳು	ष्ठीवत्	ष्ठ्यूत	ष्ठेवित्वा ष्ठ्यूत्वा	ष्ठेवितुम्	ष्ठेवितव्य ष्ठेवनीय, ष्ठेव्य
ष्ठिव् (೪ ಪ.) ಉಗುಳು	ष्ठीव्यत्	ष्ठ्यूत	ष्ठेवित्वा ष्ठ्यूत्वा	ष्ठेवितुम्	ष्ठेवितव्य ष्ठेवनीय, ष्ठेव्य
सञ्ज् (೧ ಪ.) ಅಂಟಿಕೊಳ್ಳು	सजत्	सक्त	सक्त्वा (आसज्य)	सङ्क्तुम्	सङ्क्तव्य, सञ्जनीय, सज्य
सरज् (೧ ಉ) ಸಜ್ಜುಗೊಳಿಸು, ಚಲಿಸು	सज्रत् सज्रमान	सज्रित	सज्रित्वा	सज्रितुम्	सज्रितव्य सज्रनीय, सज्य
सह (೪ ಪ.) ಸಹಿಸು	सह्यत्	सहित	सहित्वा (उत्सह्य)	सहितुम्	सहितव्य सहनीय, सह्य
सह (೧೦ ಉ) ಸಹಿಸು	साहयत् साहयमान	साहित	साहयित्वा	साहयितुम्	साहयितव्य साहनीय, साह्य
सिव् (೪ ಪ.) ಹೊಲಿ	सीव्यत्	स्यूत	सेवित्वा स्यूत्वा (आसीव्य)	सेवितुम्	सेवितव्य सेवनीय, सेव्य
सृ (೧ ಪ.) ಓಡು	धावत्	सृत	सृत्वा	सर्तुम्	सर्तव्य,सरणीय सार्य, सृत्य
सो (೪ ಪ.) ಮುಕ್ತಾಯಗೊಳಿಸು	स्यत्	सित	सित्वा (अवसाय)	सातुम्	सातव्य सानीय, सेय
स्वञ्ज् (೧ ಆ.) ಅಪ್ಪಿಕೊಳ್ಳು	स्वजमान	स्वक्त	स्वङ्क्त्वा स्वक्त्वा (परिष्वज्य)	स्वङ्क्तुम्	स्वङ्क्तव्य स्वञ्जनीय, स्वञ्ज्य
स्वप् (೨ ಪ.) ಮಲಗು	स्वपत्	सुप्त	सुप्त्वा	स्वप्तुम्	स्वप्तव्य स्वपनीय, स्वप्य
हन् (೨ ಪ.) ಕೊಲ್ಲು	घ्न	हत	हत्वा	हन्तुम्	हन्तव्य, हननीय घात्य, वध्य

Rarest Archiver

हा (೩ ಪ.) ಬಿಡು	जहत्	हीन	हित्वा (विहाय)	हातुम्	हातव्य हानीय, हेय
ह्वे (೧ ಪ.) ಕರೆ	ह्वयत्	हूत	हूत्वा	ह्वातुम्	ह्वातव्य , ह्वानीय, ह्वेय

ಉಣಾದಿ ಕೃತ ಪ್ರತ್ಯಯಗಳು :

उण् (उ) ಕೃತ್ಪ್ರತ್ಯಯದಿಂದ ಪ್ರಾರಂಭವಾಗುವ ಅನೇಕ ಪ್ರತ್ಯಯಗಳನ್ನು ಶಾಕಟಾಯನಾದಿ[1] ವೈಯಾಕರಣಿಗಳು ಹೇಳಿದರು. ಈ ಉಣಾದಿ ಕೃತ್ ಪ್ರತ್ಯಯಗಳು ಸಂಸ್ಕೃತ ಶಬ್ದ ಸಂಪತ್ತನ್ನು ವಿಪುಲಗೊಳಿಸಿದವು. ಈ ಪ್ರತ್ಯಯಗಳೂ ಇವುಗಳನ್ನು ಜೋಡಿಸಿ ಸಿದ್ಧಗೊಳಿಸುವ ನಾಮಪದಗಳೂ ಸಂಖ್ಯಾತೀತವಾಗಿವೆ. ಇಲ್ಲಿ, ಉದಾಹರಣೆಗೆಂದು ಕೆಲವು ಪ್ರತ್ಯಯಗಳನ್ನೂ ಅವುಗಳಿಂದ ಸಾಧಿಸಲ್ಪಟ್ಟ ಉದಾಹರಣಾರ್ಥ ನಾಮಪದಗಳನ್ನೂ ಕೆಳಗೆ ಕೊಟ್ಟಿದೆ.

ಪ್ರತ್ಯಯ	ಧಾತು	ಉಣಾದ್ಯಂತ	ವಿಗ್ರಹವಾಕ್ಯ ಮತ್ತು ಅರ್ಥ
उण् (उ)	**कृ**	**कारुः**	**[करोति इति]** - ಮಾಡುವವ
	दृ	**दारुः**	**[दार्यत इति]** - ಕಟ್ಟಿಗೆ
	साध्	**साधुः**	**[साध्नोति परकार्यम्]**- ಸಾಧು
इलच्	**सल्**	**सलिलम्**	**[सलति निम्नं इति]** - ನೀರು
	मन्थ्	**मिथिला**	**[मथ्यन्ते अत्र रिपवः]** - ಮಿಥಿಲೆ
ड	**दम्**	**दण्डः**	**[दाम्यति इति]**- ದಂಡಿಸುವುದು
अक	**निन्द्**	**निन्दकः**	**[निन्दति इति]** - ನಿಂದಿಸುವವ
	नृत्	**नर्तकः**	**[नृत्यति इति]** - ನರ್ತಕ

ಇದೇ ರೀತಿ **हिंसकः, खादकः, रजकः, खनकः** ಮುಂತಾದವುಗಳು.

अन	**वृध्**	**वर्धनः**	**[वर्धयति इति]** - ವರ್ಧಿಸುವವನು

ಹೀಗೆಯೇ, **नन्दनः, जनार्दनः, क्रोधनः, भूषणः, भीषणः, मण्डनः, मधुसूदनः** ಮುಂತಾದವುಗಳು.

---

[1] **नामाख्यातजानीति शाकटायनः** - ನಾಮಪದಗಳು ಧಾತು ಜನ್ಯವಿರುತ್ತವೆ ಎನ್ನುವುದು ಶಾಕಟಾಯನನ ಮತ ಎಂದು ನಿರುಕ್ತಕಾರರಾದ ಯಾಸ್ಕರ ಹೇಳಿಕೆ.

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
आलु	**स्पृह्**	**स्पृहयालु**	**[स्पृहयति इति]** - ಬಯಸುವವ

ಹೀಗೆಯೇ, **दयालुः हृदयालुः** ಮುಂತಾದವುಗಳು.

इन्	**शम्**	**शमिन्**	**[शाम्यति तच्छीलः]** - ಶಾಂತಸ್ವಭಾವದವ

ಹೀಗೆಯೇ, **भ्रमिन्, श्रमिन्, प्रवासिन्** ಮುಂತಾದವುಗಳು.

त्र, इत्र	**खन्**	**खनित्रम्**	**[खन्यते अनेन]** - ಗುದ್ದಲಿ
	नी	**नेत्रम्**	**[नीयते अनेन]** - ಕಣ್ಣು

ಹೀಗೆಯೇ, **वक्त्रम्, श्रोत्रम्** ಮುಂತಾದವುಗಳು.

नु	**धृष्**	**धृष्णुः**	**[धृषति तच्छीलः]** - ಆಕ್ರಮಣಶೀಲ

ಹೀಗೆಯೇ, **गृध्नुः** ಮುಂತಾದವುಗಳು.

वरच् (वर)	**स्था**	**स्थावरः**	**[तिष्ठति तच्छीलः]** - ಸ್ಥಿರವಾಗಿರುವ
स्नु - इष्णु	**सह्**	**सहिष्णुः**	**[सहनशीलः]** - ಸಹನಶೀಲ

ಹೀಗೆಯೇ, **जिष्णु, वर्धिष्णु** ಮುಂತಾದವುಗಳು.

ಇದೇ ರೀತಿ ಅನೇಕ ಉಣಾದಿ ಪ್ರತ್ಯಯಗಳೊಡನೆ ಧಾತುಗಳಿಂದ ಅಗಣಿತ ಶಬ್ದಗಳು ಹುಟ್ಟಿಕೊಳ್ಳುತ್ತವೆ.

Rarest Archiver

೮

ತದ್ಧಿತಾಂತ ಪ್ರಕರಣ

ಪರಿನಿಷ್ಠಿತವಾದ ಅರ್ಥಾತ್, ಅರ್ಥಪ್ರತಿಪಾದನಾಶಕ್ತಿಯನ್ನು ಹೊಂದಿರುವ ಷಷ್ಠೀ ವಿಭಕ್ತ್ಯಂತ ನಾಮಪದಗಳ ಮೇಲೆ ಅಪತ್ಯಾದಿ ವಿವಿಧಾರ್ಥಗಳನ್ನು ಬೋಧಿಸುವ **ಅಣ್ (ಅ)** ಮುಂತಾದ ಪ್ರತ್ಯಯಗಳಿಗೆ ತದ್ಧಿತ ಪ್ರತ್ಯಯಗಳೆನ್ನುವರು. ಈ ತದ್ಧಿತ ಪ್ರತ್ಯಯ (Secondary Suffix) ಗಳನ್ನು ಹೊಂದಿರುವ ಪದಗಳು ತದ್ಧಿತಾಂತ ನಾಪದಗಳೆನಿಸುತ್ತವೆ. ಕೆಲವು ತದ್ಧಿತಾಂತಗಳು ಅವ್ಯಯಗಳಾಗಿಯೂ ನಿಲ್ಲುತ್ತವೆ. ಅವಕ್ಕೆ ಕ್ರಿಯಾವಿಶೇಷಣಗಳೆನ್ನುವರು.

ತದ್ಧಿತ ಪ್ರತ್ಯಯಗಳು ಸುಬಂತನಾಮಪದಗಳ ಮೇಲೆ ಬರುವುದಕ್ಕೆ **तद्धितवृत्ति** ಎಂಬ ಪಾರಿಭಾಷಿಕ ಸಂಜ್ಞೆಯಿದೆ. ತದ್ಧಿತಪ್ರತ್ಯಯಗಳು ನಾಮಪದಗಳ ಮೇಲೆ ಬರುವಾಗ ಸಾಮಾನ್ಯವಾಗಿ ವಿಭಕ್ತಿಪ್ರತ್ಯಯವು ಲೋಪಗೊಳ್ಳುತ್ತದೆ. ಸಂಗಡ ನಾಮಪದಗಳ ಅಂತ್ಯಸ್ವರವೂ ಲೋಪಗೊಳ್ಳುತ್ತದೆ. ಅವರ್ಣಾದಿಸ್ವರಗಳು ತದ್ಧಿತ ಪ್ರತ್ಯಯಗಳಾಗಿದ್ದಲ್ಲಿ ಇವು ನಾಮಪದಗಳ ಮೇಲೆ ಬರುವಾಗ ಆ ನಾಮಪದಗಳ ಪ್ರಥಮ ಸ್ವರವು ಅವರ್ಣ ವಿದ್ದಲ್ಲಿ ಸಾಮಾನ್ಯವಾಗಿ ಅದು ದೀರ್ಘಗೊಳ್ಳುವುದು ; ಇಕಾರಾದಿ ಇತರ ಸ್ವರಗಳಿದ್ದಲ್ಲಿ ಅವು ಗುಣ ಮತ್ತು ವೃದ್ಧಿಯನ್ನು ಹೊಂದುವವು.

ತದ್ಧಿತ ಪ್ರತ್ಯಯಗಳು ಅನೇಕವಿವೆ. ಇವು ವಿವಿಧಾರ್ಥಗಳಲ್ಲಿ ನಾಮಪದಗಳ ಮೇಲೆ ಬರುತ್ತವೆ. ತದ್ಧಿತಾಂತ ಶಬ್ದಗಳಂತೂ ಅನಂತವಾಗಿರುತ್ತವೆ. ಪರಿಚಯಾತ್ಮಕವಾಗಿ ಮುಖ್ಯ ತದ್ಧಿತ ಪ್ರತ್ಯಯಗಳನ್ನೂ ತದ್ಧಿತಾಂತ ಪದಗಳನ್ನೂ ಇಲ್ಲಿ ಸಂಗ್ರಹಿಸಲಾಗಿದೆ. ಸಂಗಡ ಆ ತದ್ಧಿತಾಂತಗಳು ಯಾವ ಅರ್ಥದಲ್ಲಿ ಬರುತ್ತವೆ ಅನ್ನುವುದನ್ನೂ ನಿರ್ದೇಶಿಸಲಾಗಿದೆ. ಸೌಲಭ್ಯಕ್ಕಾಗಿ ಷಷ್ಠೀವಿಭಕ್ತ್ಯಂತ ನಾಮಪದಗಳನ್ನು ಇಲ್ಲಿ ವಿಭಕ್ತಿ ಪ್ರತ್ಯಯರಹಿತವಾಗಿಯೇ ಇಟ್ಟುಕೊಳ್ಳಲಾಗಿದೆ ; ಮತ್ತು 'ಮೂಲಶಬ್ದ' ವೆಂದು ಸಂಬೋಧಿಸಲಾಗಿದೆ.

ಅಪತ್ಯಾರ್ಥದಲ್ಲಿ :

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
अण् (अ)	**भरत**	**भारतः**	**भरतस्य अपत्यं पुमान्** - -ಭರತನ ಮಗ
अण् (अ)	**उपगु**	**औपगवः**	**उपगोः अपत्यं पुमान्** - -ಉಪಗುಸುತ
अण् (अ)	**देवरात**	**दैवरातः**	**देवरातस्य अपत्यं पुमान्** - -ದೇವರಾತನ ಮಗ
अण् (अ)	**दक्ष**	**दाक्षः**	**दक्षस्य अपत्यं पुमान्** - -ದಕ್ಷ ಪುತ್ರ

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
फक् [आयनादेश]	नड	नाडायनः	नडस्य अपत्यं पुमान् - -ನಡನ ಮಗ
फक् [आयनादेश]	गार्ग्यः	गार्ग्यायणः	गार्ग्यस्य अपत्यं युवा -ಗರ್ಗಸುತನ ಮರಿ ಮಗ
फक् [आयनादेश]	दाक्षिः	दाक्षायणः	दाक्षेः अपत्यं युवा[1] -ದಕ್ಷಸುತನ ಮರಿಮಗ
फक् [आयनि]	दक्ष	दाक्षायणी	दक्षस्य अपत्यं स्त्री -ದಕ್ಷಪುತ್ರಿ
इञ् [इ]	दक्ष	दाक्षिः	दक्षस्य गोत्रापत्यं पुमान् -ದಕ್ಷಗೋತ್ರದಲ್ಲಿ ಹುಟ್ಟಿದವ
इञ् [इ]	द्रोण	द्रौणिः	द्रोणस्य अपत्यं पुमान् -ದ್ರೋಣಪುತ್ರ
इञ् [इ]	शूर	शौरिः	शूरस्य अपत्यं पुमान् -ಶೂರನ ಮಗ
अकङ् + इ	व्यास	वैयासकिः	व्यासस्य अपत्यं पुमान् [व्यासविरचितम्] ವ್ಯಾಸಪುತ್ರ [ವಿರಚಿತಾರ್ಥದಲ್ಲಿ ಮಹಾಭಾರತ]
अकङ् + इ	सुधातृ	सौधातुकिः	सुधातुः अपत्यं पुमान् -ಸುಧಾತೃನ ಮಗ
अङ् [अ]	बिद	बैदः	बिदस्य गोत्रापत्यं पुमान् -ಬಿದನ ಗೋತ್ರದಲ್ಲಿ ಹುಟ್ಟಿದವ
अङ् [अ]	वसुदेव	वासुदेवः	वसुदेवस्य अपत्यं पुमान् -ವಸುದೇವ ಸುತ
ढक्[एयादेश]	रोहिणी	रोहिणेयः	रोहिण्याः अपत्यं पुमान् -ರೋಹಿಣೀ ಸುತ
ढक्[एयादेश]	कृत्तिका	कार्तिकेयः	कृत्तिकायाः अपत्यं पुमान् -ಕೃತ್ತಿಕಾಸುತ

[1] युवा 'ಮೊಮ್ಮಗ' ಅಥವಾ 'ಮರಿಮಗ' ಎನ್ನುವ ಅರ್ಥದಲ್ಲಿ

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
ढक्[एयादेश]	विनता	वैनतेयः	विनतायाः अपत्यं पुमान्
ಅಪವಾದಾತ್ಮಕವಾಗಿ-			-ವಿನತಾಸುತ [ಗರುಡ]
ढक्[इनादेश]	कन्या	कानीनः[1]	कन्यायाः अपत्यं पुमान् - [ವಿವಾಹವಾಗದ] ಕನ್ಯೆಯ ಪುತ್ರ
ढक्[ईयादेश]	पितृष्वसृ	पितृष्वस्रीयः	पितृष्वसुः अपत्यं पुमान् -ತಂದೆಯ ತಂಗಿಯ ಮಗ
ढक्[ईयादेश]	मातृष्वसृ	मातृष्वस्रीयः	मातृष्वसुः अपत्यं पुमान् -ತಾಯಿಯ ತಂಗಿಯ ಮಗ
ढक्[ईयादेश]	कुलटा	कौलटेयः	कुलटायाः अपत्यं पुमान् -ವೇಶ್ಯೆಯ ಮಗ
ಅಪತ್ಯಾರ್ಥದಲ್ಲಿ ಅಂಗಹೀನ ಮತ್ತು ಶೀಲಹೀನವಾಚಕಾರ್ಥದೊಡನೆ..........			
ढक् [ऐरक् - एर]	काणा	काणेरः	काणायाः अपत्यं पुमान् -ಕುರುಡಿಯ ಮಗ
ढक् [ऐरक् - एर]	दासी	दासेरः	दास्याः अपत्यं पुमान् -ದಾಸಿಯ ಮಗ
ढक् [ऐरक् - एर]	कुलटा	कौलटेरः	कुलटायाः अपत्यं पुमान् -ವ್ಯಭಿಚಾರಿಣಿಯ ಮಗ
इय	क्षत्र	क्षत्रियः	क्षत्राणां कुले जातः -ಕ್ಷತ್ರಿಯ ಕುಲೋತ್ಪನ್ನನು
यत् (य)	श्वशुर	श्वशुर्यः	श्वशुरस्य अपत्यं पुमान् -ಮಾವನ ಮಗ
यत् (य)	राजन्	राजन्यः	राज्ञः जातौ भवः -ರಾಜರ ಜಾತಿಯಲ್ಲಿ ಹುಟ್ಟಿದವ
ईन	कुल	कुलीन, कौलीन	कुले जातः -ಒಳ್ಳೇ ಕುಲದಲ್ಲಿ ಹುಟ್ಟಿದವ
ईन	ग्राम	ग्रामीणः	ग्रामे जातः -ಹಳ್ಳಿಯಲ್ಲಿ ಹುಟ್ಟಿದವ

ಮುಂತಾದವುಗಳು.

---

[1]कानीनः व्यासः कर्णश्च।

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
ರಾಗಾರ್ಥದಲ್ಲಿ :			
अण् (अ)	कषाय	काषायम्	कषायेण रक्तम् - ಕಷಾಯಬಣ್ಣದಲ್ಲಿ ಅದ್ದಿದ (ಬಟ್ಟೆ)
ठक् (इकादेश)	लाक्षा	लाक्षिकः	लाक्षया रक्तम् - ಅರಗಿನಲ್ಲಿ ಅದ್ದಿದ
ठक् (इकादेश)	रोचना	रौचनिकः	रोचनया रक्तः - ಕೆಂಪು ಬಣ್ಣದ
अन् (अ)	नीला	नीलम्	नील्या रक्तम् - ನೀಲಿ ಬಣ್ಣದ (ಬಟ್ಟೆ)
अन् (अ)	हरिद्रा	हारिद्रम्	हरिद्रया रक्तम् - ಅರಿಸಿಣ ಬಣ್ಣದ (ಬಟ್ಟೆ)
कन् (क)	पीत	पीतकम्	पीतेन रक्तम् - ಕಿತ್ತಳೇ ಬಣ್ಣದ (ಬಟ್ಟೆ)
अञ् (अ)	शर्करा	शार्करम्	शर्करया इदम् - (ಸಿಹಿ ಭಕ್ಷ್ಯ) ಸಕ್ಕರೆಯ
ಕಾಲಾರ್ಥದಲ್ಲಿ :			
अण् (अ)	पुष्य	पौषम्	पुष्येण युक्तम् मासम् (अहः) - ಪುಷ್ಯಮಾಸ (ದಿನ)
अण् (अ)	श्रवण	श्रावणम्	श्रवणयुक्तम् मासम् (दिनम्) - ಶ್ರಾವಣ ಮಾಸ (ದಿನ)
इञ् (इ)	पुष्य	पौषी	पुष्यनक्षत्रयुक्ता रात्रिः - ಪುಷ್ಯನಕ್ಷತ್ರಯುಕ್ತ ರಾತ್ರಿ
अण् (अ)	अश्विनी	अश्वत्थम्	अश्विनी नक्षत्रयुक्तं दिनम् - ಅಶ್ವಿನಿ ನಕ್ಷತ್ರಯುಕ್ತ ದಿನ
ईन	प्राक्	प्राचीनम्	- ಹಿಂದಿನ ಕಾಲ

ಹೀಗೆಯೇ ಅರ್ವಾಚೀನ ಮುಂತಾದವುಗಳು.

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
ದರ್ಶನಾರ್ಥದಲ್ಲಿ :			
अण् (अ)	**वसिष्ठ**	**वासिष्ठम्**	**वसिष्ठेन दृष्टम्** - ವಸಿಷ್ಠರಿಂದ ಕಾಣಲ್ಪಟ್ಟ (ಸೂಕ್ತ)
अण् (अ)	**उशनम्**	**औशनसम्** **औशनम्**	**उशनसा दृष्टम्** - ಉಶನಸನಿಂದ ಕಾಣಲ್ಪಟ್ಟ (ಸಾಮ)
ढक् (एय)	**कलि**	**कालेयम्**	**कलिना दृष्टं (सामम्)** - ಕಲಿಯಿಂದ ನೋಡಲ್ಪಟ್ಟ (ಸಾಮ)
इयङ् (य)	**वामदेव**	**वामदेव्यम्**	**वामदेवेन दृष्टम् (सामम्)** - ವಾಮದೇವನಿಂದ ನೋಡಲ್ಪಟ್ಟ (ಸಾಮ)
ಪರಿವೃತಾರ್ಥದಲ್ಲಿ :			
अण् (अ)	**वस्त्र**	**वास्त्रो (रथः)**	**वस्त्रेण परिवृतो रथः** - ವಸ್ತ್ರದಿಂದ ಸುತ್ತಲ್ಪಟ್ಟ ಗಾಡಿ
इनि (इन्)	**पाण्डुकम्बल**	**पाण्डुकम्बली**	**पाण्डुकम्बलेन परिवृतः (रथः)** - ಬಿಳಿಕಂಬಳಿಯಿಂದ ಸುತ್ತಲ್ಪಟ್ಟ (ರಥ)
ಉದ್ಧರಣಾರ್ಥದಲ್ಲಿ :			
अण् (अ)	**शराव**	**शारावः**	**शरावे उद्घृतम् (ओदनम्)** - ತಟ್ಟೆಗೆ ಬಡಿಸಿದ (ಅನ್ನ)
ಸಂಸ್ಕಾರಾರ್ಥದಲ್ಲಿ :			
अण् (अ)	**भ्राष्ट्र**	**भ्राष्ट्राः**	**भ्राष्ट्रे संस्कृताः (यवादयः)** - ಬಾಣಲೆಯಲ್ಲಿ ಹುರಿದ (ಕಾಳುಗಳು)
अण् (अ)	**अष्टकपाल**	**अष्टकपालः**	**अष्टसु कपालेषु संस्कृतः पुरोडाशः** - ಎಂಟು ಪಾತ್ರೆಗಳಲ್ಲಿ ಸಂಸ್ಕರಿಸಿದ ಹವಿಸ್ಸು
अण् (अ)	**कुलुत्थ**	**कौलुत्थम्**	**कुलुत्थैः संस्कृतम्** - ಹುರುಳಿ ಸಾರು
अण् (अ)	**तिन्त्रिणीक**	**तैन्त्रिणीकम्**	**तिन्त्रिणीकेन संस्कृतम्** - ಹುಣಸೇಹಣ್ಣಿನ ಸಾರು

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
ष्ठक् (क)	दधिन्	दाधिकम्	दध्नि संस्कृतम् -ಶ್ರೀಖಂಡ
यत्	शूल	शूल्यम्	शूले संस्कृतं (मांसम्) -ಶೂಲದ ತುದಿಯಿಂದ ಬೇಯಿಸಿದ(ಮಾಂಸ)

ದೇವತಾರ್ಥದಲ್ಲಿ :

अण् (अ)	इन्द्र	ऐन्द्रम्	इन्द्रो देवता अस्य (हविः) -(ಈ ಹವಿಸ್ಸಿಗೆ) ಇಂದ್ರನು ದೇವತೆ
			ऐन्द्रम् धनु -ಇಂದ್ರಚಾಪ
अण् (अ)	पशुपति	पाशुपतम्	पशुपतिः देवता अस्य -ಪಶುಪತಿಯೇ ದೇವತೆಯಾಗಿ ಉಳ್ಳ (ಅಸ್ತ್ರ)
ढक् (एय)	अग्नि	आग्नेयम्	अग्निः देवता अस्याः (दिक्) -ಅಗ್ನಿಯೇ ದೇವತೆಯಾಗಿ ಉಳ್ಳ ದಿಕ್ಕು (ಆಗ್ನೇಯ)

ಪಿತೃವ್ಯಾದಿ ಅರ್ಥಗಳಲ್ಲಿ :

व्यत् (व्य)	पितृ	पितृव्य	पितुर्भ्राता -ತಂದೆಯ ಸಹೋದರ(ಚಿಕ್ಕಪ್ಪ ,ದೊಡ್ಡಪ್ಪ)
डुलच् (उल)	मातृ	मातुल	मातुर्भ्राता -ಸೋದರ ಮಾವ
डामहच् (आमह)	पितृ	पितामह	पितुः पिता -ತಂದೆಯ ತಂದೆ (ಅಜ್ಜ)
डामहच् (आमह)	मातृ	मातामह	मातुः पिता -ತಾಯಿಯ ತಂದೆ (ಅಜ್ಜ)
डामहच् (आमह) डीष् (ई)	मातृ	मातामही	मातुः माता -ತಾಯಿಯ ತಾಯಿ (ಅಜ್ಜಿ)
डामहच् (आमह) डीष् (ई)	पितृ	पितामही	पितुः माता -ತಂದೆಯ ತಾಯಿ (ಅಜ್ಜಿ)

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
ಸಮೂಹಾರ್ಥದಲ್ಲಿ :			
अण् (अ)	काक	काकम्	काकानां समूहः - ಕಾಗೆಗಳ ಹಿಂಡು
अण् (अ)	भिक्षा	भैक्षम	भिक्षाणां समूहः - ಭಿಕ್ಷುಕರ ಗುಂಪು
अण् (अ)	गर्भिणी	गार्भिणम्	गर्भिणीनां समूहः - ಗರ್ಭಿಣಿಯರ ಗುಂಪು
अक	राजन्य	राजन्यकम्	राजन्यानां समूहः - ರಾಜಕುಲೋದ್ಭವರ ಗುಂಪು
अक	राजन्	राजकम्	राज्ञां समूहः - ರಾಜರ ಗುಂಪು
अक	मनुष्य	मनुष्यकम्	मनुष्याणां समूहः - ಮನುಷ್ಯರ ಗುಂಪು
अक	कौरव	कौरवकम्	कौरवाणां समूहः - ಕೌರವರ ಗುಂಪು
यत (य)	ब्राह्मण	ब्राह्मण्यम्	ब्राह्मणानां समूहः - ಬ್ರಾಹ್ಮಣರ ಗುಂಪು
यत (य)	वडवा	वाडव्यम्	वडवानां समूहः - ಹೆಣ್ಣು ಕುದುರೆಗಳ ಸಮೂಹ
स्तल् (ता)	ग्राम	ग्रामता	ग्रामाः - ಹಳ್ಳಿಗಳು
स्तल् (ता)	जन	जनता	जनानां समूहः - ಜನರ ಗುಂಪು
स्तल् (ता)	बन्धु	बन्धुता	बन्धूनां समूहः - ಬಂಧುಗಳ ಗುಂಪು
ಹೀಗೆಯೇ गजता ಮುಂತಾದವುಗಳು.			
(अ)	कपोत	कापोतम्	कपोतानां समूहः - ಗಿಳಿವಿಂಡು
ठक् (इक)	हस्तिन्	हास्तिकम्	हस्तीनां समूहः - ಆನೆಗಳ ಹಿಂಡು
ठक् (इक)	धेनु	धैनुकम्	धेनूनां समूहः - ಆಕಳ ಹಿಂಡು

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
यल् (य)	**पाश**	**पाश्या**	**पाशानां समूहः** - ಹಗ್ಗಗಳ ರಾಶಿ
यल् (य)	**रथ**	**रथ्या**	**रथानां समूहः** - ವಾಹನಗಳ ಗುಂಪು
पाश	**केश**	**केशपाश**	**केशसमूहः** - ಕೂದಲುಗಳ ರಾಶಿ
ಸಂಗ್ರಾಮದ ಪ್ರಯೋಜನಾರ್ಥದಲ್ಲಿ :			
अण् (अ)	**सुभद्रा**	**सौभद्रः**	**सुभद्रा प्रयोजनं अस्य संग्रामस्य** - ಸುಭದ್ರೆಗಾಗಿ ಯುದ್ಧ
अण् (अ)	**भरत**	**भारतः**	**भारताः योद्धारः अस्य संग्रामस्य** - ಈ ಯುದ್ಧದಲ್ಲಿ ಭಾರತೀಯರೇ ಸೈನಿಕರು
ಕ್ರೀಡಾ ಸಾಧನಾರ್ಥದಲ್ಲಿ :			
णः (-आ)	**दण्ड**	**दाण्डाः**	**दण्डः प्रहरणं अस्यां क्रीडायाम्** - ಕೋಲಾಟ

ಇದೇ ರೀತಿ **मौष्टाः** ಮುಂತಾದವುಗಳು.

ಅಧ್ಯಯನ ಮತ್ತು ಅಧೀತಾರ್ಥಗಳಲ್ಲಿ :			
अण् (अ)	**व्याकरण**	**वैयाकरणः**	**व्याकरम् अधीते वेद वा** - ವ್ಯಾಕರಣವನ್ನು ಕಲಿಯುವವ ಅಥವಾ ಬಲ್ಲವ
ठक् (इक)	**न्याय**	**नैयायिकः**	**न्यायम् अधीते वेद वा** - ನ್ಯಾಯಶಾಸ್ತ್ರಾಭ್ಯಾಸಿ ಅಥವಾ ಪುರಾಣಬಲ್ಲವ
ठक् (इक)	**पुराण**	**पौराणिकः**	**पुराणम् अधीते वेद वा** - ಪುರಾಣಾಭ್ಯಾಸಿ ಅಥವಾ ಪುರಾಣ ಬಲ್ಲವ
ठक् (इक)	**इतिहास**	**ऐतिहासिकः**	**इतिहासमधीते वेद वा** - ಇತಿಹಾಸದ ವಿದ್ಯಾರ್ಥಿ ಅಥವಾ ಪಂಡಿತ
ठक् (इक)	**वेद**	**वैदिकः**	**वेदम् अधीते वेद वा** - ವೇದಾಭ್ಯಾಸಿ ಅಥವಾ ವೇದ ಬಲ್ಲವ

पुराणस्य इदं (काव्यं नाटकं) **पौराणिकम्** (ಕಾವ್ಯ ಅಥವಾ ನಾಟಕ)

इतिहासिकम् इदं (काव्यं , नाटकं)
ऐलहासिक (ಕಾವ್ಯ ಅಥವಾ ನಾಟಕ) ಎಂದೂ ಇವು ವೈಕಲ್ಪಿಕವಾಗಿ ಆಗುತ್ತವೆ.

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ

ಇರುವ ವಸ್ತುವಿನೊಡನೆ ಗುರುತಿಸಲ್ಪಡುವಾಗ :

अण् (अ)	**उदम्बर**	**औदुम्बरः**	**उदुम्बराः संति अस्मिन् देशे** - ತಾಮ್ರದ ಅದಿರುಗಳಿರುವ ಸ್ಥಳ
अण् (अ)	**पञ्चाल**	**पञ्चालाः**	**पञ्चालानां निवासो जनपदः** -ಪಾಂಚಾಲರು ವಾಸಿಸುವ ಸ್ಥಳ

ಇದೆ ರೀತಿ **कर्णाटकाः, महाराष्ट्राः, वङ्गाः, कलिङ्गाः** ಮುಂತಾದವುಗಳು.

ಯಾರಿಂದ ನಿರ್ಮಾಣಗೊಂಡಿದೆ ಎನ್ನುವಾಗ :

अण् (अ)	**कुशाम्ब**	**कौशाम्बी**	**कुशाम्बेन निर्वृत्ता (नगरी)** -ಕುಶಾಂಬನಿಂದ ಕಟ್ಟಲ್ಪಟ್ಟ (ನಗರ)
अण् (अ)	**दीर्घवरत्र**	**दैर्घवरत्रः**	**दीर्घवरत्रेण निर्वृत्तः (कूपः)** -ದೀರ್ಘವರನು ಕಟ್ಟಿದ (ಬಾವಿ)

ಇಂಥವರು ವಾಸಿಸುವ ಸ್ಥಳ ಎನ್ನುವ ಅರ್ಥದಲ್ಲಿ:

अण् (अ)	**शिबि**	**शैबः**	**शिबीनां निवासो देशः** -ಶಿಬಿಗಳು ವಾಸಿಸುವ ಸ್ಥಳ
अण् (अ)	**कर्णाटकः**	**कार्णाटकः**	**कर्णाटकानां निवासो देशः** -ಕನ್ನಡಿಗರು ವಾಸಿಸುವ ಸ್ಥಳ
अण् (अ)	**किरात**	**कैरातः**	**किरातानां निवासो देशः** -ಕಿರಾತರು ವಾಸಿಸುವ ಸ್ಥಳ
अण् (अ)	**मयूरः**	**मायूरः**	**मयूराणां निवासो देशः** -ನವಿಲುಗಳಿರುವ ಸ್ಥಳ

ಅದೂರಭವಾರ್ಥದಲ್ಲಿ:

अण् (अ)	**विदिशा**	**वैदिशम्**	**विदिशायाः अदूरभवं (नगरम्)** - ವಿದಿಶೆಗೆ ಹತ್ತಿರವಿರುವ (ಪಟ್ಟಣ)

ಹಣಾರ್ಥದಲ್ಲಿ:

ण् (अ)	**चक्षुस्**	**चाक्षुषम्**	**चक्षुषा गृह्यते (रूपम्)** -ಕಣ್ಣಿಗೆ ಕಾಣುವ (ರೂಪ)

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
अण् (अ)	**श्रवण**	**श्रावणः**	**श्रवणेन गृह्यते (शब्दः)** - ಕಿವಿಯಿಂದ ಕೇಳುವ (ಶಬ್ದ)
अण् (अ)	**उपनिषत्**	**औपनिषदिकः**	**उपनिषदा ज्ञातः (पुरुषः)** - ಉಪನಿಷತ್ತಿನಿಂದ ಅರಿಯಲ್ಪಡುವ (ಪುರುಷ)
चण	**विद्या**	**विद्याचणः**	**विद्यया वित्तः** - ವಿದ್ಯೆಯಿಂದ ಹೆಸರಾಗಿರುವ

ಭವಾರ್ಥದಲ್ಲಿ:

ठक् (अक)	**अरण्य**	**आरण्यकः**	**अरण्ये भवः (पुरुषः)** - ಅಡವಿಯ ಮನುಷ್ಯ
घ (इय)	**राष्ट्र**	**राष्ट्रिय**	**राष्ट्रे भवः** - ರಾಷ್ಟ್ರದವ
घ (एय)	**वारणासी**	**वाराणसेयः**	**वाराणास्यां भवः** - ವಾರಣಾಸಿಯಲ್ಲಿ ಹುಟ್ಟಿದ
घ (एय)	**नदी**	**नादेयम्**	**नद्यां भवं नद्याः इदं वा** - ನದಿಯಲ್ಲಿ ಹುಟ್ಟಿದ ; ನದಿಯ
घ (एय)	**पुरुष**	**पौरुषेयम्**	**पुरुषस्य इदं कार्यम्** - ಗಂಡಿನ (ಕೆಲಸ)
घ (इय)	**शाली**	**शालीयम्**	**शाल्याः इदं (क्षेत्रम्)** - ಭತ್ತದ (ಗದ್ದೆ)
घ (इय)	**पाणिनि**	**पाणिनीयम्**	**पाणिन्यः इदम् (व्याकरणम्)** - ಪಾಣಿನಿಯ (ವ್ಯಾಕರಣ)
घ (इय)	**युष्मद्**	**युष्यदीयम्**	**युवयोः युष्माकम् वा** - ನಿಮ್ಮದು

ಹೀಗೆಯೇ **अस्मदीयम्, त्वदीयम्, मदीयम्** ಮುಂತಾದವುಗಳು.

त्यप् (त्य)	**अमा**[1]	**अमात्यः**	**अमा भवः** - ಜೊತೆಗೇ ಇರುವವ (ಮಂತ್ರಿ)

ಹೀಗೆಯೇ **दाक्षिणात्यः, पौर्वात्यः, पाश्चात्यः, पौरस्त्यः, इहत्यः, ततस्त्यः, कृत्यः** ಮುಂತಾದವುಗಳು.

---

[1] ಅವ್ಯಯವಿದು

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
ठक् (इक)	**अध्यात्म**	**आध्यात्मिकः**	**आत्मानं देवं वा अधिकृत्य भवः** - ಆಧ್ಯಾತ್ಮಿ

ಇದೇ ರೀತಿ, **आदिभौतिक, ऐहलौकिक, पारलौकिक** ಮುಂತಾದವುಗಳು.

ठक् (इक)	**निशा**	**नैशिकम्**	**निशायाः इदम्** - ರಾತ್ರಿಯ
तन	**सायम्**	**सायन्तन**	**सायं भवः** - ಸಾಯಂಕಾಲದ

ಇದೇ ರೀತಿ, **अद्यतन, ह्यस्तन, चिरन्तन, सनातन, नूतन** ಮುಂತಾದವುಗಳು.

ವಿಕಾರಾರ್ಥದಲ್ಲಿ :

अण् (अ)	**पयस्**	**पायसम्**	**पयसः विकारः** - ಮಜ್ಜಿಗೆ ; ಪಾಯಸ ಮುಂತಾದವುಗಳು.
अण् (अ)	**अश्मन्**	**आश्मः**	**अश्मनो विकारः** - ಕಲ್ಲಿನದು
अण् (अ)	**हेमन्**	**हैमम्**	**हेम्नः विकारः** - ಬಂಗಾರದ
मयट्[1]	**मृत्**	**मृण्मय**	**मृदः विकारः** - ಮಣ್ಣಿನ

ಇದೇ ರೀತಿ **चिन्मय, काष्ठमय** ಮುಂತಾದವುಗಳು.

ಅದೇ ಸಂಪೂರ್ಣ ಅನ್ನುವ ಅರ್ಥದಲ್ಲಿಯೂ **मयट्** ಬರುತ್ತದೆ. ಉದಾಹರಣೆಗೆ :

मयट्	**जल**	**जलमय**	**जलं एव** - ನೀರೇ ನೀರು
मयट्	**अन्न**	**अन्नमय**	**प्रचुरं अन्नम्** - ಬಹಳ ಅನ್ನ

ವ್ಯವಹಾರಾರ್ಥದಲ್ಲಿ :

ठक् (इक)	**व्यवहार**	**व्यावहारिकः**	**व्यवहारेण चरति इति** - ವ್ಯವಹಾರದಿಂದ (ಕೋರ್ಟು ಮುಂ.) ಬದುಕುತ್ತಾನೆ.

---

[1] **गोमय** ಶಬ್ದದಲ್ಲಿಯ **मयट्** ಪ್ರತ್ಯಯವು ವಿಕಾರಾರ್ಥದಲ್ಲಿ ಬಂದಿದ್ದಲ್ಲ ಎಂದು ತಿಳಿಯಬೇಕು. ವಿಕಾರಾರ್ಥದಲ್ಲಿ **गोः पुरीषम्** - ಆಕಳ ಸಗಣಿ ಎಂದಾಗುವುದು.

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
ठक् (इक)	**शकट**	**शाकटिकः**	**शकटेन चरति इति** - ಬಂಡಿ ಹೊಡೆಯುವವ
ठक् (इक)	**स्वागत**	**स्वागतिकः**	**स्वागतं करोति इति** - ಸ್ವಾಗತ ಮಾಡುವವನು.
ठक् (इक)	**वीणा**	**वैणिकः**	**वीणां वादयति इति** - ವೀಣೆ ನುಡಿಸುವವ
ठक् (इक)	**अक्ष**	**आक्षिकः**	**अक्षैः दीव्यति इति** - ಜೂಜುಗಾರ (ಪಗಡೆಯಾಟಗಾರ)
ठक् (इक)	**वेतन**	**वैतनिकः**	**वेतनेन जीवति इति** - ನೌಕರಿಯಿಂದ ಜೀವಿಸುವವ
ठक् (इक)	**समाज**	**सामाजिकः**	**समाजं रक्षति इति** - ಸಮಾಜ ರಕ್ಷಕ
ठक् (इक)	**धर्म**	**धार्मिकः**	**धर्मं चरति इति** - ಧರ್ಮದಿಂದ ಇರುವವ

ಹೀಗೆಯೇ **सैनिकः, नाविकः** ಮುಂತಾದವುಗಳು.

ठक् (इक)	**अस्ति**[1]	**आस्तिकः**	**अस्ति इति अस्य बुद्धिः** - (ದೇವನಿರುವನು ಎನ್ನುವ) ಆಸ್ತಿಕ

ಇದೇ ರೀತಿ **नास्तिकः** ಮುಂತಾದ ಶಬ್ದಗಳು.

ईकक् (ईक)	**शक्ति**	**शाक्तीकः**	**शक्त्या प्रहरति इति** - ಶಕ್ತಿಮೀರಿ ಹೊಡೆಯುವವ
ईकक् (ईक)	**यष्टि**	**याष्टीकः**	**यष्ट्या प्रहरति इति** - ದೊಣ್ಣೆಯಿಂದ ಹೊಡೆಯುವವ
ईन	**पारम्**[2]	**पारीणः**	**पारं गामि इति** - ದಾಟುವವ
ईन	**अध्वन्**	**अध्वनीनः**	**अध्वानं गच्छति इति** - ಪ್ರವಾಸಿ

---

[1] ಕ್ರಿಯಾಪದವಿದು [2] ಅವ್ಯಯವಿದು

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
ಶೀಲಾರ್ಥದಲ್ಲಿ:			
ठक् (इक)	अपूप	आपूपिकः	अपूपं भक्षणं शीलम् अस्य - ಕಡುಬು ತಿನ್ನುವ ಚಟದವನು
अण् (अ)	कर्मन्	कार्मः	कर्मशीलः - ಕಾರ್ಯಾಸಕ್ತನು
ಪ್ರವೀಣಾರ್ಥದಲ್ಲಿ:			
खञ् (ईन)	सर्वजन	सार्वजनीनः	सर्वजनसाधुः - ಎಲ್ಲರಲ್ಲೂ ಘಟ್ಟಿಗ
यत् (य)	कर्मन्	कर्मण्यः	कर्मणि साधुः - ಕಾರ್ಯದಲ್ಲಿ ಘಟ್ಟಿಗ
एय	अतिथि	आतिथेयः	अतिथिषु साधुः - ಅತಿಥಿ ಸೇವಾ ಪ್ರವೀಣ
एय	पथिन्	पाथेयः	पथि साधुः - ದಾರಿ ನಡೆಯುವುದರಲ್ಲಿ ಘಟ್ಟಿಗ, ನಡೆಯಲು ಶಕ್ತಿ ನೀಡುವ ಬುತ್ತಿ
एय	धुर्	धौरेयः	धुरं वहति इति - ಮುಂದಾಳು
ಅನುಕಂಪನಾರ್ಥದಲ್ಲಿ:			
अकच् (अक)	पुत्र	पुत्रकः	अनुकम्पितः पुत्रः - ಬಡಪಾಯಿ ಹುಡುಗ
अकच् (अक)	देवदत्तः	देवदत्तकः देविकः	अनुकम्पितः देवदत्तः - ಬಡಪಾಯಿ ದೇವದತ್ತ
कन् (क)	सिंह	सिंहकः	अनुकम्पितः सिंहः - ಬಡಪಾಯಿ ಸಿಂಹ
ಅಲ್ಪ ಮತ್ತು ಹ್ರಸ್ವಾರ್ಥದಲ್ಲಿ:			
न् (क)	तैल	तैलकम्	अल्पं तैलं - ತುಸು ಎಣ್ಣೆ
रः	कुटी	कुटीरः	ह्रस्वा कुटी - ಚಿಕ್ಕ ಗುಡಿಸಲು
रः	शमी	शमीरः	ह्रस्वा शमी - ಚಿಕ್ಕ ಶಮೀವೃಕ್ಷ

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
षृरच् (तर)	**वत्स**	**वत्सतरः**	**द्वितीयवयः प्राप्तः वत्सः** - ಸಾಧಾರಣ ಸಣ್ಣ ಕರು
षृरच् (तर)	**कासू**	**कासूतरी**	**ह्रस्वा सा कासू** - ಚಿಕ್ಕದಾದ ಕಾಸೂ ಆಯುಧ

ಹೀಗೆಯೇ **उक्षतर, अश्वतर, ऋषभतर, गोणीतर** ಮುಂತಾದವುಗಳು.

ಕುತ್ಸಿತಾರ್ಥದಲ್ಲಿ:

अकच् (अक)	**अश्व**	**अश्वकः**	**कुत्सितः अश्वः** - ಕೆಟ್ಟಕುದುರೆ
अकच् (अक)	**पितृ**	**पित्रकः**	**कुत्सितः पिता** - ಕೆಟ್ಟ ತಂದೆ

ಮುಂತಾದವುಗಳು.

ಭಾವಾರ್ಥದಲ್ಲಿ :

त्वतल् (त्व-ता)	**गो**	**गोत्वम्/गोता**	**गवेः भावः** - ಆಕಳತನ
त्वतल् (त्व-ता)	**मनुष्य**	**मनुष्यत्वम्** **मनुष्यता**	**मनुष्यस्य भावः** - ಮಾನವೀಯತೆ

ಹೀಗೆಯೇ **सिंहत्व, सिंहता, देवत्व, देवता** ಮುಂತಾದವುಗಳು.

नञ् (न)	**स्त्री**	**स्त्रैणम्**	**स्त्रिया भावः, स्त्रीत्व, स्त्रीता** - ಹೆಣ್ಣುತನ
स्नञ् (स्न)	**पुरुष**	**पौंस्नम्**	**पुरुषस्य भावः पुरुषत्वम्, पुंस्ता** - ಗಂಡಸುತನ
अण् (अ)	**कुमार**	**कौमारम्**	**कुमारस्य भावः** - ಹುಡುಗುತನ
ठक् (अक)	**रमणीय**	**रामणीयकम्**	**रमणीयस्य भावः** - ರಮಣೀಯತೆ

ಹೀಗೆಯೇ **कौमारक** ಮುಂತಾದವುಗಳು.

इमन्	**मृदु**	**मृदिमन्** **(मृदिमा)**	**मृदोः भावः** - ಮೃದುತನ
इमन्	**वाक्**	**वाग्मिन्** **(वाग्मी)**	**सम्यक् भाषते** - ಸರಿಯಾಗಿ ಮಾತನಾಡುವ ಸ್ವಭಾವದವ

ಹೀಗೆಯೇ **महिमा, गरिमा, शुक्लिमा** ಮುಂತಾದವುಗಳು.

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
ಸದೃಶಾರ್ಥದಲ್ಲಿ :			
कल्प	कुमार	कुमारकल्प	कुमारसदृशम् - ಕುಮಾರನಿಗೆ ಸಮನಾದ
ಆಹಾರಾರ್ಥದಲ್ಲಿ :			
यत (य)	दण्ड	दण्ड्यः	दण्डम् अर्हति इति - ಶಿಕ್ಷಾಯೋಗ್ಯನಾದವನು
यत (य)	पूजा	पूज्यः	पूजाम् अर्हति इति - ಪೂಜಾರ್ಹನಾದವನು
यत (य)	दक्षिणा	दक्षिण्यः	दक्षिणम् अर्हति इति - ದಕ್ಷಿಣೆ ಸ್ವೀಕರಿಸಲು ಯೋಗ್ಯನಾದವನು
ಹೀಗೆಯೇ **वध्यः, अर्घ्यः** ಮುಂತಾದವುಗಳು.			
छ (इ)	दक्षिणा	दक्षिणीयः	दक्षिणाम् अर्हति इति - ದಕ್ಷಿಣೆ ಸ್ವೀಕರಿಸಲು ಅರ್ಹನಾದವನು
छ (इय)	पुत्री	पुत्रीयः	पुत्रीम् अर्हति इति - ಮಗಳನ್ನು ಸ್ವೀಕರಿಸಲು ಯೋಗ್ಯನಾದವನು (ವರ)
ಹೀಗೆಯೇ **धनीयः** ಮುಂತಾದವುಗಳು.			
ಮತ್ವರ್ಥ (ಹೊಂದಿದವನು ಎಂಬ ಅರ್ಥ)ದಲ್ಲಿ :			
अच् (अ)	अर्शस्	अर्शसः	अर्शांसि अस्य विद्यन्ते - ಮೂಲವ್ಯಾಧಿ ರೋಗವುಳ್ಳವನು
अण् (अ)	प्रज्ञा	प्राज्ञः	प्रज्ञा विद्यते अस्य - ಪ್ರಜ್ಞೆಯುಳ್ಳವನು.
ಇದೇ ರೀತಿ **श्राद्धः, चौरः, राक्षसः** ಮುಂತಾದವುಗಳು.			
आलच्, आटच् (आल, आट)	वाक्	वाचालः[1] वाचाटः	कुत्सितः बहु भाषते - ಕೆಟ್ಟ ರೀತಿಯಲ್ಲಿ ಬಹಳ ಮಾತನಾಡುವವ
आलु	हृदय	हृदयालुः	हृदयं विद्यते अस्य - ಹೃದಯವುಳ್ಳವ

[1] **वाचाल** ಶಬ್ದವು ನಿವೇದಿಸುವುದು 'ತರ್ಕಶೂನ್ಯ ಮಾತನಾಡುವವ' ಅನ್ನುವುದನ್ನು . ತರ್ಕಯುಕ್ತ ಮಾತುಗಾರನನ್ನು ಕುರಿತು ಹೇಳುವಾಗ **वाग्मिन्** ಶಬ್ದ ಬರುತ್ತದೆ.

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
आलु	**दया**	**दयालुः**	**दया विद्यते अस्य** - ದಯೆಯುಳ್ಳವ
आलु	**कृपा**	**कृपालुः**	**कृपा विद्यते अस्य** - ಕೃಪಾಳು
आलु	**शीत**	**शीतालुः**	**शीतं न सहते इति** - ಶೀತಸಹಿಸುವ ಶಕ್ತಿಯಿಲ್ಲದವ

ಹೀಗೆಯೇ **उष्णालुः, तृपालुः** ಮುಂತಾದವುಗಳು.

इत	**पण्डा**	**पण्डित**	**पण्डा विद्यते अस्य** - ಪಾಂಡಿತ್ಯವುಳ್ಳವ
इत	**फल**	**फलित**	**फलानि अस्य सञ्जातानि** - ಹಣ್ಣುಗಳುಳ್ಳ (ಮರ)

ಇದೇ ರೀತಿ **दुःखित, पुलकित, पुष्पित, कुसुमित** ಮುಂತಾದವುಗಳು.

इनिर् (इन)	**दण्ड**	**दण्डिन्**	**दण्डः अस्य अस्ति इति** - ಬಡಿಗೆಯುಳ್ಳವ
इनिर् (इन)	**धन्**	**धनिन्**	**धनम् अस्य अस्ति इति** - ಹಣವುಳ್ಳವ
ठक् (इक)	**धन**	**धनिकः**	**धनम् अस्य अस्ति इति** - ಹಣವುಳ್ಳವ
ठक् (इक)	**दण्ड**	**दण्डिक**	**दण्डः अस्य अस्ति इति** - ದಂಡವನ್ನುಳವ

ಇದೇ ರೀತಿ **व्रीहिन् - व्रीहिकः, मायिन् - मायिकः , दुःखिन्, सुखिन्, शूलिन्, मालिन्, ब्रह्मचारिन्** ಮುಂತಾದವುಗಳು.

इनिर् (इनी)	**पुष्कर**	**पुष्करिणी**	**पुष्कराणि अत्र सन्ति इति** - ಕೆರೆ ನೀರು (ಕಮಲಗಳುಳ್ಳ ಸ್ಥಳ)

ಇದೇ ರೀತಿ **कुमुदिनी, पद्मिनी** ಮುಂತಾದ ಶಬ್ದಗಳು.

इनिर् ಪ್ರತ್ಯಯ ಪೂರ್ವದಲ್ಲಿ **अर्थ** ಶಬ್ದವನ್ನು ಸೇರಿಸಿದರೆ ' ಬಯಕೆಯುಳ್ಳವ ' ಎಂದಾಗುತ್ತದೆ.

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ

ಉದಾಹರಣೆ:

इनिऱ् (इन)	**विद्या**	**विद्यार्थिन्** **विद्यार्थी**	**विद्याम् अधीतुम् इच्छति** - ವಿದ್ಯೆಯನ್ನು ಕಲಿಯುವ ಬಯಕೆಯುಳ್ಳವ

ಹೀಗೆಯೇ **धनार्थिन्, धान्यार्थिन्, कन्यार्थिन्** ಮುಂತಾದ ಶಬ್ದಗಳು.

इल	**फेन**	**फेनिल**	**फेनः विद्यते अस्य** - ನೊರೆಯುಳ್ಳ
इल	**पङ्क**	**पङ्किल**	**पङ्कः विद्यते अस्य** - ಕೆಸರುಳ್ಳ

ಇದೇ ರೀತಿ **सिकतिल, तुन्दिल, वर्णिल** ಮುಂತಾದವು.

विनि (विन्)	**माया**	**मायविन्** **(मायावी)**	**माया विद्यते अस्य** - ಮಾಟಗಾರ
विनि (विन्)	**मेधा**	**मेधाविन्**	**मेधा विद्यते अस्य** - ಬುದ್ಧಿವಂತ

ಹೀಗೆಯೇ **सृग्विन्** ಮುಂತಾದವುಗಳು.

विनि (विन्)	**तपस्**	**तपस्विन्**	**तपः अस्य विद्यते** - ತಪಸ್ಸು ಮಾಡಿದವ
विनि (विन्)	**तेजस्**	**तेजस्विन्**	**तेजः अस्य विद्यते** - ತೇಜಸ್ವಿಯಾದವನು
शः	**रोमन्** **लोमन्**	**रोमशः** **लोमशः**	**रोम अस्य विद्यते इति** - ರೋಮಗಳುಳ್ಳವನು
शः	**कपि**	**कपिशः**	**कपिः अस्य विद्यते** - ಕಪಿಯುಳ್ಳವ (ಮಂಗನಾಟದವ)

ಹೀಗೆಯೇ **कर्कशः** ಮುಂತಾದವುಗಳು.

धेय	**नामन्**	**नामधेयः**	**नाम अस्य विद्यते इति** - ಹೆಸರುಳ್ಳವ, ಹೆಸರು

ಹೀಗೆಯೇ **भागदेयः** ಮುಂತಾದವುಗಳು.

मतुप् (मत्)	**श्री**	**श्रीमत्** **(श्रीमान्)**	**श्रीः विद्यते अस्य** - ಶ್ರೀಮಂತ,ಹಣವುಳ್ಳವ

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
मतुप् (मत्)	**बुद्धि**	**बुद्धिमत्**	**बुद्धिः विद्यते अस्य** - ಬುದ್ಧಿವಂತ
मतुप् (मत्)	**भूमि**	**भूमिमत्**	**भूमिः विद्यते अस्य** - ಭೂಮಾಲಿಕ

ಮುಂತಾದವುಗಳು.

मतुप् (मत्)	**रूप**	**रूपवत्** **रूपवान्**	**रूपम् अस्य अस्ति इति** - ರೂಪವಂತ
मतुप् (मत्)	**स्नेह**	**स्नेहवत्**	**स्नेहः अस्य अस्ति इति** - ಸ್ನೇಹವುಳ್ಳವ (ಎಣ್ಣೆಯುಳ್ಳವ)
मतुप् (मत्)	**रस**	**रसवत्**	**रसः अस्य अस्ति इति** - ರಸವುಳ್ಳ (ಕಾವ್ಯ)

ಇದೇ ರೀತಿ **विद्यावत्, तडिद्वत्, शब्दवत्, हेमवत्, गुणवत्, शुभवत्** ಮುಂತಾದವುಗಳು.

यप्[1] **(य)**	**हिम**	**हिम्यः**	**हेमं विद्यते अस्य** ಹಿಮವುಳ್ಳವ
यप् (य)	**रूप**	**रूप्यः**	**रूपम् अस्य अस्ति इति** ರೂಪವುಳ್ಳವ

ಇದೇ ರೀತಿ **गुण्यः, ब्राह्मण्यः** ಮುಂತಾದವುಗಳು.

रः	**पाण्डु**	**पाण्डुरः**	**पाण्डु अस्य विद्यते इति** ಬಿಳಿಚಿದ, ಬೆಳ್ಳಗಾದ
रः	**दन्त**	**दन्तुरः**	**उन्नता दन्ता सन्ति अस्य इति** ಉಬ್ಬುಹಲ್ಲುಳ್ಳವ
रः	**मधु**	**मधुरः**	**माधुर्यम् अस्य अस्ति** ಮಧುರವಾಗಿರುವ

ಹೀಗೆಯೇ **नगरः, पांसुरः, स्वरः, सुषिरः** ಮುಂತಾದವುಗಳು.

लच् (ल)	**चूडा**	**चूडालः**	**चूडा अस्य अस्ति इति** ಜುಟ್ಟುಳ್ಳವ

---

[1] **मतुप्** ಗೆ ವೈಕಲ್ಪಿಕವಾಗಿ **यप्** ಮುಂತಾದ ಪ್ರತ್ಯಯಗಳು ಬರುತ್ತವೆ.

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
लच् (ल)	फेन	फेनिलः / फेनलः	फेनः विद्यते अस्य ನೊರೆಯುಳ್ಳ

ಇದೇ ರೀತಿ **वत्सलः, चाण्डालः, अंसलः** ಮುಂತಾದ ಶಬ್ದಗಳು.

व	अर्ण	अर्णवः	अर्णम् अस्य अस्ति इति ಸಮುದ್ರ (ನೀರುಳ್ಳದ್ದು)

ಇದೇ ರೀತಿ **केशवः, मणिवः** ಮುಂತಾದ ಶಬ್ದಗಳು.

ಕ್ರಿಯಾ[1] ವಿಶೇಷಾರ್ಥದಲ್ಲಿ :

अकच् (अक)	उच्चैः	उच्चकैः	ಎತ್ತರವಾಗಿ
अकच् (अक)	नीचैः	नीचकैः	ಸಣ್ಣಗೆ
अकच् (अक)	सर्वे	सर्वके	ಎಲ್ಲವರೆಡೆಗೆ
अकच् (अक)	विश्वे	विश्वके	ಎಲ್ಲವರೆಡೆಗೆ
डाच् (आ)	दुःख	दुःखा	दुःखा करोति (स्वामिनम्) (ಒಡೆಯನು) ದುಃಖಿಸುವಂತೆ ಮಾಡುತ್ತಾನೆ.
डाच् (आ)	प्रिय	प्रिया	प्रिया करोति (गुरुम्) (ಗುರುವು) ಪ್ರೀತನಾಗುವಂತೆ ಮಾಡುತ್ತಾನೆ.
डाच् (आ)	सत्य	सत्या	सत्या करोति (मिथ्याम्) (ಸುಳ್ಳನ್ನು) ನಿಜವನ್ನಾಗಿ ಮಾಡುತ್ತಾನೆ.
डाच् (आ)	शूल	शूला	शूलेन पचति (मांसम्) (ಮಾಂಸವನ್ನು)ಶೂಲದಿಂದ ಬೇಯಿಸುತ್ತಾನೆ.
एन	अपर	अपरेण	ಮತ್ತೊಂದು
एन	पूर्व	पूर्वेण	ಪೂರ್ವದಿಕ್ಕಿನ
तसि (तः)	वर्ण	वर्णतः	ಸ್ವರದಿಂದ
तसि (तः)	आदि	आदितः	ಆದಿಯಿಂದ
तसि (तः)	मध्य	मध्यतः	ಮಧ್ಯದಿಂದ
तसिल् (तस्)	परि	परितः	ಸುತ್ತುಮುತ್ತು

2 ಕ್ರಿಯಾವಿಶೇಷಣಗಳು ಅವ್ಯಯಗಳು ; ಅವ್ಯಯ ಪ್ರಕರಣ ನೋಡಿರಿ.

Rarest Archiver

ತದ್ಧಿತ ಪ್ರತ್ಯಯ	ಮೂಲಶಬ್ದ	ತದ್ಧಿತಾಂತ	ವಿಗ್ರಹವಾಕ್ಯ ಮತ್ತು ಅರ್ಥ
तसिल् (तस्)	**अभि**	**अभितः**	ಎರಡೂ ಕಡೆ
च्वि	**कृष्ण**	**कृष्णी**	**अकृष्णः कृष्णः सम्पद्यते तं करोति** - ಕಪ್ಪಲ್ಲದ್ದನ್ನು ಕಪ್ಪಾಗುವಂತೆ ಮಾಡುತ್ತಾನೆ.
सात्	**अग्नि**	**अग्निसात्**	**अनग्निम् अग्निं करोति** - ಬೆಂಕಿಯಿಲ್ಲದಲ್ಲಿ ಬೆಂಕಿಯನ್ನು ಮಾಡುತ್ತಾನೆ.
सात्	**भस्म**	**भस्मसात्**	**अभस्म भस्म करोति** - ಭಸ್ಮವಲ್ಲದ್ದನ್ನು ಭಸ್ಮ ಮಾಡುತ್ತಾನೆ.
वति (वत्)	**ब्राह्मण**	**ब्राह्मणवत्**	ಬ್ರಾಹ್ಮಣನಂತೆ
वति (वत्)	**राम**	**रामवत्**	ರಾಮನಂತೆ
वति (वत्)	**पुत्र**	**पुत्रवत्**	ಮಗನಂತೆ

ಸಪ್ತಮೀ ವಿಭಕ್ತ್ಯರ್ಥದಲ್ಲಿ :

त्रल् (त्र)	**यद्**	**यत्र**	ಎಲ್ಲಿ

ಹೀಗೆಯೇ **तत्र** ಮುಂತಾದವುಗಳು.

ಕಾಲಾರ್ಥದಲ್ಲಿ :

दा	**एक**	**एकदा**	ಒಂದು ಸಾರಿ
दा	**अन्य**	**अन्यदा**	ಮತ್ತೊಮ್ಮೆ

ಹೀಗೆಯೇ **यदा, तदा** ಮುಂತಾದವುಗಳು.

दानीम्	**इदानीम्**	ಈಗ
दानीम्	**तदानीम्**	ಆಗ

ಮುಂತಾದವುಗಳು.

द्यस्	**अद्य**	**अस्मिन् अहनि**	ಈ ದಿವಸ
द्यस्	**सद्य**	**समाते अहनि**	ಕೂಡಲೇ
द्युस्	**पूर्वेद्युः**	**अन्येद्युः, अपरेद्युः**	ಮುಂತಾದವುಗಳು.

Rarest Archiver

ಪ್ರಕಾರಾರ್ಥದಲ್ಲಿ:

थाल्	**तथा**	**तेन प्रकारेण**	ಹಾಗೆ
थमुः (थम्)	**इत्थम्**	**अनेन एतेन प्रकारेण**	ಈ ರೀತಿಯಾಗಿ

ದಿಕ್‌ಸೂಚಿ:

अतसुच् (अतः) **दक्षिणतः, उत्तरतः, पूर्वतः, परतः** ಮುಂತಾದವುಗಳು.

अस्तानि (अस्तात्) पुरस्तात्, अधस्तात्, पश्चात्, परिस्तात् ಮುಂತಾದವುಗಳು.

अतिः (आत्) **उत्तर** **उत्तरात्** ಮುಂತಾದವುಗಳು.

ಸಂಖ್ಯಾವಾಚಕ ಕ್ರಿಯಾ ವಿಶೇಷಣಗಳನ್ನು ವಿಭಕ್ತಿ ಪ್ರಕರಣದ ಕೊನೆಯಲ್ಲಿ ಬರುವ ಸಂಖ್ಯಾವಾಚಕಗಳ ನಂತರದ ಅಡಿಟಿಪ್ಪಣಿಯಲ್ಲಿ ಉದಾಹರಿಸಲಾಗಿದೆ.

Rarest Archiver

೯

ಅತಿಶಯ ವಿಶಿಷ್ಟಾರ್ಥ ಪ್ರಕರಣ

ತರತಮಾದಿ ತದ್ಧಿತಾಂತಗಳು - (Degree of Comparision)

ಉಕ್ತ ಸಮುದಾಯಕ್ಕೆ ಸಾಧಾರಣವಾಗಿರುವ ಜಾತಿ, ಗುಣ, ಕ್ರಿಯೆ ಮತ್ತು ಸಂಜ್ಞೆಗಳಿಂದಾಗಿ ಆ ಸಮುದಾಯದಲ್ಲಿಯ ಏಕದೇಶವನ್ನು (ಅಂಗವನ್ನು - ಒಂದನ್ನು) ಅತಿಶಯ ವಿಶಿಷ್ಟವಾದದ್ದೆಂದು ತೋರಿಸುವಾಗ ಅತಿಶಯ ವಿಶಿಷ್ಟವನ್ನು ಬೋಧಿಸುವ ಪ್ರಾತಿಪದಿಕದ ಮೇಲೆ ಸ್ವಾರ್ಥದಲ್ಲಿ - (ಅತಿಶಯಾರ್ಥದಲ್ಲಿ) ....

ತಮಪ್[1] (ತಮ) ಅಥವಾ ಇಷ್ಠನ್ (ಇಷ್ಠ) ಪ್ರತ್ಯಯವು ಬರುತ್ತದೆ. **तमप् - इष्ठन्** ಪ್ರತ್ಯಯಗಳು ತದ್ಧಿತ ಪ್ರತ್ಯಯಗಳೇ ಆಗಿದ್ದರೂ ಅನುಕೂಲಕ್ಕಾಗಿ ಅವುಗಳಿಗೆ ಇಲ್ಲಿ ಪ್ರತ್ಯೇಕ ಪ್ರಕರಣವನ್ನು ಮಾಡಲಾಗಿದೆ.

ಅತಿಶಯ ವಿಶಿಷ್ಟವೆಂದರೆ ಉತ್ಕರ್ಷ. ಉತ್ಕರ್ಷದಲ್ಲಿ ಕೇವಲ ಆಧಿಕ್ಯ ಮಾತ್ರವಾಗಿರದೆ ಇತರ ತಿರಸ್ಕಾರಪೂರ್ವಕವಾದ ಸ್ವೋತ್ಕರ್ಷವೇ ಪ್ರಯೋಜನವಾಗಿ ಇರುವಂಥಾದ್ದು.

ಉದಾಹರಣೆ: **अयं** { **एषां** / **एषु** } **अतिशयेन आढ्यः**

ಇವರೆಲ್ಲರಲ್ಲಿ ಇವನು ಹೆಚ್ಚಿನ ಆಢ್ಯವಂತ.

ಇಲ್ಲಿ, ' ಇವರೆಲ್ಲ' ರಲ್ಲಿಯೂ ಇರುವ ಸಾಧಾರಣ ಗುಣ ಆಢ್ಯತೆ. 'ಇವನು' ಈ ಆಢ್ಯತೆಯುಳ್ಳವರಲ್ಲಿ ಹೆಚ್ಚಿನವನು ಅನ್ನುವಲ್ಲಿಯ ಉತ್ಕರ್ಷವಾಚಕವು ಇತರರನ್ನು ತಿರಸ್ಕರಿಸುವ ಅರ್ಥವನ್ನು ಆಗಲೇ ಬೋಧಿಸುತ್ತದೆ.

ಸಮುದಾಯವಾಚಕ ಶಬ್ದವು ಷಷ್ಠೀ ಅಥವಾ ಸಪ್ತಮೀ ಬಹುವಚನದ ವಿಭಕ್ತಿ ಪ್ರತ್ಯಯವನ್ನು ಹೊಂದುತ್ತದೆ. ಇದನ್ನೂ ಮೇಲಿನ ಉದಾಹರಣೆಯಲ್ಲಿ ಗಮನಿಸಬಹುದು. ಅಥವಾ

सर्वेषां (सर्वेषु वा) विद्वत्तम एव पूज्यते ।

-ಎಲ್ಲರಲ್ಲಿ ಹೆಚ್ಚಿನ ವಿದ್ಯೆಯುಳ್ಳವನು ಪೂಜಿಸಲ್ಪಡುತ್ತಾನೆ.

सर्वेषां (सर्वेषु वा) पर्वतानां हिमालयः प्रथिष्ठः ।

- ಎಲ್ಲಾ ಪರ್ವತಗಳಲ್ಲಿ ಹಿಮಾಲಯವು ಅತ್ಯಂತ ದೊಡ್ಡದು.

ಸಮುದಾಯವು ಎರಡೇ ವ್ಯಕ್ತಿ ಅಥವಾ ವಸ್ತುಗಳನ್ನು ಹೊಂದಿದ್ದಾಗ ಅತಿಶಯ ವಿಶಿಷ್ಟಾರ್ಥ ಬೋಧಕ ಪ್ರಾತಿಪದಿಕದ ಮೇಲೆ ತರಪ್[2] (ತರ)ಅಥವಾ ಈಯಸುನ್ (ಈಯಸ್) ಪ್ರತ್ಯಯವು ಬರುತ್ತದೆ.

ಉದಾಹರಣೆ :

---

[1] **अतिशायने तमबिष्ठनौ** (ಪಾ V, 3, 55) **अतिशयविशिष्टार्थवृत्तेः स्वार्थे एतौ स्तः** (ಸಿ. ಕೌ 2001)

[2] **द्विवचनविभज्योपपदे तरबीयसुनौ** (ಪಾ V, 3, 57)

द्वयोरेकस्यातिशये विभक्तव्ये चोपपदे सुप्तिङन्तादेतौ स्तः (ಸಿ. ಕೌ 2005)

Rarest Archiver

गङ्गायमुनासलिलयोः गाङ्गं सलिलं शुचितरम् ।

- ಗಂಗಾ ಮತ್ತು ಯಮುನಾ ನದಿಗಳ ನೀರುಗಳಲ್ಲಿ ಗಂಗೆಯ ನೀರು ಅತಿಶಯವಾಗಿ ಶುಚಿಯಿರುತ್ತದೆ.

बालाय अन्नमोदकयोः मोदकः प्रियतरः ।

- ಹುಡುಗನಿಗೆ ಅನ್ನ ಮತ್ತು ಮೋದಕಗಳಲ್ಲಿ ಮೋದಕವೇ ಹೆಚ್ಚು ಪ್ರೀತಿಯದು.

विन्ध्याहिमालयोः हिमालयो महीयसः ।

- ವಿಂಧ್ಯಾ ಹಿಮಾಲಯಗಳಲ್ಲಿ ಹಿಮಾಲಯವು ಹೆಚ್ಚಿಗೆ ದೊಡ್ಡದು.

ನಿರ್ಧಾರ್ಯಮಾಣ ಸಮುದಾಯವನ್ನು ವಿಭಾಗಿಸಿ ಹೇಳುವಾಗ ಉತ್ಕರ್ಷ ವಿಶೇಷ್ಯ ಶಬ್ದವು ಪಂಚಮೀ ವಿಭಕ್ತಿಯಲ್ಲಿ ಬರುತ್ತದೆ, ಉದಾಹರಣೆ :

मथुराः पाटलिपुत्रकेभ्यः आढ्यतराः ।

- ಮಥುರಾನಿವಾಸಿಗಳು ಪಾಟಲಿಪುತ್ರದ ನಿವಾಸಿಗಳಿಗಿಂತ ಹೆಚ್ಚಿಗೆ ಆಢ್ಯರು.

ईयस् ಮತ್ತು **इष्ठ** ಪ್ರತ್ಯಯಗಳಿಗಿಂತ **तर** ಮತ್ತು **तम** ಪ್ರತ್ಯಯಗಳ ಬಳಕೆ ಹೆಚ್ಚು.

ತರ, ತಮ ಪ್ರತ್ಯಯಗಳನ್ನು ಪ್ರಾತಿಪದಿಕಗಳಿಗೆ ಜೋಡಿಸುವಾಗ ಪ್ರಾತಿಪದಿಕಾಂತ್ಯ **ई, ऊ** ಗಳು ವೈಕಲ್ಪಿಕವಾಗಿ ಹ್ರಸ್ವಗೊಳ್ಳುತ್ತವೆ. ಉದಾಹರಣೆ :

प्रधी	**प्रधितर**	**प्रधीतर**
	प्रधितम	**प्रधीतम**

ಪ್ರಾತಪದಿಕವು ವ್ಯಂಜನಾಂತವಾಗಿದ್ದರೆ ಅಂತ್ಯ ವ್ಯಂಜನವು ಈ ತರ, ತಮ ಪ್ರತ್ಯಯಗಳು ಬರುವಾಗ ಲೋಪಗೊಳ್ಳುತ್ತದೆ.

ಉದಾಹರಣೆ :	ಪ್ರಾತಿಪದಿಕ	ತರ	ತಮ
	धनिन्	**धनितर**	**धनितम**
	विद्वस्	**विद्वत्तर**	**विद्वत्तम**
	किम्	**कितर**	**कितम**

ಕ್ರಿಯಾಪದ ಮತ್ತು ಅವ್ಯಯಗಳ ಮೇಲೆ ಬರುವಾಗ ತರ, ತಮಗಳು **तराम्, तमाम्** ಎಂದಾಗುತ್ತವೆ.

ಉದಾಹರಣೆ :	ಶಬ್ದ	ತರ	ತಮ
ಕ್ರಿಯಾಪದ	**पचति**	**पचतितराम्**	**पचतितमाम्**
ಅವ್ಯಯ	**उच्चैः**	**उच्चैस्तराम्**	**उच्चैस्तमाम्**
ಅವ್ಯಯ	**नी**	**नितराम्**	**नितमाम्**
ಅವ್ಯಯ	**सु**	**सुतराम्**	**सुतमाम्**

ತರ, ತಮಗಳು ಸ್ವರಾಂತ, ವ್ಯಂಜನಾಂತಗಳ ಮೇಲೆ ಬರುವಾಗ.....

Rarest Archiver

ಸ್ವರಾಂತ	गुरु	गुरुतर	गुरुतम
ಸ್ವರಾಂತ	बहु	बहुतर	बहुतम
ಸ್ವರಾಂತ	एक	एकतर	एकतम
ವ್ಯಂಜನಾಂತ	पापिन्	पापीयस्तर	पापीयस्तम

ಎಂದು ಮುಂತಾದ ಅಪವಾದಗಳೂ ಇವೆ.

ಈಯಸ್ (ईयसुन्) ಮತ್ತು ಇಷ್ಠ (इष्ठन्) ಇವುಗಳನ್ನು ಗುಣವಾಚಕ ವಿಶೇಷಣಗಳಿಗೆ ಮಾತ್ರ ಜೋಡಿಸಲಾಗುವುದು ; ಇವುಗಳನ್ನು ಜೋಡಿಸುವಾಗ ವಿಶೇಷಣಗಳ ಅಂತ್ಯಸ್ವರವು ಲೋಪಗೊಳ್ಳುತ್ತದೆ. ಅಂತ್ಯದಲ್ಲಿ ವ್ಯಂಜನವಿದ್ದರೆ ಉಪಾಂತ್ಯ ಸ್ವರಸಹಿತ ಆ ಅಂತ್ಯವ್ಯಂಜನವು ಲೋಪಗೊಳ್ಳುತ್ತದೆ.

ಉದಾಹರಣೆ :	लघु	लघीयस्	लघिष्ठ
	पटु	पटीयस्	पटिष्ठ
	महत्	महीयस्	महिष्ठ

ವಿಶೇಷಣಾಂತ್ಯದಲ್ಲಿರುವ 'ತೃ' ಮತ್ತು ಮತ್ವರ್ಥೀಯ ಪ್ರತ್ಯಯಗಳು 'ಈಯಸ್, ಇಷ್ಠ' ಪ್ರತ್ಯಯಗಳ ಪೂರ್ವದಲ್ಲಿ ಲೋಪಗೊಳ್ಳುತ್ತವೆ.

ಉದಾಹರಣೆ :	कर्तृ	करीयस्	करिष्ठ
	स्तोतृ	स्तवीयस्	स्तविष्ठ
	मतिमत्	मतीयस्	मतिष्ठ
	मेधाविन्	मेधीयस्	मेधिष्ठ
	धनिन्	धनीयस्	धनिष्ठ

ವಿಶೇಷಣಗಳ ಉಪಾಂತ್ಯ ಋಕಾರಕ್ಕೆ ರೇಫಾದೇಶ ಬರುತ್ತದೆ.

ಉದಾಹರಣೆ :	कृश	क्रशीयस्	क्रशिष्ठ
	मृदु	म्रदीयस्	म्रदिष्ठ
	पृथु	प्रथीयस्	प्रथिष्ठ

ಕೆಲವು ವಿಶೇಷ ಶಬ್ದಗಳು :

ಪ್ರಾತಿಪದಿಕ	ಅರ್ಥ	ईयसुन् (ಈಯಸ್)	इष्ठन् (ಇಷ್ಠ)
अन्तिक	ಹತ್ತಿರ	नेदीयस्	नेदिष्ठ
अल्प	ಸ್ವಲ್ಪ, ಚಿಕ್ಕ	अल्पीयस्	अल्पिष्ठ
		कनीयस्	कनिष्ठ
उरु	ದೊಡ್ಡ, ವಿಶಾಲವಾದ	वरीयस्	वरिष्ठ

Rarest Archiver

क्षिप्र	ಬೇಗನೇ	क्षेपीयस्	क्षेपिष्ठ
क्षुद्र	ಸಣ್ಣ, ಹಗುರಾದ	क्षोदीयस्	क्षोदिष्ठ
गुरु	ಭಾರವಾದ	गरीयस्	गरिष्ठ
दीर्घ	ಉದ್ದ	द्राघीयस्	द्राघिष्ठ
दूर	ದೂರ	दवीयस्	दविष्ठ
प्रशस्य	ಹೊಗಳಿಕೆಗೆ ಯೋಗ್ಯ	श्रेयस् /ज्यायस्	श्रेष्ठ / ज्येष्ठ
प्रिय	ಪ್ರೀತಿಯ	प्रेयस्	प्रेष्ठ
बहु	ಬಹಳ	भूयस्	भूयिष्ठ
बहुल	ಬಹಳ	बंहीयस्	बंहिष्ठ
बाढ	ಒಳ್ಳೆಯ	साधीयस्	साधिष्ठ
युवन्	ಚಿಕ್ಕ	कनीयस्	कनिष्ठ
		यवीयस्	यविष्ठ
विपुल	ಬಹಳ	ज्यायस्	ज्येष्ठ
वृद्ध	ಮುದಿ	वर्षीयस	वर्षिष्ठ
		ज्यायस्	ज्येष्ठ
वृन्दारक	ಬಹುಪ್ರಿಯ	वृन्दीयस्	वृन्दिष्ठ
स्थिर	ಸ್ಥಿರವಾದ	स्थेयस्	स्थेष्ठ
स्थूल	ದೊಡ್ಡ	स्थवीयस्	स्थविष्ट
स्फिर्	ಬಹಳ	स्फेयस्	स्फेष्ठ
ह्रस्व	ಚಿಕ್ಕ	ह्रसीयस्	ह्रसिष्ठ

Rarest Archiver

೧೦

ಸ್ತ್ರೀ ಪ್ರತ್ಯಯ ಪ್ರಕರಣ

ನಿಯತವಾದ ಉಪಸ್ಥಿತಿಯನ್ನು ಬೋಧಿಸುವ ಶಕ್ತಿಯನ್ನು ಶಬ್ದಗಳು ಹೊಂದಿರುತ್ತವೆ. ಪ್ರಾತಿಪದಿಕಗಳಲ್ಲಿ ಸಹಜವಾಗಿಯೇ ಇರತಕ್ಕ ವ್ಯಕ್ತಿ, ವಚನ, ಲಿಂಗಾದಿಗಳು ಕೆಲವು ಕಡೆ ತಮ್ಮಿಂತಾವೇ ವ್ಯಕ್ತವಾಗುತ್ತವೆ ; ಇನ್ನು ಕೆಲವೆಡೆ ಇವು ಪ್ರತ್ಯಯಗಳ ಮೂಲಕ ಹೊರಹೊಮ್ಮುತ್ತವೆ. ಅಂದರೆ ನಿಯತವಾಗಿ ಸ್ತ್ರೀಲಿಂಗ ಬೋಧಕ ಅರ್ಥವನ್ನೇ ನೀಡುವ **मातृ, वधू, स्नुषा** ಮುಂತಾದ ಪ್ರಾತಿಪದಿಕಗಳಲ್ಲಿಯ ಸ್ತ್ರೀಲಿಂಗ ಬೋಧಕಾರ್ಥವು ಪ್ರತ್ಯಯಗಳನ್ನು ಆಶ್ರಯಿಸಿರದೆ ಸ್ವತಂತ್ರವಾಗಿವೆ. ಆದರೆ, ಅನೇಕ ಪ್ರಾತಿಪದಿಕಗಳು - **अजा, बालिका; ईश्वरी, गायकी ; वामारू, कद्रू ; युवति** ಎಂದು ಮುಂತಾಗಿ......

आ (टाप्[1]**, डाप्, चाप्) ; ई (ङीप्, ङीष्, ङीन्) ; ऊ (ऊङ्)** ಮತ್ತು **ति** ಈ ಪ್ರತ್ಯಯಗಳ ಮೂಲಕ ಸ್ತ್ರೀತ್ವರೂಪಾರ್ಥವನ್ನು ಬೋಧಿಸುತ್ತವೆ. ಪ್ರಾತಿಪದಿಕಗಳು ಈ ಪ್ರತ್ಯಯಗಳನ್ನು ಪಡೆಯಲು ಕೆಲವು ನಿಯಮಗಳಿವೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

आ (टाप्, डाप् , चाप्)

ಸಾಮಾನ್ಯವಾಗಿ ಅಕಾರಾಂತ ಪುಲ್ಲಿಂಗ ಶಬ್ದಗಳಿಗೆ **आ** ವನ್ನು ಜೋಡಿಸಿ ಸ್ತ್ರೀಲಿಂಗ ಬೋಧಕ ಪ್ರಾತಿಪದಿಗಳನ್ನಾಗಿ ಪರಿವರ್ತಿಸಲಾಗುವುದು.

ಉದಾಹರಣೆ :	**अश्वः - अश्वा**	**वत्सः - वत्सा**	
	अजः - अजा	**बालः - बाला**	
	एडकः - एडका	**चटकः - चटका**	

ಪ್ರಾತಿಪದಿಕಾಂತ್ಯದಲ್ಲಿ **क** ಇದ್ದರೆ ಕೆಲವೆಡೆ ಆ **क** ದ ಉಪಾಂತ್ಯದಲ್ಲಿರುವ ಅಕಾರಕ್ಕೆ ಇಕಾರಾದೇಶವಾಗುವುದು.

ಉದಾಹರಣೆ :	**कारकः - कारिका**	**मूषकः - मूषिका**
	बालकः - बालिका	**पालकः - पालिका**
	कार्णाटकः - कार्णाटिका	**दाक्षिणात्यकः- दाक्षिणात्यिका**
	इहत्यकः - इहत्यिका	

ಕೆಲವೆಡೆ 'क' ದ ಹಿಂದಿನ ಅಕಾರಕ್ಕೆ ವೈಕಲ್ಪಿಕವಾಗಿ ಇಕಾರಾದೇಶವಾಗುವುದು ; ಆಗ ಅರ್ಥದಲ್ಲಿ ಬದಲಾವಣೆಯಾಗುತ್ತದೆ. ಉದಾಹರಣೆ :

तारकः **तारका** (ನಕ್ಷತ್ರ) **तारिका** (ರಕ್ಷಿಸುವವಳು)

ಇದೇ ರೀತಿ **वर्तका, वर्तिका ; वर्णका, वर्णिका** ಮುಂತಾದವುಗಳು.

---

[1] ಟಾಪ್ ಮುಂತಾದವುಗಳಲ್ಲಿ ಇತ್ಸಂಜ್ಞೆಗಳು ಹೋದ ಮೇಲೆ ಉಳಿಯುವುದು **आ** ಮಾತ್ರ

Rarest Archiver

ಕೆಲವೆಡೆ ವೈಕಲ್ಪಿಕವಾಗಿ ಇಕಾರಾದೇಶವಾದರೂ ಅರ್ಥದಲ್ಲಿ ಬದಲಾವಣೆಯಾಗುವುದಿಲ್ಲ.

ಉದಾಹರಣೆ : सूतक { सूतिका / सूतका } - ಆದೇ ತಾನೇ ಹಡೆದ ಹೆಂಗಸು.

ಇದೇ ರೀತಿ पुत्रका, पुत्रिका, वृन्दारका, वृन्दारिका ಮುಂತಾದವುಗಳು.

ಧಾತು ಸಂಬಂಧೀ, ಯಕಾರಕ್ಕೆ ಅಥವಾ ಕಕಾರಕ್ಕೆ ಉಪಾಂತ್ಯದಲ್ಲಿರುವ ಅಕಾರಕ್ಕೆ ಇಕಾರಾದೇಶವು ಅನಿವಾರ್ಯವಾಗಿ ಬರುತ್ತದೆ.

ಉದಾಹರಣೆ : नी (नय) - सुनयकः - - - सुनयिका

पच् (पाक) - सुपाककः - - - सुपाकिका

ಕೆಲವೆಡೆ, ಭಾರ್ಯಾರ್ಥದಲ್ಲಿ आ ಬರುತ್ತದೆ.

ಉದಾಹರಣೆ : गोपालकः - गोपालिका - ಗೋಪಾಲಕನ ಹೆಂಡತಿ

अश्वपालकः - अश्वपालिका - ಅಶ್ವಪಾಲಕನ ಹೆಂಡತಿ

सूर्यः - सूर्या - ಸೂರ್ಯನ ಹೆಂಡತಿ

ವೃದ್ಧಾವಸ್ಥೆಯನ್ನು ಬೋಧಿಸಲು आ ಬರುತ್ತದೆ.

ಉದಾಹರಣೆ : वृद्ध - वृद्धा ; जरठः - जरठा ; स्थविरः - स्थविरा

ई (ङीप्, ङीष्, ङीन्)

ಜೀವವರ್ಗ ಬೋಧಕ ಮತ್ತು ದೇವತಾರ್ಥಬೋಧಕ ಪ್ರಾತಿಪದಿಕಗಳ ಮೇಲೆ ई ಬರುತ್ತದೆ ; ಆಗ ಪದಾಂತ್ಯ ಅಕಾರವು ಲೋಪಗೊಳ್ಳುತ್ತದೆ. ಉದಾಹರಣೆ :

मानुषः - मानुषी आश्वः - आश्वी सिंहः - सिंही

रासभः - रासभी देवः - देवी ईश्वरः - ईश्वरी

यक्षः - यक्षी गन्धर्वः - गन्धर्वी किन्नरः - किन्नरी

ವೃತ್ತಿವಾಚಕಾರ್ಥ ಪ್ರಾತಿಪದಿಕಗಳ ಮೇಲೆ ई ಬರುತ್ತದೆ.

ಉದಾಹರಣೆ : गायकः - गायकी राजन् - राज्ञी गोपः - गोपी

दासः - दासी नर्तकः - नर्तकी

ವೃದ್ಧಾವಸ್ಥೆಯನ್ನು ಬಿಟ್ಟುಉಳಿದ ಅವಸ್ಥಾಬೋಧಕ ಪ್ರಾತಿಪದಿಕಗಳ ಮೇಲೆ ई ಬರುತ್ತದೆ.

ಉದಾಹರಣೆ : कुमारः - कुमारी तरुणः - तरुणी किशोरः - किशोरी

ವ್ಯಂಜನಾಂತ ಪುಲ್ಲಿಂಗ ಶಬ್ದಗಳ ಮೇಲೆ ई ಬರುತ್ತದೆ.

ಉದಾಹರಣೆ : मघवन् - मघोनी अर्यमत् - अर्यम्णी अर्वन् - अर्वणी

श्वन् - शुनी विद्वस् - विदुषी प्रत्यञ्च् - प्रतीची

Rarest Archiver

ಪ್ರಾತಿಪಾದಿಕಾಂತ್ಯದಲ್ಲಿಯ ತದ್ಧಿತ ಪ್ರತ್ಯಯದ ಯಕಾರವು ಲೋಪಗೊಳ್ಳುತ್ತದೆ ಮತ್ತು **ई** ಬರುತ್ತದೆ.

ಉದಾಹರಣೆ : **गार्ग्यः - गार्ग्यी मत्स्यः - मत्सी मनुष्यः - मानुषी**

पुष्यः - पौषी सूर्यः - सौरी अगस्त्यः - अगस्ती

नञ्, स्नञ् ಮತ್ತು **ईक** ತದ್ಧಿತ ಪ್ರತ್ಯಯಾಂತ ಪ್ರಾತಿಪದಿಕಗಳಿಗೆ **ई** ಜೋಡಿಸಲಾಗುವುದು.

ಉದಾಹರಣೆ : **स्त्रैण - स्त्रैणी पौंस्नः - पौंस्नी शाक्तीकः - शाक्तीकी**

यत्कर, तत्कर, किंकर, बहुकर ಇವುಗಳನ್ನು ಬಿಟ್ಟು ಇನ್ನುಳಿದ 'ಕರ' ತದ್ಧಿತ ಪ್ರತ್ಯಯಾಂತ ಪ್ರಾತಿಪದಿಕಗಳ ಮೇಲೆ **ई** ಬರುತ್ತದೆ.

ಉದಾಹರಣೆ : **भोगकर - भोगकरी एककर - एककरी**

घ्न ತದ್ಧಿತಾಂತ ಶಬ್ದಗಳ ಮೇಲೆ ಸ್ತ್ರೀಲಿಂಗದಲ್ಲಿ **ई** ಬರುತ್ತದೆ.

ಉದಾಹರಣೆ : **कृतघ्न - कृतघ्नी पितृघ्न - पितृघ्नी**

ಇದೇ ರೀತಿ **चर** ತದ್ಧಿತಾಂತ ಶಬ್ದಗಳ ಮೇಲೆ **ई** ಬರುತ್ತದೆ.

ಉದಾಹರಣೆ : **सेनाचर - सेनाचरी कुरुचर - कुरुचरी**

ಸ್ಥಳವಾಚಕ ಪ್ರಾತಿಪದಿಕಗಳ ಮೇಲೆ **ई** ಬರುತ್ತದೆ.

ಉದಾಹರಣೆ : **नद - नदी सूद - सूदी**

केवल, मामक, भागदेय, पाप, अपर, समान, आर्यकृत, सुमङ्गल, भेषज ಈ ಶಬ್ದಗಳು ಸ್ತ್ರೀಲಿಂಗವಾಚಕಗಳಾಗುವಾಗ **ई** ಯನ್ನು ಹೊಂದುತ್ತವೆ.

ಉದಾಹರಣೆ : **केवल - केवली मामक - मामकी**

सुमङ्गल - सुमङ्गली पाप - पापी

ಆದರೆ, ಇವು ನಾಮನಿರ್ದೇಶಕಗಳಾಗುವಾಗ ಆಕಾರಾಂತಗೊಳ್ಳುತ್ತವೆ.

ಉದಾಹರಣೆ : **केवला, सुमङ्गला, आर्यकृता** ಎಂದು ಮುಂತಾಗಿ.

'क' कृत् ಪ್ರತ್ಯಯಾಂತ **नर्तक, खनक, रञ्जक** ಮತ್ತು **रजक** ಶಬ್ದಗಳೂ **आक** ಮತ್ತು **तृ** ಕೃತ್ ಪ್ರತ್ಯಯಾಂತ ಪ್ರಾತಿಪದಿಕಗಳೂ ಸ್ತ್ರೀಲಿಂಗಬೋಧಕವಾಗುವಾಗ **ई** ಯನ್ನು ಪಡೆಯುತ್ತವೆ.

ಉದಾಹರಣೆ : **नर्तकः - नर्तकी खनकः - खनकी कुट्टाकः - कुट्टाकी**

रजकः - रजकी रञ्जकः - रञ्जकी

धातृ - धात्री लुण्टाकः - लुण्टाकी

Rarest Archiver

ಈ ಕೆಳಗಿನ ಪ್ರಾತಿಪದಿಕಗಳು ಅರ್ಥವ್ಯತ್ಯಾಸವನ್ನು ಬೋಧಿಸುವಾಗ ವೈಕಲ್ಪಿಕವಾಗಿ ಈಕಾರಗೊಳ್ಳುತ್ತವೆ.

जानपद	जानपदी (वृत्ति)	= ವೃತ್ತಿ ಸೂಚಕ
	जानपदा (नगरी)	= ಜನರುಳ್ಳ ಪಟ್ಟಣ
कुण्ड	कुण्डी	= ಅಂತರ್ವರ್ಣಸಂಜಾತೆ ಮತ್ತು ಗಡಿಗೆ
	कुण्डान्या	= ಸುಡುವ
गोण	गोणी	= ತುಂಬಿದ ಚೀಲ
	गोणा	= ಖಾಲಿ ಚೀಲ
स्थल	स्थली	= ಪ್ರಕೃತಿ ಸಹಜವಿರುವ
	स्थला	= ಕೃತ್ರಿಮತೆಯಿರುವಾಗ
भाज	भाजी	= ಬೇಯಿಸಿದ (**भाजी श्राणा -** ಬೇಯಿಸಿದ ಗಂಜಿ)
	भाजा	= ಉಳಿದೆಡೆ
नाग	नागी	= ಸ್ಥೂಲವಿರುವಾಗ
	नागा	= ಇತರೆಡೆ
काल	काली	= ಬಣ್ಣ
	काला	= ಇತರೆಡೆ
नील	नीली	= ಬಣ್ಣ
	नीला	= ಹೆಸರು
कुश	कुशी	= ಕಬ್ಬಿಣಸಂಬಂಧೀ
	कुशा	= ಕಟ್ಟಿಗೆಯ (ಗುಡಿಸಲು)
कामुक	कामुकी	= ಅನೀತಿಸಂಬಂಧಾಕಾಂಕ್ಷೆಯಿರುವಾಗ
	कामुका	= ಪತಿಯಿಂದ ಆನಂದಾಕಾಂಕ್ಷೆಯಿರುವಾಗ
कबर	कबरी	= ಹೆಣೆದ ಜಡೆ
	कबरा	= ಬಣ್ಣ ಬಣ್ಣದ

ಭಾರ್ಯಾರ್ಥದಲ್ಲಿ ई--

	गोपी	= ಗೋಪಪತ್ನೀ
	गोपा	= ದನಕಾಯುವವಳು
	शूद्री	= ಶೂದ್ರನ ಹೆಂಡತಿ
	शूद्रा	= ಶೂದ್ರ ಸ್ತ್ರೀ

Rarest Archiver

ಆದರೆ **गोपाल** ಶಬ್ದವು **गोपाली** ಎಂದು ಮಾತ್ರ ಆಗುವುದು.

इन्द्र, वरुण, भव, शर्व, रुद्र, मृड, हिम, अरण्य, यव, यवन, मातुल, आचार्य ಈ ಮುಂತಾದ ಪ್ರಾತಿಪದಿಕಗಳು ಸ್ತ್ರೀಲಿಂಗಬೋಧಕ ಪ್ರತ್ಯಯ ಪೂರ್ವದಲ್ಲಿ **आनुक्** **(आन्)** ಪ್ರತ್ಯಯವನ್ನೂ ಪಡೆಯುತ್ತವೆ ; ಉದಾಹರಣೆ :

इन्द्र - इन्द्राणी **भव - भवानी** **शर्व - शर्वाणी**

रुद्र - रुद्राणी **वरुण - वरुणानी** **अरण्य- अरण्यानी (महदरण्यम्)**

हिम - हिमानी (महद्धिमम्) **मृड - मृडानी**

ಗಮನೀಯ ಅರ್ಥ............

यवन { **यवनानी (यवनानां लिपिः)**, **यवनी (यवनपत्नी)** }

आचार्य { **आचार्यानी** - ಆಚಾರ್ಯಪತ್ನೀ, **आचार्या** - ಉಪಾಧ್ಯಾಯ ವೃತ್ತಿಯವಳು }

उपाध्याय { **उपाध्यायी - उपाध्याया** - ವೃತ್ತಿವಾಚಕಾರ್ಥ, **उपाध्यायिनी** - ಉಪಾಧ್ಯಾಯನ ಹೆಂಡತಿ }

क्षत्रिय { **क्षत्रिया - क्षत्रियाणी** - ಕ್ಷತ್ರಿಯ ಮಹಿಳೆ, **क्षत्रियी** - ಕ್ಷತ್ರಪತ್ನೀ }

पाक, कर्ण, पर्ण, पुष्प, फल, मूल, वाल ಇವುಗಳು ಶಬ್ದಾಂತ್ಯದಲ್ಲಿದ್ದರೆ ಸ್ತ್ರೀಲಿಂಗಬೋಧಕವಾಗಿ **ई** ಪ್ರತ್ಯಯಬರುವುದು ;

ಉದಾಹರಣೆ : **ओदनपाक - ओदनपाकी** **शंखुकर्ण - शङ्खुकर्णी**

शालपर्ण - शालपर्णी

ಇದೇ ರೀತಿ **शंखपुष्पी, दासीफली, सीताफली, दर्भमूली** ಮುಂತಾದವುಗಳು.

ಋಕಾರಾಂತ, ನಕಾರಾಂತ ಶಬ್ದಗಳು ಮತ್ತು ಶಾರ್ಙ್ಗರವಾದಿ ಗಣಪಠಿತ ಶಬ್ದಗಳು ಸ್ತ್ರೀಲಿಂಗದ್ಯೋತಕವಾಗಿ ಈಕಾರಾಂತಗೊಳ್ಳುತ್ತವೆ.

ಉದಾಹರಣೆ : **कर्तृ - कर्त्री** **दण्डिन् - दण्डिनी**

नृ - नारी **शार्ङ्गरव - शार्ङ्गरवी**

गौतम - गौतमी **अतिथेय - अतिथेयी**

'ಪತಿ' ಶಬ್ದದ ಸ್ತ್ರೀಲಿಂಗವಾಚಕ ಶಬ್ದ 'ಪತ್ನೀ'; ಸಮಾಸದಲ್ಲಾದರೋ **पति** ಅಥವಾ **पत्नी**- ಯಾವುದೇ ಇರಬಹುದು.

ಉದಾಹರಣೆ : **गृहपति -> गृहपति** ಅಥವಾ **गृहपत्नी**

दृढपति -> दृढपति ಅಥವಾ **दृढपत्नी**

Rarest Archiver

ಆದರೆ, **समान, एक, वीर** ಮುಂತಾದ ಶಬ್ದಗಳ ಯೋಗವಿರುವಾಗ **पत्नी** ಎಂದೇ ಆಗುವುದು.

ಉದಾಹರಣೆ : **सपत्नी [- समानः पतिः यस्याः सा]** ಸವತಿ

वीरपत्नी [वीरः पतिः यस्याः सा] ವೀರಪತ್ನೀ

ಹೀಗೆಯೇ **एकपत्नी , बहुपत्नी** ಮುಂತಾದವುಗಳು.

ಸಮಾಸರಹಿತವಿರುವಾಗ **पत्नी** ಎಂದಾಗದೆ **पति** ಎಂದೇ ಆಗುವುದು.

ಉದಾಹರಣೆ : **ग्रामस्य पतिः** - ಹಳ್ಳಿಯ ಒಡತಿ

गवां पतिः - ಗೋಗಳ ಒಡತಿ

अन्तर्वत् ಮತ್ತು **पतिवत्** ಶಬ್ದಗಳಿಗೆ ಸ್ತ್ರೀಲಿಂಗ ಬೋಧಕವಾದ **ई** ಪ್ರತ್ಯಯಪೂರ್ವದಲ್ಲಿ **नुत्व (न्)** ಬರುತ್ತದೆ.

ಉದಾಹರಣೆ : **अन्तर्वत्** = (ಒಳಗಡೆ ಇಟ್ಟುಕೊಂಡವ) **अन्तर्वत्नी** = ಗರ್ಭಿಣಿ

पतिवत् = ಒಡೆತನವುಳ್ಳವ **पतिवत्नी** = ಒಡೆತನವುಳ್ಳವಳು

शुचि , सुधी ಮುಂತಾದ ವಿಶೇಷಣಗಳು ಸ್ತ್ರೀಲಿಂಗದಲ್ಲಿ ಬದಲಾವಣೆಗೆ ಒಳಪಡುವುದಿಲ್ಲ.

वृषाकपि, अग्नि, कुसित, मनु ಈ ಶಬ್ದಗಳ ಅಂತ್ಯವರ್ಣವು **ई** ಪ್ರತ್ಯಯಪೂರ್ವದಲ್ಲಿ **ऐ** ಗೊಳ್ಳುವುದು. **मनु** ಶಬ್ದವು ಮಾತ್ರ ವೈಕಲ್ಪಿಕವಾಗಿ **मनौ** ಎಂದೂ ಆಗಬಹುದು.

ಉದಾಹರಣೆ : **वृषाकपि [वृषाकपै] - वृषाकपायी**

अग्नि [अग्नै] - अग्नायी

कुसित [कुसितै] - कुसितायी

मनु [मनै - मनौ] - मनायी - मनावी

ವನಂತ ಪ್ರಾತಿಪದಿಕದ ಅಂತ್ಯ ನಕಾರಕ್ಕೆ ರೇಫಾದೇಶ ಬರುವುದು.

ಉದಾಹರಣೆ : **शक्वन् - शक्वरी**

शर्वन् - शर्वरी

पीवन् - पीवरी

ಬಹುವ್ರೀಹಿ ಸಮಾಸದ ವನಂತ ಶಬ್ದಗಳು ವೈಕಲ್ಪಿಕವಾಗಿ ಸ್ತ್ರೀಲಿಂಗದಲ್ಲಿ ಆಕಾರಾಂತಗೊಳ್ಳುತ್ತವೆ ; ಆಗ ನುತ್ವಕ್ಕೆ ಲೋಪಬರುತ್ತದೆ.

ಉದಾಹರಣೆ : **बहुधीवन्** { **बहुधीवरी** / **बहुधीवा** }

Rarest Archiver

ಅಂಗಸೂಚಕ ಸಮಾಸಗಳೂ ಪದಾಂತ್ಯ ಸಮಾಸಗಳೂ ಸ್ತ್ರೀಲಿಂಗದಲ್ಲಿ ವೈಕಲ್ಪಿಕವಾಗಿ ಆಕಾರಾಂತಗೊಳ್ಳುತ್ತವೆ.

ಉದಾಹರಣೆ : **सुमुख - सुमुखा ; सुमुखी चन्द्रमुख - चन्द्रमुखा ; चन्द्रमुखी**

सुकेश - सुकेशा ; सुकेशी सप्तपद - सप्तपदा ; सप्तपदी

द्विपद - द्विपदा ; द्विपदी

ಆದರೆ **कुम्भ, शूल, तृण, हंस, काक, कृष्ण, सूकर** ಇವುಗಳ ಯೋಗವು **पद** ಶಬ್ದಕ್ಕಿರುವಾಗ ಸ್ತ್ರೀಲಿಂಗದ್ಯೋತಕವಾಗಿ **ई** ಯನ್ನೇ ಜೋಡಿಸಬೇಕಾಗುವುದು.

ಉದಾಹರಣೆ : **कुम्भपदी, शूलपदी, हंसपदी, काकपदी** ಮುಂತಾದವುಗಳು.

ಶತ್ರಂತ ಕೃದಂತಗಳಿಗೆ ಸ್ತ್ರೀಲಿಂಗದಲ್ಲಿ **ई** ಯನ್ನೇ ಜೋಡಿಸಬೇಕಾಗುತ್ತದೆ. ಇದನ್ನು ಕೃದಂತ ಪ್ರಕರಣದಲ್ಲಿ ನಿರ್ದೇಶಿಸಲಾಗಿದೆ.

ऊ (ऊङ्)

ಪ್ರಾತಿಪದಿಕಾಂತ್ಯದ ಉಕಾರಕ್ಕೆ ಉಪಾಂತ್ಯದಲ್ಲಿ ಯಕಾರದ ಯೋಗವಿಲ್ಲದಿದ್ದಲ್ಲಿ **ऊङादेश** ಬರುತ್ತದೆ.

ಉದಾಹರಣೆ : **कुरुः - कुरू** (ಕುರು ದೇಶದ ಸ್ತ್ರೀ)

कर्कन्धुः - कर्कन्धू

रज्जु ಮತ್ತು **हनु** ಇವುಗಳಿಗೆ ಈ ನಿಯಮವು ಅನ್ವಯಿಸುವುದಿಲ್ಲ ; ಇವುಗಳ ಅಂತ್ಯ ಉಕಾರವು ಸ್ತ್ರೀಲಿಂಗಬೋಧಕವಾಗಿರುವಾಗಲೂ ದೀರ್ಘಗೊಳ್ಳುವುದಿಲ್ಲ.

ಉಕಾರಾಂತ ಪ್ರಾತಿಪದಿಕಗಳ ಮೇಲೆ ಉಪಾಂತ್ಯದಲ್ಲಿ ಯಕಾರವಿದ್ದಲ್ಲಿ ಊಙಾದೇಶವಿಲ್ಲ.

ಉದಾಹರಣೆ : **अध्वर्युः - अध्वर्युः**

पङ्गु ಮತ್ತು ಬಾಹ್ವಂತ ಪ್ರಾತಿಪದಿಕಗಳ ಅಂತ್ಯ ಉಕಾರವು ಸ್ತ್ರೀಲಿಂಗಬೋಧಕವಾಗುವಾಗ ದೀರ್ಘಗೊಳ್ಳುವುದು.

ಉದಾಹರಣೆ : **पङ्गुः - पङ्गू बद्रबाहुः - भद्रबाहू वृत्तबाहुः - वृत्तबाहू**

कद्रु ಮತ್ತು **कमण्डलु** ಶಬ್ದಗಳು ವ್ಯಕ್ತಿವಾಚಕಗಳಾಗಿರುವಾಗ ಸ್ತ್ರೀಲಿಂಗದಲ್ಲಿ ಊಙಾದೇಶವನ್ನು ಹೊಂದುತ್ತವೆ.

ಉದಾಹರಣೆ : **कद्रु - कद्रू** (ಕದ್ರೂ ಎಂಬ ಹೆಸರಿನವಳು)

कमण्डलु - कमण्डलू (ಕಮಂಡಲೂ ಎಂಬ ಹೆಸರಿನವಳು)

ಉಳಿದೆಡೆಗಳಲ್ಲಿ ಉಕಾರಕ್ಕೆ ದೀರ್ಘತ್ವವಿಲ್ಲ.

Rarest Archiver

ಸಮಾಸಪದಾಂತ್ಯದಲ್ಲಿ **ऊरुः** ಶಬ್ದವಿದ್ದು ಅದು ಉಪಮಾಬೋಧಕವಾಗಿದ್ದಲ್ಲಿ ಅಂತ್ಯ ಉಕಾರಕ್ಕೆ ಊಙಾದೇಶ ಬರುತ್ತದೆ.

ಉದಾಹರಣೆ : **रम्भोरुः - रम्भोरू (रम्भे इव ऊरू यस्याः सा)**

- ಬಾಳೇರೆಂಬೆಯಂತಹ ತೊಡೆಯುಳ್ಳವಳು

ಇದೇ ರೀತಿ **करभोरू** ಮುಂತಾದ ಶಬ್ದಗಳು.

संहित, शफ, लक्षण, वाम, सहित ಮತ್ತು **सह** ಇವುಗಳ ಯೋಗವುಳ್ಳ ಸಮಾಸ ಪದಾಂತ್ಯದಲ್ಲಿರುವ **ऊरु** ವಿನ ಅಂತ್ಯ ಉಕಾರವು ಸ್ತ್ರೀಲಿಂಗದಲ್ಲಿ ದೀರ್ಘಗೊಳ್ಳುವುದು.

ಉದಾಹರಣೆ : **संहितोरुः - संहितोरू** **वामोरुः - वामोरू**

ಮುಂತಾದವುಗಳು.

ति

'ಯುವನ್' ಪ್ರಾತಿಪದಿಕಕ್ಕೆ ಸ್ತ್ರೀಲಿಂಗದಲ್ಲಿ **ति** ಪ್ರತ್ಯಯವು ಬರುತ್ತದೆ. ಆಗ ಅಂತ್ಯ ನುತ್ವಕ್ಕೆ (ನಕಾರಕ್ಕೆ) ಲೋಪಬರುತ್ತದೆ.

युवन् + ति = युवति

Rarest Archiver

೧೧

ಅವ್ಯಯ ಪ್ರಕರಣ

ಅವ್ಯಯ (Indeclinable) ಗಳ ಪ್ರಸ್ತಾಪವು ಈಗಾಗಲೇ ಕೃದಂತ ಪ್ರಕರಣದಲ್ಲಿ ಬಂದಿದೆ. ಅಲ್ಲಿ, ತುಮನ್ನಂತ ಲ್ಯಬಂತಗಳು ಅವ್ಯಯಗಳೆಂದು ತಿಳಿಸಲಾಗಿದೆ. ಮುಂದೆ, ಸಮಾಸ ಪ್ರಕರಣದಲ್ಲಿಯೂ ಅವ್ಯಯೀಭಾವ ಸಮಾಸದೊಡನೆ ಅವ್ಯಯಗಳ ವಿಷಯ ಬರುವುದಿದೆ. ಇಲ್ಲಿ, ಅವ್ಯಯ[1]ವೆಂದರೇನು ಮತ್ತು ಅವ್ಯಯಗಳು ಎಷ್ಟು ವಿಧಗಳಾಗಿವೆ ಅನ್ನುವುದನ್ನು ನಿರೂಪಿಸಲಾಗುವುದು.

स्वर्[2] ಮುಂತಾದ ಉಪಸರ್ಗಗಳಿಗೂ **च** ಮುಂತಾದ ನಿಪಾತಗಳಿಗೂ ಅವ್ಯಯಗಳೆನ್ನುವರು. ಅವ್ಯಯಗಳು **सुप्, तिङ्** ಮುಂತಾದ ಪ್ರತ್ಯಯಗಳನ್ನು ಪಡೆಯಲಾರವು ; ಮೂರೂ ಲಿಂಗವಚನಗಳಲ್ಲಿಯೂ ಒಂದೇ ವಿಧವಾಗಿರುವವು.

सदृशं त्रिषु लिंगेषु सर्वासु च विभक्तिषु।

वचनेषु च सर्वेषु यन्न व्येति तदव्ययम्।।

ಅವ್ಯಯಗಳನ್ನು ಅನುಕೂಲರೀತಿಯಲ್ಲಿ ಹೀಗೆ ವಿಭಾಗಿಸಬಹುದು.

I ಉಪಸರ್ಗಗಳು (Prepositions)

II. ಕ್ರಿಯಾವಿಶೇಷಣಗಳು (Adverbs)

III ಸಮುಚ್ಚಯವಾಚಕ ನಿಪಾತಗಳು (Conjunctions)

IV ಭಾವವಾಚಕ ನಿಪಾತಗಳು (Interjections)

V ಪದಪೂರ್ಣಾರ್ಥಕ ನಿಪಾತಗಳು (Particles)

I ಉಪಸರ್ಗಗಳು (Prepositions)

उपसर्गेण धात्वर्थो बलादन्यत्र नीयते।
प्रहाराहारसंहारविहारपरिहारवत्।।

1 ನಿರುಕ್ತಕಾರರಾದ ಯಾಸ್ಕರು, ಹೇಳುವ **चत्वारि पदजातानि नामरव्याते चोपसर्गनिपाताश्च** (ನಿರುಕ್ತ I, 1) ಅನ್ನುವಲ್ಲಿಯ **नाम** ಮತ್ತು **आरव्यात** ಇವುಗಳು ಸುಬಂತ ಮತ್ತು ತಿಙಂತಗಳಲ್ಲಿ ಬಂದವು. ಇನ್ನುಳಿದ ಉಪಸರ್ಗ ಮತ್ತು ನಿಪಾತಗಳು ಇಲಿ - ಅವ್ಯಯಗಳಲ್ಲಿ ಬರುತ್ತವೆ.

2 **स्वरादिनिपातमव्ययम्** (ಪಾ I, 1, 37) **स्वरादयः निपाताश्च अव्ययसंज्ञाः स्युः** (ಸಿ. ಕೌ 447)

Rarest Archiver

-ಉಪಸರ್ಗಗಳು ಧಾತುವಿನ ಅರ್ಥವನ್ನು ಗಣನೀಯವಾಗಿ ಬದಲಾಯಿಸುತ್ತವೆ. ಮೇಲಿನ ಕಾರಿಕೆಯಲ್ಲಿ 'हृ - ಒಯ್ಯು' ಧಾತುವನ್ನು ಉದಾಹರಿಸಿ ಅದರ ಮೇಲೆ **प्र, आ, सम्, वि, परि** ಈ ಉಪಸರ್ಗಗಳನ್ನು ತಂದು **हृ** ಧಾತುವಿನ ಅರ್ಥವು ಹೇಗೆ ಬದಲಾವಣೆಗೊಳ್ಳುತ್ತದೆ ಅನ್ನುವುದನ್ನು **प्रहार, आहार, संहार, विहार** ಮತ್ತು **परिहार** ಎಂಬ ಶಬ್ದಗಳ ಮೂಲಕ ತೋರಿಸಲಾಗಿದೆ.

ಉಪಸರ್ಗಗಳು ಎಂದಿಗೂ ಸ್ವತಂತ್ರವಾಗಿ ಪ್ರಯೋಗಿಸಲ್ಪಡುವುದಿಲ್ಲ. ಇವು ಧಾತುಗಳ ಮೇಲೆ, ಅವುಗಳ ಆದಿಯಲ್ಲಿ ಬರುತ್ತವೆ. ಉಪಸರ್ಗಗಳಿಗೆ ಧಾತುಯೋಗದಲ್ಲಿ ಗತಿಗಳೆವೆಯೆಂದೂ ವೈಯಾಕರಣಿಗಳು ಗುರುತಿಸುತ್ತಾರೆ.

धात्वर्थं बाधते कश्चित् कश्चित्तमनुवर्तते।
तमेव विशिनष्ट्यन्ये उपसर्गगतिस्त्रिधा।।

ಉಪಸರ್ಗಗಳು ಕೆಲವೆಡೆ, ಧಾತುವಿನ ಅರ್ಥವನ್ನು ಬಾಧಿತಗೊಳಿಸುತ್ತವೆ ; ಇನ್ನು ಕೆಲವೆಡೆ, ಧಾತುವಿನ ಅರ್ಥವನ್ನು ಪೋಷಿಸುತ್ತವೆ ; ಮತ್ತೆ ಕೆಲವೆಡೆ ಧಾತುವಿನ ಅರ್ಥದಲ್ಲಿ ವೈಶಿಷ್ಟ್ಯವನ್ನು ಪೇರಿಸುತ್ತವೆ . ಮುಖ್ಯ ಉಪಸರ್ಗಗಳನ್ನೂ ಅವುಗಳು ಸಾಮಾನ್ಯವಾಗಿ ಬೋಧಿಸುವ ಅರ್ಥವನ್ನೂ ಉದಾಹರಣೆ ಸಹಿತ ಇಲ್ಲಿ ಕೊಡಲಾಗಿದೆ.

ಉಪಸರ್ಗ ಮತ್ತು ಅರ್ಥ		ಉದಾಹರಣೆಗಳು
स्वर्	= ಅತಿ ಒಳ್ಳೆಯ	**स्वर्ग**
अन्तर्	= ಒಳಗೆ	**अन्तर्धान, अन्तर्भूत, अन्तर्दाह** ಮುಂತಾದ ಶಬ್ದಗಳು
अति	= ದಾಟಿ, ಆಚೆ, ಹೆಚ್ಚಿನ ಮುಂತಾದ ಶಬ್ದಗಳು	**अतिक्रमः, अतिक्रान्तः, अत्यानन्दः** ಮುಂತಾದ ಶಬ್ದಗಳು
अधि	= ಮೇಲೆ, ಹೆಚ್ಚಿನ ಮುಂತಾದವು	**अधिगमः, अधिकारः, अधिराजः** ಮುಂತಾದ ಶಬ್ದಗಳು
अनु	= ನಂತರ, ಹಿಂದೆ, ಸಂಗಡ ಯೋಗ್ಯ ಮುಂತಾದವು	**अनुक्रमः, अनुग्रहः, अनुरूप** ಮುಂತಾದವುಗಳು
अप	= ದೂರ, ವಿರುದ್ಧ, ಕೆಟ್ಟ ಮುಂತಾದವುಗಳು	**अपहार, अपनयन, अपकार, अपमार्ग** ಮುಂತಾದವುಗಳು
अपि	= ಹತ್ತಿರ ಮುಂತಾದವು	**अपिगमन** ಮುಂತಾದವುಗಳು
अभि	= ಕಡೆಗೆ, ಎಡೆಗೆ, ಮೇಲ್ಬಾಯ್ದು ಮುಂತಾದವುಗಳು.	**अभिगमन, अभिभू** (ಸೋಲಿಸು) ಮುಂತಾದವುಗಳು
अव	= ಕೆಳಗೆ, ಕೀಳು ಮುಂತಾದವುಗಳು.	**अवतार, अवमान** ಮುಂತಾದವುಗಳು
अस्तम्	= ಮುಳುಗು, ನಾಶ ಮುಂತಾದವು.	**अस्तङ्गतः, अस्तंनीतः** ಮುಂತಾದವುಗಳು

Rarest Archiver

आ	= ವರೆಗೆ, ಎಲ್ಲೆಡೆ, ಮುಚ್ಚಿದ ಸ್ವಲ್ಪ ಮುಂತಾದವು.	**आकर्णान्तम्** (ಕಿವಿಯವರೆಗೆ) **आकाशः, आरक्तः आपाण्डुः** ಮುಂತಾದವುಗಳು
उत्	= ಮೇಲೆ, ಹೊರಗೆ, ದಾಟಿದ ಮುಂತಾದವುಗಳು	**उत्सरण, उद्यम, उच्चारण, उन्मार्ग** ಮುಂತಾದವುಗಳು.
उप	= ಹತ್ತಿರ, ಸಮಾನ, ಮುಂತಾದವುಗಳು.	**उपनयन, उपमान** ಮುಂತಾದ ಶಬ್ದಗಳು
दुस् (दुर्)	= ಕೆಟ್ಟ, ಅಸಾಧ್ಯ ಮುಂತಾದವು	**दुराचार, दुष्कर** ಮುಂತಾದವುಗಳು
नि	= ಒಳಗೆ, ವಿರುದ್ಧ, ದೊಡ್ಡ ಮುಂತಾದವುಗಳು	**निवेशनम्, नितराम्, निचय** (ದೊಡ್ಡ ಗುಂಪು) ಮುಂತಾದವುಗಳು
निस्(निर्)	= ಹೊರಗೆ, ದೂರ, ಹೊರತಾಗಿ ಮುಂತಾದವುಗಳು.	**निर्गमन, निर्दोषः, निःशङ्का** ಮುಂತಾದವುಗಳು
परा	= ದೂರ, ವಿರುದ್ಧ, ಹಿಂದೆ ಮುಂತಾದವುಗಳು	**परागतः, परोक्षम् , पराजयः** ಮುಂತಾದ ಶಬ್ದಗಳು
परि	= ಸುತ್ತ,ಸಮಸ್ತ ಮುಂತಾದವುಗಳು	**परिगणना, परिणामः** ಮುಂತಾದವುಗಳು
प्रति	= ಎಡೆಗೆ, ತಿರುಗಿ, ವಿರುದ್ಧವಾಗಿ ಮುಂತಾದವುಗಳು	**प्रतिगच्छति, प्रतिवदति, प्रतीकारः** ಮುಂತಾದ ಶಬ್ದಗಳು
वि	= ಒಂದೆಡೆ, ಬೇರೆಯಾಗಿ, ವಿರುದ್ಧ ಮುಂತಾದವುಗಳು.	**विचल** (ಒಂದೆಡೆ ಹೋಗುವಿಕೆ) **वियुज्यते** (ಬೇರೆಯಾಗುತ್ತಾನೆ) **विक्रीणते** (ಕೊಂಡುಕೊಳ್ಳುವುದರ ವಿರುದ್ಧಾರ್ಥ = ಮಾರುತ್ತಾನೆ)
सम्	= ಕೂಡಿಕೊಂಡು, ಒಳ್ಳೆಯ ತುಂಬ, ನಾಶ ಮಂತಾದವು	**सङ्गमः, संस्कृतिः, संस्कारः, समृद्धिः संहारः** ಮುಂಶಾದವುಗಳು
सु	= ಒಳ್ಳೆಯ, ಚೆನ್ನಾಗಿ, ಮುಂತಾದವು	**सुकृति, सुमहान्** ಮುಂತಾದವುಗಳು

ಧಾತುವಿನ ಮೇಲೆ ಒಂದಕ್ಕಿಂತ ಹೆಚ್ಚಿಗೆ ಉಪಸರ್ಗಗಳು ಏಕಕಾಲದಲ್ಲಿ ಬರಬಹುದು.

ಉದಾಹರಣೆ : **प्रति + आ + गम् = प्रत्यागच्छति** = ತಿರುಗಿ ಬರುತ್ತಾನೆ.

Rarest Archiver

II ಕ್ರಿಯಾವಿಶೇಷಣಗಳು (Adverbs)

ಕ್ರಿಯೆಯ ಸ್ಥಳ, ಸಮಯ, ಸ್ವಭಾವ ಮುಂತಾದವುಗಳನ್ನು ಬೋಧಿಸುವ ಅವ್ಯಯಗಳಿವು.

ಉದಾಹರಣೆ : **प्रकामम् आपीतो जम्बूफलरसानि** (ಬಾಣ.ಕಾದಂ.)

ಬೇಕಾದಷ್ಟು ನೇರಿಳೇರಸವು ಕುಡಿಯಲ್ಪಟ್ಟಿತು (ಸ್ವಭಾವ)

अजस्रं कुरु अध्ययनम्

ಯಾವಾಗಲೂ ಅಧ್ಯಯನ ಮಾಡು (ಸಮಯ)

अत्रैव तिष्ठ - ಇಲ್ಲಿಯೇ ನಿಲ್ಲು (ಸ್ಥಳ)

अत्र, अथ, अधुना ಮುಂತಾದವು ಮೂಲ ಅವ್ಯಯಗಳು.

अशेषेण, प्रकामम्, अचिरम् ಮುಂತಾದವು ಸಾಧಿತಾವ್ಯಯಗಳು.

सुखम्, दुःखेन, अचिराय, दूरात्, स्थाने ಮುಂತಾದ ಅವ್ಯಯಗಳು ವಿಭಕ್ತಿ ಪ್ರತ್ಯಯಯುತವಾದವುಗಳೆಂದು ತೋರಿದರೂ ವಿಭಕ್ತ್ಯರ್ಥರಹಿತವಾಗಿರುತ್ತವೆ.

ಉದಾಹರಣೆ : **अचिरेण** = ಬೇಗನೆ **अचिरेण वद** = ಬೇಗನೆ ಹೇಳು

अचिराय = ಬೇಗನೆ **अचिराय आगच्छ** = ಬೇಗನೆ ಬಾ

ಅವ್ಯಯ	ಅರ್ಥ	ಅವ್ಯಯ	ಅರ್ಥ
अकस्मात्	ಒಮ್ಮೆಲೆ	**अग्रतः / अग्रे**	ಮುಂದೆ
अचिरस् /अचिरेण	ಬೇಗನೆ	**अजस्रम्**	ಯಾವಾಗಲೂ
अचिराय / अचिरात्	ಬೇಗನೆ	**अज्ञानतः**	ಅಜ್ಞಾನದಿಂದ
अन्तर / अन्तरा	ಒಳಗೆ, ಹೊರತಾಗಿ	**अतः**	ಆದ್ದರಿಂದ
अन्तरेण / अन्तरे	ಮಧ್ಯದಲ್ಲಿ	**अतीव**	ಬಹಳ
अद्धा	ನಿಜವಾಗಿಯೂ	**अत्र**	ಇಲ್ಲಿ
अद्य	ಇಂದು	**अथकिम्**	ಹೌದು
अपरम्	ಮತ್ತೆ, ಮತ್ತೊಂದು	**अधः, अध**	ಕೆಳಗೆ
अधुना	ಈಗ	**अधस्तात**	ಕೆಳಗೆ
अन्यच्च /अन्यत्	ಮತ್ತೆ	**अपरेद्युः**	ಮಾರನೇ ದಿನ
अभितः	ಹತ್ತಿರ	**अनिशम्**	ಎಡೆಬಿಡದೆ
अम्	ಬೇಗನೆ, ಸ್ವಲ್ಪ	**अन्यत्र**	ಬೇರೆಡೆ
अमुत्र	ಅಲ್ಲಿ, ಇನ್ನೊಂದು ಲೋಕದಲ್ಲಿ	**अन्यथा**	ಇಲ್ಲವಾದರೆ
अर्वाक्	ಹಿಂದೆ	**अभीक्ष्णम्**	ಪದೇ ಪದೇ

Rarest Archiver

अमा	ಸಂಗಡ
अरल्	ಬೇಗನೇ
अलम्	ಸಾಕು
अवः	ಹೊರತಾಗಿ
असकृत	ಪದೇಪದೇ
असम्प्रति **असाम्प्रतम्**	ಅಯೋಗ್ಯವಾಗಿ
अह्नाय	ಶೀಘ್ರವಾಗಿ
आनुषक् **आनुषद्**	ಅಡೆತಡೆಯಿಲ್ಲದೆ
आरात्	ಹತ್ತಿರದಿಂದ
आविस्	ತೆರೆದು
इतः	ಇತ್ತ
इतस्ततः	ಇತ್ತಿಂದತ್ತ
इति	ಹೀಗೆ
इतरम्	ಮತ್ತೆ
इतरेद्युः	ಮತ್ತೊಂದು ದಿನ
इतिह	ಹೀಗೆ, ನಿಜವಾಗಿಯೂ
इत्थम्	ಈ ರೀತಿಯಾಗಿ
इदानीम्	ಈಗ
इद्धा	ನಿಜವಾಗಿಯೂ
इह	ಇಲ್ಲಿ
ईषत्	ಸ್ವಲ್ಪ
उच्चैः	ಎತ್ತರವಾಗಿ
उत्तरम्	ಆಗ, ನಂತರ
उत्तरेद्युः	ಅದರ ಮುಂದಿನ ದಿನ
उपांशु	ಗೋಪ್ಯವಾಗಿ

उभयतः	ಎರಡೂಕಡೆಗಳಿಂದ
उभयद्युः **उभयेद्युः**	ಎರಡೂ ದಿನಗಳು
उषा	ಬೆಳಿಗ್ಗೆ
ऋतम् / ऋधक्	ನಿಜವಾಗಿ
ऋते	ಹೊರತಾಗಿ
एकत्र	ಒಂದೆಡೆ
एकदा / एकधा	ಒಮ್ಮೆ
एकपदे	ಒಮ್ಮೆಲೇ
एतर्हि	ಈಗ
एव	ಆಗಲೇ, ಹಾಗೇ
एवम्	ಹೀಗೆ
ओम्	ಇರಲಿ
कथम्	ಹೇಗೆ, ಹೇಗೆತಾನೆ
कथञ्चन	ಬಹಳ ಕಷ್ಟಪಟ್ಟು
कथञ्चित् **कथन्नाम**	ಹೇಗೆ ತಾನೇ
कदा	ಯಾವಾಗ
कदाचित्	ಒಮ್ಮೆ , ಒಂದುಸಾರೆ
कर्हि	ಯಾವಾಗ
कर्हिचित्	ಯಾವಾಗಲೋ ಒಮ್ಮೆ
किंकिल	ಅಯ್ಯೋ ಎನ್ನುವಂತೆ
किञ्च	ಮತ್ತೆ
किञ्चन	ಅಷ್ಟು
किञ्चित्	ಸ್ವಲ್ಪ
किन्तु	ಆದರೆ
किम्	ಏನು ? ಯಾವುದು?
किमुत	ಎಷ್ಟು

Rarest Archiver

किमुह	ಹೇಗೆ	**तिर्यक्**	ಕೆಟ್ಟದಾಗಿ
किंवा	ಅಥವಾ	**तावत्**	ಮೊದಲು
किल	ಅಷ್ಟೇ, ನಿಜವಾಗಿಯೂ	**तूष्णीम्/ तूष्णीकम्**	ಶಾಂತವಾಗಿ
किंस्वित्	ಹೇಗೆ?	**तेन**	ಆದ್ದರಿಂದ
किमु	ನಂತರ ಏನು?	**दिवा**	ಹಗಲು
कुतः	ಎಲ್ಲಿಂದ	**दिष्टया**	ಸುದೈವದಿಂದ
कुत्र	ಎಲ್ಲಿ?	**दूरम्**	ದೂರವಾಗಿ
कुत्रचित्	ಎಲ್ಲಿಯೋ?	**दोषा**	ರಾತ್ರಿಯಲ್ಲಿ
कुवित्	ಬಹಳ	**द्राक् / द्राङ्**	ಬೇಗನೆ
कुषत्	ಬಹಳ ಒಳ್ಳೇ ರೀತಿಯಲ್ಲಿ	**ध्रुवम्**	ನಿಜವಾಗಿಯೂ
कुपत्	ಒಳ್ಳೇ ರೀತಿಯಲ್ಲಿ	**नकिम् / नकिर्**	ಹಾಗಲ್ಲ
कृतम्	ಸಾಕು	**नक्तम्**	ರಾತ್ರಿಯಲ್ಲಿ
केवलम्	ಅಷ್ಟೇ	**न**	ಇಲ್ಲ
क्व	ಎಲ್ಲಿ ?	**नवरम्**	ಆದರೆ
खलु	ನಿಜವಾಗಿಯೂ	**नह / नहि**	ಹಾಗಲ್ಲ
चिरम् / चिरेण	ಬಹಳಕಾಲದವರೆಗೆ	**नाम**	ಹೆಸರಿನಿಂದ /ನಿಜವಾಗಿಯೂ
चिराय / चिरात्		**निकषा**	ಹತ್ತಿರ
जातु	ಬಹುಶಃ	**निकामम्**	ಬಹಳ
जोषम्	ಸುಮ್ಮನೆ	**नूनम्**	ನಿಜವಾಗಿಯೂ
ज्योक्	ಬೇಗನೆ	**नो**	ಇಲ್ಲ
झगिति / झटिति	ಬೇಗನೆ	**परम्**	ಆಗ, ನಂತರ
ततः / तद्	ಆದ್ದರಿಂದ	**परश्व**	ನಾಡಿದ್ದು
तथा	ಹಾಗೆ, ಆರೀತಿ	**परितः**	ಸುತ್ತು ಮುತ್ತ
तथाहि	ಹಾಗೆಂದರೆ	**परेद्यवि**	ಅಂದು, ಒಂದುದಿನ
तदानीम्	ಆಗ	**परेद्युः**	ನಾಳೆ
तस्मात्	ಆದ್ದರಿಂದ	**पर्याप्तम्**	ಸಾಕಷ್ಟು, ಇಚ್ಛಾಪೂರ್ತಿ
तर्हि	ಆಗ	**पश्चात्**	ಹಿಂದಿನಿಂದ , ಕಟ್ಟಕಡೆಗೆ
तिरः	ವಕ್ರವಾಗಿ	**पुनः**	ಮತ್ತೆ

Rarest Archiver

पुरः/पुरतः/पुरस्तात्	ಮುಂದೆ	**यत्**	ಆದ್ದರಿಂದ
पूर्वतः	ಮೊದಲಿನಿಂದ	**यतः**	ಏಕೆಂದರೆ
पूर्वेद्युः	ಹಿಂದಿನ ದಿನ	**यत्र**	ಎಲ್ಲಿ
प्रथक्	ಬೇರೆಯಾಗಿ	**यथा**	ಹೇಗೆ
प्रकामम्	ಬಹಳ	**यथाक्रमम्**	ಕ್ರಮವಾಗಿ
प्रगे	ಬೆಳಗ್ಗೆ	**यदा**	ಯಾವಾಗ
प्रतिदिनम्	ದಿನಾಲು	**यावत्**	ಎಲ್ಲಿಯವರೆಗೆ
प्रत्युत	ತಿರುಗಿ, ಮತ್ತೆ	**युक्**	ಕಟ್ಟಿದಾಗಿ
प्रसह्य	ಬಲಾತ್ಕಾರವಾಗಿ	**युगपत्**	ಒಮ್ಮೆಲೆ
प्राक्	ಮೊದಲು	**वत्**	ಹಾಗೆ
प्रातर्	ಬೆಳಗ್ಗೆ	**वाव**	ಕೇವಲ
प्राध्वम्	ವಕ್ರವಾಗಿ	**विना**	ಹೊರತಾಗಿ
प्रायः	ಸಾಧಾರಣವಾಗಿ	**विषु**	ಅತ್ಯಂತ
प्राह्णे	ಮಧ್ಯಾಹ್ನದಲ್ಲಿ	**विहायसा**	ಆಕಾಶದಲ್ಲಿ
प्रेत्य	ಸತ್ತಮೇಲೆ	**वृथा**	ವ್ಯರ್ಥವಾಗಿ
बलवत्/ बलात्	ಬಲಾತ್ಕಾರವಾಗಿ	**वै**	ನಿಜವಾಗಿ
बहिः	ಹೊರಗೆ	**शनैः**	ಸಾವಕಾಶವಾಗಿ
भाजक्	ಬೇಗನೆ	**शश्वत्**	ಯಾವಾಗಲೂ
भूयः	ಮತ್ತೆ	**सकृत्**	ಒಮ್ಮೆ, ಒಂದುಸಾರೆ
भृशम्	ಬಹಳ, ಪದೇಪದೇ	**सङ्क्षु**	ಬೇಗನೆ
मनाक्	ಸ್ವಲ್ಪ	**सजुष्**	ಕೂಡಿಕೊಂಡು
माकिम् / माकिर्	ಹೊರತಾಗಿ	**सत्**	ಒಳ್ಳೆಯ
माचिरम्	ತಡಮಾಡದೆ	**सततम् / सदा**	ಯಾವಾಗಲೂ
मिथः	ಕೂಡಿಕೊಂಡು	**सद्यः**	ಕೂಡಲೇ
मिथ्या	ಸುಳ್ಳು, ಸುಳ್ಳೇ	**सपदि**	ಕೂಡಲೇ
मुधा	ವ್ಯರ್ಥವಾಗಿ	**समन्ततः**	ಎಲ್ಲೆಡೆ
मुहुर्	ಮತ್ತೆ	**समम्**	ಸಮವಾಗಿ
मृषा	ಸುಳ್ಳು, ಸುಳ್ಳೇ	**समया**	ಹತ್ತಿರ

Rarest Archiver

समीपम् /समीपे	ಹತ್ತಿರ	**साचि**	ವಕ್ರವಾದ
समीचीनम्	ಒಳ್ಳೆಯದಾಗಿ	**सार्धम्**	ಸಂಗಡ
समुप्रजोषम्	ಸಂತೋಷದಿಂದ	**सामि**	ಅರ್ಧ
सम्यक्	ಒಳ್ಳೆಯ	**साम्प्रतम्**	ಈಗ
सम्मुखम्	ಎದುರಿಗೆ	**सायम्**	ಸಾಯಂಕಾಲ
सर्वतः	ಎಲ್ಲೆಡೆ	**सुष्ठु**	ಒಳ್ಳೆಯದು
सर्वदा	ಯಾವಾಗಲೂ	**स्वयम्**	ಸ್ವತಃ
सह/ सहितम्	ಸಂಗಡ, ಒಡಗೊಂಡು	**हि**	ಏಕೆಂದರೆ , ನಿಜವಾಗಿ
सहसा	ಕೂಡಲೇ	**हेतोः / हेतौ**	ಕಾರಣದಿಂದ
साकम्	ಸಂಗಡ	**ह्यस् / ह्यः**	ನಾಳೆ
साक्षात्	ಎದುರುಗಡೆಗೆ, ಸ್ವತಃ		

III ಸಮುಚ್ಚಯವಾಚಕ ಅವ್ಯಯಗಳು (Conjunctions)

ಸಮುಚ್ಚಯವಾಚಕವಾಕ್ಯಗಳನ್ನು ರಚಿಸುವಾಗ ಪ್ರಯೋಗಿಸಲ್ಪಡುವ ಅವ್ಯಯಗಳನ್ನು ಸಮುಚ್ಚಯವಾಚಕ ಅವ್ಯಯಗಳೆಂದು ಕರೆಯಬಹುದು.

ಇವು **अथ ; च ; अथवा ; इति ; उत ; किञ्च ; किन्तु ; किंवा ; नोचेत् ; यतः ; वा** ಮುಂತಾದವುಗಳು ; ಮತ್ತು

यत् -------तत् **यदा------तदा** **यदि--------तर्हि**

यावत्----तावत् **येन------तेन** **यस्मिन्------तस्मिन्**

ಮುಂತಾದವುಗಳೂ ಸಮುಚ್ಚಯವಾಚಕ ನಿಪಾತಗಳೆನಿಸುತ್ತವೆ.

ಉದಾಹರಣೆ :

अथ तेन ते पृष्टाः =-ನಂತರ, ಅವನಿಂದ ಅವರು ಕೇಳಲ್ಪಟ್ಟರು.

अर्थं विना नैव यशश्च मानम् = - ಹಣವಿಲ್ಲದಿದ್ದಾಗ ಕೀರ್ತಿಯಿಲ್ಲ ಮತ್ತು ಮನ್ನಣೆಯೂ ಇಲ್ಲ.

आर्यपुत्र एव ममाभरणविशेष इति जानातु भवति (ಮೃಚ್ಛ VI) =

- ಪತಿಯೇ ನನ್ನ ಆಭರಣ ವಿಶೇಷವೆಂದು ಪೂಜ್ಯಳು ತಿಳಿಯಲಿ

अद्यैव वा मरणमस्तु युगान्तरे वा (ಭರ್ತೃ) =

- ಮರಣವು ಇಂದೇ ಬರಲಿ ಅಥವಾ ಯುಗಾಂತರದಲ್ಲಿಯೇ ಬರಲಿ

यथा न मे सैनिकास्तपोवनमुपरुन्धन्ति तथा निषेद्धव्याः (ಅ.ಶಾ. II) =

- ನನ್ನ ಸೈನಿಕರು ತಪೋವನದಲ್ಲಿ ಅಡೆತಡೆಯನ್ನು ಉಂಟುಮಾಡದಂತೆ ತಡೆಯಲ್ಪಡಲಿ.

Rarest Archiver

यदेतदनुमरणं नाम तदतिनिष्फलम् (ಬಾ.ಕಾದಂ.) =

- ಸಹಗಮನವೆನ್ನುವುದಿದು ಅತಿ ನಿಷ್ಫಲವಾದುದುದು.

IV ಭಾವವಾಚಕ ನಿಪಾತಗಳು (Interjections)

ಸಂತೋಷ, ಸಂಕಟ, ಆಶ್ಚರ್ಯ, ದುಃಖ, ಧಿಃಕ್ಕಾರ ಮುಂತಾದ ವಿವಿಧ ಭಾವಬೋಧಕಾವ್ಯಯಗಳನ್ನು ಭಾವವಾಚಕಗಳೆಂದು ಗುರುತಿಸಬಹುದು.

अङ्ग! , अये !, अरे !, अरेरे!, अवे!, अह!, अहह!, अहो!, अहोस्वित्!, आ!, आहो!, उ!, उत!, उताहो!, ए!, ऐ!, ओ!, किम्!, धिक्!, बत!, ह!, हम्!, हन्त!, हंहो!, हाहाहा!, हीही!, हुम्!, हे!, है!, हो! ಮುಂತಾದ ನಿಪಾತಗಳು ಭಾವವಾಚಕಾವ್ಯಯಗಳು.

ದೇವತೆಗಳಿಗೆ ಹವಿಸ್ಸನ್ನು ಅರ್ಪಿಸುವಾಗ ಹೇಳುವ **वौषट्, वषट्, स्वाहा** ನಿಪಾತಗಳೂ ಪಿತೃಗಳಿಗೆ ತರ್ಪಣವನ್ನು ಕೊಡುವಾಗ ಹೇಳುವ **स्वधा** ಶಬ್ದವೂ ಭಾವವಾಚಕಗಳ ಸಾಲಿಗೆ ಸೇರಬಹುದು.

ಉದಾಹರಣೆ : **अंग! पश्यामि** = ಇರಲಿ! ನೋಡುವೆ

अये! किमेतत्? = ಅರೆ ! ಇದೇನಿದು ?

हा! धिक् ! अप्रियमेव संवृत्तम् = ಅಯ್ಯೋ ! ಅಪ್ರಿಯವೇ ಘಟಿಸಿತು.

V ಪದಪೂರ್ಣಾರ್ಥಕ ನಿಪಾತಗಳು (Particles)

च, वै, तु, हि, ह, नु, तु, किल, खलु ಮುಂತಾದ ನಿಪಾತಗಳು ಪದ ಪೂರ್ಣಾರ್ಥಕ ಅವ್ಯಯಗಳು. ಇವುಗಳಲ್ಲಿ **च, वै, तु, हि** ಇವುಗಳನ್ನು ಸಾಮಾನ್ಯವಾಗಿ ಪದ್ಯಗಳಲ್ಲಿಯೂ ಇವುಗಳನ್ನೊಳಗೊಂಡು ಇನ್ನುಳಿದ ಅವ್ಯಯಗಳನ್ನು ಗದ್ಯದಲ್ಲಿಯೂ ಪ್ರಯೋಗಿಸುತ್ತಾರೆ.

ಉದಾಹರಣೆ :

ऊर्ध्वबाहुर्विरौम्येषः न च कश्चित् शृणोति मे = ತೋಳೆತ್ತಿ ಒಂದೇ ಸಮನೆ ಕೂಗುತ್ತಿದ್ದೇನೆ ಯಾರೂ ಕೇಳುತ್ತಿಲ್ಲ. (ಭಾರತ)

मयोक्तं वै निबोधत = ನನ್ನಿಂದ ಹೇಳಲ್ಪಟ್ಟಿತು ಎಂದು ತಿಳಿಯಿರಿ.

तस्याभ्याशे तु मिथुनं चरन्तमनपायिनम् (ರಾಮಾ. ಬಾಲ.2,9) = ಅಲ್ಲಿ, ಹತ್ತಿರದಲ್ಲಿ ಸಂಚರಿಸುವ ಅಮಾಯಕ (ಕ್ರೌಂಚ) ಜೋಡಿಯನ್ನು...

न हि त्वां प्राकृतं मन्ये वानरं वानरर्षभ (ರಾಮಾ. ಸುಂದ.36,9) = ವಾನರ ಶ್ರೇಷ್ಠನೇ ನಿನ್ನನ್ನು ನಾನು ಸಾಮಾನ್ಯ ವಾನರವೆಂದು ತಿಳಿಯವುದಿಲ್ಲ.

दण्डकान् प्रविवेश ह = (ರಾಮಾ. ಬಾಲ.1, 40) = ದಂಡಕಾರಣ್ಯವನ್ನು ಪ್ರವೇಶಿಸಿದನು.

सखि, मदनः खलु नियोजयति = ಗೆಳತಿ, ಮದನನು ನಿಯೋಜಿಸುತ್ತಾನೆ.(ಕಾ.ವಿಕ್ರ.)

मया किल तदुक्तम् = ನನ್ನಿಂದ ಅದು ಹೇಳಲ್ಪಟ್ಟಿತು.

Rarest Archiver

೧೨

ಸಮಾಸ ಪ್ರಕರಣ

(i) ಸಮಾಸವೃತ್ತಿ (Compounds)

संक्षेपार्थः समासः ; सम् ಸಂಕ್ಷೇಪವಾಗಿ **आस** - ಇರುವುದು ; ಅರ್ಥವು ಸಂಕ್ಷಿಪ್ತ ಶಬ್ದಗಳಲ್ಲಿ ವಾಚ್ಯವಾಚಕಸಂಬಂಧದಿಂದ ಇರುವುದು ಎಂದರ್ಥ. **संगतार्थः समासः** ಎಂದೂ **समास** ಶಬ್ದವನ್ನು ವಿಗ್ರಹಿಸಬಹುದು.

पदसंघःसमासस्यादैकपद्यमुपाश्रितः ।

तदर्थबोधकं वाक्यं विग्रहस्स द्विधामतः । ।

-ಏಕಪದವನ್ನು ಆಶ್ರಯಿಸಿದ ಪದಸಮೂಹವೇ ಸಮಾಸವು. ಸಮಾಸದ ಅರ್ಥವನ್ನು ಬೋಧಿಸುವ ವಾಕ್ಯವೇ ವಿಗ್ರಹವು. ಈ ವಿಗ್ರಹವು ಎರಡು ಬಗೆ ; ಲೌಕಿಕ ಮತ್ತು ಅಲೌಕಿಕ. ಪ್ರಯೋಗಾರ್ಹವಾದ ವಿಗ್ರಹವು ಲೌಕಿಕವಾದದ್ದು ; ಪ್ರಯೋಗಕ್ಕೆ ಅನರ್ಹವಾದ ವಿಗ್ರಹವು ಅಲೌಕಿಕ ವಿಗ್ರಹವು -

ಉದಾಹರಣೆ : **राजपुरुषः** - ಸಮಾಸ ಶಬ್ದ

राज्ञः पुरुषः - ಇದು ಪ್ರಯೋಗಾರ್ಹವಾದ ಲೌಕಿಕ ವಿಗ್ರಹ

राजन् + ङस् ; पुरुष + सु - ಇಲ್ಲಿ ವಿಭಕ್ತಿ ಪ್ರತ್ಯಯಗಳನ್ನು ವಿಗ್ರಹಿಸಿದ್ದರಿಂದ ಇದು ಪ್ರಯೋಗಕ್ಕೆ ಅನರ್ಹವಾದ ವಿಗ್ರಹ : ಆದ್ದರಿಂದ, ಅಲೌಕಿಕ.

ಮೇಲಿನ ಉದಾಹರಣೆಯಲ್ಲಿ **राज्ञः** ಮತ್ತು **पुरुषः** ಈ ಭಿನ್ನ ಪದಗಳು **राजपुरुषः** ಎಂದು ಐಕಪದ್ಯವಾಗಿವೆ. ಶಬ್ದಸಮೂಹವು ಏಕಪದವನ್ನಾಶ್ರಯಿಸುವ ವೃತ್ತಿಗೆ 'ಸಮಾಸ ವೃತ್ತಿ ' ಅನ್ನುವುದು ಪಾರಿಭಾಷಿಕ ಸಂಜ್ಞೆ.

ಸಮಾಸವಾಗುವಾಗ ಸಾಮಾನ್ಯವಾಗಿ, ಪ್ರಾತಿಪದಿಕಗಳ ಮೇಲೆ ಬಂದಿರುವ ವಿಭಕ್ತಿ ಪ್ರತ್ಯಯಗಳಿಗೆ ಲುಕ್ ಬರುತ್ತದೆ ; ಅರ್ಥಾತ್ , ವಿಭಕ್ತಿ ಪ್ರತ್ಯಯಗಳು ಇಲ್ಲವಾಗುತ್ತವೆ.

ಸಮಾಸಗಳು ಮುಖ್ಯವಾಗಿ ಏಳು ವಿಧ -

I ತತ್ಪುರುಷ ಸಮಾಸ (Determinative Compounds)

II ಕರ್ಮಧಾರಯ ಸಮಾಸ (Appositional Compounds)

III ದ್ವಿಗು ಸಮಾಸ (Numerative Compounds)

IV ದ್ವಂದ್ವ ಸಮಾಸ (Copulative Compounds)

V ಅವ್ಯಯೀ ಭಾವ ಸಮಾಸ (Adverbial Compounds)

VI ಬಹುವ್ರೀಹಿ ಸಮಾಸ (Attributive Compounds)

VII ಕೇವಲ(ಸುಪ್ ಸುಪ್) ಸಮಾಸ (Undissolvable Compounds)

Rarest Archiver

ಈ ಸಮಾಸಗಳ ಸಂಖ್ಯಾನಿರ್ದೇಶನದಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರು ಸಮಾಸಗಳು ನಾಲ್ಕು ವಿಧಗಳೆಂದು ಹೇಳಿ ತತ್ಪುರುಷದಲ್ಲಿಯೇ ಕರ್ಮಧಾರಯ ಮತ್ತು ದ್ವಿಗು ಸಮಾಸಗಳನ್ನು ಸೇರಿಸಿದ್ದಾರೆ. ಇನ್ನು ಕೆಲವರು ಇವುಗಳನ್ನು ಬೇರೆ ಬೇರೆಯಾಗಿಯೇ ವಿಂಗಡಿಸಿ ಸಮಾಸಗಳು ಆರು[1] ವಿಧಗಳೆಂದು ಹೇಳುತ್ತಾರೆ. ಈ ಆರು ವಿಧಗಳಿಗೆ ಕೇವಲ ಸಮಾಸವನ್ನು ಸೇರಿಸಿದಾಗ ಸಮಾಸಗಳು ಏಳುವಿಧಗಳಾಗುತ್ತವೆ.

I ತತ್ಪುರುಷ ಸಮಾಸ (Determinative Compounds)

ಪೂರ್ವೋತ್ತರ ಪದಗಳಲ್ಲಿ ಉತ್ತರಪದಾರ್ಥ ಪ್ರಧಾನವಾದುದು ತತ್ಪುರುಷ ಸಮಾಸ. ಅಂದರೆ, ತತ್ಪುರುಷದಲ್ಲಿ ಪೂರ್ವಪದವು ಬೋಧಿಸುವ ಅರ್ಥವು ಗೌಣವೂ ಉತ್ತರಪದವು ಬೋಧಿಸುವ ಅರ್ಥವು ಪ್ರಧಾನವೂ ಎಂದು ತಿಳಿಯಬೇಕು.

ಉದಾಹರಣೆ : **देवपूजकः - देवस्य पूजकः** = ದೇವನನ್ನು ಪೂಜಿಸುವವ.

ಇಲ್ಲಿ, **पूजकः** ಪದಕ್ಕೆ **देवस्य** ಪದವು ಪೂರಕವಾಗಿ ಬಂದು **पूजकः** ಪದವು ಬೋಧಿಸುವ ವ್ಯಕ್ತಿಯ ವಿಶೇಷತೆಯನ್ನು ದ್ಯೋತಿಸುತ್ತದೆ.

ಮತ್ತೊಂದು ಉದಾಹರಣೆ : **विप्रगुः - विप्रस्य गौः** = ಬ್ರಾಹ್ಮಣನ ಆಕಳು.

ಇಲ್ಲಿ, 'ಆಕಳು' ಎನ್ನುವುದು ಪ್ರಧಾನವಾಗಿರುವುದನ್ನೂ ಅದು ಯಾರದು ಎಂದು ನಿರ್ದೇಶಿಸಲು ಬಂದಿರುವ ಪೂರ್ವಪದವು ಅಪ್ರಧಾನವಾಗಿರುವುದನ್ನೂ ಗುರುತಿಸಬಹುದು.

ತತ್ಪುರುಷ ಸಮಾಸದಲ್ಲಿ ಉಭಯ ಪದಗಳು ವಿಭಿನ್ನ ವಿಭಕ್ತಿಗಳನ್ನು ಆಶ್ರಯಿಸುತ್ತವೆ. ಪೂರ್ವಪದವು ಪ್ರಥಮಾವಿಭಕ್ತಿಯನ್ನು ಬಿಟ್ಟು ಇನ್ನುಳಿದ ವಿಭಕ್ತಿಗಳಲ್ಲೊಂದನ್ನು ಆಶ್ರಯಿಸಿರುತ್ತದೆ. ಉತ್ತರಪದವು ಮಾತ್ರ ಪ್ರಥಮಾವಿಭಕ್ತ್ಯಂತವಾಗಿರುತ್ತದೆ ; ಆದ್ದರಿಂದ ಇದು ವ್ಯಧಿಕರಣವೆನಿಸುವುದು. ಇದನ್ನು ಮೇಲಿನ ಉದಾಹರಣೆಗಳಲ್ಲಿಯೇ ಕಾಣಬಹುದು. ಪೂರ್ವಪದದ ವಿಭಕ್ತಿಗನುಗುಣವಾಗಿ ತತ್ಪುರುಷಸಮಾಸಗಳು ದ್ವಿತೀಯಾ ತತ್ಪುರುಷ, ತೃತೀಯಾ ತತ್ಪುರುಷ ಎಂದು ಮುಂತಾಗಿ ಗುರುತಿಸಲ್ಪಡುತ್ತವೆ.

ತತ್ಪುರುಷ ಸಮಾಸದಲ್ಲಿ ಸ್ತ್ರೀಲಿಂಗ ಶಬ್ದಗಳ ಅಂತ್ಯದಲ್ಲಿರುವ **आ, ई** ಗಳು ಹ್ರಸ್ವಗೊಳ್ಳುತ್ತವೆ, **गो** ಶಬ್ದವು ಉತ್ತರಪದವಾಗಿರುವಾಗ ಇದರ ಅಂತ್ಯ ಓಕಾರವು ಉಕಾರವಾಗುವುದು.

---

[1] ಈ ಷಡ್ವಿಧ ಸಮಾಸಗಳ ಪಟ್ಟಿಯನ್ನು ನೆನಪಿಟ್ಟುಕೊಳ್ಳಲು ಸಹಾಯಕವಾಗುವಂತೆ ರಾಜಶೇಖರನ ಕಾವ್ಯಮೀಮಾಂಸೆಯಲ್ಲಿಯ ೬ನೇ ಅಧ್ಯಾಯದಲ್ಲಿ ಬರುವ ಸುಂದರ ಶ್ಲೋಕವಿದು....

द्वन्द्वोऽस्मि द्विगुरस्मि च गृहे च मे सततमव्ययीभावः ।

तत्पुरुष कर्मधारय येनाऽहं स्यां बहुव्रीहिः । ।

-ನಾವಿಬ್ಬರಿದ್ದೇವೆ ; ಎರಡು ಗೋವುಗಳಿವೆ ; ನನ್ನ ಮನೆಯಲ್ಲಾದರೋ ಖರ್ಚಿಗೆ ಯಾವಾಗಲೂ ಅಭಾವವೇ! ಆದ್ದರಿಂದ ಎಲೈ ಪುರುಷನೇ, ಏನಾದರೂ ಕೆಲಸವನ್ನು ಕೈಗೊಳ್ಳು ; ಅಂದರೆ, ನಾನು ಬಹುಧಾನ್ಯವುಳ್ಳವನಾದೇನು.

Rarest Archiver

೧. ದ್ವಿತೀಯಾ[1] ತತ್ಪುರುಷ ಸಮಾಸ :

श्रित, अतीत, पतित, गत, प्राप्त, अत्यस्त ಮತ್ತು **आपन्न** ಶಬ್ದಗಳು ಉತ್ತರಪದಗಳಾಗಿ ಬಂದಿರುವಾಗ ದ್ವಿತೀಯಾ ತತ್ಪುರುಷ ಸಮಾಸವಾಗುವುದು ಅಂದರೆ, ಆಗ ಪೂರ್ವಪದವು ದ್ವಿತೀಯಾ ವಿಭಕ್ತಿಗತವಾಗಿರುತ್ತದೆ.

ಉದಾಹರಣೆ: ಸಮಾಸ	ವಿಗ್ರಹ	ಅರ್ಥ
कृष्णाश्रितः	**कृष्णम् आश्रितः**	ಕೃಷ್ಣನನ್ನು ಆಶ್ರಯಿಸಿದವನು
दुःखातीतः	**दुःखम् अतीतः**	ದುಃಖವನ್ನು ಮೀರಿದಂತಹ
नरकपतितः	**नरकं पतितः**	ನರಕದಲ್ಲಿ ಬಿದ್ದವ
नगरगतः	**नगरं गतः**	ಪಟ್ಟಣಕ್ಕೆ ಹೋದವನು
जीविकाप्राप्तः	**जीविकां प्राप्तः**	ಜೀವನೋಪಾಯವನ್ನು ಸಾಧಿಸುವವನು.

ಪೂರ್ವಪದವು ಅತ್ಯಂತ [2] ಸಂಯೋಗವುಳ್ಳ, ಕಾಲವಾಚಕವಿದ್ದಲ್ಲಿ ದ್ವಿತೀಯಾ ತತ್ಪುರುಷ ಸಮಾಸ ಬರುತ್ತದೆ.

ಉದಾಹರಣೆ: ಸಮಾಸ	ವಿಗ್ರಹ	ಅರ್ಥ
वर्षभोग्यम्	**वर्षं भोग्यम्**	ವರ್ಷದವರೆಗೆ ಭೋಗಿಸಲ್ಪಡುವಂತಹ
संवत्सरवासः	**संवत्सरं वासः**	ಸಂವತ್ಸರದವರೆಗೆ ವಾಸವು

೨. ತೃತೀಯಾ ತತ್ಪುರುಷ ಸಮಾಸ :

ಸಮಾಸದಲ್ಲಿಯ ಉತ್ತರಪದವು **पूर्व**[3], **सदृश, सम** ಮತ್ತು **ऊन** ಇವುಗಳಲ್ಲೊಂದಾಗಿದ್ದರೆ ಅಥವಾ ಉತ್ತರಪದವು ಈ ಪದಗಳು ಬೋಧಿಸುವ ಅರ್ಥವನ್ನೇ ಬೋಧಿಸುವ ಶಬ್ದಗಳಲ್ಲೊಂದಾಗಿದ್ದರೆ ಪೂರ್ವಪದವು ತೃತೀಯಾವಿಭಕ್ತಿಯುತವಾದದ್ದಿರುತ್ತದೆ ; ಉತ್ತರಪದವು **कलह, निपुण, मिश्र, श्लक्ष्ण, अधिक** ಮತ್ತು **अवर** ಇವುಗಳಲ್ಲೊಂದಾಗಿದ್ದರೂ ತೃತೀಯಾತತ್ಪುರುಷವೆಂದು ತಿಳಿಯಬೇಕು.

ಉದಾಹರಣೆ: ಸಮಾಸ	ವಿಗ್ರಹ	ಅರ್ಥ
मासपूर्वः	**मासेन पूर्वः**	ತಿಂಗಳ ಹಿಂದಿನ
मातृसदृशः	**मात्रा सदृशः**	ತಾಯಿಯಂತೆ
पितृसमः	**पित्रा समः**	ತಂದೆಯಂತೆ
एकोनः	**एकेन ऊनः**	ಒಂದು ಕಡಿಮೆ

---

[1] **द्वितीया श्रितातीतपतितगतात्यस्तप्राप्तापन्नैः** (ಪಾ II, 1, 24)

[2] **अत्यन्तसंयोगे च** (ಪಾ II, 1, 29) **'काला ' इत्येव** (ಸಿ. ಕೌ 691)

[3] **पूर्वसदृशसमो नार्थकलहनिपुणमिश्रश्लक्ष्णैः** (ಪಾ II, 1, 31)

Rarest Archiver

वाक्कलहः	**वाचा कलहः**	ಮಾತಿನಿಂದುಂಟಾದ ಜಗಳ
आचारनिपुणः	**आचरेण निपुणः**	ನಡವಳಿಕೆಯಲ್ಲಿ ಜಾಣ
शर्करामिश्रम्	**शर्करया मिश्रम्**	ಸಕ್ಕರೆಮಿಶ್ರಿತವಾದದ್ದು
आचारश्लक्ष्णः	**आचरेण श्लक्ष्णः**	ಆಚಾರಗಳಿಂದುಂಟಾದ ತೆಳುವು
एकाधिकम्	**एकेन अधिकम्**	ಒಂದು ಹೆಚ್ಚಿಗೆ
मासावरः	**मासेन अवरः**	ತಿಂಗಳು ಚಿಕ್ಕವ

तत्कृतार्थ[1] ಅಥವಾ ಯಾವುದರಿಂದ ಉಂಟಾದದ್ದು ಅನ್ನುವ ಅರ್ಥಬೋಧಕ ಗುಣವಚನವನ್ನು ಪೂರ್ವಪದವು ನಿವೇದಿಸುವುದಿದ್ದಲ್ಲಿ ಸಮಾಸವು ತೃತೀಯಾ ತತ್ಪುರುಷವೆಂದು ಗುರ್ತಿಸಲ್ಪಡುವುದು.

ಉದಾಹರಣೆ: ಸಮಾಸ	ವಿಗ್ರಹ	ಅರ್ಥ
बाणाहतः	**बाणेन हतः**	ಬಾಣದಿಂದ ಸತ್ತವನು
शंकुलाखण्डः	**शंकुलया खण्डः**	ಚಾಕುವಿನಿಂದ ಮಾಡಿದ ಚೂರು
धान्यार्थः	**धान्येन अर्थः**	ಧಾನ್ಯದಿಂದ ಬಂದ ಹಣ
काणाक्षः	**अक्ष्णा काणः**	ಒಂದು ಕಣ್ಣಿಲ್ಲದೆ ಕುರುಡನಾದವನು

[2] ಕರಣವಾಚಕವಾಗಿ ಕರ್ತೃಪದ ಬಂದಾಗ ತೃತಿಯಾ ತತ್ಪುರುಷ ಸಮಾಸ.

ಉದಾಹರಣೆ: ಸಮಾಸ	ವಿಗ್ರಹ	ಅರ್ಥ
हरित्रातः	**हरिणा त्रातः**	ಹರಿಯಿಂದ ರಕ್ಷಿಸಲ್ಪಟ್ಟವನು
नखभिन्नः	**नखैर्भिन्नः**	ಉಗುರಿನಿಂದ ಮಾಡಿದ ತುಂಡು

೩. ಚತುರ್ಥೀ ತತ್ಪುರುಷ ಸಮಾಸ :

ತತ್ಪುರುಷ ಸಮಾಸದಲ್ಲಿ ಪ್ರಥಮ ಪದವು [3] ತದರ್ಥಾರ್ಥವಾಚಕವಾಗಿದ್ದಲ್ಲಿ ಅರ್ಥಾತ್, ಯಾವುದಕ್ಕಾಗಿ ಅನ್ನುವುದು ಪೂರ್ವಪದನಿವೇದಕಾರ್ಥವಾಗಿದ್ದಲ್ಲಿ ಚತುರ್ಥೀ ತತ್ಪುರುಷವೆಂದು ಗುರುತಿಸ್ಪಡುವುದು.

ಉದಾಹರಣೆ: ಸಮಾಸ	ವಿಗ್ರಹ	ಅರ್ಥ
कुण्डलहिरण्यम्	**कुण्डलाय**	ಕಿವಿಯ ಆಭರಣಕ್ಕಾಗಿ
	हिरण्यम्	ಬಂಗಾರವು
यूपदारुः	**यूपाय दारुः**	ಯೂಪಸ್ತಂಭಕ್ಕಾಗಿ ಕಟ್ಟಿಗೆ
उपानच्चर्म	**उपानहे चर्म**	ಚಪ್ಪಲಿಗಾಗಿ ಚರ್ಮವು

---

[1] **तृतीया तत्कृतार्थेन गुणवचने** (ಪಾ II, 1, 30)

[2] **कर्तृकरणे कृता बहुलम्** (ಪಾ II, 1, 32)

[3] **चतुर्थी तदर्थार्थबलिहितसुखरक्षितैः** (ಪಾ II, 1, 36)

Rarest Archiver

अर्थ, बलि, हित, सुख, रक्षित ಪದಾಂತ್ಯ ಸಮಾಸಗಳು ಚತುರ್ಥೀ ತತ್ಪುರುಷ ಸಮಾಸಗಳೆನಿಸುತ್ತವೆ.

ಉದಾಹರಣೆ:	ಸಮಾಸ	ವಿಗ್ರಹ	ಅರ್ಥ
	द्विजार्थः	**द्विजाय अर्थः**	ಬ್ರಾಹ್ಮಣನಿಗಾಗಿ ಹಣವು
	भूतबलिः	**भूतेभ्यः बलिः**	ಭೂತಗಳಿಗೆ ಬಲಿಯು
	गोहितम्	**गवे हितम्**	ಆಕಳಿಗೆ ಹಿತಕರವು

೪. ಪಂಚಮೀತತ್ಪುರುಷ ಸಮಾಸ :

ಭೀತಿನಿವೇದಕಪದವು[1] ಉತ್ತರಪದವಾಗಿರುವಾಗ ಪಂಚಮೀತತ್ಪುರುಷಸಮಾಸವಾಗುತ್ತದೆ.

ಉದಾಹರಣೆ:	ಸಮಾಸ	ವಿಗ್ರಹ	ಅರ್ಥ
	चोरभयम्	**चोरात् भयम्**	ಕಳ್ಳನಿಂದ ಹೆದರಿಕೆಯು
	व्याघ्रभीतः	**व्याघ्रात् भीतः**	ಹುಲಿಗೆ ಹೆದರಿದವನು

अपेत[2], अपोढ, मुक्त, पतित, अपत्रस्त

ಉದಾಹರಣೆ:	ಸಮಾಸ	ವಿಗ್ರಹ	ಅರ್ಥ
	सुखापेतः	**सुखात् अपेतः**	ಸುಖದಿಂದ ದೂರವಾದವನು
	कल्पनापोढः	**कल्पनया अपोढः**	ಕಲ್ಪನೆಯಿಂದ ತಳ್ಳಲ್ಪಟ್ಟವನು
	पापमुक्तः	**पापात् मुक्तः**	ಪಾಪದಿಂದ ಬಿಡುಗಡೆ ಹೊಂದಿದವನು
	स्वर्गपतितः	**स्वर्गात् पतितः**	ಸ್ವರ್ಗದಿಂದ ಬಿದ್ದವನು
	तरंगापत्रस्तः	**तरंगेभ्यः अपत्रस्तः**	ತೆರೆಗಳಿಗೆ ಹೆದರಿದವನು

೫. ಷಷ್ಠೀತತ್ಪುರುಷ ಸಮಾಸ :

ಪೂರ್ವೋತ್ತರ ಪದಗಳಲ್ಲಿ ಸ್ವ - ಸ್ವಾಮಿಭಾವಾದಿ ಸಂಬಂಧಗಳು ತೋರುವಾಗ ಷಷ್ಠೀತತ್ಪುರುಷ ಸಮಾಸವಾಗುವುದು.

ಉದಾಹರಣೆ:	ಸಮಾಸ	ವಿಗ್ರಹ	ಅರ್ಥ
	राजपुरुषः	**राज्ञः पुरुषः**	ರಾಜನಿಗೆ ಸಂಬಂಧಿಸಿದ ಮನುಷ್ಯ
	पुत्रजन्म	**पुत्रस्य जन्म**	ಮಗನ ಹುಟ್ಟು
	भोजनवेला	**भोजनस्य वेला**	ಊಟದ ಸಮಯ

---

[1] **पञ्चमी भयेन** (ಪಾ II, 1, 37)

[2] **अपेतापोढमुक्तपतितापत्रस्तैरल्पशः** (ಪಾ II, 1, 38)

Rarest Archiver

ಸಮಾಸದಲ್ಲಿ **याजक**[1], **पूजक, परिचारक, स्नापक, अध्यापक, उत्पादक, होतृ, भर्तृ** ಮುಂತಾದವುಗಳು ಉತ್ತರಪದವಾಗಿರುವಾಗ ಪೂರ್ವಪದವು ಷಷ್ಠ್ಯಂತವಿರುತ್ತದೆ.ಉದಾಹರಣೆ:

ಉದಾಹರಣೆ:	ಸಮಾಸ	ವಿಗ್ರಹ	ಅರ್ಥ
	देवपूजकः	**देवस्य पूजकः**	ದೇವನ ಪೂಜೆಮಾಡುವವನು
	राजपरिचारकः	**राज्ञः परिचारकः**	ರಾಜನ ಸೇವಕನು
	भूभर्ता	**भुवः भर्ता**	ಭೂಮಿಯ ಒಡೆಯನು

पूर्व [2], **अपर, अधर, उत्तर, अर्ध** ಮತ್ತು **मध्य** ಈ ಶಬ್ದಗಳು ನಪುಂಸಕ ಲಿಂಗದಲ್ಲಿ ಪ್ರಯೋಗಿಸಲ್ಪಟ್ಟಾಗ ಸಮಾಸದಲ್ಲಿ ಪೂರ್ವಪದಗಳಾಗಿ ಬರುತ್ತವೆ.

ಉದಾಹರಣೆ:	ಸಮಾಸ	ವಿಗ್ರಹ	ಅರ್ಥ
	पूर्वकायः	**पूर्वं कायस्य**	ಮೇಲಿನ ದೇಹವು
	अपरकायः	**अपरं कायस्य**	ಕೆಳದೇಹವು
	अर्धरात्रिः	**अर्धं रात्रेः**	ಅರ್ಧರಾತ್ರಿಯು
	मध्याह्नः	**मध्यम् अह्नः**	ಮಧ್ಯಾಹ್ನವು

ಪರಿಚ್ಛೇದ್ಯವಾಚಕವಾದ[3] ಸುಬಂತದೊಡನೆ ಕಾಲವಾಚಕಶಬ್ದವು ಸಮಾಸವನ್ನು ಹೊಂದುತ್ತದೆ. ಇಲ್ಲಿ ವಿಗ್ರಹಿಸುವಾಗ ಪೂರ್ವಪದವು ಪ್ರಧಾನವೆನಿಸಿದರೂ ಸಮಾಸದಲ್ಲಿ ಉತ್ತರಪದವೇ ಪ್ರಧಾನವಾಗಿರುತ್ತದೆ.

ಉದಾಹರಣೆ:	ಸಮಾಸ	ವಿಗ್ರಹ	ಅರ್ಥ
	मासजातः	**मासः जातस्य अस्य**	ಹುಟ್ಟಿ ತಿಂಗಳಾಗಿರುವಂತಹ
	संवत्सरमृतः	**संवत्सरः मृतस्य अस्य**	ಸತ್ತು ಒಂದು ವರ್ಷವಾಗಿರುವ

ವಿ.ಸೂ. ಸಂಖ್ಯಾವಾಚಕ ವಿಶೇಷಣ, ಗುಣವಾಚಕ, ವರ್ತಮಾನಕೃದಂತ, ಕರ್ಮಣಿ ವಿಧ್ಯರ್ಥ ಕೃದಂತ ಮುಂತಾದವುಗಳು ಬಂದಾಗ ಸಮಾಸವು ರೂಪುಗೊಳ್ಳುವುದಿಲ್ಲ.

ಉದಾಹರಣೆ:		
	बालकानां सप्तमः	**हंसस्य शैत्यम्**
	काकस्य कार्ष्ण्यम्	**राज्ञः कर्तव्यम्**
	राज्ञां पूजितः	**रामस्य कृत्वा**

ಮುಂತಾದವುಗಳು ಸಮಾಸಗೊಳ್ಳುವುದಿಲ್ಲ.

---

[2] **याजकादिभिश्च** (ಪಾ II, 2, 9)

[2] **पूर्वापराधरोत्तरमेकदेशिनैकाधिकरणे** (ಪಾ II, 2, 1)

[3] **कालाः परिमाणिना** (ಪಾ II, 2, 5) **परिच्छेदवाचिना सुबन्तेन सह कालाः समस्यन्ते** (ಸಿ. ಕೌ 716)

Rarest Archiver

೩. ಸಪ್ತಮೀ ತತ್ಪುರುಷ ಸಮಾಸ :

शौण्डः[1], **चतुरः, प्रवीणः, पटुः, पंडितः, कुशलः, निपुणः** ಮುಂತಾದ ಜಾಣತನ ಅಥವಾ ಪಾಂಡಿತ್ಯವನ್ನು ಬೋಧಿಸುವ ಪದಗಳು ಉತ್ತರಪದವಾಗಿರುವಾಗ ಸಪ್ತಮೀ ವಿಭಕ್ತಿಯಲ್ಲಿ ಪೂರ್ವಪದಗಳು ಬರುತ್ತವೆ.

ಉದಾಹರಣೆ: ಸಮಾಸ	ವಿಗ್ರಹ	ಅರ್ಥ
अक्षशौण्डः	**अक्षेषु शौण्डः**	ಪಗಡೆಯಾಟದಲ್ಲಿ ಜಾಣನು
विद्याप्रवीणः	**विद्यायां प्रवीणः**	ವಿದ್ಯೆಯಲ್ಲಿ ಪ್ರವೀಣನು
वाक्पटुः	**वाचि पटुः**	ಮಾತಿನಲ್ಲಿ ಜಾಣನು
कार्यकुशलः	**कार्येषु कुशलः**	ಕೆಲಸದಲ್ಲಿ ಜಾಣನು

ಇದೇ ರೀತಿ **अधि, अधीन, अन्तर, कितव, संवीत, चपल, सिद्ध**[2], **शुष्क, पक्व, बन्ध** ಮುಂತಾದ ಪದಗಳು ಉತ್ತರಪದಗಳಾಗಿರುವಾಗ ಸಪ್ತಮೀ ತತ್ಪುರುಷ ಸಮಾಸವು.

ಉದಾಹರಣೆ: ಸಮಾಸ	ವಿಗ್ರಹ	ಅರ್ಥ
ईश्वराधीनः	**ईश्वरे अधीनः**	ಈಶ್ವರಾಧೀನನು
आतपशुष्कः	**आतपे शुष्कः**	ಬಿಸಿಲಿನಲ್ಲಿ ಒಣಗಿದವನು
चक्रबन्धः	**चक्रे बन्धः**	ಚಕ್ರದಲ್ಲಿ ಸಿಲುಕಿದವನು

ಕೆಲವು ನಿಂದನೀಯ ಅರ್ಥಬೋಧಕ ಶಬ್ದಗಳು ಬಂದಾಗ ಸಪ್ತಮೀತತ್ಪುರುಷ ಸಮಾಸವಾಗುತ್ತವೆ.

ಉದಾಹರಣೆ: ಸಮಾಸ	ವಿಗ್ರಹ	ಅರ್ಥ
नगरकाकः	**नगरे काकः इव**	ಪಟ್ಟಣದಲ್ಲಿರುವ ಕಾಗೆಯಂತಿರುವವನು
कूपमण्डूकः	**कूपे मण्डूक इव**	ಬಾವಿಯ ಮಂಡೂಕದಂತೆ ಇರುವವನು

ವಿವಿಧ ತತ್ಪುರುಷ ಸಮಾಸಗಳು

೧. ಅಲುಕ್ ತತ್ಪುರುಷ ಸಮಾಸ :

ತತ್ಪುರುಷ ಸಮಾಸದಲ್ಲಿ ಪೂರ್ವಪದದ ವಿಭಕ್ತಿ ಪ್ರತ್ಯಯಕ್ಕೆ ಲುಕ್ ಆಗದಿದ್ದರೆ ಅರ್ಥಾತ್, ವಿಭಕ್ತಿ ಪ್ರತ್ಯಯವು ಹಾಗೆಯೇ ಉಳಿದರೆ ಆಗ ಅಲುಕ್ ತತ್ಪುರುಷ ಸಮಾಸವೆನಿಸುವುದು. ಈ ಅಲುಕ್ ತತ್ಪುರುಷವು ತೃತೀಯಾದಿಂದ ಸಪ್ತಮೀ ಸಹಿತ ಐದು ವಿಧಗಳಲ್ಲಿ ಬರುತ್ತದೆ.

[1] **सप्तमी शौण्डैः** (ಪಾ II, 1, 40)

[2] **सिद्धशुष्कपक्वबन्धैश्च** (ಪಾ II, 1, 4)

Rarest Archiver

ತೃತೀಯ ಅಲುಕ್ ತತ್ಪುರುಷ :

ಉದಾಹರಣೆಗಳು : ಸಮಾಸ	ವಿಗ್ರಹ	ಅರ್ಥ
जनुषान्धः	**जनुषा अन्धः**	ಹುಟ್ಟುಗುರುಡ
ओजसाकृतम्	**ओजसा कृतम्**	ಶೌರ್ಯದಿಂದುಂಟಾದದ್ದು

ಚತುರ್ಥೀ ಅಲುಕ್ ತತ್ಪುರುಷ :

परस्मैपदम्	**परस्मै पदम्**	ಪರಸ್ಮೈಪದವು
आत्मनेपदम्	**आत्मने पदम्**	ಆತ್ಮನೇಪದವು

ಪಂಚಮೀ ಅಲುಕ್ ತತ್ಪುರುಷ :

दूरादागतः	**दूरात् आगतः**	ದೂರದಿಂದ ಬಂದವನು
अन्तिकादागतः	**अन्तिकात् आगतः**	ಹತ್ತಿರದಿಂದ ಬಂದವನು
स्तोकान्मुक्तः	**स्तोकात् मुक्तः**	ಸ್ವಲ್ಪದರಲ್ಲಿ ಬಿಡಲ್ಪಟ್ಟವನು

ಷಷ್ಠೀ ಅಲುಕ್ ತತ್ಪುರುಷ :

दास्याःपुत्रः	**दास्याः पुत्रः**	ದಾಸೀಪುತ್ರನು
वाचस्पतिः	**वाचः पतिः**	ವಾಣಿಗೊಡೆಯನು
देवानाम्प्रियः	**देवनां प्रियः**	ದೇವತೆಗಳಿಗೆ ಪ್ರಿಯನು

ಸಪ್ತಮೀ ಅಲುಕ್ ತತ್ಪುರುಷ :

युधिष्ठिरः	**युधि स्थिरः**	ಯುದ್ಧದಲ್ಲಿಸ್ಥಿರನಾದವನು
गेहेशूरः	**गेहे शूरः**	ಮನೆಯಲ್ಲಿ ಶೂರನಾದವನು
मनसिजः	**मनसि जातः**	ಮನೋಭವನು

೨. ನಞ್[1] नञ् ತತ್ಪುರುಷಸಮಾಸ :

ನಿಷೇಧಾರ್ಥಸೂಚಕ ಅವ್ಯಯವಾದ **नञ् (न)** ತತ್ಪುರುಷದಲ್ಲಿ ಪೂರ್ವಪದವಾಗಿದ್ದರೆ ಆಗ ತತ್ಪುರುಷವು ನಞ್ ತತ್ಪುರುಷವೆನಿಸುವುದು. ಈ **न** ವು ವ್ಯಂಜನಾದಿ ಪದದ ಹಿಂದೆ ಬರದಾಗ ಅಕಾರವಾಗಿ ಮಾರ್ಪಡುವುದು; ಸ್ವರಾದಿ ಪದದ ಹಿಂದೆ ಬಂದಾಗ **अन्** ಆಗಿ ಮಾರ್ಪಡುವುದು.

ಉದಾಹರಣೆಗಳು :

ಸಮಾಸಪೂರ್ವದಲ್ಲಿವಿಗ್ರಹ	ಸಮಾಸ	ಅರ್ಥ
न मित्रम्	**अमित्रम्**	ಮಿತ್ರನಲ್ಲದವನು
न सत्	**असत्**	ಸತ್ಯವಲ್ಲದುದು
न कम्	**अकम्**	(ಯಾರೂ) ಬಯಸದಂಥಾದ್ದು (= ನರಕ)
न अश्वः	**अनश्वः**	ಕುದುರೆಯಲ್ಲದುದು

[1] **न लोपे नञः** (ಪಾ VI, 3, 73)

Rarest Archiver

ಕೆಲವೆಡೆ **नञ् (न)** ಹಾಗೆಯೇ ಉಳಿಯುತ್ತದೆ[1] :

ಉದಾಹರಣೆ:

ಸಮಾಸಪೂರ್ವದಲ್ಲಿವಿಗ್ರಹ	ಸಮಾಸ	ಅರ್ಥ
न भ्राट्	**नभ्राट्**	ಹೊಳೆಯದವ ; ಮೋಡ
न पाति	**नपात्**	ರಕ್ಷಿಸದವನು
न वेत्ति	**नवेदाः**	ತಿಳಿಯದುದು
न असत्याः	**नासत्याः**	ಸುಳ್ಳಲ್ಲದುದು
न मुचिः	**नमुचिः**	ಬಿಡದವನು
न कुलम् अस्य	**नकुलः**	ಕುಲವಿಲ್ಲದವನು
न खम् अस्य	**नखम्**	ಅನಿಸುವಿಕೆಯಿಲ್ಲದುದು (ಉಗುರು)
न स्त्री न पुमान्	**नपुंसकः**	ನಪುಂಸಕನು
न क्षरति इति	**नक्षत्रम्**	ಜಾರಿಬೀಳದಿರುವಂಥಾದ್ದು, ನಾಶವಾಗದಂಥಾದ್ದು(ನಕ್ಷತ್ರ)
न क्रामति इति	**नक्रः**	ನಡೆಯಲಾರದಂಥಾದ್ದು (ಮೊಸಳೆ)
न अकम्	**नाकम्**	ಬಯಸದೇ ಇರಲು ಅಸಾಧ್ಯದ್ದು (ಸ್ವರ್ಗ)

೩. ಮಧ್ಯಮಪದಲೋಪೀ ತತ್ಪುರುಷಸಮಾಸ :

ತ್ರಿಪದಿಸಮಾಸದಲ್ಲಿ ಮಧ್ಯಮಪದವು ಲೋಪವಾಗಿದ್ದರೆ ಆ ತತ್ಪುರುಷವು ಮಧ್ಯಮಪದಲೋಪೀತತ್ಪುರುಷವೆನಿಸುವುದು.

ಉದಾಹರಣೆ:

ಸಮಾಸ	ವಿಗ್ರಹ	ಅರ್ಥ
शाकपार्थिवः	**शाकानां प्रियः पार्थिवः**	ಶಾಕಪ್ರಿಯನಾದ ರಾಜನು
देवब्राह्मणः	**देवानां पूजकः ब्राह्मणः**	ದೇವರನ್ನು ಪೂಜಿಸುವ ಬ್ರಾಹ್ಮಣನು
गुडधानाः	**गुडेन मिश्राः धानाः**	ಬೆಲ್ಲಮಿಶ್ರಿತ ಧಾನ್ಯವು
विषान्नम्	**विषेण मिश्रम् अन्नम्**	ವಿಷಮಿಶ್ರವಾದ ಅನ್ನವು

೪. ಉಪಪದತತ್ಪುರುಷಸಮಾಸ :

ಕೃದಂತವನ್ನು ಉಪಪದವನ್ನಾಗಿ ಹೊಂದಿದ[2] ತತ್ಪುರುಷ ಸಮಾಸಗಳು ಉಪಪದ ತತ್ಪುರುಷ ಅಥವಾ ಕೃದಂತ ತತ್ಪುರುಷಗಳೆಂದು ಗುರುತಿಸಲ್ಪಡುತ್ತವೆ.

---

[1] **नभ्राण्नपान्नवेदानासत्यानमुचिनकुलनखनपुंसकनक्षत्रनक्रनाकेषु प्रकृत्या** (ಪಾ VI, 3, 75)

[2] **उपपदमतिङ्** (ಪಾ II, 2, 19)

Rarest Archiver

ಕೆಲವು ಉದಾಹರಣೆಗಳು :

ಸಮಾಸ	ವಿಗ್ರಹ	ಅರ್ಥ
अग्रेसरः	अग्रे सरति इति	ಮುಂದಾಳುವು
अध्वगः	अध्वानं गच्छति इति	ದಾರಿಕಾರನು
अग्रजः	अग्रे जायते इति	ಅಣ್ಣನು
अनुजः	पश्चात् जायते इति	ತಮ್ಮನು
अहिभुक्	अहिं भुङ्क्ते इति	ಗರುಡನು
कुम्भकारः	कुम्भं करोति इति	ಕುಂಬಾರನು
खगः	खे गच्छति इति	ಹಕ್ಕಿಯು
ग्रामणीः	ग्रामं नयति इति	ಹಳ್ಳಿಯ ಮುಂದಾಳು
जलधिः	जलं धीयते अस्मिन् इति	ಸಮುದ್ರವು
जलमुच्	जलं मुञ्चति इति	ಮೋಡ
द्वारस्थः	द्वारि तिष्ठति इति	ಬಾಗಿಲಲ್ಲಿ ನಿಂತಿರುವವನು
निशाचरः	निशायां चरति इति	ರಾಕ್ಷಸನು, ಭೂತವು
पान्थः	पन्थानं गच्छति इति	ದಾರಿಕಾರನು
महीपालः	महीं पालयति इति	ರಾಜನು
विश्वसृज्	विश्वं सृजति इति	ಬ್ರಹ್ಮನು
शास्त्रविद्	शास्त्रं वेत्ति इति	ಶಾಸ್ತ್ರಕೋವಿದನು
सूत्रधारः	सूत्रं धारयति इति	ಸೂತ್ರಧಾರನು
सोमपः	सोमं पिबति इति	ಇಂದ್ರನು

ಕೆಲವು ವಿಶೇಷ ಉಪಪದ ತತ್ಪುರುಷ ಸಮಾಸಗಳು.

अभ्रलिहः	अभ्रं लेढि इति	ಮೋಡವನ್ನು ಮುಟ್ಟುವಂಥದ್ದು
आत्मम्भरिः	आत्मानं बिभर्ति इति	ಸ್ವಾರ್ಥಿಯು
उदरंभरिः	उदरं बिभर्ति इति	ಸ್ವಾರ್ಥಿಯು
कामदुघा	कामान् दोग्धि इति	ಬಯಸಿದ್ದನ್ನು ಕೊಡುವವಳು (ಕಾಮಧೇನು)
तुरङ्गमः	तुरेण गच्छति इति	ವೇಗವಾಗಿ ಹೋಗುವುದು (ಕುದುರೆಯು)
पण्डितमन्यः	पण्डितम् आत्मानं मन्यते इति	ಪಂಡಿತನೆಂದು ತಿಳಿದುಕೊಂಡವನು
पतिंवरा	पतिं वृणीते इति	ಪತಿಯನ್ನು ವರಿಸುವವಳು

Rarest Archiver

ಸಮಾಸ	ವಿಗ್ರಹ	ಅರ್ಥ
प्रियंवदः	**प्रियं वदति इति**	ಪ್ರಿಯವನ್ನು ನುಡಿಯುವವನು
फलेगृहिः	**फलानि गृह्णाति इति**	ಹಣ್ಣು ಕೊಡುವಂತಹುದು
भुजगः	**भुजेन गच्छति इति**	ಹಾವು
रात्रिञ्चरः	**रात्रौ चरति इति**	ರಾಕ್ಷಸನು, ಭೂತವು
विधुन्तुदः	**विधुं तुदति इति**	ರಾಹುವು
सर्वसहा	**सर्वं सहते इति**	ಭೂಮಿಯು
सर्वंकशः	**सर्वं कशति इति**	ಬಲಶಾಲಿಯು

ಮುಂತಾದವುಗಳು.

೫. ಪ್ರಾದಿತತ್ಪುರುಷಸಮಾಸ :

ಪ್ರ, ಪರಾ ಮುಂತಾದ ಉಪಸರ್ಗಗಳು ಪೂರ್ವಪದವಾಗಿರುವ ತತ್ಪುರುಷ ಸಮಾಸಗಳಿಗೆ ಪ್ರಾದಿತತ್ಪುರುಷವೆನ್ನುವರು.

ಉದಾಹರಣೆಗಳು : ಉಪಸರ್ಗ - **प्र** - ಪ್ರಕರ್ಷಾರ್ಥದಲ್ಲಿ

प्रचण्डः	**प्रकर्षेण चण्डः**	ಬಹುಭಯಂಕರನು
प्रगतः	**प्रकर्षेण गतः**	ವೇಗವಾಗಿ ಹೋದವನು
प्रतनुः	**प्रकर्षेण तनुः**	ಸುಂದರ ದೇಹವು

ಉಪಸರ್ಗ **परा** - ಪರಾಗತಾರ್ಥದಲ್ಲಿ -

परोक्षः	**परागतः अक्षणोः**	ಹಿಂಬದಿಯಲ್ಲಿಯ

ಉಪಸರ್ಗ **अति** - ಅತಿಕ್ರಾಂತಾರ್ಥದಲ್ಲಿ -

अतिरात्रः	**अतिक्रान्तः रात्रिम्**	ಕಳೆದ ರಾತ್ರಿಯು
अतिवेलः	**अतिक्रान्तः वेलाम्**	ಮೀರಿದ ಸಮಯವು

ಉಪಸರ್ಗ **सम्** - ಸಂಗತಾರ್ಥದಲ್ಲಿ -

सम्मुखः	**सङ्गतः मुखेन**	ಎದುರಿಗೆ ಇರುವ

ಉಪಸರ್ಗ **अनु** - ಅನುಗತಾರ್ಥದಲ್ಲಿ -

अन्वर्थः	**अनुगतः अर्थम्**	ಅರ್ಥವನ್ನು ಅನುಸರಿಸುವ

ಉಪಸರ್ಗ **अनु** - ಸದೃಶಾರ್ಥದಲ್ಲಿ -

अनुरूपः	**रूपस्य सदृशः**	ರೂಪಯೋಗ್ಯನಾದವನು
अनुकालः	**कालस्य सदृशः**	ಕಾಲಯೋಗ್ಯವಾದುದು

Rarest Archiver

ಉಪಸರ್ಗ **निस् (निर्)** - ನಿಷ್ಕ್ರಾಂತಾರ್ಥದಲ್ಲಿ -

निष्कौशाम्बिः निष्क्रान्तः कौशाम्ब्याः ಕೌಶಾಂಬಿಯಿಂದ ಹೊರಟವನು

ಉಪಸರ್ಗ **वि** - ವಿಗತಾರ್ಥ ಮತ್ತು ವಿನಿಗತಾರ್ಥದಲ್ಲಿ -

व्यर्थः विगतः अर्थात् ಪ್ರಯೋಜನವಿಲ್ಲದುದು

विरूपः विगतः रूपात् ರೂಪವಿಲ್ಲದವನು

विलक्षणः विनिर्गतः लक्षणात् ವಿಲಕ್ಷಣನಾದವನು

ಉಪಸರ್ಗ **उत्**- ಉತ್ಕ್ರಾಂತಾರ್ಥದಲ್ಲಿ -

उन्मार्गः उत्क्रान्तः मार्गात् ದಾರಿಬಿಟ್ಟಿರುವವನು

ಉಪಸರ್ಗ **अभि**- ಅಭಿಗತಾರ್ಥದಲ್ಲಿ -

अभिरूपः अभिगतः रूपम् ಯೋಗ್ಯರೂಪವುಳ್ಳವ

अभिमुखः अभिगतः मुखम् ಎದುರಿಗೆ ಇರುವ

ಉಪಸರ್ಗ **परि** - ಪರಿಗತಾರ್ಥದಲ್ಲಿ -

पर्यन्तः परिगतः अन्तम् ಕೊನೆವರೆಗಿನ

ಉಪಸರ್ಗ **यथा** - ಯೋಗ್ಯಾರ್ಥದಲ್ಲಿ -

यथार्हः अर्हस्य योग्यः ಅರ್ಹತೆಗೆ ಯೋಗ್ಯನಾದವನು

ಮುಂತಾದವುಗಳು. यथोचित

II ಕರ್ಮಧಾರಯ ಸಮಾಸ (Appositional Compounds)

ಕರ್ಮಧಾರಯ ಸಮಾಸವು ತತ್ಪುರುಷ ಸಮಾಸದ ವಿಶೇಷರೂಪ (**तत्पुरुषविशेषः कर्मधारयः**). ಇಲ್ಲಿಯೂ ಉತ್ತರಪದಾರ್ಥವೇ ಪ್ರಧಾನವಾದುದು. ವಿಶೇಷವೇನೆಂದರೆ, ತತ್ಪುರುಷದಲ್ಲಿ ಉತ್ತರಪದವು ಮಾತ್ರ ಪ್ರಥಮಾವಿಭಕ್ತಿಯಲ್ಲಿದ್ದು ಪೂರ್ವಪದವು ಭಿನ್ನ ವಿಭಕ್ತಿಯನ್ನು ಆಶ್ರಯಿಸಿ ಅದು ವ್ಯಧಿಕರಣವೆನಿಸಿದರೆ ಕರ್ಮಧಾರಯದಲ್ಲಿ ಪೂರ್ವೋತ್ತರಪದಗಳೆರಡೂ ಪ್ರಥಮಾವಿಭಕ್ತಿಯಲ್ಲಿಯೇ ಇರುತ್ತವೆ ಹಾಗೂ ಇದು[1] ಸಮಾನಾಧಿಕರಣವೆನಿಸುತ್ತದೆ. ಅಂದರೆ, ಏಕಾಶ್ರಯವುಳ್ಳದ್ದು ಕರ್ಮಧಾರಯ.

ಕರ್ಮಧಾರಯವು ಮುಖ್ಯವಾಗಿ ಏಳುವಿಧ. ಆದರೆ, ಸಾಮಾನ್ಯವಾಗಿ ಕರ್ಮಧಾರಯವನ್ನು ಒಂಭತ್ತು ವಿಧಗಳಲ್ಲಿ ವಿಭಾಗಿಸಬಹುದು.

೧. ವಿಶೇಷಣಪೂರ್ವಪದ ೨. ವಿಶೇಷಣೋತ್ತರಪದ ೩. ವಿಶೇಷಣೋಭಯಪದ

೪. ಉಪಮಾನಪೂರ್ವಪದ ೫. ಉಪಮಾನೋತ್ತರಪದ ೬. ಅವಧಾರಣಾಪೂರ್ವಪದ

೭. ಸಂಭಾವನಾಪೂರ್ವಪದ ೮. ಕೃದಂತೋಭಯಪದ ೯. ಉಪಸರ್ಗಪೂರ್ವಪದ.

---

[1] **तत्पुरुषः समानधिकरणः कर्मधारयः** (ಪಾ I, 2, 42)

Rarest Archiver

(೧) ವಿಶೇಷಣಪೂರ್ವಪದ ಕರ್ಮಧಾರಯ ಸಮಾಸ :

ಇಲ್ಲಿ ವಿಶೇಷ್ಯದ (ಸಂಬಂಧಿಸಿದ ವಸ್ತುವಿನ) ವಿಶೇಷತೆಯು[1] ಪೂರ್ವಪದಾರ್ಥವಾಗಿರುತ್ತದೆ. ಆ ವಿಶೇಷಣ (Adjective)ದಿಂದಾಗಿಯೇ ವಿಶೇಷ್ಯವು (Subject) ಗುರುತಿಸಲ್ಪಡುತ್ತದೆ.

ಉದಾಹರಣೆ : ಸಮಾಸ	ವಿಗ್ರಹ	ಅರ್ಥ
श्वेतवस्त्रम्	**श्वेतं च तत् वस्त्रं च**	ಬಿಳಿಯ ಬಟ್ಟೆಯು
नीलोत्पलम्	**नीलं च तत् उत्पलं च**	ನೀಲಕಮಲವು
कृष्णसर्पः	**कृष्णः च असौ सर्पश्च**	ಕಪ್ಪು ಸರ್ಪವು
महानदी	**महती च असौ नदी च**	ಮಹಾನದಿಯು
महाशैलः	**महान् च असौ शैलश्च**	ದೊಡ್ಡಪರ್ವತವು
कुमाराध्यापकः	**कुमारश्च असौ अध्यापकश्च**	ಹುಡುಗ ಉಪಾಧ್ಯಾಯ

(೨) ವಿಶೇಷಣಪೂರ್ವಪದ ಕರ್ಮಧಾರಯ ಸಮಾಸ :

ವಿಶೇಷ್ಯವು ಪೂರ್ವಪದಾರ್ಥವಾಗಿಯೂ ವಿಶೇಷಣವು ಉತ್ತರಪದಾರ್ಥವಾಗಿಯೂ ಇರುವಂತಹ ಕರ್ಮಧಾರಯವು ವಿಶೇಷಣೋತ್ತರಪದ ಕರ್ಮಧಾರಯವೆನಿಸುವುದು. ಮಯೂರವ್ಯಂಸಕವೇ[2] ಮುಂತಾದ ಶಬ್ದಗಳು ಈ ವಿಧದ ಕರ್ಮಧಾರಯದಲ್ಲಿ ಬರುತ್ತವೆ. ಕುತ್ಸಿತಾರ್ಥಬೋಧಕ[3] ಕರ್ಮಧಾರಯವೂ ವಿಶೇಷಣೋತ್ತರ ಪದದಲ್ಲಿ ಬರುತ್ತದೆ. ಉದಾಹರಣೆ :

मयूरव्यंसकः	**व्यंसकश्च असौ मयूरश्च**	ಠಕ್ಕನವಿಲು
श्रृगालव्यंसकः	**व्यंसकश्च असौ शृगालश्च**	ಠಕ್ಕ ನರಿಯು
चाणक्यहतकः	**हतकश्च असौ चाणक्यश्च**	ದುರ್ದೈವೀಚಾಣಕ್ಯ
नराधमः	**अधमश्च असौ नरश्च**	ಕೆಟ್ಟ ಮನುಷ್ಯ
वैय्याकरणखसूचिः	**खसूचिः च असौ वैय्याकरणी च**	ಕೆಟ್ಟ ವೈಯಾಕರಣಿಯು
पुत्रकृतकः	**कृतकश्च असौ पुत्रश्च**	ಸ್ವೀಕೃತ ಪುತ್ರನು
गोवशा	**वशा च असौ गौश्च**	ಗೊಡ್ಡು ಆಕಳು
अग्निस्तोकः	**स्तोकः च असौ अग्निश्च**	ಸಣ್ಣ ಬೆಂಕಿಯು

[1] **विशेषणं विशेष्येण बहुलम्** (ಪಾ II, 1, 57)

[2] **मयूरव्यंसकादयश्चः** (ಪಾ II, 1, 72)

[3] **कुत्सितानि कुत्सनैः** (ಪಾ II, 1, 53)

Rarest Archiver

वनान्तरम्	**अन्यत् वनम्**	ಬೇರೆ ವನವು
देशान्तरम्	**अन्यः देशः**	ಬೇರೆ ದೇಶವು
भाषान्तरम्	**अन्या भाषा**	ಬೇರೆ ಭಾಷೆಯು

(೩) ವಿಶೇಷಣೋಭಯಪದ[1] ಕರ್ಮಧಾರಯ ಸಮಾಸ :

ಇಲ್ಲಿ ಉಭಯಪದಗಳೂ ವಿಶೇಷಣಗಳೇ ಆಗಿರುತ್ತವೆ.

ಉದಾಹರಣೆ :

शीतोष्णम्	**शीतं च उष्णश्च**	ಉಗುರು ಬೆಚ್ಚಗೆ
शुक्लकृष्णः	**शुक्लश्च कृष्णश्च**	ಬಿಳುಪು ಕಪ್ಪು

(೪) ಉಪಮಾನ ಪೂರ್ವಪದ ಕರ್ಮಧಾರಯ ಸಮಾಸ :

ಉಪಮೆ ಅಂದರೆ ಹೋಲಿಕೆ; ಉಪಮಾನವೆಂದರೆ ಹೋಲಿಕೆಗೆ ಕೊಡಬಹುದಾದ ವಸ್ತು ಅಥವಾ ವ್ಯಕ್ತಿ; ಹೋಲಿಸಲ್ಪಡುವ ವಸ್ತು ಅಥವಾ ವ್ಯಕ್ತಿಯು ಉಪಮೇಯವು. ಉಪಮಾನ ಉಪಮೇಯಗಳಲ್ಲಿ ಸಾಮ್ಯತೆಯಿದ್ದರೆ[2] ಮಾತ್ರ ಹೋಲಿಕೆ ಸಾಧ್ಯ. ಹೋಲಿಕೆಗೆ ಕೊಡುವ ವಸ್ತು ಅಥವಾ ವ್ಯಕ್ತಿಯನ್ನು ಬೋಧಿಸುವ ಪದವು ಪೂರ್ವಪದವಾಗಿ ಬರುವ ಕರ್ಮಧಾರಯಗಳಿಗೆ ಉಪಮಾನ ಪೂರ್ವಪದ ಕರ್ಮಧಾರಯಗಳೆನ್ನುವರು.

ಉದಾಹರಣೆ :	**घनश्यामः**	**घन इव श्यामः**	ಮೋಡದಂತೆ ಕಪ್ಪಾಗಿರುವವನು
	फेनधवलः	**फेन इव धवलः**	ನೊರೆಯಂತೆ ಬೆಳ್ಳಗಿರುವವನು

ಮುಂತಾದವುಗಳು.

(೫) ಉಪಮಾನೋತ್ತರಪದ[3] ಕರ್ಮಧಾರಯ ಸಮಾಸ :

ಇಲ್ಲಿ , ಉಪಮಾನವು ಉತ್ತರಪದವಾಗಿ ಬರುತ್ತದೆ.

ಉದಾಹರಣೆ :	**पुरुषव्याघ्रः**	**व्याघ्र इव पुरुषः**	ಹುಲಿಯಂತಿರುವ ಪುರುಷನು
	नरसिंहः	**सिंहः इव नरः**	ಸಿಂಹದಂತಹ ಮನುಷ್ಯನು

ಈ ವ್ಯಾಘ್ರ, ಸಿಂಹ, ವೃಷಭ ಮುಂತಾದವುಗಳು ಶ್ರೇಷ್ಠಾರ್ಥವಾಚಕಗಳಾಗಿರುವಾಗಲೂ ಉಪಮಾನೋತ್ತರಪದ ಕರ್ಮಧಾರಯವೇ ಬರುತ್ತದೆ.

---

[1] ಉಭಯಪದಗಳೂ ವಿಶೇಷಣಗಳೇ ಆಗಿರುವುದರಿಂದ ವಿಶೇಷಣೋಭಯಪದ ಕರ್ಮಧಾರಯವು ಅನ್ಯಪದವನ್ನು (**वारि, सर्प** ಮುಂತಾದವನ್ನು) ಬಯಸಿ ಬಹುವ್ರೀಹಿಯೂ ಆಗಬಹುದು. [2] **उपमानानि सामान्यवचनैः** (ಪಾ II, 1, 55) [3] **उपमितं व्याघ्रादिभिः सामान्यप्रयोगे** (ಪಾ II, 1, 56)

Rarest Archiver

(೬) ಅವಧಾರಣಾಪೂರ್ವಪದ ಕರ್ಮಧಾರಯ ಸಮಾಸ :

ಇದೇ ಅದು ಅನ್ನುವ ಅವಧಾರಣಾರ್ಥ ನಿವೇದಕ ಪದಗಳನ್ನು ಪೂರ್ವಪದಗಳನ್ನಾಗಿ ಹೊಂದಿದ ಸಮಾಸಗಳಿವು.

ಉದಾಹರಣೆ : ಸಮಾಸ	ವಿಗ್ರಹ	ಅರ್ಥ
नेत्रकमलम्	**नेत्रम् एव कमलम्**	ಕಣ್ಣೇ ಕಮಲವು
मुखचन्द्रः	**मुखम् एव चन्द्रः**	ಮುಖವೇ ಚಂದ್ರಮನು
दुःखाग्निः	**दुःखम् एव अग्निः**	ದುಃಖವೇ ಬೆಂಕಿಯು
विद्याधनम्	**विद्या एव धनम्**	ವಿದ್ಯೆಯೇ ಧನವು
भवसागरः	**भवः एव सागरः**	ಭವವೇ ಸಾಗರವು

ಮುಂತಾದವುಗಳು.

(೭) ಸಂಭಾವನಾಪೂರ್ವಪದ ಕರ್ಮಧಾರಯ ಸಮಾಸ :

ಇಲ್ಲಿ ಸಮಾಸದಿಂದ ಬೋಧಿಸಲ್ಪಟ್ಟ ಅರ್ಥವು ತನ್ನನ್ನು ಹೊಂದಲು ಸಹಾಯಕವಾದ ಪೂರ್ವಪದವುಳ್ಳದ್ದಾಗಿರುತ್ತದೆ.

ಉದಾಹರಣೆ :		
चूतवृक्षः	**चूत इति वृक्षः**	ಮಾವಿನಮರ
गंगानदी	**गङ्गा इति नदी**	ಗಂಗಾನದಿ
हिमालयपर्वतः	**हिमालयः इति पर्वतः**	ಹಿಮಾಲಯಪರ್ವತ

(೮) ಕೃದಂತೋಭಯಪದ ಕರ್ಮಧಾರಯ ಸಮಾಸ :

ಇಲ್ಲಿ ಉಭಯಪದಗಳೂ ಕೃದಂತಗಳೇ ಆಗಿರುತ್ತವೆ. ಉದಾಹರಣೆ :

ಸಮಾಸ	ವಿಗ್ರಹ	ಅರ್ಥ
गृहीतमुक्तः	**आदौ गृहीतः पश्चात् मुक्तः**	ಹಿಡಿಯಲ್ಪಟ್ಟು ಬಿಡಲ್ಪಟ್ಟವನು
स्नातानुलिप्तः	**आदौ स्नातः पश्चात् अनुलिप्तः**	ಮಿಂದು(ಚಂದನವನ್ನು) ಬಳಿದುಕೊಂಡವನು
पीतप्रतिबद्धः	**आदौ पीतः पश्चात् प्रतिबद्धः**	ಕುಡಿದದ್ದರಿಂದ ಹಿಡಿಯಲ್ಪಟ್ಟವನು
जातमृतः	**आदौ जातः पश्चात् मृतः**	ಹುಟ್ಟಿಸತ್ತವನು

(೯) ಉಪಸರ್ಗಪೂರ್ವಪದ ಕರ್ಮಧಾರಯ ಸಮಾಸ :

ಪ್ರಾದಿತತ್ಪುರುಷದಲ್ಲಿ ಹೇಗೋ ಹಾಗೆ ಇಲ್ಲಿಯೂ ಪ್ರ. ಪರಾ ಮುಂತಾದ ಉಪಸರ್ಗಗಳು ಪೂರ್ವಪದಗಳಾಗಿರುತ್ತದೆ. ಆದರೆ, ಕರ್ಮಧಾರಯದಲ್ಲಿ ಈ ಉಪಸರ್ಗಗಳು (ಏಕವಿಭಕ್ತಿಗತವಾಗಿರುವ) ಏಕಾಶ್ರಯಾರ್ಥವನ್ನು ಬೋಧಿಸುತ್ತವೆ.

Rarest Archiver

ಉದಾಹರಣೆ :

ಉಪಸರ್ಗ **प्र [प्रगतः, प्रकृष्टः] -**

प्राचार्यः	**प्रगतः आचार्यः**	ಶ್ರೇಷ್ಠ ಗುರುವು
प्रवातः	**प्रकृष्टः वातः**	ಒಳ್ಳೇ ಗಾಳಿಯು

ಹೀಗೆಯೇ **प्रभातम्** ಮುಂತಾದವುಗಳು.

ಉಪಸರ್ಗ **अति [अतिशयित] -**

अतिवेगः	**अतिशयितः वेगः**	ಬಹಳ ವೇಗವು
अत्यानन्दः	**अत्युत्कटः आनन्दः**	ಬಹಳ ಆನಂದವು

ಉಪಸರ್ಗ **अधि [अधिक] -**

अधिराजः	**अधिकः राजा**	ಹೆಚ್ಚಿನ ರಾಜನು
अधिदेवता	**अधिष्ठात्री देवता**	ಅಧಿದೇವತೆಯು

ಉಪಸರ್ಗ **अनु [अनुगत, अनुरूप] -**

अनुकामः	**अनुरूपः कामः**	ಯೋಗ್ಯ ಬಯಕೆಯು
अनुबलम्	**अनुगतं बलम्**	ಯೋಗ್ಯ ಶಕ್ತಿಯು
अनुरूपः	**अनुगतः रूपम्**	ಯೋಗ್ಯರೂಪವು

ಉಪಸರ್ಗ **आ [ईषत्] -**

आरक्तः	**ईषत् रक्तः**	ತುಸು ಅಂಟಿಕೊಂಡವನು

ಉಪಸರ್ಗ **का [ईषत्] -**

कदुष्णम्	**ईषत् उष्णम्**	ತುಸು ಬೆಚ್ಚಗಿರುವ

ಉಪಸರ್ಗ **कु [किञ्चित्, कुत्सित] -**

कुसरित्	**कुत्सिता सरित्**	ಸಣ್ಣ ನದಿಯು

ಉಪಸರ್ಗ **किम् [किञ्चित्, कुत्सित] -**

किन्नरः	**किञ्चित् नरः**	ತುಸುಮಾತ್ರ ಮನುಷ್ಯತ್ವವುಳ್ಳವನು
किंसखा	**कुत्सितः सखा**	ಕೆಟ್ಟ ಮಿತ್ರನು

ಉಪಸರ್ಗ **दुस् (दुर्) [दुष्ट; निन्दित] -**

दुर्जनः	**दुष्टः जनः**	ದುಷ್ಟ ಮನುಷ್ಯನು

Rarest Archiver

दुर्मतिः	दुष्टा मतिः	ಕೆಟ್ಟ ಬುದ್ಧಿಯು

ಉಪಸರ್ಗ निस् (निर्) [निश्चित] -

निःश्रेयसः	निश्चितं श्रेयः	ಮೋಕ್ಷವು

ಉಪಸರ್ಗ प्रति [प्रतिरूपः, प्रतिकूलः] -

प्रतिमूर्तिः	प्रतिरूपा मूर्तिः	ಪ್ರತಿರೂಪವಾದ ಮೂರ್ತಿಯು
प्रतिपक्षः	प्रतिकूलः पक्षः	ವಿರುದ್ಧ ಪಕ್ಷವು

ಉಪಸರ್ಗ वि [विरूप, विभिन्न, विगत] -

विपथम्	विरूपः पन्था	ಕೆಟ್ಟ ದಾರಿಯು
विदेशः	विभिन्नः देशः	ಬೇರೆ ದೇಶವು
वितृष्णा	विगता तृष्णा	ಇಂಗಿದ ಬಾಯಾರಿಕೆಯು

ಉಪಸರ್ಗ सु [शोभन] -

सुजनः	शोभनं जनः	ಒಳ್ಳೇ ಜನ (ಮನುಷ್ಯ)
सुपुष्पम्	शोभनं पुष्पम्	ಒಳ್ಳೇ ಹೂವು
सुमार्गः	शोभनः मार्गः	ಒಳ್ಳೇ ದಾರಿಯು

ಉಪಸರ್ಗ सु [सुतराम्] -

स्वच्छम्	सुतराम् अच्छम्	ಸಂಪೂರ್ಣ ನಿರ್ಮಲವಾದುದು
स्वल्पम्	सुतराम् अल्पम्	ಬಹಳ ಅಲ್ಪವಾದುದು

ಈ ಕೆಳಗಿನ ಸಮಾಸಗಳೂ ಕರ್ಮಧಾರಯಗಳೆಂದು ಗುರುತಿಸಲ್ಪಡುತ್ತವೆ.

अकिञ्चनः	न विद्यते किञ्चन अस्य	ಏನೂ ಇಲ್ಲದವ, ಬಡವ
अकुतोभयः	न विद्यते कुतोऽपि भयम् अस्य	ಏನೂ ಹೆದರಿಕೆಯಿಲ್ಲದವ
अहमहमिकया	अहम् अहम् इति	ನೀನು ನಾನೆನ್ನುವುದು
पश्चार्धः	अपरश्च असौ अर्धश्च	ಹಿಂದಿನ ಅರ್ಧವು

III ದ್ವಿಗು ಸಮಾಸ (Numerative Compounds)

ದ್ವಿಗು ಸಮಾಸವೂ ತತ್ಪುರುಷವಿಶೇಷವೆನಿಸುವುದು. ತತ್ಪುರುಷ ಕರ್ಮಧಾರಯಗಳಲ್ಲಿ ಹೇಗೋ ಹಾಗೆಯೇ

पा - संख्यापूर्वो द्विगुः - 2.1.52

Rarest Archiver

ದ್ವಿಗು ಸಮಾಸದಲ್ಲಿಯೂ ಉತ್ತರಪದಾರ್ಥವೇ ಪ್ರಧಾನವಾಗಿರುತ್ತದೆ. ಕರ್ಮಧಾರಯದಂತೆ ದ್ವಿಗು ಸಮಾಸವು ಏಕಾಶ್ರಯವುಳ್ಳದ್ದು ; ಅರ್ಥಾತ್, ಪೂರ್ವಾಪರ ಪದಗಳೆರಡೂ ಏಕವಿಭಕ್ತಿಗತವಾಗಿರುತ್ತವೆ. ದ್ವಿಗು ಸಮಾಸದ ವಿಶೇಷತೆಯೆಂದರೆ ಇಲ್ಲಿ ಪೂರ್ವಪದವು ಸಂಖ್ಯಾವಾಚಕವಿರುತ್ತದೆ ; ಮತ್ತು ಸಮಾಸವು ಏಕವಚನವನ್ನೂ[1] ನಪುಂಸಕಲಿಂಗವನ್ನೂ[2] ಹೊಂದಿರುತ್ತದೆ. ಉದಾಹರಣೆ :

ಸಮಾಸ	ವಿಗ್ರಹ	ಅರ್ಥ
त्रिलोकम्	**त्रयाणां लोकानां समाहारः**	ಮೂರು ಲೋಕಗಳ ಗುಂಪು
पञ्चगवम्	**पञ्चानां गवानां समाहारः**	ಐದು ಆಕಳುಗಳ ಗುಂಪು
दशकुमारम्	**दशानां कुमाराणां समाहारः**	ಹತ್ತು ಕುಮಾರರ ಸಮೂಹ
द्विगु	**द्वयोः गवोः समाहारः**	ಎರಡು ಆಕಳುಗಳ ಜೋಡಿ

द्विगुः ಮಂತಾದ ಕೆಲವು ಪದಗಳು ಸಾಪೇಕ್ಷಿತಗಳಿದ್ದಲ್ಲಿ ಬಹುವ್ರೀಹಿ ಸಮಾಸಗಳ ಸಾಲಿಗೆ ಸೇರುತ್ತವೆ. ಉದಾಹರಣೆ :

द्विगुः	**द्वौ गावौ यस्य सः**	ಎರಡು ಆಕಳುಗಳುಳ್ಳವನು

ಕೆಲವು ದ್ವಿಗು ಸಮಾಸಗಳು ವಿಭಿನ್ನಗತಿಯಿಂದ ವಿಗ್ರಹಿಸಲ್ಪಡುತ್ತವೆ.

ಉದಾಹರಣೆ :

द्यङ्गुलम्	**द्वे अङ्गुली प्रमाणम् अस्य**	ಎರಡು ಬೆರಳ ಮಾಪಕವು
पञ्चकपालम्	**पञ्चसु कपालेषु संस्कृतम्**	ಐದು ಕಪಾಲಗಳಲ್ಲಿ ಸಿದ್ಧಗೊಳಿಸಿದಂಥಾದ್ದು
षण्मातुरः	**षण्णां मातृणाम् अपत्यम्**	ಆರು ತಾಯಿಯರ ಮಗು

ದ್ವಿಗು ಸಮಾಸದಲ್ಲಿ ಪೂರ್ವೋತ್ತರ ಪದಗಳೆರಡೂ ಸಂಖ್ಯಾವಾಚಕಗಳಿರಬಹುದು.

ಉದಾಹರಣೆ :

एकोनविशंति	**एकया ऊना विशंतिः**	ಇಪ್ಪತ್ತಕ್ಕೆ ಒಂದು ಕಡಿಮೆಯಿರುವ (೧೯)
चतुर्नवति	**चतुः उपरि नवति**	ತೊಂಭತ್ತರ ಮೇಲೆ ನಾಲ್ಕು (೯೪)

IV ದ್ವಂದ್ವ ಸಮಾಸ (Copulative Compounds):

ಚಕಾರಾರ್ಥದಲ್ಲಿರುವ[3] ಅನೇಕ ಸುಬಂತಗಳು ಸಮಾಸವನ್ನು ಹೊಂದುತ್ತವೆ. ಸಮುಚ್ಚಯ , ಅನ್ವಾಚಯ, ಇತರೇತರಯೋಗ, ಸಮಾಹಾರಗಳೆಂದು ಚಕಾರಾರ್ಥವು ನಾಲ್ಕು ವಿಧ. ಇವುಗಳಲ್ಲಿ ಇತರೇತರಯೋಗ ಮತ್ತು

---

[1] **द्विगुरेकवचनम्** (ಪಾ II, 4, 1)

[2] **स नपुंसकम्** (ಪಾ II, 4, 17) **समाहारे द्विगुर्द्वन्द्वश्च नपुंसकं स्यात्** (ಸಿ. ಕೌ 821)

[3] **चार्थे द्वन्द्वः** (ಪಾ II, 2, 29) **अनेकसुबन्तं चार्थे वर्तमानं वा समस्यते स द्वन्द्वः** (ಸಿ. ಕೌ 901)

Rarest Archiver

ಸಮಾಹಾರಗಳಲ್ಲಿ ಇರುವ ಸುಬಂತಗಳು ಮಾತ್ರ ಸಮಾಸವನ್ನು ಹೊಂದುತ್ತವೆ.

ದ್ವಂದ್ವದಲ್ಲಿ ಸ್ವತಂತ್ರ ಮತ್ತು ಸರಿಸಮಾನ ಪದಸಮೂಹಗಳಿರುವುದರಿಂದ ಇದು ಉಭಯಪದಾರ್ಥ ಪ್ರಧಾನವಾದುದು. ವಿಗ್ರಹಿಸುವಾಗ ಸುಬಂತ ಶಬ್ದಗಳ ಮುಂದೆ ಚಕಾರ ಬರುವುದು. ಈ ಸಮಾಸದಲ್ಲಿ ಕಡಿಮೆ ಅಕ್ಷರಗಳುಳ್ಳ[1] ಪದಗಳೂ ಋತುಜಾತ್ಯಾದಿಗಳಲ್ಲಿ ಪೂರ್ವಕಾಲಬೋಧಕಪದಗಳೂ[2] ಮತ್ತು ಅತಿಶಯಬೋಧಕಪದಗಳೂ ಪೂರ್ವಪದಗಳಾಗಿ ಬರುತ್ತವೆ.

ಉದಾಹರಣೆ :

रामकृष्णौ	**रामश्च कृष्णश्च**	ರಾಮಕೃಷ್ಣರು
देवर्षिमानवाः	**देवश्च ऋषिश्च मानवश्च**	ದೇವ, ಋಷಿ ಮತ್ತು ಮನುಷ್ಯರು
भीमार्जुनौ	**भीमश्च अर्जुनश्च**	ಭೀಮಾರ್ಜುನರು
वसन्तग्रीष्मवर्षाः	**वसन्तश्च ग्रीष्मश्च वर्षा च**	ವಸಂತ, ಗ್ರೀಷ್ಮ ಮತ್ತು ವರ್ಷಾಋತುಗಳು

ದ್ವಂದ್ವ ಸಮಾಸವನ್ನು ಇತರೇತರ ಮತ್ತು ಸಮಾಹಾರಗಳೆಂದು ಎರಡು ವಿಧವಾಗಿ[3] ವಿಂಗಡಿಸುತ್ತಾರೆ.

೧. ಇತರೇತರ ದ್ವಂದ್ವ

ವಿಭಿನ್ನ ವ್ಯಕ್ತಿ ಅಥವಾ ವಸ್ತುಗಳನ್ನು ಬೋಧಿಸುವ ಪದಗಳು ಸಮಾಸಗೊಂಡಾಗ ಇತರೇತರ ದ್ವಂದ್ವ ಸಮಾಸವೆನಿಸುವುದು. ಸಮಾಸದಲ್ಲಿರುವ ಪದಸಂಖ್ಯೆಗಳಿಗನುಗುಣವಾಗಿ ದ್ವಂದ್ವವು ದ್ವಿವಚನ ಅಥವಾ ಬಹವಚನಾಂತವಾಗಿರುತ್ತದೆ.

ಉದಾಹರಣೆ :

ಸಮಾಸ	ವಿಗ್ರಹ	ಅರ್ಥ
ईश्वरगुरू	**ईश्वरश्च गुरुश्च**	ಈಶ್ವರ ಮತ್ತು ಗುರುಗಳು
पार्वतीपरमेश्वरौ	**पार्वती च परमेश्वरश्च**	ಪಾರ್ವತೀಪರಮೇಶ್ವರರು
रामलक्ष्मणभरतशत्रुघ्नाः	**रामश्च लक्ष्मणश्च भरतश्च शत्रुघ्नश्चः**	ರಾಮಲಕ್ಷ್ಮಣ ಭರತಶತ್ರುಘ್ನರು

ವೇದಾದಿಗಳಲ್ಲಿ ದೊರೆಯುವ ದೇವತಾದ್ವಂದ್ವ[4] ಸಮಾಸಗಳೂ ಇತರೇತರ ದ್ವಂದ್ವಗಳೆಂದೇ ಗುರುತಿಸಲ್ಪಡುತ್ತವೆ. ಇಲ್ಲಿ ಪೂರ್ವಪದಾಂತ್ಯಸ್ವರವು ಆಕಾರಗೊಳ್ಳುತ್ತದೆ. ಆದರೆ ಅಗ್ನಿಯು ಪೂರ್ವಪದವಿದ್ದು **सोमः**

[1] **अल्पाच् तरम्** (ಪಾ II, 2, 34)

[2] **ऋतुनक्षत्राणां सामाक्षराणाम् अनुपूर्व्येण** (ವಾರ್ತಿಕ 1421) **लघ्वक्षरपूर्वम्** (ವಾರ್ತಿಕ 1413)

[3] ಕೆಲವರು ಏಕಶೇಷವನ್ನೂ ದ್ವಂದ್ವದಲ್ಲಿ ಸೇರಿಸುತ್ತಾರೆ. ಆದರೆ ಪ್ರಾಚೀನ ವೈಯಾಕರಣಿಗಳು ವ್ಯಾಕರಣದ ಪಂಚವೃತ್ತಿಗಳಲ್ಲಿ 'ಸಮಾಸವೃತ್ತಿ', 'ಏಕಶೇಷವೃತ್ತಿ', ಇವುಗಳನ್ನು ಬೇರೆ ಬೇರೆಯಾಗಿಯೇ ಹೆಸರಿಸಿದ್ದಾರೆ. ಆದ್ದರಿಂದ ಇಲ್ಲಿ ಸಮಾಸ ವೃತ್ತಿಯ ಕೊನೆಗೆ 'ಏಕಶೇಷವೃತ್ತಿ'ಯನ್ನು ಕೊಟ್ಟಿದೆ.

[4] **देवताद्वन्द्वे च** (ಪಾ VI, 3, 26)

Rarest Archiver

ಉತ್ತರಪದವಾಗಿದ್ದರೆ **अग्नि** ಪದಾಂತ್ಯದಲ್ಲಿಯ ಸ್ವರವು ದೀರ್ಘಗೊಳ್ಳುವುದು. ಅದೇ ಅಗ್ನಿಪದದ ಮುಂದೆ **वरुण** ಶಬ್ದ ಬಂದಲ್ಲಿ ಯಾವುದೇ ಬದಲಾವಣೆಯಿಲ್ಲ.

ಉದಾಹರಣೆ :.

मित्रावरुणौ	**मित्रश्च वरुणश्च**	ಮಿತ್ರಾವರುಣರು
अग्निमरुतौ	**अग्निश्च मरुच्च**	ಅಗ್ನಿಮರುತರು
वाय्व्यग्नी	**वायुश्च अग्निश्च**	ವಾಯುಅಗ್ನಿಯರು
अग्नीषोमौ	**अग्निश्च सोमश्च**	ಅಗ್ನಿಸೋಮರು
अग्निवरुणौ	**अग्निश्च वरुणश्च**	ಅಗ್ನಿವರುಣರು

द्यो ಪದವು ದ್ಯಾವಾ ಎಂದಾಗುವುದು -

द्यावापृथिव्यौ	**ध्योश्च पृथिवी च**	ಆಕಾಶ ಭೂಮಂಡಲಗಳು

ಪಶು, ಪಕ್ಷಿ, ಹಣ್ಣು, ಧಾನ್ಯ, ಮರ, ಗಿಡ, ಹುಲ್ಲು ಮುಂತಾದವುಗಳ ಏಕವಚನವಾಚಕ ಪದಗಳನ್ನು ಸಮಾಸದಲ್ಲಿ ಬಳಸಿದಾಗ ಇತರೇತರ ದ್ವಂದ್ವವಾಗುವುದು. ಉದಾಹರಣೆ :

बदरामलके	**बदरं च आमलकं च**	ಬೋರೇ ಮತ್ತು ನೆಲ್ಲೀ
पिककाकौ	**पिकश्च काकश्च**	ಕೋಗಿಲೆ ಮತ್ತು ಕಾಗೆ
सिंहशार्दूलौ	**सिंहश्च शार्दूलश्च**	ಸಿಂಹ ಶಾರ್ದೂಲಗಳು

ಋಕಾರಾಂತ ಪದಗಳು ಸಮಾಸಗೊಳ್ಳುವಾಗ ಪರಸ್ಪರ ರಕ್ತಸಂಬಂಧವನ್ನಾಗಲೀ ವಿದ್ಯಾಸಂಬಂಧವನ್ನಾಗಲೀ ನಿವೇದಿಸುವುದಿದ್ದಲ್ಲಿ ಆಗ ಪೂರ್ವಪದಾಂತ್ಯ ಋಕಾರವು **अ** ಅಥವಾ **अर** ಎಂದಾಗುವುದು.

ಉದಾಹರಣೆ :

मातापितरौ / मातरपितरौ	**माता च पिता च**	ತಾಯಿತಂದೆಯರು

जाया ಪದವು **जम्** ಅಥವಾ **दम्** ಎಂದಾಗುವುದು.

जम्पती / दम्पती	**जाया च पतिश्च**	ಹೆಂಡತಿ ಮತ್ತು ಗಂಡ

೩. ಸಮಾಹಾರ ದ್ವಂದ್ವ :

सम् + **आ** + **हृ** = ಸಮಾಹಾರ- ಸಮೂಹವಾಚಕವೆಂದರ್ಥ. ಸಮಾಹಾರ ದ್ವಂದ್ವವು ಸಮೂಹವಾಚಕವಾಗಿರುವುದು. ಆದ್ದರಿಂದ ಸಮಾಹಾರ ದ್ವಂದ್ವವು[1] ನಪುಂಸಕದಲ್ಲಿ ಬರುವುದು.

ದ್ವಿವಚನ ಅಥವಾ ಬಹುವಚನಯುತ ದೇಹದ ಅವಯವಗಳು, ಸೈನ್ಯವಿಭಾಗಗಳು, ಕ್ರಿಮಿಕೀಟಗಳು,

---

[1] **स नपुंसकम्** (ಪಾ II, 4, 17) **समाहारे द्विगुर्द्वन्द्वश्च नपुंसकं स्यात्** (ಸಿ. ಕೌ 821)

Rarest Archiver

ಪಶುಪಕ್ಷಿಗಳು, ದೇಶಗಳು ಮುಂತಾದವುಗಳನ್ನು ಬೋಧಿಸುವ ಉಭಯಪದಪ್ರಧಾನಸಮಾಸಗಳು ಸಮಾಹಾರದ್ವಂದ್ವಗಳೆನಿಸುತ್ತವೆ. ಪರಸ್ಪರ ಪೂರಕವ್ಯಕ್ತಿವಾಚಕಪದಗಳೂ ಸಮಾಹಾರದ್ವಂದ್ವದಲ್ಲೇ ಬರುವವು.

ಉದಾಹರಣೆ :

पाणिपादम्	**पाणी च पादौ च एतेषां समाहारः**	ಕೈಕಾಲ್ಗಳು
रथिकाश्वारोहम्	**रथिकाश्च अश्वारोहाश्च एतेषां समाहारः**	ರಥಿಕಾಶ್ವಾರೋಹಿಗಳ ಸಮೂಹ
शुकबकम्	**शुकाश्च बकाश्च एतेषां समाहारः**	ಗಿಳಿಗಳ ಮತ್ತು ಬಕಪಕ್ಷಿಗಳ ಹಿಂಡು
बदरामलकम्	**बदराणि च आमलाकानि च एतेषां समाहारः**	ಬೋರೆಹಣ್ಣುಗಳ ಮತ್ತು ನೆಲ್ಲೀಕಾಯಿಗಳ ರಾಶಿ
वधूवरम्	**वधूश्च वरश्च एतयोः समाहारः**	ವಧೂವರರು

ವಿ.ಸೂ. ಇಲ್ಲಿ **पाणिपादौ** ಎಂದಿದ್ದಾದರೆ ಒಂದು ಕೈ ಮತ್ತು ಒಂದು ಕಾಲು ಎಂದು ಅರ್ಥಬರುತ್ತದೆ. ಹಾಗೂ ಸಮೂಹವಾಚಕವಲ್ಲದಿರುವುದರಿಂದ ಇತರೇತರ ದ್ವಂದ್ವವಾಗುತ್ತದೆ. ಹೀಗೆಯೇ ಉಳಿದವುಗಳು.
ಈ ಕೆಳಗಿನ ಸಮಾಸಗಳೂ ಸಮಾಹಾರದ್ವಂದ್ವಗಳೆನಿಸುತ್ತವೆ.

ಉದಾಹರಣೆ :	**अहोरात्रम्**	**अहश्च रात्रिश्च**	ಹಗಲೂರಾತ್ರಿ
	नक्तन्दिवम्	**नक्तं च दिवा च**	ರಾತ್ರೀ ಹಗಲು
	रात्रिन्दिवम्	**रात्रिश्च दिवा च**	ರಾತ್ರೀ ಹಗಲು
	अहर्दिवम्	**अहनि च दिवा च**	ಹಗಲಿಡೀ

उषस् ಪದವು ಸಮಾಸದಲ್ಲಿ **उषासा** ಎಂದಾಗುವುದು. ಉದಾಹರಣೆ :

उषासासूर्यम् **उषाश्च सूर्यश्च एतयो समाहारः** ಉಷಾಸೂರ್ಯರು

भ्रू ಶಬ್ದವು ಸಮಾಸದಲ್ಲಿ **भ्रुव** ಎಂದಾಗುವುದು.

अक्षिभ्रुवम् **अक्षिणी च भ्रुवौ च एतेषां समाहारः** ಕಣ್ಣುಗಳೂ ಹುಬ್ಬುಗಳೂ

V ಅವ್ಯಯೀ ಭಾವ ಸಮಾಸ (Adverbial Compounds) :

ಅವ್ಯಯೀಭಾವ ಸಮಾಸವು ಪೂರ್ವಪದಾರ್ಥ ಪ್ರಧಾನವಾದುದು ಮತ್ತು ಅವ್ಯಯವಾಗಿ ನಿಲ್ಲುವಂಥಾದ್ದು. ಅರ್ಥಾತ್ ಅವ್ಯಯೀಭಾವವು ವಿಭಕ್ತಿಪ್ರತ್ಯಯಗಳನ್ನು ಹೊಂದುವುದಿಲ್ಲ. ಆದಾಗ್ಯೂ ಇದು ನಪುಂಸಕಲಿಂಗದಲ್ಲಿರುತ್ತದೆ[1] ಅನ್ನುವುದು ಗಮನಾರ್ಹ. ಸುಬಂತಪದವು ಅವ್ಯಯದೊಡನೆ ಸಮಾಸಹೊಂದಿದಾಗ ವಿಭಕ್ತಿಪ್ರತ್ಯಯವು ಲೋಪವಾಗಿದ್ದರೂ ಅವ್ಯಯೀಭಾವ ಸಮಾಸವು ವಿಭಕ್ತ್ಯರ್ಥದಲ್ಲಿರುತ್ತದೆ[2]

[1] **अव्ययीभावश्च** (ಪಾ II, 4, 18) **अयं नपुंसकं स्यात्** (ಸಿ. ಕೌ 659)

[1] **विभक्त्याद्यर्थादिषु वर्तमानमव्ययं सुबन्तेन सह समस्यते, सोऽव्ययीभावः** (ಸಿ. ಕೌ 658)

Rarest Archiver

೧. ಅವ್ಯಯರಹಿತ ೨. ಅವ್ಯಯಪೂರ್ವಪದ ೩. ಅವ್ಯಯೋತ್ತರಪದ

ಎಂದು ಅವ್ಯಯೀಭಾವ ಸಮಾಸಗಳು ಮೂರುವಿಧಗಳಲ್ಲಿ ಬರುತ್ತವೆ.

೧. ಅವ್ಯಯರಹಿತ ಅವ್ಯಯೀಭಾವಸಮಾಸ :

ಸಮಾಸಪೂರ್ವದಲ್ಲಿ ಉಭಯಪದಗಳೂ ಸುಬಂತಗಳಾಗಿರುತ್ತವೆ.

ಉದಾಹರಣೆ : ವಿಗ್ರಹ	ಸಮಾಸ	ಅರ್ಥ
गंगायाःपारे	**पारेगङ्गम्**	ಗಂಗೆಯ ಆಚೆಗೆ
सभायाः मध्ये	**मध्येसभम्**	ಮಧ್ಯ ಸಭೆಯಲ್ಲಿ
उन्मत्ता गङ्गा यस्मिन् देशे	**उन्मत्तगङ्गम्**	ಗಂಗಾನದಿಯು ಭೋರ್ಗರೆದು ಹರಿಯುವ ಪ್ರದೇಶ
गावः यस्मिन् काले तिष्ठन्ति	**तिष्ठद्गुः**	ಆಕಳುಗಳು ನಿಲ್ಲುವ ಸಮಯದಲ್ಲಿ

೨. ಅವ್ಯಯಪೂರ್ವಪದ ಅವ್ಯಯೀಭಾವಸಮಾಸ :

ಸಮಾಸದಲ್ಲಿ ಪೂರ್ವಪದವು ಅವ್ಯಯವಾಗಿರುತ್ತದೆ. ಉದಾಹರಣೆ :

हरौ इति	**अधिहरिः**	ಹರಿಯಲ್ಲಿ
कृष्णस्य समीपे	**उपकृष्णः**	ಕೃಷ್ಣನ ಹತ್ತಿರ
मद्राणां समृद्धिः	**सुमद्रम्**	ಮದ್ರದೇಶದವರಿಗೆ ಸಮೃದ್ಧಿಯಿರುವಾಗ

೩. ಅವ್ಯಯೋತ್ತರಪದ ಅವ್ಯಯೀಭಾವಸಮಾಸ :

ಅವ್ಯಯೀಭಾವ ಸಮಾಸದಲ್ಲಿ ಉತ್ತರಪದವು ಅವ್ಯಯವಿರುವಾಗ.... ಉದಾಹರಣೆ :

शाकस्य लेशः	**शाकप्रति**	ತುಸು ತರಕಾರಿ
अक्षेण विपरीतं वृत्तम्	**अक्षपरि**	ಜೂಜಾಟವೆನ್ನುವ ವಿಪರೀತ ನಡತೆ

ಅವ್ಯಯೀಭಾವ ಸಮಾಸಗಳು ಈ ಕೆಳಗಿನ ಅರ್ಥಗಳಲ್ಲಿ ಬರುತ್ತವೆ.

ವಿಭಕ್ತ್ಯರ್ಥದಲ್ಲಿ - ಉದಾಹರಣೆ :

ಸಮಾಸ	ವಿಗ್ರಹ	ಅರ್ಥ
अधिगोपम्	**गोपे इति**	ಗೋಪನಲ್ಲಿ
अन्तर्गिरिः	**गिरेः अन्तः**	ಪರ್ವತದಲ್ಲಿ

ಸಾಮೀಪ್ಯಾರ್ಥದಲ್ಲಿ - ಉದಾಹರಣೆ :

उपगवम्	**गवां समीपम्**	ಆಕಳುಗಳ ಹತ್ತಿರ
उपक्षेत्रम्	**क्षेत्रस्य समीपम्**	ಹೊಲದ ಹತ್ತಿರವಿರುವ

Rarest Archiver

ಸಮೃದ್ಧ್ಯರ್ಥದಲ್ಲಿ -

ಉದಾಹರಣೆ :

सुमद्रम्	**मद्राणां समृद्धिः**	ಮದ್ರದೇಶದವರು ಒಳ್ಳೇ ಸ್ಥಿತಿಯಲ್ಲಿರುವಾಗ
सुजनम्	**जनानां समृद्धिः**	ಜನರು ಸಮೃದ್ಧಿ ಸ್ಥಿತಿಯಲ್ಲಿರುವಾಗ

ವೃದ್ಧ್ಯರ್ಥ(ದುರ್ದಶಾರ್ಥ)ದಲ್ಲಿ -

ಉದಾಹರಣೆ :

दुर्यवनम्	**यवानानां वृद्धिः**	ಯವನರು ಕೆಟ್ಟ ಅವಸ್ಥೆಯಲ್ಲಿರುವಾಗ

ಅಭಾವಾರ್ಥದಲ್ಲಿ -

ಉದಾಹರಣೆ :

निर्मक्षिकम्	**मक्षिकाणाम् अभावः**	ನೊಣಗಳೂ ಇಲ್ಲದಂತೆ
निर्मानुषम्	**मनुष्याणाम् अभावः**	ಮನುಷ್ಯರಿಲ್ಲದಂತೆ
निर्जनम्	**जनानाम् अभावः**	ಜನಶೂನ್ಯವಾಗಿರುವಂತೆ

ಅತ್ಯಯಾ(ನಾಶಾ)ರ್ಥದಲ್ಲಿ -

ಉದಾಹರಣೆ :

अतिहिमम्	**हिमस्य अत्ययः**	ಹಿಮವು ಕಳೆದಿರುವಾಗ
अतियौवनम्	**यौवनस्य अत्ययः**	ಯೌವನವು ಗತಿಸಿರಲು
अतिवसन्तम्	**वसन्तस्य अत्ययः**	ವಸಂತವು ದಾಟಿರಲು

ಅಸಂಪ್ರತ್ಯರ್ಥ(ಸಮಯೋಚಿತವಲ್ಲದ ಅರ್ಥ)ದಲ್ಲಿ -

ಉದಾಹರಣೆ :

अतिनिद्रम्	**निद्रा सम्प्रति न युज्यते इति**	ನಿದ್ರೆಗೆ ಯೋಗ್ಯವಲ್ಲದ ಸಮಯ

ಪ್ರಾದುರ್ಭಾವಾರ್ಥದಲ್ಲಿ -

ಉದಾಹರಣೆ :

इतिहरि	**हरिशब्दस्य प्रकाशः इति**	'ಹರಿ' ಶಬ್ದವು ಹೊಳೆಯುವುದು

ಪಶ್ಚಾದರ್ಥದಲ್ಲಿ -

ಉದಾಹರಣೆ :

अनुविष्णुः	**विष्णोः पश्चात्**	ವಿಷ್ಣುವಿನ ನಂತರ

Rarest Archiver

ಯೋಗ್ಯತಾರ್ಥದಲ್ಲಿ -

ಉದಾಹರಣೆ :

अनुरूपम् **रूपस्य योग्यम्** ರೂಪಯೋಗ್ಯವಾದ

ವೀಪ್ಸಾರ್ಥ (ಬಯಕೆಯ ಅರ್ಥ)ದಲ್ಲಿ - ಉದಾಹರಣೆ :

प्रत्यर्थम् **अर्थम् अर्थम् इति** ಆ ವಸ್ತು ಈ ವಸ್ತು ಎಂದು

प्रतिपर्वतम् **पर्वतं पर्वतम् इति** ಪರ್ವತ ಪರ್ವತವೆಂದು

ಅನತಿವೃತ್ತ್ಯರ್ಥದಲ್ಲಿ -

ಉದಾಹರಣೆ :

यथाशक्ति **शक्तिम् अनतिक्रम्य** ಶಕ್ತಿ ಮೀರದೆ

ಅನುಪೂರ್ವ್ಯಾರ್ಥದಲ್ಲಿ -

ಉದಾಹರಣೆ :

अनुज्येष्ठम् **ज्येष्ठस्य अनुपूर्वेण** ಹಿರಿಯನ ನಂತರ

ಯೌಗಪದ್ಯಾರ್ಥದಲ್ಲಿ -

ಉದಾಹರಣೆ :

सचक्रम् **चक्रेण युगपत्** ಚಕ್ರದಿಂದೊಡಗೂಡಿ

ಸಾದೃಶ್ಯಾರ್ಥದಲ್ಲಿ -

ಉದಾಹರಣೆ :

सहरि **हरेः सादृश्यम्** ಹರಿಗೆ ಸದೃಶವಾಗಿ

ಸಂಪತ್ತ್ಯಾರ್ಥದಲ್ಲಿ - ಉದಾಹರಣೆ :

सक्षत्रम् **क्षत्राणां सम्पत्तिः** ಕ್ಷತ್ರಿಯ ಸಂಪತ್ತು - ಶೌರ್ಯ

ಸಾಕಲ್ಯಾರ್ಥ (ಸಂಪೂರ್ಣಾರ್ಥ)ದಲ್ಲಿ - ಉದಾಹರಣೆ :

सतृणम् **तृणमपि अपरित्यज्य** ಹುಲ್ಲನ್ನೂ ಬಿಡದೆ

ಅಂತಾರ್ಥದಲ್ಲಿ - ಉದಾಹರಣೆ :

सभाष्यम् **अन्ते भाष्यपर्यन्तम् (अधीतम्)** ಭಾಷ್ಯದವರೆಗೂ (ಅಭ್ಯಾಸಮಾಡಿದ)

साग्नि **अन्ते अग्निग्रन्थपर्यन्तम् अधीते** ಅಗ್ನಿಗ್ರಂಥದವರೆಗೂ ಕಲಿತ

ಈ ಮುಂತಾದ ಅರ್ಥಗಳಲ್ಲಿ ಅವ್ಯಯೀಭಾವ ಸಮಾಸಗಳು ಬರುತ್ತವೆ.

Rarest Archiver

ಅವ್ಯಯೀಭಾವ ಸಮಾಸದಲ್ಲಿ ಬರುವಾಗ ಕೆಲವು ಶಬ್ದಗಳು - ಅಕ್ಷ, ಶಲಾಕ ಮತ್ತು ಸಂಖ್ಯಾವಾಚಕ ಶಬ್ದಗಳು **परि** ಪದಕ್ಕೆ 'ಕಳೆದುಕೊಂಡ' ಅನ್ನುವ ಅರ್ಥದಲ್ಲಿ ಪೂರ್ವಪದಗಳಾಗಿ ಬರುತ್ತವೆ

ಉದಾಹರಣೆ :

अक्षपरि	**अक्षेण विपरीतं वृत्तम्**	ದ್ಯೂತದಲ್ಲಿ ಕಳೆದುಕೊಳ್ಳುವಿಕೆ
शलाकापरि	**शलाकया विपरीतं वृत्तम्**	ಸಲಾಕೆಯೊಗೆಯುವ ಆಟದಲ್ಲಿ ಕಳೆದುಕೊಳ್ಳುವಿಕೆ

प्रति (ಸ್ವಲ್ಪಾರ್ಥದಲ್ಲಿ) ಅವ್ಯಯವು ಉತ್ತರಪದವಾಗಿ ಬರುತ್ತದೆ.

ಉದಾಹರಣೆ :

शाकप्रति	**शाकस्य लेशः**	ತುಸು ತರಕಾರಿ

अक्षि ಪದವು **अक्ष** ಎಂದಾಗುತ್ತದೆ. ಉದಾಹರಣೆ :

प्रत्यक्षम्	**अक्ष्णोः प्रति**	ಕಣ್ಣೆದುರಿಗೆ
समक्षम्	**अक्ष्णोः समीपम्**	ಕಣ್ಣೆದುರಿಗೆ
परोक्षम्	**अक्ष्णोः परम्**	ಹಿಂಬದಿಗೆ

उरस् ಶಬ್ದವು **उरस** ಎಂದಾಗುವುದು ; ಇದೇ ರೀತಿ **जरस्** ಶಬ್ದವೂ **जरस** ಎಂದಾಗುವುದು.

ಉದಾಹರಣೆ :

प्रत्युरसम्	**उरसि इति**	ಹೊಟ್ಟೆಯೆಡೆಗೆ
उपजरसम्	**जरसः समीपम्**	ವೃದ್ಧಾಪ್ಯದೆಡೆಗೆ

यावत् ಪದವು ಸಮಾಸದಲ್ಲಿ **तावत्** ಶಬ್ದಾರ್ಥವನ್ನೂ ಕೊಡುತ್ತದೆ.

ಉದಾಹರಣೆ :

यावदवकाशम्	**यावत् अवकाशं तावत् (अभ्यासम्)**	ಅವಕಾಶವಿರುವವರೆಗೆ ಅಭ್ಯಾಸ
यावत्तैलम्	**यावत् तैलं तावत् (आख्यानम्)**	ಎಣ್ಣೆಯಿರುವವರೆಗೆ ಆಖ್ಯಾನ

पार ಅವ್ಯಯವು ಸಪ್ತಮೀ ವಿಭಕ್ತ್ಯರ್ಥವೂ ಆಗುವುದು; ಆಗ ಸುಬಂತದಂತೆ ವ್ಯವಹರಿಸುವುದು.

ಉದಾಹರಣೆ :

पारेसमुद्रम्	**समुद्रस्य पारे**	ಸಮುದ್ರದಾಚೆಯಲ್ಲಿ

गिरि, नदी ಇವುಗಳು ಐಚ್ಛಿಕವಾಗಿ **गिर, नद** ಗಳಾಗುತ್ತವೆ.

Rarest Archiver

ಉದಾಹರಣೆ :

अन्तर्गिरि / अन्तर्गिरम्	**गिरेः अन्तः**	ಪರ್ವತದಲ್ಲಿ
उपनदि/ उपनद	**नद्याः समीपम्**	ನದಿಯ ಬಳಿಯಲ್ಲಿ

दिश् ಪದವು **दिश** ಎಂದಾಗುವುದು. ಉದಾಹರಣೆ :

अपदिशम्	**दिशोः मध्यम्**	ಮಧ್ಯದಿಕ್ಕು

शरद्, समिध् ಪದಗಳು **शरद, समिध** ಎಂದಾಗುವವು.

ಉದಾಹರಣೆ :

उपशरदम्	**शरदः समीपम्**	ಶರತ್ಕಾಲದ ಹತ್ತಿರ
उपसमिधम्	**समिधः समीपम्**	ಸಮಿತ್ತುಗಳಿರುವಲ್ಲಿ

आत्मन्, चर्मन्, राजन् ಮುಂತಾದವುಗಳ ಅಂತ್ಯ ನಕಾರ ಲೋಪಗೊಳ್ಳುತ್ತದೆ.

ಉದಾಹರಣೆ :

अध्यात्म	**आत्मनि इति**	ಆತ್ಮಕ್ಕೆ ಹತ್ತಿರ
उपचर्म	**चर्मस्य समीपम्**	ಚರ್ಮದ ಹತ್ತಿರ
उपराजम्	**राज्ञः समीपम्**	ರಾಜನ ಹತ್ತಿರ

VI ಬಹುವ್ರೀಹಿ ಸಮಾಸ (Attributive Compounds)

ಅನ್ಯಪದಾರ್ಥಪ್ರಧಾನವಾದುದು[1] ಬಹುವ್ರೀಹಿ ಸಮಾಸ. ಅಂದರೆ, ಬಹುವ್ರೀಹಿ ಸಮಾಸವು ಅನ್ಯಪದಾರ್ಥಕ್ಕೆ ವಿಶೇಷಣವಾಗಿ ನಿಲ್ಲುವುದು. ಬಹುವ್ರೀಹಿಯಲ್ಲಿ ಎರಡು ಪದಗಳಿದ್ದರೆ ದ್ವಿಪದ ಬಹುವ್ರೀಹಿಯೆಂದೂ ಎರಡಕ್ಕಿಂತ[2] ಹೆಚ್ಚಿಗೆ ಪದಗಳಿದ್ದಲ್ಲಿ ಬಹುಪದ ಬಹುವ್ರೀಹಿಯೆಂದೂ ಕೆಲವರು ವಿಭಾಜಿಸುತ್ತಾರೆ.

ಉದಾಹರಣೆ : ದ್ವಿಪದಬಹುವ್ರೀಹಿ -

पीताम्बरः	**पीतम् अम्बरं यस्य सः(कृष्णः)**	ಪೀತಾಂಬರವನ್ನುಟ್ಟವನು (ಕೃಷ್ಣನು)
महाबाहुः	**महान् बाहुः यस्य सः (नलः)**	ಮಹಾಬಾಹುವಾದ (ನಲನು)

ಬಹುಪದಬಹುವ್ರೀಹಿ -

भीमपौरुषप्रियः	**भीमस्य पौरुषस्य प्रियः यः सः (विक्रमः)**	ಭೀಮಪೌರುಷಪ್ರಿಯನಾದ (ವಿಕ್ರಮನು)

---

[1] **शेषो बहुव्रीहिः** (ಪಾ II, 2, 23)

[2] **अनेकमन्यपदार्थे** (ಪಾ II, 2, 24)

अनेकं प्रथमान्तम् अन्यपदार्थे वर्तमानं वा समस्यते स बहुव्रीहिः (ಸಿ. ಕೌ 830)

Rarest Archiver

मेघगम्भीरनादः	**मेघस्य नादः इव गम्भीरः यस्य नादः सः(भीमः)**	ಮೋಡದ ಗುಡುಗಿನಂತೆ ಗಂಭೀರ ಧ್ವನಿಯುಳ್ಳ (ಭೀಮನು)

ಕೆಲವು ಕರ್ಮಧಾರಯ ಸಮಾಸಗಳು ಅನ್ಯ ಪದಾರ್ಥಕ್ಕೆ ವಿಶೇಷಣಗಳಾಗಿ ನಿಲ್ಲುವಾಗ ಬಹುವ್ರೀಹಿ ಸಮಾಸಗಳೆನಿಸುವುವು. ಉದಾಹರಣೆ :

गम्भीरनादः	**गम्भीरश्च असौ नादश्च**	ಗಂಭೀರವಾದ ನಾದವು (ಕರ್ಮಧಾರಯ)
गम्भीरनादः	**गम्भीरः यस्य नादः सः (भीमः)**	ಗಂಭೀರ ಧ್ವನಿಯುಳ್ಳವನು (ಭೀಮನು) (ಬಹುವ್ರೀಹಿ)
पीताम्बरम्	**पीतं च तत् अम्बरं च**	ಪೀತವರ್ಣದ ಬಟ್ಟೆ(ಕರ್ಮಧಾರಯ)
पीताम्बरः	**पीतम् अम्बरं यस्य सः(कृष्णः)**	ಪೀತಾಂಬರಧಾರಿ ಕೃಷ್ಣ (ಬಹುವ್ರೀಹಿ)

ಇದೇ ರೀತಿ ದ್ವಿಗು ಮತ್ತು ಬಹುವ್ರೀಹಿ . ಉದಾಹರಣೆ :

त्रिलोचनम्	**त्रयाणां लोचनानां समाहारः**	ಮೂರುಕಣ್ಣುಗಳು(ದ್ವಿಗು)
त्रिलोचनः	**त्रीणि लोचनानि यस्य सः**	ಮೂರುಕಣ್ಣುಗಳುಳ್ಳವನು(ಶಿವನು) (ಬಹುವ್ರೀಹಿ)

ಬಹುವ್ರೀಹಿ ಸಮಾಸಗಳು ಸಂಬಂಧಿಸಿದ ಅನ್ಯಪದಗಳ ವಿಭಕ್ತಿಗಳನ್ನು ಆಶ್ರಯಿಸುತ್ತವೆ.

ಉದಾಹರಣೆ :

पीताम्बराय कृष्णाय ; त्रिलोचनं शिवम् ; भीमपौरुषप्रियस्य विक्रमस्य

ಬಹುವ್ರೀಹಿಯನ್ನು ಸಮಾನಾಧಿಕರಣಬಹುವ್ರೀಹಿ ಮತ್ತು ವ್ಯಧಿಕರಣ ಬಹುವ್ರೀಹಿ ಎಂದೂ ವಿಭಾಗಿಸಲಾಗುತ್ತದೆ.

I **ಸಮಾನಾಧಿಕರಣ ಬಹುವ್ರೀಹಿ :**

ಬಹುವ್ರೀಹಿ ಸಮಾಸದಲ್ಲಿಯ ಪದಗಳು ಏಕಾಶ್ರಯವುಳ್ಳದ್ದಾದಲ್ಲಿ ಸಮಾನಾಧಿಕರಣ ಬಹುವ್ರೀಹಿಯೆನಿಸುವುದು.

ಉದಾಹರಣೆಗಳು :

ದ್ವಿತೀಯಾ ಬಹುವ್ರೀಹಿ -

प्राप्तोदकः (ग्रामः)	**प्राप्तम् उदकं यं सः (ग्रामः)**	ನೀರನ್ನು ಹೊಂದಿದ (ಹಳ್ಳಿ)

ತೃತೀಯಾ ಬಹುವ್ರೀಹಿ -

ऊढरथः (अश्वः)	**ऊढः रथः येन सः (अश्वः)**	ರಥಕ್ಕೆ ಹೂಡಲ್ಪಟ್ಟ (ಕುದುರೆ)

ಚತುರ್ಥೀ ಬಹುವ್ರೀಹಿ -

उपहृतपशुः	**उपहृतः पशुः यस्मै सः (रुद्रः)**	ಪಶುವನ್ನು ಪಡೆದ (ರುದ್ರ)

Rarest Archiver

ಪಂಚಮೀ ಬಹುವ್ರೀಹಿ

उद्धृतौदना	**उद्धृतः ओदनः यस्याः सा (स्थाली)**	ಬಡಿಸಲ್ಪಟ್ಟ ಅನ್ನವುಳ್ಳ (ತಟ್ಟೆ)

ಷಷ್ಠೀ ಬಹುವ್ರೀಹಿ

पीताम्परः (कृष्णः)	**पीतम् अम्बरं यस्य सः (कृष्णः)**	ಪೀತಾಂಬರಧಾರಿ (ಕೃಷ್ಣ)
वीरपुरुषकः (ग्रामः)	**वीराः पुरुषाः यस्मिन् सः (ग्रामः)**	ವೀರಪುರುಷರಿರುವ (ಹಳ್ಳಿ)

ಇಲ್ಲೆಲ್ಲ ಸಮಾಸಗಳನ್ನು ವಿಗ್ರಹಿಸಿದಾಗ ಸಮಾಸಸ್ಥಪದಗಳು ಪ್ರಥಮಾವಿಭಕ್ತಿಯಲ್ಲಿಯೇ ಇದ್ದದ್ದನ್ನು ಗಮನಿಸಬಹುದು.

II ವ್ಯಧಿಕರಣ ಬಹುವ್ರೀಹಿ:

ವಿಭಿನ್ನ ವಿಭಕ್ತಿಗಳನ್ನಾಶ್ರಯಿಸಿದ ಪದಗಳುಳ್ಳ ಬಹುವ್ರೀಹಿಯು ವ್ಯಧಿಕರಣ ಬಹುವ್ರೀಹಿಯೆನಿಸುವುದು.

ಉದಾಹರಣೆ :

ಸಮಾಸ	ವಿಗ್ರಹ	ಅರ್ಥ
चक्रपाणिः(हरिः)	**चक्रं पाणौ यस्य सः(हरिः)**	ಚಕ್ರಪಾಣಿಯಾದ (ಹರಿಯು)
शशिशेखरः (शिवः)	**शशी शेखरे यस्य सः (शिवः)**	ಚಂದ್ರನನ್ನು ಶಿರದಲ್ಲಿ ಧರಿಸಿದವನು (ಶಿವನು)
किन्नरकण्ठी (बाला)	**किन्नरस्य कण्ठः इव कण्ठः यस्याः साः (बाला)**	ಕಿನ್ನರ ಕಂಠದಂತಿರುವ ಕಂಠವುಳ್ಳ (ಬಾಲೆ)
पद्मगन्धिः (रामः)	**पद्मस्य गन्धः इव गन्धः यस्य सः (रामः)**	ಪದ್ಮದ ಸುವಾಸನೆಯಂತಹ ಸುವಾಸನೆಯುಳ್ಳ (ರಾಮ)

ಬಹುವ್ರೀಹಿಯಲ್ಲಿ ಬದಲಾವಣೆಗೊಳ್ಳುವ ಕೆಲವು ಶಬ್ದಗಳು

जानु ಶಬ್ದವು **प्र, सम्** ಉಪಸರ್ಗಗಳೊಡನೆ **ज्ञु** ಎಂದಾಗುವುದು. ಪೂರ್ವಪದವು **ऊर्ध्व** ಇದ್ದಲ್ಲಿ ವೈಕಲ್ಪಿಕವಾಗಿ **जानु** ಶಬ್ದವು ಹಾಗೆಯೇ ಉಳಿಯುವುದು.

प्रगतं जानुनी यस्य सः	**प्रज्ञुः**	ದೊಡ್ಡದಾಗಿ ಬೆಳೆದ ಮೊಳಕಾಲುಗಳುಳ್ಳವನು
ऊर्ध्व जानुनी यस्य सः	**ऊर्ध्वज्ञुः** / **ऊर्ध्वजानुः**	ದೀರ್ಘವಾದ ಮೊಳಕಾಲುಗಳುಳ್ಳವನು

जाया ಪದವು ಸಮಾಸದಲ್ಲಿ **जानि** ಎಂದಾಗುವುದು.

ಉದಾಹರಣೆ :

युवती जाया यस्य सः	**युवाजानिः**	ಯುವತಿಯಾದ ಹೆಂಡತಿಯುಳ್ಳವನು

ಹೀಗೆಯೇ **भूजानिः** ಮುಂತಾದವುಗಳು.

Rarest Archiver

① ಸಂಖ್ಯಾಸು ಪೂರ್ವಸ್ಯ - 5.4.140 - ಸಂಖ್ಯಾ ಪೂರ್ವಸ್ಯ, ಸುಪೂರ್ವಸ್ಯ ಚ ಬಹುವ್ರೀಹೇಃ ಪಾದಶಬ್ದಾಂತಸ್ಯ ಲೋಪೋ ಭವತಿ. (ಪಾಠಕ)

गन्ध ಶಬ್ದವು **गन्धि** ಎಂದಾಗುವುದು.

शोभनः गन्धः यस्य तत् **सुगन्धि** ಸುವಾಸನೆಯುಳ್ಳ (ಹೂವು)

ಹೀಗೆಯೇ **पद्मगन्धि, योजनगन्धि, मत्स्यगन्धि** ಮುಂತಾದವುಗಳು.

नासिका ಶಬ್ದವು **नस** ಎಂದಾಗುವುದು.

ಉದಾಹರಣೆ : **उद्गता नासिका यस्य सः** **उन्नसः** ಎತ್ತರವಾದ ಮೂಗುಳ್ಳ

ಹೀಗೆಯೇ **विनसः, प्रणसः** ಮುಂತಾದವುಗಳು.

(1) **पाद** ಶಬ್ದದ ಹಿಂದೆ ಸಂಖ್ಯಾವಾಚಕ ಶಬ್ದವಾಗಲೀ **सु** ಉಪಸರ್ಗವಾಗಲೀ ಇದ್ದಲ್ಲಿ ಇದು **पात्** ಎಂದಾಗುವುದು.
ಉದಾಹರಣೆ :

शोभनौ पादौ यस्य सः **सुपात्** ಒಳ್ಳೇ ಕಾಲುಗಳುಳ್ಳಂತಹ

ಹೀಗೆಯೇ **द्विपात् , चतुष्पात्,** सहस्रपात् ಮುಂತಾದವುಗಳು.

पाद ಶಬ್ದದ ಹಿಂದೆ **सु** ಮತ್ತು ಸಂಖ್ಯಾವಾಚಕಗಳಿಲ್ಲದಿದ್ದಲ್ಲಿ **पाद** ಹಾಗೆಯೇ ಉಳಿಯುವುದು.

ಉದಾಹರಣೆ :

व्याघ्रस्य पादः इव
पादः यस्य सः } व्याघ्रपादः ಹುಲಿಯ ಪಾದಗಳಂತಹ ಪಾದಗಳುಳ್ಳವನು

ಇದೇ **पाद** ವು ಸಮಾಸದಲ್ಲಿ ಸ್ತ್ರೀಲಿಂಗವಾಚಕವಾಗುವಾಗ **पदी** ಎಂದಾಗುವುದು.
ಉದಾಹರಣೆ : **कुम्भपदी, सप्तपदी, विष्णुपदी, सुपदी** ಮುಂತಾದವುಗಳು.

दन्त ಪದದ ಹಿಂದೆ ವಯೋನಿರ್ದೇಶಕ ಸಂಖ್ಯಾವಾಚಕಪದವಾಗಲೀ ಅಥವಾ **सु** ಉಪಸರ್ಗವಾಗಲೀ ಇದ್ದಲ್ಲಿ ಅದು **दन्** ಎಂದಾಗುವುದು.

ಉದಾಹರಣೆ :

द्वौ दन्तौ यस्य सः **द्विदन् बालः** ಎರಡೇ ಹಲ್ಲುಗಳುಳ್ಳ ಚಿಕ್ಕ ಹುಡುಗ.

षड् दन्ताः यस्य सः **षाडन्** ಆರೇ ಹಲ್ಲುಗಳುಳ್ಳ

शोभनाः दन्ताः यस्य सः **सुदन्** ಒಳ್ಳೇ ಹಲ್ಲುಗಳುಳ್ಳ

ಸ್ತ್ರೀಲಿಂಗದಲ್ಲಿ **द्विदती, सुदती** ಎಂದು ಮುಂತಾಗಿ ಆಗುತ್ತದೆ.

ಇವೇ ಸಂಖ್ಯಾವಾಚಕಗಳು ವಯೋಬೋಧಕವಲ್ಲದಿದ್ದಲ್ಲಿ **द्विदन्तः(करी)** ಎಂದು ಮಂತಾಗಿ 'ದಂತ' ಶಬ್ದವು ಬದಲಾಗದೆ ಹಾಗೆಯೇ ಉಳಿಯುತ್ತದೆ.

Rarest Archiver

ಹೃದಯ ಶಬ್ದವು **सु** ಮತ್ತು **दुस्** ಉಪಸರ್ಗಗಳಿಗೆ ಉತ್ತರ ಪದವಾಗಿ ಬಂದಾಗ ಮಿತ್ರಾರ್ಥದಲ್ಲಿ **हृत्** ಎಂದಾಗುತ್ತದೆ ; ಉಳಿದೆಡೆ ಹೃದಯ ಎಂದೇ ಉಳಿಯುತ್ತದೆ.

ಉದಾಹರಣೆ :

शोभनं हृदयं यस्य सः **सुहृत् / सुहृदयः** ಮಿತ್ರನಾದ, ಒಳ್ಳೇ ಹೃದಯದವನಾದ

दुष्टं हृदयं यस्य तत् **दुर्हृत् / दुर्हृदयः** ದುರ್ಮಿತ್ರನಾದ , ಕೆಟ್ಟ ಹೃದಯದವನಾದ

अक्षि ಮತ್ತು **सक्थि** ತೊಡೆ ಶಬ್ದಗಳು **अक्ष** ಮತ್ತು **सक्थ** ಎಂದಾಗುವವು.

हरिणस्य इव अक्षिणी यस्य सः **हरिणाक्षः** ಜಿಗರೆಗಂಗಳುಳ್ಳವನಾದ
ಹೀಗೆಯೇ **विशालाक्षः, राजीवाक्षः, दीर्घसक्थः** ಮುಂತಾದವುಗಳು.

उरस्, सर्पिष्, उपानह्, दधि, मधु, शालि, पुंस, अनडुह्, पयस्, नौ, लक्ष्मी ಶಬ್ದಗಳು ಅಂತ್ಯದಲ್ಲಿ **क** ವನ್ನು ಪಡೆಯುತ್ತವೆ.

ಉದಾಹರಣೆ :

एकः पुमान् यस्य असौ **एकपुंस्कः** ಒಬ್ಬನನ್ನು ಮಾತ್ರ ಹೊಂದಿದವನು

ಇದೇ ರೀತಿ **प्रियसर्पिष्कः, व्यूढोरस्कः** ಮುಂತಾದವುಗಳು.

ಇನಂತ ಸ್ತ್ರೀಲಿಂಗ ಶಬ್ದಗಳಿಗೆ **का** ವನ್ನು ಸೇರಿಸಲಾಗುವುದು. ಉದಾಹರಣೆ :

बहवः वाग्मिनः सन्ति यस्याः सा (सभा) **बहुवाग्मिका (सभा)** ಬಹಳ ಮಾತುಗಾರರುಳ್ಳ (ಸಭೆ)

ಹೀಗೆಯೇ **बहुदण्डिकानगरी** ಮುಂತಾದವುಗಳು.

पथिन् ಶಬ್ದವು **पथ** ಎಂದಾಗುವುದು.

ಉದಾಹರಣೆ :

रम्यः पन्थाः यस्य सः (देशः) **रम्यपथः (देशः)** ಒಳ್ಳೇ ದಾರಿಯುಳ್ಳ (ಸ್ಥಳ)

प्रजा, मेधा ಶಬ್ದಗಳು **प्रजस्, मेधस्** ಎಂದಾಗುವವು. ಉದಾಹರಣೆ :

दुष्टाः प्रजाः यस्य सः **दुष्प्रजाः (दुष्प्रजस्)** ಕೆಟ್ಟ ಪ್ರಜೆಗಳುಳ್ಳ

दुष्टा मेधा यस्य सः **दुर्मेधाः (दुर्मेधस्)** ಮಂದಬುದ್ಧಿಯುಳ್ಳವನು

मूर्धन् ಶಬ್ದವು ಹಿಂದೆ **द्वि, त्रि** ಶಬ್ದಗಳು ಬಂದಾಗ **मूर्ध** ಎಂದಾಗುವುದು.

ಉದಾಹರಣೆ :

द्वौ मूर्धानौ यस्य सः (सर्पः) **द्विमूर्धः** ಎರಡು ತಲೆಗಳುಳ್ಳ (ಸರ್ಪವು)

Rarest Archiver

महत् ಶಬ್ದವು महा ಎಂದಾಗುವುದು.

ಉದಾಹರಣೆ :

महान्तौ बाहू यस्य सः	महाबाहुः	ಬಲಿಷ್ಠ ಬಾಹುಗಳುಳ್ಳವ

धर्म, धनु ಶಬ್ದಗಳು धर्मन्, धन्वन् ಎಂದಾಗುವುವು.

ಉದಾಹರಣೆ :

अधिज्यं धनुः यस्य सः	अधिज्यधन्वा (अधिज्यधन्वन्)	ಬಿಲ್ಲಿನ ಹೆದೆಯೆಳೆದಂತಹ

नाभि ಶಬ್ದವು नाभ ಎಂದಾಗುತ್ತದೆ. ಉದಾಹರಣೆ :

पद्मं नाभौ यस्य सः	पद्मनाभः	ಹೊಕ್ಕಳಲ್ಲಿ ಕಮಲವುಳ್ಳವನು (ವಿಷ್ಣು)

ಬಹುವ್ರೀಹಿ ಸಮಾಸವನ್ನು ಮತ್ತೆ ಈ ಕೆಳಗಿನಂತೆ ವಿಭಾಗಿಸಬಹುದು.

೧. ಸಹ (ಪೂರ್ವಪದ) ಬಹುವ್ರೀಹಿ ೨. ಸಂಖ್ಯಾ ಬಹುವ್ರೀಹಿ ೩. ವ್ಯತೀಹಾರಲಕ್ಷಣಬಹುವ್ರೀಹಿ ೪. ದಿಗ್ಬಹುವ್ರೀಹಿ ೫. ಪ್ರಾದಿಬಹುವ್ರೀಹಿ ೬. ನಞ ಬಹುವ್ರೀಹಿ ೭. ಅಲುಕ್ ಬಹುವ್ರೀಹಿ

(೧) ಸಹ (ಪೂರ್ವಪದ)ಬಹುವ್ರೀಹಿ:

ಸಂಗತಾರ್ಥದಲ್ಲಿ ಹಾಗೂ ಸಮಾನಾರ್ಥದಲ್ಲಿ.... ಉದಾಹರಣೆ :

सपुत्रः / सहपुत्रः	पुत्रेण सह यः सः (आगतः पिता)	ಮಗನ ಸಂಗಡ ಬಂದ (ತಂದೆ)
सोदरः / सहोदरः	समानं उदरं यस्य सः	ಸಮಾನೋದರವುಳ್ಳ ; ಅಣ್ಣ ; ತಮ್ಮ

(೨) ಸಂಖ್ಯಾ ಬಹುವ್ರೀಹಿ:

ಸಂಖ್ಯಾವಾಚಕ ಶಬ್ದಗಳನ್ನು ಹೊಂದಿದ ಬಹುವ್ರೀಹಿ ಸಮಾಸಗಳಲ್ಲಿ ಮೂರು ಉಪಭೇದಗಳಿವೆ.

i) ಸಂಖ್ಯಾಪೂರ್ವಪದ :

ಉದಾಪರಣೆ :

पञ्चसायकः	पञ्च सायकाः यस्य सः (कामः)	ಪಂಚಬಾಣಗಳುಳ್ಳ (ಕಾಮನು)
त्रिणेत्रः	त्रीणि नेत्राणि यस्य सः (शिवः)	ಮುಕ್ಕಣ್ಣ (ಶಿವ)
त्रिंशरूप्यकाः	त्रिंशाः रूप्यकाः (यस्य तत् पुस्तकम्)	ಮೂವತ್ತು ರೂ.ಗಳ ಬೆಲೆಯ (ಪುಸ್ತಕ)

Rarest Archiver

ii) ಸಂಖ್ಯೋತ್ತರ ಪದ :

ಉದಾಹರಣೆ :

अधिकत्रिंशाः	त्रिंशतः अधिकाः (रूप्यकाः)	ಮೂವತ್ತಕ್ಕೂ ಹೆಚ್ಚಿಗೆ (ರೂ.ಗಳು)
उपदशाः	दशानां समीपे ये सन्ति ते	ಹತ್ತರ ಸಮೀಪವಿರುವಂತಹ
निस्त्रिंशानि	निर्गतानि त्रिंशतः(वर्षाणि)	ಕಳೆದವು ಮೂವತ್ತು (ವರ್ಷಗಳು)

ವಿ.ಸೂ. ಇಲ್ಲಿ ಸಾಮಾನ್ಯವಾಗಿ **उप, आसन्न, अदूर, अधिक** ಮುಂತಾದವುಗಳು ಪೂರ್ವಪದಗಳಾಗಿ ಬರುತ್ತವೆ.

iii) ಸಂಖ್ಯೋಭಯಪದ : ಉದಾಹರಣೆ :

त्रिचतुराः	त्रयो वा चत्वारो वा (रूप्यकाः)	ಮೂರೋ ನಾಲ್ಕೋ (ರೂಪಾಯಿಗಳು)
पञ्चषाः	पञ्च वा षड्वा	ಐದೋ ಆರೋ (ರೂಪಾಯಿಗಳು)
द्विदशाः	द्वि आवृत्ता दश	ಎರಡು ಹತ್ತು (ರೂಪಾಯಿಗಳು)

(೩) **ವ್ಯತೀಹಾರಲಕ್ಷಣಬಹುವ್ರೀಹಿ:**

ಇಲ್ಲಿ ಉತ್ತರಪದವು ಪೂರ್ವಪದದ ದ್ವಿರುಕ್ತಿಯಿರುತ್ತದೆ. ಉದಾಹರಣೆ :

केशाकेशि	केशेषु केशेषु गृहीत्वा प्रवृत्तं (युद्धम्)	ಜಡೆ ಜಡೆ ಹಿಡಿದು ಪ್ರಾರಂಭಿಸಲ್ಪಟ್ಟ (ಯುದ್ಧ)

ಇದೇ ರೀತಿ **हस्ताहस्ति, बाहूबाहवि, मुसलामुसलि, मुखामुखि, दण्डादण्डि** ಮುಂತಾದವುಗಳು.

(೪) **ದಿಗ್ಬಹುವ್ರೀಹಿ:**

ಇದಕ್ಕೆ ದಿಗಂತರಾಲಲಕ್ಷಣ ಬಹುವ್ರೀಹಿಯೆಂಬ ಸಂಜ್ಞೆಯೂ ಇದೆ. ಉದಾಹರಣೆ :

उत्तरपूर्वा	उत्तरस्याः पूर्वस्याश्च दिशोन्तरालम् (ईशान्या)	ಉತ್ತರ ಪೂರ್ವಗಳ ನಡುವಿನ (ಈಶಾನ್ಯವು)

ಇದೇ ರೀತಿ **दक्षिणपूर्वा, पूर्वपश्चिमा** ಮುಂತಾದವುಗಳು.

(೫) **ಪ್ರಾದಿಬಹುವ್ರೀಹಿ :**

प्र, परा ಮುಂತಾದ ಉಪಸರ್ಗಗಳನ್ನು ಪೂರ್ವಪದವಾಗಿ ಬಹುವ್ರೀಹಿಗಳು ಪಡೆದಿದ್ದಲ್ಲಿ ಅವು ಪ್ರಾದಿಬಹುವ್ರೀಹಿಗಳೆನಿಸುತ್ತವೆ.

Rarest Archiver

ಉದಾಹರಣೆ : ಸಮಾಸ	ವಿಗ್ರಹ	ಅರ್ಥ
ಉಪಸರ್ಗ प्र [प्रकृष्ट ; प्रबद्ध] -		
प्रबलः	प्रकृष्टं बलं यस्य सः	ಅತಿಬಲಶಾಲಿಯಾದ
प्राञ्जलिः	प्रबद्धः अञ्जलिः येन सः	ಅಂಜಲೀಬದ್ಧನಾಗಿರುವ
ಉಪಸರ್ಗ परा [परागत] -		
परासुः	परागताः असवः यस्य सः	ಪ್ರಾಣಬಿಟ್ಟಿರುವ
ಉಪಸರ್ಗ अप [अपगत] -		
अपभयः	अपगतं भयं यस्मात् सः	ಹೆದರಿಕೆಯನ್ನು ಬಿಟ್ಟಿರುವ
ಉಪಸರ್ಗ सम् [संगत] -		
समुद्रः	संगताः उद्राः यस्मिन् सः	ನೀರುಳ್ಳ (ಸಮುದ್ರವು)
ಉಪಸರ್ಗ अव [अवनत] -		
अवमुखः	अवनतं मुखं यस्य सः	ಕೆಳಗೆ ಮುಖಮಾಡಿರುವ
ಉಪಸರ್ಗ निस् (निर्) [निर्गत] -		
निर्भयः	निर्गतं भयं यस्मात् सः	ಹೆದರಿಕೆಯಿಲ್ಲದಿರುವಂತಹ
निर्धनः	निर्गतं धनं यस्मात् सः	ಹಣವಿಲ್ಲದವನಾದ
ಉಪಸರ್ಗ दुस् (दुर्) [दुष्ट] -		
दुराशयः	दुष्टः आशयः यस्य सः	ಕೆಟ್ಟ ಆಸೆಯುಳ್ಳವನಾದ
ಉಪಸರ್ಗ वि [विगत ; विविध] -		
विधवा	विगतः धवं यस्याः सा	ವಿಧವೆಯಾದ
विरूपः	विविधानि रूपाणि यस्य सः	ವಿವಿಧರೂಪಗಳುಳ್ಳವ
ಉಪಸರ್ಗ अधि [अधिक ; अध्यारूढ] -		
अधिश्रीः	अधिका श्रीः यस्य सः	ಅಧಿಕ ಹಣವುಳ್ಳವನಾದ
अधिज्यम्	अध्यारूढा ज्या यस्मिन् तत् (धनुः)	ಹೆದೆಯೇರಿಸಿದ (ಬಿಲ್ಲು)
ಉಪಸರ್ಗ अति [अतिशयित] -		
अतिबलः	अतिशयितं बलं यस्य सः	ಬಹಳ ಬಲವುಳ್ಳಂತಹ

Rarest Archiver

ಉಪಸರ್ಗ ಉತ [उद्गत ; ऊर्ध्व ; उद्क्रान्त] -

उन्निद्रः	उद्गता निद्रा यस्य सः	ನಿದ್ರೆಯಿಲ್ಲದವನಾದ
उन्मुखः	ऊर्ध्वं मुखं यस्य सः	ಮೇಲ್ಮುಖದವನಾದ
उन्मनाः उन्मनस्	उद्क्रान्तं मनः यस्य सः	ಭ್ರಾಂತಮನಸ್ಕನಾದ

ಉಪಸರ್ಗ अभि [अभिगत ; प्रशस्त] -

अभिमुखः	अभिगतं मुखं यस्य सः	ಎದೆಗೆ ಮುಖಮಾಡಿದ
अभिजातः	प्रशस्तः जातः यस्य सः	ಒಳ್ಳೇ ಕುಲದಲ್ಲಿ ಹುಟ್ಟಿದಂತಹ

(೬) ನಞ್ ಬಹುವ್ರೀಹಿ:

ನಞ್ ತತ್ಪುರುಷದಲ್ಲಿ ಹೇಗೋ ಹಾಗೆ ಇಲ್ಲಿಯೂ ನಿಷೇಧಾತ್ಮಕ ಅವ್ಯಯವಾದ ನಞ್ (न) ಪೂರ್ವಪದವಾಗಿರುತ್ತದೆ. ತತ್ಪುರುಷದ ನಿಯಮಗಳೇ ಇಲ್ಲಿಯೂ ಅನ್ವಯಿಸುತ್ತವೆ ; ವಿಗ್ರಹವು ಮಾತ್ರ ಅನ್ಯಪದವಿಶೇಷಣಾತ್ಮಕವಾಗಿರಬೇಕು.

ಉದಾಹರಣೆ : ಸಮಾಸ	ವಿಗ್ರಹ	ಅರ್ಥ
अपुत्रः	अविद्यमानः पुत्रः यस्य सः	ಮಗನಿಲ್ಲದವನಾದ
अनादिः	न आदिः यस्य सः	ಆದಿಯಿಲ್ಲದವನಾದ
अनन्तः	न अन्तः यस्य सः	ಅಂತವಿಲ್ಲದವನಾದ
अनङ्गः	न अङ्गं यस्य सः	ದೇಹವಿಲ್ಲದವನಾದ

ಮುಂತಾದವುಗಳು.

(೭) ಅಲುಕ್ ಬಹುವ್ರೀಹಿ:

ಅಲುಕ್ ತತ್ಪುರುಷದಲ್ಲಿ ಹೇಗೋ ಹಾಗೆ ಇಲ್ಲಿಯೂ ಪೂರ್ವಪದದ ವಿಭಕ್ತಿಪ್ರತ್ಯಯವು ಹಾಗೆಯೇ ಲುಕ್ಕಾಗದೆ ಉಳಿದಿರುತ್ತದೆ. ಉದಾಹರಣೆ :

उरसि लोमा	उरसि लोमानि यस्य सः	ಎದೆಯ ಮೇಲೆ ಕೂದಲುಳ್ಳವನಾದ
कण्ठेकालः	कण्ठे कालः यस्य सः (शिवः)	ಕುತ್ತಿಗೆಯಲ್ಲಿ ಕಪ್ಪುಗುರುತನ್ನು ಹೊಂದಿದ (ಶಿವ)

ಇವಲ್ಲದೆ, पृशोदरादि ಬಹುವ್ರೀಹಿಗಳು ಮೇಲಿನ ಯಾವುದೇ ವಿಭಾಗದಲ್ಲಿಯೂ ಬರದೆ ಬೇರೆಯಾಗಿಯೇ ನಿಲ್ಲುತ್ತವೆ.

ಉದಾಹರಣೆ :

पृशोदरः	पृशत् उदरं यस्य सः	ಬಣ್ಣ ಬಣ್ಣದ ಹೊಟ್ಟೆಯುಳ್ಳ (ಜಿಂಕೆ)
बलाहकः	वारीणां वाहकः यः सः	ನೀರನ್ನು ಹೊರುವ (ಮೋಡವು)
जीमूतः	जीवनस्य मूतः यः सः	ಮೋಡವು

Rarest Archiver

श्मशानम्	**शवानां शयनम्**	ಸುಡುಗಾಡು
पिशाचः	**पिशितम् अञ्चति इति**	ಮಾಂಸತಿನ್ನುವ
मनीषा	**मनसः ईषा**	ಇಚ್ಛೆ
पश्चार्धः	**पश्चात् अर्धम्**	ಹಿಂದಿನ ಅರ್ಧ ಮುಂತಾದವುಗಳು.

VII ಕೇವಲ ಅಥವಾ ಸುಪ್ ಸುಪ್ ಸಮಾಸ (Undissolvable Compounds)

ನಿತ್ಯ ಸಮಾಸಗಳಿವು. ಎಂದಿಗೂ ವಿಗ್ರಹಿಸಲಾಗದಂತಹ ಸುಬಂತಗಳಾಗಿರುವ ಸಮಾಸಗಳಿಗೆ ಕೇವಲ ಸಮಾಸ ಅಥವಾ **सुप् सुप्** ಸಮಾಸಗಳೆನ್ನುವರು.

ಉದಾಹರಣೆ: **वागर्थौ** **काकतालम्** **काकतालीयम्** **विस्पष्टपटुः** **भूतपूर्वम्** **धृष्टद्युम्नः** **जमदग्निः** **जयद्रथः** ಮುಂತಾದವುಗಳು.

(ii) ಏಕಶೇಷವೃತ್ತಿ

ಏಕಶೇಷವು ದ್ವಂದ್ವ ಸಮಾಸಕ್ಕೆ ಅಪವಾದವಾದುದು.[1] ಏಕಾರ್ಥವುಳ್ಳ ಅನೇಕ ಸಮಾಸ ಪದಗಳೂ ವಿರೂಪ ಪದಗಳೂ ಸ್ತ್ರೀಪುಂಸಂಬಂಧವಾಚಕ ಪದಗಳೂ ಏಕಶಬ್ದಗಳಾಗಿ ನಿಲುವ ವೃತ್ತಿಗೆ ಏಕಶೇಷವೃತ್ತಿಯೆಂದು ಹೆಸರು. ಇದು ವ್ಯಾಕರಣದ ಪಂಚವೃತ್ತಿಗಳಾದ **कृद्वृत्ति, तद्धितवृत्ति, धातुवृत्ति, समासवृत्ति** ಮತ್ತು **एकशेषवृत्ति** ಗಳಲ್ಲಿ ಕೊನೆಯದು. ಈ ಏಕಶೇಷಪದವು ದ್ವಿವಚನಾಂತ ಅಥವಾ ಬಹುವಚನಾಂತವಾಗಿ ತನ್ನಲ್ಲಿಯ ಪದಸಂಖ್ಯೆಯನ್ನು ಬೋಧಿಸುತ್ತದೆ. ಉದಾಹರಣೆ:

ಏಕಶೇಷ ಸರೂಪಪದ-	ವಿಗ್ರಹ	ಅರ್ಥ
रामाः	**रामश्च रामश्च रामश्च**	ರಾಮರುಗಳು
रामौ	**रामश्च रामश्च**	ಇಬ್ಬರು ರಾಮರು

ಏಕಶೇಷ ವಿರೂಪಪದ-

वक्रदण्डौ **वक्रदण्डश्च / कुटिलदण्डश्च** ಡೊಂಕು ಕಟ್ಟಿಗೆಗಳು

ಏಕಶೇಷ ಸ್ತ್ರೀಪುಂಸಂಬಂಧವಾಚಕ	ವಿಗ್ರಹ	ಅರ್ಥ
पितरौ	**माता च पिता च**	ತಾಯಿ ತಂದೆಯರು
श्वशुरौ	**श्वशुरश्च श्वश्रू च**	ಮಾವ ಅತ್ತೆಯರು
भ्रातरौ	**भ्राता च श्वसा च**	ಅಣ್ಣ ತಂಗಿಯರು
पुत्रौ	**पुत्रश्च पुत्री च**	ಮಗನೂ ಮಗಳೂ
हंसौ	**हंसश्च हंसी च**	ಗಂಡು ಹೆಣ್ಣು ಹಂಸಪಕ್ಷಿಗಳು

---

[1] तदेवं द्वन्द्वे निरूपिते तदपवादमेकशेषप्रकरणमारभते (ಸಿ. ಕೌ.ಬಾ.ಮ.)

Rarest Archiver

ಅನುಬಂಧ

ವಿಭಕ್ತಿಗಳು ಪ್ರಯೋಗದಲ್ಲಿ

(Cases and their Governments)

೧. ಕಾರಕ ವಿಭಕ್ತಿಗಳು

ಪ್ರಥಮಾ, ದ್ವಿತೀಯಾ, ತೃತೀಯಾ, ಚತುರ್ಥೀ , ಪಂಚಮೀ ಮತ್ತು ಸಪ್ತಮೀ ವಿಭಕ್ತಿಗಳು ಕಾರಕ ವಿಭಕ್ತಿಗಳು. ಇವು ಅನುಕ್ರಮವಾಗಿ ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ ಮತ್ತು ಅಧಿಕರಣಗಳನ್ನು ಬೋಧಿಸುತ್ತವೆ. ಸಂಬುದ್ಧಿವಾಚಕವಾದ ಸಂಬೋಧನೆಯು[1] ಪ್ರಥಮಾವಿಭಕ್ತ್ಯರ್ಥದಲ್ಲಿಯೇ ಅಂತರ್ಗತವಾಗುತ್ತದೆ. ಷಷ್ಠೀವಿಭಕ್ತಿಗೆ ಕಾರಕತ್ವವಿಲ್ಲವೆನ್ನುವುದನ್ನೂ ಹಾಗೂ ಇದು ಸಂಬಂಧ ಸಾಮಾನ್ಯಬೋಧಕವೆನ್ನುವುದನ್ನೂ ವಿಭಕ್ತಿಪ್ರಕರಣದಲ್ಲಿ ಹೇಳಲಾಗಿದೆ.

ವಿಭಕ್ತಿ ಪ್ರತ್ಯಯಗಳು ಪ್ರಾತಿಪದಿಕಗಳ ಮೇಲೆ[2] ಬರುವುದನ್ನೂ ವಿಭಕ್ತಿ ಪ್ರಕರಣದಲ್ಲಿ ತೋರಿಸಲಾಗಿದೆ. ಇಲ್ಲಿ ಅವುಗಳ ಪ್ರಯೋಗಗಳನ್ನು ಉದಾಹರಣೆಗಳೊಂದಿಗೆ ನಿರ್ದೇಶಿಸಲಾಗುವುದು.

(೧) ಪ್ರಥಮಾ ವಿಭಕ್ತಿ (The Nominative Case)

ಲಿಂಗ, ವಚನಾದಿ[3] ಅರ್ಥಗಳನ್ನು ಬೋಧಿಸಲು ಪ್ರಾತಿಪದಿಕದ ಮೇಲೆ ಪ್ರಥಮಾ ವಿಭಕ್ತಿಯು ಬರುತ್ತದೆ.

ಉದಾಹರಣೆ :	**रामः**	ರಾಮನು	ಪುಲ್ಲಿಂಗ	ಏಕವಚನ
	रामौ	ಇಬ್ಬರು ರಾಮರು	ಪುಲ್ಲಿಂಗ	ದ್ವಿವಚನ
	रामाः	ರಾಮರುಗಳು	ಪುಲ್ಲಿಂಗ	ಬಹುವಚನ
	माला	ಮಾಲೆಯು	ಸ್ತ್ರೀಲಿಂಗ	ಏಕವಚನ
	माले	ಎರಡು ಮಾಲೆಗಳು	ಸ್ತ್ರೀಲಿಂಗ	ದ್ವಿವಚನ
	मालाः	ಮಾಲೆಗಳು	ಸ್ತ್ರೀಲಿಂಗ	ಬಹುವಚನ

---

[1] **एकवचनं सम्बुद्धिः** (ಪಾ II, 3, 49) **सम्बोधने प्रथमाया एकवचनं सम्बुद्धिसंज्ञं स्यात्** (ಸಿ. ಕೌ 192) **सम्बोधने च** (ಪಾ II, 3, 47) **इह प्रथमा स्यात्** (ಸಿ. ಕೌ 533) **हे! रामेति [हे राम! त्वं] मां पाहीति शेषः** (ಸಿ. ಕೌ.ಬಾ.ಮ.)

[2] ಪ್ರಾತಿಪದಿಕಗಳಿಗೆ ನಿಯತವಾದ ಅರ್ಥವೂ ಉಪಸ್ಥಿತಿಯೂ ಇರುತ್ತದೆ. ಉದಾಹರಣೆ:
उच्चैः ಇಲ್ಲಿ ಊರ್ಧ್ವದೇಶಾಧಿಕರಣ ರೂಪದ ಅರ್ಥವೂ
नीचैः ಇಲ್ಲಿ ಅಧೋದೇಶಾಧಿಕರಣ ರೂಪದ ಅರ್ಥವೂ ನಿಯತವಾದದ್ದನ್ನು ಗುರುತಿಸಬಹುದು.

[3] **प्रातिपदिकार्थलिङ्गपरिमाणवचनमात्रे प्रथमा** (ಪಾ II, 3, 46) **प्रातिपदिकार्थमात्रे लिंगमात्राद्याधिक्ये संख्यामात्रे च प्रथमा स्यात्** (ಸಿ. ಕೌ 532)

Rarest Archiver

वनम्	ವನವು	ನಪುಂಸಕಲಿಂಗ	ಏಕವಚನ
वने	ಎರಡು ವನಗಳು	ನಪುಂಸಕಲಿಂಗ	ದ್ವಿವಚನ
वनानि	ವನಗಳು	ನಪುಂಸಕಲಿಂಗ	ಬಹುವಚನ

ಪರಿಮಾಣ ಅಥವಾ ಪ್ರಮಾಣಾರ್ಥಸೂಚಕವಾಗಿಯೂ ಪ್ರಥಮಾವಿಭಕ್ತಿ ಬರುತ್ತದೆ.

ಉದಾಹರಣೆ : **द्रोणो व्रीहिः** - ಒಂದು ದೊನ್ನೆ ತುಂಬಾ ಇರುವ ಧಾನ್ಯವು.

i) ಕರ್ತ್ರರ್ಥವನ್ನು (The Subject) ಪ್ರಥಮಾ ವಿಭಕ್ತಿಯು ಬೋಧಿಸುತ್ತದೆ. ಕಾರ್ಯವನ್ನು ಕೈಗೊಳ್ಳಲು ಸ್ವತಂತ್ರನಾದವನು[1] ಕರ್ತೃ.

ಉದಾಹರಣೆ : **बालः देवं नमति** - ಹುಡುಗನು ದೇವನನ್ನು ನಮಸ್ಕರಿಸುತ್ತಾನೆ.

- ಇಲ್ಲಿ '**बालः** - ಹುಡುಗನು' ನಮನಕ್ರಿಯೆಗೆ ಸ್ವತಂತ್ರನಾದ್ದರಿಂದ ಕರ್ತೃ. ಕ್ರಿಯೆಗೆ ಸ್ವತಂತ್ರವಾದದ್ದು, ಅಭಿಹಿತವಾದದ್ದು ಅಥವಾ ಕ್ರಿಯೆಯಿಂದ 'ಉಕ್ತವಾದದ್ದು' ಎಂಬ ಸಂಜ್ಞೆಯನ್ನು ಇದು ಪಡೆಯುತ್ತದೆ. ಕ್ರಿಯೆಯಿಂದ ಅಭಿಹಿತವಾದದ್ದು ಕರ್ತೃಸಂಜ್ಞೆಯನ್ನು ಪಡೆಯುವುದು ಅನ್ನುವುದು ಗಮನಾರ್ಹವಾದದ್ದು.

ii) ಕರ್ಮಣಿವಾಕ್ಯದಲ್ಲಿ ಕರ್ಮಕಾರಕವು ಪ್ರಧಾನವಾಗಿರುವುದರಿಂದ ಅರ್ಥಾತ್, ಕರ್ಮವು ಅಭಿಹಿತವಾಗಿರುವುದರಿಂದ ಕರ್ಮಕಾರಕ ಶಬ್ದದ ಮೇಲೆಯೇ ಪ್ರಥಮಾವಿಭಕ್ತಿಯು ಬರುತ್ತದೆ.

ಉದಾಹರಣೆ : ಕರ್ತರಿ -

रामः दशरथं सेवते - ರಾಮನು ದಶರಥನನ್ನು ಸೇವಿಸುತ್ತಾನೆ.

ಕರ್ಮಣಿ -

दशरथः रामेण सेव्यते - ದಶರಥನು ರಾಮನಿಂದ ಸೇವಿಸಲ್ಪಡುತ್ತಾನೆ.

iii) ಕೆಲವು ಕಡೆ ತಿಙ್, ಕೃತ್, ತದ್ಧಿತ, ಸಮಾಸಗಳಿಂದಲೂ ಕೂಡ ಕರ್ಮಕಾರಕವು ಉಕ್ತವಾಗುವುದುಂಟು. ಆಗ ಕರ್ಮಕಾರಕ ಶಬ್ದಗಳ ಮೇಲೆ ಪ್ರಥಮಾ ವಿಭಕ್ತಿ ಬರುತ್ತದೆ.

ಉದಾಹರಣೆ : **तिङन्त** : **हरिः सेव्यते** [**हरिं भक्ताः सेवन्ते**]

-ಹರಿಯು [ಭಕ್ತರಿಂದ] ಸೇವಿಸಲ್ಪಡುತ್ತಾನೆ

कृदन्त : **लक्ष्म्या सेवितः** [**लक्ष्मीः हरिं सेवते**]

-ಲಕ್ಷ್ಮಿಯಿಂದ ಸೇವಿಸಲ್ಪಡುವವನಾದ [ಹರಿಯು]

तद्धितान्त : **पूज्यः गच्छति** [**पूजाम् अर्हति इति - सः**]

-[ಪೂಜೆಯನ್ನು ಪಡೆಯಲು ಅರ್ಹನಾದ]ಪೂಜ್ಯನು ಹೋಗುತ್ತಾನೆ.

समास : **जीविकाप्राप्तो नन्दति** [**जीविकां प्राप्तः यः सः**]

-[ಜೀವನೋಪಾಯವನ್ನು ಕಂಡುಕೊಂಡ] ಜೀವಿಕಾಪ್ರಾಪ್ತನು ಆನಂದಿಸುತ್ತಾನೆ.

---

[1] **स्वतन्त्रः कर्ता** (ಪಾ I, 4, 54)

क्रियायां स्वातन्त्र्येण विवक्षितोऽर्थः कर्ता स्यात् (ಸಿ. ಕೌ 559)

Rarest Archiver

iv) ಕೆಲವು ಕಡೆ [ಕ್ರಿಯಾವಾಚಕಪದಕ್ಕೆ ಬದಲಾಗಿ] ನಿಪಾತದಿಂದ ಕರ್ಮವು ಅಭಿಹಿತವಾಗುತ್ತದೆ ; ಆಗ ಆ ಕರ್ಮಕಾರಕಕ್ಕೆ ಪ್ರಥಮಾವಿಭಕ್ತಿಯು ಬರುತ್ತದೆ.

ಉದಾಹರಣೆ : **विषवृक्षोऽपि संवर्ध्य स्वयं छेत्तुमसाम्प्रतम् ।**

- ಬೆಳೆಸಿದ ವಿಷವೃಕ್ಷವನ್ನಾದರೂ ಸ್ವತಃ ಕಡಿಯಲಿಕ್ಕೆ ಆಗುವುದಿಲ್ಲ.

ಇಲ್ಲಿ **न युज्यते** ಅನ್ನುವ ಅರ್ಥದಲ್ಲಿ ಬಂದ **असाम्प्रतम्** ಎಂಬ ನಿಪಾತದಿಂದ **विषवृक्ष**ವು ಅಭಿಹಿತವಾದ್ದರಿಂದ ಈ ಕರ್ಮಕಾರಕ ಶಬ್ದವು ಪ್ರಥಮಾವಿಭಕ್ತಿಯಲ್ಲಿ ಬಂದಿದೆ.

(೨) ದ್ವಿತೀಯಾವಿಭಕ್ತಿ (The Accusative Case)

ಕ್ರಿಯಾಪದದಿಂದಲೂ ಕೃತ್ತದ್ಧಿತ ಸಮಾಸಗಳಿಂದಲೂ ನಿಪಾತಗಳಿಂದಲೂ ಕರ್ಮಕಾರಕವು ಅಭಿಹಿತ[1] (ಉಕ್ತ)ವಾಗದೇ ಇದ್ದಲ್ಲಿ ಆ ಕರ್ಮಕಾರಕ ಶಬ್ದದ ಮೇಲೆ ದ್ವಿತೀಯಾವಿಭಕ್ತಿ ಬರುತ್ತದೆ. ದ್ವಿತೀಯಾವಿಭಕ್ತಿಯು ಕರ್ಮಕಾರಕವಾದುದು. ಕರ್ತೃವಿಗೆ ಅತ್ಯಂತ ಈಪ್ಸಿತವಾಗಿರುವುದೇ[2] ಕರ್ಮ (object) ಅರ್ಥಾತ್ ಕರ್ತೃವಿನ ಕ್ರಿಯೆಗೆ ಮುಖ್ಯ ಉದ್ದೇಶವಾಗಿರುವ ಅರ್ಥಬೋಧಕ ಶಬ್ದಗಳು ಕರ್ಮಸಂಜ್ಞೆಯನ್ನು[3] ಹೊಂದುತ್ತವೆ.

ಉದಾಹರಣೆ : **रामः ग्रामं गच्छति** -ರಾಮನು ಹಳ್ಳಿಗೆ ಹೋಗುತ್ತಾನೆ .

देवदत्तः ओदनं भुङ्क्ते - ದೇವದತ್ತನು ಅನ್ನವನ್ನು ಉಣ್ಣುತ್ತಾನೆ.

ಇಲ್ಲಿ **ग्राम, ओदन** ಇವು ಸ್ವತಂತ್ರವಾಗಿರದೆ **रामः, देवदत्तः** ಇವರಿಗೆ ಅಧೀನವಾಗಿವೆ ; ಅನಭಿಹಿತವಾಗಿವೆ; ಕರ್ತೃಗಳ ಕ್ರಿಯೆಗೆ ಉದ್ದೇಶ್ಯಗಳಾಗಿವೆ ; ಆದ್ದರಿಂದ ಇವು ಇಲ್ಲಿ ಕರ್ಮಕಾರಕ ಶಬ್ದಗಳು ; ಇವುಗಳ ಮೇಲೆ ದ್ವಿತೀಯಾವಿಭಕ್ತಿ ಬಂದಿದೆ.

i) ಕರ್ತೃವಿನ ಕ್ರಿಯೆಗೆ ಅಂತ್ಯಂತ ಈಪ್ಸಿತವಲ್ಲದೇ ಇದ್ದದ್ದು ಕರ್ಮಕಾರಕ ಸಂಜ್ಞೆಯನ್ನು ಪಡೆಯುವುದಿಲ್ಲ.

ಉದಾಹರಣೆ : **माणवकः पयसा ओदनं भुङ्क्ते**

-ಮಾಣವಕನು ಹಾಲಿನೊಡನೆ ಅನ್ನವನ್ನು ಉಣ್ಣುತ್ತಾನೆ.

ಇಲ್ಲಿ '**पयस्** ಹಾಲು ' ಕರ್ತೃವಿನ ಕ್ರಿಯೆಗೆ ಅತ್ಯಂತ ಈಪ್ಸಿತವಲ್ಲದ್ದು ; ಹಾಲಿಲ್ಲದಿದ್ದರೂ ಊಟವಾಗಬಹುದು. ಆದ್ದರಿಂದ **पयस्** ಶಬ್ದದ ಮೇಲೆ ಕರ್ಮಕಾರಕವಾದ ದ್ವಿತೀಯಾವಿಭಕ್ತಿ ಬಂದಿಲ್ಲ.

ii) ಕರ್ತೃವಿಗೆ ದ್ವೇಷ್ಯ ಅಥವಾ ಅನಪೇಕ್ಷಿತವಾಗಿದ್ದರೂ[4] ಈಪ್ಸಿತತಮ ವಸ್ತುವಿನ ಸಂಯೋಗವನ್ನು ಹೊಂದಿದ ವಸ್ತುಗಳು ಕರ್ಮಸಂಜ್ಞೆಯನ್ನು ಹೊಂದುತ್ತವೆ.

---

[1] **अनभिहिते । कर्मणि द्वितीया** (ಪಾ II, 3, 1-2) **अनुक्ते कर्मणि द्वितीया स्यात्** (ಸಿ. ಕೌ 537)

[2] **कर्तुरीप्सिततमं कर्म** (ಪಾ I, 4, 49)

[3] **कर्तुः क्रियया आप्तुमिष्टतमं कारकं कर्मसंज्ञं स्यात्** (ಸಿ. ಕೌ 535)

[आप्तुम् इष्टम् ईप्सितम् ; अतिशयेन ईप्सितम् - ईप्सिततमम्]

[4] **तथायुक्तं चानीप्सितम्** (ಪಾ I, 4, 50)

ईप्सिततमवत्क्रियया युक्तम् अनीप्सितमपि कारकं कर्मसंज्ञं स्यात् (ಸಿ. ಕೌ 538)

Rarest Archiver

ಉದಾಹರಣೆ : **ओदनं भुञ्जानां विषं भुंक्ते**

-ಅನ್ನವನ್ನು ಉಣ್ಣುವಾಗ ವಿಷವನ್ನು ತಿನ್ನುತ್ತಾನೆ (ದ್ವೇಷ್ಯ)

ग्रामं गच्छन् तृणं स्पृशति

-ಹಳ್ಳಿಗೆ ಹೋಗುವಾಗ ಹುಲ್ಲನ್ನು ಸ್ಪರ್ಶಿಸುತ್ತಾನೆ. (ಅನೀಪ್ಸಿತ ಅಥವಾ ಉದಾಸೀನ)

ವೈರಿಯಿಂದ ಅನ್ನದ ಜೊತೆಗೆ ವಿಷವು ಬೆರೆಸಲ್ಪಟ್ಟಾಗ ಅದು ಅನೀಪ್ಸಿತವಾಗಿದ್ದರೂ ಕರ್ಮಸಂಜ್ಞೆಯನ್ನು ಪಡೆದದ್ದನ್ನೂ ದಾರಿಯಲ್ಲಿ ಹೋಗುವಾಗ ಗತ್ಯಂತರವಿಲ್ಲದೆ ಸ್ಪರ್ಶಿಸಲ್ಪಡುವ ಹುಲ್ಲೂ ಕರ್ಮಸಂಜ್ಞೆಯನ್ನು ಪಡೆದದ್ದನ್ನೂ ಕಾಣಬಹುದು.

iii) ದುಹ್ಯಾದಿ ದ್ವಿಕರ್ಮಕ ೧೨ ಧಾತುಗಳ ಮತ್ತು **नी** ಮುಂತಾದ ೪ ಧಾತುಗಳ ಯೋಗವಿರುವಾಗ ಅಪಾದಾನಾದಿ[1] ಕಾರಕಗಳಲ್ಲಿ ಕರ್ತೃವಿಗೆ ಮುಖ್ಯ ತಾತ್ಪರ್ಯವಿಲ್ಲದಿರುವ ಶಬ್ದಗಳ ಮೇಲೆ ದ್ವಿತೀಯಾವಿಭಕ್ತಿಯು ಬರುತ್ತದೆ. ದುಹ್ಯಾದಿ ಧಾತುಗಳನ್ನು ಈ ಕೆಳಕಂಡ ಕಾರಿಕೆಯು ತಿಳಿಸುತ್ತದೆ.

दुह्याच्पच्दण्ड्रुधिप्रच्छिचिब्रूशासुजिमंथमुषाम् ।
कर्मयुक् स्यादकथितं तथा स्यान्नीहृकृष्वहाम् । ।

ಉದಾಹರಣೆ :

दुह् > **गोपः गां पयः दोग्धि** — ಗೋಪನು ಆಕಳ ಹಾಲನ್ನು ಹಿಂಡುತ್ತಾನೆ.

याच् > **वामनः बलिं वसुधां याचते** — ವಾಮನನು ಬಲಿಯ ಹತ್ತಿರ ಭೂಮಿಯನ್ನು ಯಾಚಿಸುತ್ತಾ

पच् > **पाचकः तण्डुलान् ओदनं पचति** — ಅಡಿಗೆಯವನು ಅಕ್ಕಿಯಿಂದ ಅನ್ನವನ್ನು ಬೇಯಿಸುತ್ತಾನೆ.

दण्ड् > **राजा गर्गान् शतं दण्डयति** — ರಾಜನು ಗರ್ಗರಿಗೆ ನೂರರ ದಂಡವನ್ನು ವಿಧಿಸುತ್ತಾನೆ.

रुध् > **त्वं व्रजं गां अवरुणद्धि** — ನೀನು ಹೋಗುತ್ತಿರುವ ಆಕಳನ್ನು ತಡೆಯುತ್ತೀ

प्रच्छ् > **सः माणवकं पन्थानं पृच्छति** — ಅವನು ಮಾಣವಕನ ಹತ್ತಿರ ದಾರಿಯನ್ನು ಕೇಳುತ್ತಾನೆ.

चि > **सः वृक्षं फलानि अवचिनोति** — ಅವನು ಮರದಿಂದ ಹಣ್ಣುಗಳನ್ನು ಆಯ್ದುಕೊಳ್ಳುತ್ತಾನೆ

---

[1] **अकथितञ्च** (ಪಾ I, 4, 51) **अपादानादि विशेषैरविवक्षितं कारकं कर्मसंज्ञं स्यात्** (ಸಿ. ಕೌ 539)

Rarest Archiver

ब्रूः, शास् > सः माणवकं धर्मं ब्रूते शास्ति वा — ಅವನು ಮಾಣವಕನಿಗೆ ಧರ್ಮವನ್ನು (ಕುರಿತು) ಹೇಳುತ್ತಾನೆ ಅಥವಾ ಕಲಿಸುತ್ತಾನೆ.

जि > रामः देवदत्तं शतं जयति — ರಾಮನು ದೇವದತ್ತನ ನೂರನ್ನು (ನೂರು ರೂಪಾಯಿಗಳನ್ನು) ಗೆಲ್ಲುತ್ತಾನೆ.

मन्थ् > देवासुराः क्षीरनिधिं सुधां मथ्नन्ति — ದೇವಾಸುರರು ಅಮೃತಕ್ಕಾಗಿ ಕ್ಷೀರಸಮುದ್ರವನ್ನು ಕಡೆಯುತ್ತಾರೆ.

मुष् > स्तेनः देवदत्तं शतं मुष्णाति — ಕಳ್ಳನು ದೇವದತ್ತನ ನೂರನ್ನು (ರೂಪಾಯಿಗಳನ್ನು) ಕದಿಯುತ್ತಾನೆ.

नी ; हृ ; कृष् ; वह् -> सः ग्रामं अजां नयति , हरति, कर्षति , वहति वा - ಅವನು ಆಡನ್ನು ಹಳ್ಳಿಗೆ ಕೊಂಡೊಯ್ಯುತ್ತಾನೆ.

iv) ಅಕರ್ಮಕ ಧಾತುಗಳ ಯೋಗವಿರುವಾಗ[1] ದೇಶವಾಚಕ, ಕಾಲವಾಚಕ, ಭಾವವಾಚಕ ಮತ್ತು ಗಮ್ಯಮಾರ್ಗವಾಚಕ ಶಬ್ದಗಳು ಕರ್ಮಸಂಜ್ಞೆಯನ್ನು ಪಡೆಯುತ್ತವೆ.

ಉದಾಹರಣೆ :

ದೇಶವಾಚಕ - **सः कुरून् स्वपिति** = ಅವನು ಕುರುಪ್ರದೇಶದಲ್ಲಿ ಮಲಗುತ್ತಾನೆ

इष्टान् देशान् विचर जलद - (ಮೇಘ-52)

= ಮೋಡವೇ ಇಷ್ಟಬಂದೆಡೆಗೆ ಸಂಚರಿಸು.

ಕಾಲವಾಚಕ - **मासम् आस्ते** = ಒಂದು ತಿಂಗಳಿದೆ

द्वित्राण्यहान्यर्हसि सोढुमर्हन् (ರಘು - V. 25)

= ಪೂಜ್ಯನೇ, ಎರಡು ಮೂರು ದಿನಗಳವರೆಗೆ ತಡೆ.

ಭಾವವಾಚಕ - **रुदितम् आसीत्** = ಅಳುವಿಕೆಯು ಇತ್ತು

ಗಮ್ಯಮಾರ್ಗವಾಚಕ - **क्रोशम् आस्ते** = ಒಂದು ಕೋಶ ದೂರವಿದೆ.

v) ಗತ್ಯರ್ಥಾದಿ[1] ಕ್ರಿಯೆಗಳು ಬಂದಾಗ ಅಣಿಜಂತ (ಪ್ರೇರಣಾರ್ಥಕಗಳಲ್ಲದ) ವಾಕ್ಯಗಳಲ್ಲಿಯ ಕರ್ತೃವಾಚಕ ಪದಗಳ ಮೇಲೆ ಣಿಜಂತದಲ್ಲಿ (ಪ್ರೇರಣಾರ್ಥಕದಲ್ಲಿ) ದ್ವಿತೀಯಾವಿಭಕ್ತಿಯು ಬರುತ್ತದೆ. ದ್ವಿಕರ್ಮಕ ವಾಕ್ಯದಲ್ಲಿ ಮುಖ್ಯಕರ್ಮಪದದ ಮೇಲೆ ದ್ವಿತೀಯಾವಿಭಕ್ತಿ ಬರುತ್ತದೆ. ಈಪ್ಸಿತತಮವಲ್ಲದ ಅರ್ಥವಾಚಕ ಶಬ್ದದ ಮೇಲೆ ಅಣಿಜಂತದಲ್ಲಿ ಬಂದಂತೆ ತೃತೀಯಾವಿಭಕ್ತಿಯು ಬರುತ್ತದೆ.

---

[1] **गतिबुद्धिप्रत्यवसानार्थशब्दकर्माकर्मकाणां अणि कर्ता स णौ** (ಪಾ I, 4, 52)

गत्याद्यर्थानां शब्दकर्मणाम् अकर्माणां चाणौ यः कर्ता स णौ कर्म स्यात् (ಸಿ. ಕೌ 540)

Rarest Archiver

ಉದಾಹರಣೆ :

ಅಣೆಜಂತ - **शत्रवः स्वर्गमगच्छन्** = ಶತ್ರುಗಳು ಸ್ವರ್ಗಕ್ಕೆ ಹೋದರು.

ಣಿಜಂತ ಏಕಕರ್ಮಕ } - **वीरः शत्रून् स्वर्गमगमयत्** = ವೀರನು ಶತ್ರುಗಳು ಸ್ವರ್ಗಕ್ಕೆ ಹೋಗುವಂತೆ ಮಾಡಿದನು.

ಅಣೆಜಂತ - **रामः वनं गच्छति** = ರಾಮನು ವನಕ್ಕೆ ಹೋಗುತ್ತಾನೆ.

ಣಿಜಂತ ದ್ವಿಕರ್ಮಕ } - **कैकेयी दशरथेन रामं वनं गमयति** = ಕೈಕೇಯಿಯು ದಶರಥನ ಮೂಲಕ ರಾಮನನ್ನು ವನಕ್ಕೆ ಕಳುಹಿಸುತ್ತಾಳೆ.

vi) ಹೃ ಮತ್ತು **कृ**[1] ಧಾತುಗಳ ಯೋಗವಿರುವಾಗ ಅಣೆಜಂತದಲ್ಲಿಯ ಕರ್ತೃವಾಚಕ ಶಬ್ದದ ಮೇಲೆ ಣಿಜಂತದಲ್ಲಿ ವೈಕಲ್ಪಿಕವಾಗಿ ದ್ವಿತೀಯಾವಿಭಕ್ತಿಯು (ಅಥವಾ ತೃತೀಯಾ ವಿಭಕ್ತಿಯು) ಬರುತ್ತದೆ.

ಉದಾಹರಣೆ :

ಅಣೆಜಂತ - **भृत्यः कटं हरति करोति वा** = ಸೇವಕನು ಚಾಪೆಯನ್ನು ಅಪಹರಿಸುತ್ತಾನೆ ಅಥವಾ ಮಾಡುತ್ತಾನೆ.

ಣಿಜಂತ - **सः भृत्यं भृत्येन वा कटं हारयति कारयति वा** = ಅವನು ಸೇವಕನಿಂದ ಚಾಪೆಯನ್ನು ಹಾರಿಸುತ್ತಾನೆ ಅಥವಾ ಮಾಡಿಸುತ್ತಾನೆ.

vii) ಅಧಿಯು[2] ಪೂರ್ವಪದವಾಗಿ ಇರತಕ್ಕ **शी, अस्, स्था** ಧಾತುಗಳ ಯೋಗವಿದ್ದಾಗ ಆ ಕ್ರಿಯೆಗಳ ಆಧಾರವಾಚಕ ಪದಗಳಿಗೆ ಕರ್ಮಸಂಜ್ಞೆ ಬರುತ್ತದೆ.

ಉದಾಹರಣೆ :

शी - **हरिः क्षीरसमुद्रमधिशेते** = ಹರಿಯು ಕ್ಷೀರಸಮುದ್ರದಲ್ಲಿ ಮಲಗುತ್ತಾನೆ.

अस् - **शिवः कैलासमध्यास्ते** = ಶಿವನು ಕೈಲಾಸದಲ್ಲಿರುತ್ತಾನೆ.

स्था - **सः हस्तिनापुरमधितिष्ठति** = ಅವನು ಹಸ್ತಿನಾಪುರದಲ್ಲಿ ವಾಸಿಸುತ್ತಾನೆ.

viii) **अभि + नि**[3] ಪೂರ್ವಪದವಾಗಿ ಬಂದಾಗ **विश्** ಧಾತುವಿನ ಕ್ರಿಯೆಯ ಅಧಿಕರಣವಾಚಕವು ಕರ್ಮಕಾರಕವಾಗುತ್ತದೆ.

ಉದಾಹರಣೆ : **राजा संग्राममभिनिविशते**

= ರಾಜನು ಯುದ್ಧಭೂಮಿಯನ್ನು ಪ್ರವೇಶಿಸುತ್ತಾನೆ.

ix) **वस्**[4] ಧಾತುವಿನ ಮೇಲೆ **उप, अनु, अधि, आ** - ಇವುಗಳಲ್ಲೊಂದು ಉಪಸರ್ಗ ಬಂದಾಗ

---

[1] **हृक्रोरन्यतरस्याम्** (ಪಾ I, 4, 53) **हृक्रोरणौ यः कर्ता स णौ वा कर्मसंज्ञः स्यात्** (ಸಿ. ಕೌ 541)

[2] **अधिशीङ्स्थाऽऽसां कर्म** (ಪಾ I, 4, 46) **अधिपूर्वाणाम् एषामाधारः कर्म स्यात्** (ಸಿ. ಕೌ 542)

[3] **अभिनिविशश्च** (ಪಾ I, 4, 47) [4] **उपान्वध्याङ्वसः** (ಪಾ I, 4, 48)

Rarest Archiver

ಅಧಿಕರಣವಾಚಕ ಶಬ್ದಗಳ ಮೇಲೆ ದ್ವಿತೀಯಾವಿಭಕ್ತಿ ಬರುತ್ತದೆ.

ಉದಾಹರಣೆ :

हरिः वैकुण्ठमधिवसति उपवसति अनुवसति आवसति वा

= ಹರಿಯು ವೈಕುಂಠದಲ್ಲಿ ವಾಸಿಸುತ್ತಾನೆ.

ಇಲ್ಲಿ ಅಪವಾದ - **अभुक्त्यर्थस्य न** ಅನ್ನುತ್ತ ವಾರ್ತಿಕಕಾರನು ಭೋಗಾರ್ಥದಲ್ಲಿ ಈ ಉಪಸರ್ಗಗಳು **वस्** ಧಾತುವಿನ ಮೇಲೆ ಬಂದಿರದಿದ್ದರೆ ಆಗ ಅಧಿಕರಣವಾಚಕದ ಮೇಲೆ ದ್ವಿತೀಯಾವಿಭಕ್ತಿಯು ಬರುವುದಿಲ್ಲವೆನ್ನುವುದನ್ನು ತಿಳಿಸುತ್ತಾನೆ.

ಉದಾಹರಣೆ :

वने उपवसति = ಅಡವಿಯಲ್ಲಿ ವಾಸುಸುತ್ತಾನೆ. (ಭೋಗವರ್ಜ್ಯ)

X) **उभयतः**[1] , **सर्वतः, धिक्, उपरि, अधि, अध, अभितः, परितः, समया, निकषा, हा, प्रति** ಇವುಗಳ ಯೋಗವಿರುವಾಗ ದ್ವಿತೀಯಾವಿಭಕ್ತಿಯು ಬರುತ್ತದೆ.

ಉದಾಹರಣೆ :

उभयतः कृष्णं गोपाः	= ಕೃಷ್ಣನ ಸುತ್ತಲೂ ಗೋಪಿಯರು
सर्वतः कृष्णं गोपाः	= ಕೃಷ್ಣನ ಎಲ್ಲೆಡೆಗೆ ಗೋಪಿಯರು
धिङ् मामधन्यम् (ಉತ್ತರ. I)	= ದುರ್ದೈವಿಯಾದ ನನಗೆ ಧಿಃಕಾರ
उपर्युपरि लोकं हरिः	= ಲೋಕಕ್ಕೆ (ಹತ್ತಿರವಾಗಿ) ಮೇಲೆ ಇರುವ ಹರಿಯು
अध्यधि लोकं हरिः	= ಲೋಕಕ್ಕೆ ಹತ್ತಿರವಿರುವ ಹರಿಯು
नवानधोऽधो बृहतः पयोधरान्	= ಕೆಳಗೆ ಹೊಸ ಮೋಡಗಳಿರಲು.....(ಮಾಘ I.68)
अभितः कृष्णं भक्ताः	= ಕೃಷ್ಣನ ಸುತ್ತಲೂ ಭಕ್ತರು
अमी वेदिं परितः (ಅ.ಶಾ.IV. 8)	= ಈವೇದಿಕೆಯ ಸುತ್ತಲೂ
..**पम्पां समया पर्यटन्**(ಚಂಪೂ.ರಾಮಾ)	= ಪಂಪಾಸರೋವರದಸುತ್ತಲೂ ತಿರುಗಾಡುತ್ತಿರುವಾಗ...
विलंध्य लंकां निकषा हरिष्यति (ಮಾಘ I.68)	= (ಸಮುದ್ರವನ್ನು) ಹಾರಿ ಲಂಕೆಯ ಹತ್ತಿರದಲ್ಲಿ ಕೊಲ್ಲುವನು.
हा कृष्णाभक्तम्	= ಅಯ್ಯೋ ಕೃಷ್ಣವೈರಿಯೇ (**तस्य शोच्यत इत्यर्थः**)
बुभुक्षितं न प्रतिभाति किञ्चित्	= ಹಸಿದವನಿಗೆ ಯಾವುದೂ ಹೊಳೆಯುವುದಿಲ್ಲ.

[1] **उभसर्वतसो कार्या धिगुपर्यादिषु त्रिषु**
द्वितीयामेडितान्तेषु ततोऽन्यत्रापि दृश्यते (ವಾರ್ತಿಕ 1444)
अभितः परितः समयानिकषाहाप्रतियोगेऽपि (ವಾರ್ತಿಕ1442 - 43)

Rarest Archiver

मन्दोत्सुक्योऽस्मि नगरगमनं = ನಗರಕ್ಕೆ ಹಿಂದಿರುಗುವ ವಿಷಯದಲ್ಲಿ ನಿರುತ್ಸಾಹಿಯಿದ್ದೇನೆ.
प्रति (ಅ.ಶಾ.II)

xi) **अन्तरा** ಮತ್ತು **अन्तरेण**[1] ಈ ಅವ್ಯಯಗಳ ಯೋಗವಿದ್ದಲ್ಲಿ ಕರ್ಮ ಸಂಜ್ಞೆ ಬರುತ್ತದೆ.

ಉದಾಹರಣೆ :

न प्रयोजनमन्तरा चाणक्यः स्वप्नेऽपि चेष्टते (ಮುದ್ರಾ III) = ಪ್ರಯೋಜನವಿಲ್ಲದೆ ಚಾಣಕ್ಯನು ಸ್ವಪ್ನದಲ್ಲಿಯೂ ಪ್ರವೃತ್ತನಾಗುವುದಿಲ್ಲ.

अन्तरा त्वां मां हरिः = ನಿನ್ನ ನನ್ನ ಮಧ್ಯ ಹರಿಯು

राजापराधमन्तरेण प्रजानामकालमृत्युर्न सञ्चरति = ರಾಜಾಪರಾಧವಿಲ್ಲದೆ ಪ್ರಜೆಗಳಿಗೆ ಅಕಾಲಮೃತ್ಯುವು ಒದಗುವುದಿಲ್ಲ. (ಉತ್ತರ II)

अन्तरेण हरिं न सुखम् = ಹರಿಯ ಹೊರತಾಗಿ ಸುಖವಿಲ್ಲ.

xii) ವಿಶಿಷ್ಟಾರ್ಥಗಳನ್ನು ಬೋಧಿಸುವ ಕರ್ಮಪ್ರವಚನೀಯದ[2] ಯೋಗವುಂಟಾದಾಗ ದ್ವಿತೀಯಾವಿಭಕ್ತಿ ಬರುತ್ತದೆ. ಕ್ರಿಯಾನಿರೂಪಿತವಾದ ಸಂಬಂಧ ವಿಶೇಷವನ್ನು ಅಭಿವ್ಯಕ್ತಗೊಳಿಸುವ ಪದಗಳು (ಉಪಸರ್ಗಗಳು) ಕರ್ಮ ಪ್ರವಚನೀಯಗಳು. ಉದಾಹರಣೆ :

अनु - ಉಪಸರ್ಗ - ಲಕ್ಷಣಾರ್ಥದಲ್ಲಿ[3]

पर्जन्यो जपमनुप्रावर्षत् = ಜಪದ ನಂತರ ಮಳೆಯಾಯಿತು.

अनु - ಉಪಸರ್ಗ - ತೃತೀಯಾರ್ಥದಲ್ಲಿ[4]

नदीम् अन्ववसिता सेना = ನದಿಯ ದಂಡೆಯುದ್ದಕ್ಕೂ[5] (ನದಿಗೆ ತಾಗಿ) ಸೇನೆಯಿದೆ.

अनु - ಉಪಸರ್ಗ - ಹೀನಾರ್ಥದಲ್ಲಿ[6].....

अनु हरिं सुराः = ದೇವತೆಗಳು ಹರಿಗಿಂತ ಕೆಳಗಿನವರು.

उप - ಉಪಸರ್ಗ - ಹೆಚ್ಚಿನವ ಅನ್ನುವ ಅರ್ಥದಲ್ಲಿ [7].....

उप हरिं सुराः = ದೇವತೆಗಳಲ್ಲಿ ಹರಿಯು ಹೆಚ್ಚಿನವನು.

---

[1] **अन्तरान्तरेण युक्ते** (ಪಾ II, 3, 4) **आभ्यां योगे द्वितीया** (ಸಿ. ಕೌ 545)

[2] **कर्मप्रवचनीयाः** (ಪಾ I, 4, 83) [3] **अनुर्लक्षणे** (ಪಾ I, 4, 84)

[4] **तृतीयार्थे** (ಪಾ I, 4, 85)

[5] **नद्यासह सम्बद्धेत्यर्थः** (ಸಿ. ಕೌ 549)

[6] **हीने** (ಪಾ I, 4, 86) [7] **उपोऽधिके च** (ಪಾ I, 4, 87)

[8] **लक्षणेत्थम्भूताख्यानभागवीप्सासु प्रतिपर्यनवः** (ಪಾ I, 4, 90)

Rarest Archiver

xiii) ಲಕ್ಷಣ[8], ಇತ್ಥಂಭೂತಾಖ್ಯಾನ, ಭಾಗ, ವೀಪ್ಸಾ - ಇವುಗಳನ್ನು ಬೋಧಿಸುವಾಗ **प्रति , परि, अनु** ಉಪಸರ್ಗಗಳು ಪೂರ್ವಪದವಾಗಿ ಬಂದಿರುವಾಗ ಇವುಗಳ ಯೋಗದಲ್ಲಿ ಬರುವ ಪ್ರಾತಿಪದಿಕಗಳಿಗೆ ಕರ್ಮಸಂಜ್ಞೆ ಬರುತ್ತದೆ.

ಉದಾಹರಣೆ : ಲಕ್ಷಣ -

वृक्षं प्रति (-परि - अनु वा) विद्योतते विद्युत्

= ವೃಕ್ಷಕ್ಕೆ ಸಿಡಿಲೆರಗುತ್ತದೆ (ವೃಕ್ಷವು ಸಿಡಿಲೆರಗಿದ್ದನ್ನು ಬೋಧಿಸುತ್ತದೆ.)

ಇತ್ಥಂಭೂತಾಖ್ಯಾನ -

भक्तः विष्णुं प्रति (परि- अनु वा) वर्तते =

= ಭಕ್ತನು ವಿಷ್ಣುವಿನ ಹತ್ತಿರ ಇರುತ್ತಾನೆ.

ಭಾಗ -

पार्वती हरं प्रति (परि- अनु वा)

= ಪಾರ್ವತಿಯು ಹರನ ಒಂದು ಪಾರ್ಶ್ವವಾಗಿದ್ದಾಳೆ.

ವೀಪ್ಸಾರ್ಥ -

वृक्षंवृक्षं प्रतिसिञ्चति (परि- अनु वा)

= ಮರಮರಕ್ಕೂ ನೀರೆರೆಯುತ್ತಾನೆ (ಫಲಾಪೇಕ್ಷೆಯಿಂದ)

ಭಾಗ ಭಿನ್ನಾರ್ಥಕವಾದ [1] ಅರ್ಥದಲ್ಲಿ **अभि** ಉಪಸರ್ಗದ ಯೋಗವಿದ್ದಾಗಲೂ ಕರ್ಮಸಂಜ್ಞೆ ಬರುತ್ತದೆ.

ಉದಾಹರಣೆ :

देवं देवम् अभिषिञ्चति = ಪ್ರತಿ ದೇವರಿಗೂ ಅಭಿಷೇಕ ಮಾಡುತ್ತಾನೆ.
(ಒಂದು ದೇವತೆಯನ್ನೂ ಬಿಡದೆ)

हरिम् अभिवर्तते = ಹರಿಯಿದ್ದಲ್ಲೇ ಭಕ್ತನಿರುತ್ತಾನೆ
(ಎಡಬಿಡದೆ)

xiv) ನಿರಂತರಕ್ರಿಯೆಗೆ [2] (ಅತ್ಯಂತ ಸಂಯೋಗಾತ್ಮಕ) ಆಧಾರವಾದ ಕಾಲ ಮತ್ತು ಮಾರ್ಗವಾಚಕ ಶಬ್ದಗಳ ಮೇಲೆ ದ್ವಿತೀಯಾವಿಭಕ್ತಿ ಬರುತ್ತದೆ.

ಉದಾಹರಣೆ :

मासम् अधीते = ತಿಂಗಳು ಪೂರ್ತಿ (ನಿರಂತರವಾಗಿ) ಕಲಿಯುತ್ತಾನೆ.

क्रोशं कुटिला नदी = ನದಿಯು ಒಂದು ಕ್ರೋಶದವರೆಗೆ (ಎಲ್ಲಿಯೂ ಬಿಡದಂತೆ) ವಕ್ರವಾಗಿದೆ.

---

[1] **अभिरभागे** (ಪಾ I, 4, 90)

[2] **कालाध्वनोरत्यन्तसंयोगे** (ಪಾ II, 3, 5)

Rarest Archiver

ಅತ್ಯಂತ ಸಂಯೋಗವೆಂದು ಹೇಳುವುದೇಕೆಂದರೆ...

मासस्य द्विरधीते = ತಿಂಗಳಿಗೆ ಎರಡು ಸಾರೆ ಕಲಿಯುತ್ತಾನೆ.

ಎಂದು ಮುಂತಾಗಿ ನಿರಂತರಾರ್ಥವಿಲ್ಲದಿದ್ದಾಗ ಷಷ್ಠೀವಿಭಕ್ತಿಯು ಬರುತ್ತದೆ.

(೩) ತೃತೀಯಾವಿಭಕ್ತಿ (The Instrumental Case)

ತೃತೀಯಾ ವಿಭಕ್ತಿಯು ಕರಣಕಾರಕವಾದುದು. 'ಕರಣ'[1] ಅಂದರೆ ಕ್ರಿಯಾ ಸಾಧನೆಗೆ ಅತ್ಯವಶ್ಯವಾದ ಕಾರಣವೆಂದರ್ಥ[2]. ಉದಾಹರಣೆ :

रामः बाणेन वालिनं हन्ति = ರಾಮನು ಬಾಣದಿಂದ ವಾಲಿಯನ್ನು ಕೊಲ್ಲುತ್ತಾನೆ.

अहं जीवितेनैव शपामि ते = ನಾನು ಜೀವಿತಪೂರ್ವಕವಾಗಿ ನಿನ್ನೊಡನೆ ಶಪಥಗೈಯುವೆ.

सः बालकं स्कन्धेन उवाह = ಅವನು ಹುಡುಗನನ್ನು ಹೆಗಲಮೇಲೆ ಹೊತ್ತನು.

कियता मूल्येन क्रीतमिदं पुस्तकम्? = ಯಾವ ಬೆಲೆ ಕೊಟ್ಟು ಈ ಪುಸ್ತಕವು ಕೊಳ್ಳಲ್ಪಟ್ಟಿತು?

i) ಕರ್ತೃವೂ ಕರಣವೂ ಅನಭಿಹಿತವಾಗಿದ್ದಲ್ಲಿ[3] ಇವುಗಳ ಮೇಲೆ ತೃತೀಯಾ ವಿಭಕ್ತಿ ಬರುತ್ತದೆ.

ಉದಾಹರಣೆ : **रामेण बाणेन हतो वाली** = ವಾಲಿಯು ರಾಮನಿಂದ (ಬಿಡಲ್ಪಟ್ಟ) ಬಾಣದ ಮೂಲಕ ಸತ್ತನು.

ii) ಪ್ರಕೃತ್ಯಾದಿ[4] (**प्रकृति, प्राय, गोत्र, सम, विषम, द्रोण, सुख...**) ಗಣಪಠಿತವಾಗಿರತಕ್ಕ ಶಬ್ದಗಳ ಯೋಗವಿದ್ದಲ್ಲಿ ಅವುಗಳ ಮೇಲೆ ತೃತೀಯಾ ವಿಭಕ್ತಿ ಬರುತ್ತದೆ. ಇಲ್ಲಿ ತೃತೀಯಾರ್ಥವು ಜ್ಞಾಪ್ಯಜ್ಞಾಪಕತ್ವ ಸಂಬಂಧಾರ್ಥವನ್ನು ಬೋಧಿಸುತ್ತದೆ . ಉದಾಹರಣೆ :

प्रकृत्या चारुः = ಸ್ವಾಭಾವಿಕವಾಗಿ ಮನೋಹರವಾಗಿರುವ.....

प्रायेण याज्ञिकः = ಬಹುಶಃ ಯಾಜ್ಞಿಕನು.

गोत्रेण गार्ग्यः = ಗಾರ್ಗ್ಯ ಗೋತ್ರದವನು.

समेन पथा एति = ಸಮವಾಗಿರತಕ್ಕ ದಾರಿಯಲ್ಲಿ ಬರುತ್ತಾನೆ.

विषमेण पथा एति = ವಿಷಮವಾಗಿರುವ ದಾರಿಯಲ್ಲಿ ಬರುತ್ತಾನೆ.

द्विद्रोणेन धान्यं क्रीणाति = ಎರಡು ದ್ರೋಣ ಧಾನ್ಯಗಳನ್ನು ಕೊಳ್ಳುತ್ತಾನೆ.

सुखेन याति = ಸುಖವಾಗಿ ಹೋಗುತ್ತಾನೆ.

दुःखेन याति = ದುಃಖದಿಂದ ಹೋಗುತ್ತಾನೆ.

iii) **दिव्**[5] ಧಾತುವಿನ ಕ್ರಿಯಾನಿರೂಪಿತವಾದ ಕಾರಕಕ್ಕೆ ವೈಕಲ್ಪಿಕವಾಗಿ ಕರ್ಮ ಅಥವಾ ಕರಣಸಂಜ್ಞೆ ಬರುತ್ತದೆ.

---

[1] **साधकतमं करणम्** (ಪಾ I, 4, 42)

[2] **क्रियासिद्धौ प्रकृष्टोपकारकं कारकं करणसंज्ञं स्यात्** (ಸಿ. ಕೌ 560)

[3] **कर्तृकरणयोस्तृतीया** (ಪಾ II, 3, 18) **अनभिहिते कर्तरि करणे च तृतीया स्यात्** (ಸಿ. ಕೌ 561)

[4] **प्रकृत्यादिभ्य उपसंख्यानाम्** (ವಾರ್ತಿಕ 1466) [5] **दिवः कर्म च** (ಪಾ I, 4, 43)

Rarest Archiver

ಉದಾಹರಣೆ :

सः अक्षान् दीव्यति / सः अक्षैः दीव्यति = ಅವನು ದ್ಯೂತವಾಡುತ್ತಾನೆ.

iv) ಅಪವರ್ಗ[1] ಅರ್ಥಾತ್, ಫಲಪ್ರಾಪ್ತಿಯಿರುವಾಗ ಅತ್ಯಂತ ಸಂಯೋಗನಿವೇದಕ ಕಾಲವಾಚಕ ಮತ್ತು ಮಾರ್ಗವಾಚಕ ಶಬ್ದಗಳು ಕರಣಸಂಜ್ಞೆಯನ್ನು ಪಡೆಯುತ್ತವೆ.

ಉದಾಹರಣೆ :

देवदत्तः द्वादशभिर्वर्षैर्व्याकरणम् अधीयाय = ದೇವದತ್ತನು ಹನ್ನೆರಡುವರ್ಷಗಳಲ್ಲಿ ವ್ಯಾಕರಣವನ್ನು ಕಲಿತನು.

अह्ना अनुवाकोऽधीतः = ಒಂದೇ ದಿನದಲ್ಲಿ ಅನುವಾಕವು ಕಲಿಯಲ್ಪಟ್ಟಿತು.

क्रोशेन अनुवाकः अधीतः = ಕ್ರೋಶದೂರ ಗಮಿಸುವಲ್ಲಿ ಅನುವಾಕವು ಕಲಿಯಲ್ಪಟ್ಟಿತು.

ಇಲ್ಲಿ ಅತ್ಯಂತ ಸಂಯೋಗ ಅಥವಾ ನಿರಂತರಾರ್ಥದಲ್ಲಿ ವರ್ಷ, ದಿನ ಮತ್ತು ಕ್ರೋಶಗಳು ಬಂದಿದ್ದರೂ ಫಲಪ್ರಾಪ್ತಿಯಿಂದಾಗಿ ಇವುಗಳ ಮೇಲೆ ತೃತೀಯಾ ಬಂದಿದೆ.

v) ಸಂಗತಾರ್ಥವನ್ನು ಬೋಧಿಸುವ **सह** ಮುಂತಾದ ಅವ್ಯಯಗಳು ಬಂದಾಗ ಅಪ್ರಧಾನವಾಚಕ [2] (ಅರ್ಥಾತ್, ಮುಖ್ಯ ಕರ್ತೃವಾಚಕವಲ್ಲದ) ಪ್ರಾತಿಪದಿಕದ ಮೇಲೆ ತೃತೀಯಾ ವಿಭಕ್ತಿ ಬರುತ್ತದೆ.

ಉದಾಹರಣೆ :

पिता पुत्रेण सह नगरं गच्छति = ತಂದೆಯು ಮಗನೊಡನೆ ನಗರಕ್ಕೆ ಹೋಗುತ್ತಾನೆ.

अक्षमालां लज्जया सह गलितामपि नाद्राक्षीत् (ಬಾ.ಕಾದಂ.) = ರುದ್ರಾಕ್ಷಮಾಲೆಯು ಲಜ್ಜೆಯೊಡನೆ ಬೀಳುತ್ತಿರುವುದನ್ನೂ ಆತ ಗಮನಿಸಲಿಲ್ಲ.

....वध्वा सार्धं पयसि विहरन्.... (ಉತ್ತರ III,6) = ಕಾಂತೆಯೊಡನೆ ನೀರಿನಲ್ಲಿ ಆಡುತ್ತಾ.....

राजवाहनः मातङ्गेन साकं वनान्तरमवाप (ದಶಕು.) = ರಾಜವಾಹನನು ಮಾತಂಗನೊಡನೆ ಇನ್ನೊಂದು ವನಕ್ಕೆ ಹೋದನು.

---

[1] **अपवर्गे तृतीया** (ಪಾ II, 3, 6)

अपवर्गः फलप्राप्तिः ; तस्यां द्योत्यायां कालाध्वनोरत्यन्तसंयोगे तृतीया स्यात् (ಸಿ. ಕೌ 563)

ಇದು 'ದ್ವಿತೀಯಾವಿಭಕ್ತಿ' ಯಲ್ಲಿ ಹೇಳಿದ **कालाध्वनोरत्यन्तसंयोगे** (ಪಾ II, 3, 5) ಎಂಬುದಕ್ಕೆ ಅಪವಾದ.

[2] **सहयुक्ते अप्रधाने** (ಪಾ II, 3, 19) **सहार्थेन युक्ते अप्रधाने तृतीया स्यात्** (ಸಿ. ಕೌ 564)

ವಿ.ಸೂ.:- . **बलवता सह को विरोधः** (ಮೃಚ್ಛ.VI) ಬಲವಂತರೊಡನೆ ವಿರೋಧ ಎಲ್ಲಿಯದು? ಎಂದು ಮುಂತಾಗಿಯೂ ಆಗುತ್ತದೆ

Rarest Archiver

vi) ಇದೇ ರೀತಿ[1] **विना** ಅವ್ಯಯ ಬಂದಾಗಲೂ ಕೂಡ.....

ಉದಾಹರಣೆ : **तेन विना तृणमपि न चलति** = ಅವನ ಹೊರತು ತೃಣವೂ ಚಲಿಸುವುದಿಲ್ಲ.

vii) ವಿಕೃತವಾದ ಯಾವ ಅವಯವದಿಂದ[2] ಅವಯವಿಯಲ್ಲಿ (ಅಂಗದಿಂದ ಅಂಗಿಯಲ್ಲಿ- ವ್ಯಕ್ತಿಯಲ್ಲಿ) ವಿಕಾರವು ತೋರುವುದೋ ಆ ಅವಯವವಾಚಕ ಶಬ್ದದ ಮೇಲೆ ತೃತೀಯಾ ವಿಭಕ್ತಿ ಬರುತ್ತದೆ.

ಉದಾಹರಣೆ : **'अक्ष्णान्धैः' 'कुणिभिः करेण' च** = ಕುರುಡರಾದ ಮೋಟುಗೈಯ, ಕುಂಟ

पदा खञ्जैः पयोमानुषैः (ಚಂಪೂ ಭಾ. III, 45) ಜಲಮನುಷ್ಯರಿಂದ....

अक्ष्णा काणः = ಒಂದು ಕಣ್ಣಿಲ್ಲದವ (ಒಂದು ಕಣ್ಣಿಲ್ಲದೆ ವಿಕಾರವಾಗಿ ಇರುವ)

पादेन खञ्जः = ಒಂದು ಕಾಲಿಲ್ಲದ ಕುಂಟ

ವಿ.ಸೂ.: ಇಲ್ಲಿ **अक्षि काणं यस्य** - ಇವನ ಕಣ್ಣು ಕುರುಡು ಅಂದರೆ ಆಗ ವಿಕಾರಾರ್ಥವಿರುವುದಿಲ್ಲ ಅನ್ನುವುದು ಗಮನಾರ್ಹ.

viii) ಇತ್ಥಂಭೂತಾರ್ಥಬೋಧಕ [3] (ಈ ರೀತಿಯ ಸ್ಥಿತಿಯಲ್ಲಿ 'ಇರುವ' ಅನ್ನುವುದನ್ನು ಜ್ಞಾಪಿಸುವ)ಅರ್ಥದಲ್ಲಿ ಪ್ರಾತಿಪದಿಕದ ಮೇಲೆ ತೃತೀಯಾವಿಭಕ್ತಿ ಬರುತ್ತದೆ.

ಉದಾಹರಣೆ : **'जटाभिस्तापसः** = ಜಟೆಗಳಿಂದಾಗಿ ತಾಪಸ (ನೆಂದು ಗುರುತು ಹಿಡಿಯುವುದು)

ix) ಕೆಲವು ಕಡೆ ಫಲವನ್ನು ಹೇತುವೆಂದು ವ್ಯವಹರಿಸಬೇಕಾಗುತ್ತದೆ. ಆಗ ಆ ಹೇತ್ವರ್ಥ[4] ಬೋಧಕ ಪ್ರಾತಿಪದಿಕಗಳ ಮೇಲೆ ತೃತೀಯಾ ವಿಭಕ್ತಿಯು ಬರುತ್ತದೆ.

ಉದಾಹರಣೆ : **जन्मान्तरकृतेन पुण्येन त्वम् इदानीं मया दृष्टः**

= ಪೂರ್ವಜನ್ಮದ ಪುಣ್ಯದಿಂದಾಗಿ ನೀನು ಈಗ ನನ್ನಿಂದ ಕಾಣಲ್ಪಟ್ಟೆ.

अध्ययनेन अत्र वसति

= ಕಲಿಯಲಿಕ್ಕಾಗಿ ಇಲ್ಲಿ ಇರುತ್ತಾನೆ.

अध्यापनेन जीवति

= ಅಧ್ಯಾಪನದಿಂದ ಜೀವಿಸುತ್ತಾನೆ.

x) **अति + शी** ಮತ್ತು **अनु + हृ** ಇವುಗಳ ಯೋಗದಲ್ಲಿ ಬರುವ ಕರಣಾರ್ಥಕ ಪ್ರಾತಿಪದಿಕದ ಮೇಲೆ ತೃತೀಯಾ ವಿಭಕ್ತಿ ಬರುತ್ತದೆ.

---

[1] **विनाऽपि तद्योगं तृतीया** (ಪ್ರಿ. ಕೌ. 564)

[2] **येनाङ्गविकारः** (ಪಾ II, 3, 20)

[3] **इत्थम्भूतलक्षणे** (ಪಾ II, 3, 21)

[4] **हेतौ** (ಪಾ II, 3, 23) **हेत्वर्थे तृतीयास्यात्** (ಪ್ರಿ. ಕೌ. 568)

Rarest Archiver

ಉದಾಹರಣೆ : **पूर्वान् महाभागतयाऽतिशेषे** (ರಘು V. 24)

= ಮಹಾಭಾಗ್ಯವಶದಿಂದ ಪೂರ್ವಜರನ್ನು ನೀನು ಮೀರಿಸಿದ್ದೀ.

स्वरेण रामभद्रमनुहरति (ಉತ್ತರ IV)

= ಸ್ವರದಿಂದಾಗಿ ರಾಮಭದ್ರನನ್ನು ಹೋಲುತ್ತಾನೆ.

xi) ಕ್ರಿಯೆಯು ಗಮ್ಯಮಾನವಾಗುತ್ತಿರಲು[1] (ಕ್ರಿಯಾವಾಚಕ ಶಬ್ದಕ್ಕೆ ಬದಲಾಗಿ ಅವ್ಯಯವೇ ಮುಂತಾದವುಗಳು ಇದ್ದು ಕ್ರಿಯೆಯು ಗಮ್ಯಮಾನವಾಗಿರಲು) ಅದೂ ಕಾರಕ ವಿಭಕ್ತಿಗೆ ಅನುಕೂಲಕಾರಕವಾಗುತ್ತದೆ ; ಆಗ ತೃತೀಯಾವಿಭಕ್ತಿ ಬರುತ್ತದೆ.

ಉದಾಹರಣೆ : **अलं श्रमेण** = ಶ್ರಮವು ಸಾಕು ; (ಶ್ರಮದಿಂದ ಪ್ರಯೋಜನವಿಲ್ಲವೆನ್ನುವುದು ಗಮ್ಯ.)

ಇದೇ ರೀತಿ -

कृतं संदेहेन = ಸಂದೇಹವು ಬೇಡ

अलं परिहासेन = ಪರಿಹಾಸ ಸಾಕು.

किं पितुरुत्कुलया त्वया (ಅ.ಶಾ. V. 27) = ಕುಲಕಲಂಕಿನಿಯಾದ ನಿನ್ನಿಂದ ತಂದೆಗೇನು?

किमनेन ज्ञातेन (ಮುದ್ರಾ. I) = ಇದನ್ನು ತಿಳಿದು ಪ್ರಯೋಜನವೇನು?

xii) **दाण्**[2] (ಕೊಡು) ಪ್ರಯೋಗವಿದ್ದಾಗ ಅಶಿಷ್ಟ ವ್ಯವಹಾರ ವಿಷಯದಲ್ಲಿ (ಸಂಭಾವಿತತನಕ್ಕೆ ವಿರುದ್ಧವಾದ ಆಚರಣೆಯ ವಿಷಯದಲ್ಲಿ) ಚತುರ್ಥ್ಯರ್ಥದಲ್ಲಿ ತೃತೀಯಾ ವಿಭಕ್ತಿ ಬರುತ್ತದೆ.

ಉದಾಹರಣೆ : **दास्या संयच्छते कामुकः** = ಕಾಮುಕನು ದಾಸಿಗೆ (ಹಣವನ್ನು) ಕೊಡುತ್ತಾನೆ.

ಆದರೆ ಶಿಷ್ಟ ವ್ಯವಹಾರವಿದ್ದಲ್ಲಿ...

देवदत्तः भार्यायै संयच्छते = ದೇವತ್ತನು ಹೆಂಡತಿಗೆ (ಹಣವನ್ನು) ಕೊಡುತ್ತಾನೆ.

ಎಂದು ಚತುರ್ಥೀ ವಿಭಕ್ತಿ ಬರುತ್ತದೆ.

(೪) ಚತುರ್ಥೀ ವಿಭಕ್ತಿ (The Dative Case)

ಚತುರ್ಥೀವಿಭಕ್ತಿಯು[3] ಸಂಪ್ರದಾನಕಾರಕವಾದುದು. ಗವಾದಿ (ಆಕಳನ್ನೇ ಮುಂತಾದವುಗಳನ್ನು) ದಾನಕ್ರಿಯಾನಿರೂಪಿತ [4](ಕೊಡುವ ಕಾರ್ಯದಲ್ಲಿ ಹೇಳಲ್ಪಟ್ಟ) ಕರ್ಮವಸ್ತುವಿನಿಂದ ಸಂಬಂಧವಾದ ವಸ್ತುವು ಸಂಪ್ರದಾನ ಸಂಜ್ಞೆಯನ್ನು ಪಡೆಯುತ್ತದೆ. ಒಟ್ಟಿನಲ್ಲಿ ದೇಯದ್ರವ್ಯೋದ್ದೇಶವಾದುದು ಸಂಪ್ರದಾನ ಸಂಜ್ಞಾಗತವಾಗುವುದು.

---

[1] **गम्यमानापि क्रिया कारकविभक्तौ प्रयोजिका** (ವಾರ್ತಿಕ)

[2] **अशिष्टव्यवहारे दाणः प्रयोगे चतुर्थ्यर्थे तृतीया** (ವಾರ್ತಿಕ 5040)

[3] **चतुर्थी सम्प्रदाने** (ಪಾ II, 3, 13) [4]**कर्मणा यमभिप्रैति स सम्प्रदानम्** (ಪಾ I, 4, 32)
दानस्य कर्मणा यमभिप्रैति स सम्प्रदानसंज्ञः स्यात् (ಸಿ. ಕೌ 569)

Rarest Archiver

ಉದಾಹರಣೆ : **जनकः विप्राय गां ददाति**

= ಜನಕನು ವಿಪ್ರನಿಗೆ ಆಕಳನ್ನು ಕೊಡುತ್ತಾನೆ.

किं वस्तु विद्वन् गुरवे प्रदेयम्? (ರಘು. V. 18)

= ವಿದ್ವನ್, ಗುರುವಿಗೆ ಯಾವ ವಸ್ತುವನ್ನು ಕೊಡಬೇಕಾಗಿದೆ?

i) ಕ್ರಿಯೆಗೆ ಉದ್ದಿಷ್ಟವಾದ [1] ವಸ್ತುವೂ ಸಹ ಸಂಪ್ರದಾನಸಂಜ್ಞೆಯನ್ನು ಪಡೆಯುತ್ತದೆ. ಆಗ ಚತುರ್ಥೀ ವಿಭಕ್ತಿಯು ಬರುತ್ತದೆ.

ಉದಾಹರಣೆ : **सा पत्ये शेते**

= ಅವಳು ಪತಿಗಾಗಿ (ಆತನ ಇಚ್ಛೆಯಂತೆ) ಶಯನ ಮಾಡುತ್ತಾಳೆ.

देव, अवतरसि त्वं जगतः कल्याणाय पदे पदे

= ದೇವನೇ, ಜಗದ ಕಲ್ಯಾಣಕ್ಕಾಗಿ ನೀನು ಯುಗಯುಗದಲ್ಲಿಯೂ ಅವತರಿಸುತ್ತೀ.

ii) ರುಚಿಸುವ ಅರ್ಥದಲ್ಲಿ **रुच्**[2] ಧಾತುವಿನ ಪ್ರಯೋಗವಿದ್ದಾಗ ಪ್ರೀತ್ಯುದ್ದೇಶಕವಾದ ವಸ್ತುವಿನ ಮೇಲೆ ಸಂಪ್ರದಾನ ಸಂಜ್ಞೆಯು ಬರುತ್ತದೆ.

ಉದಾಹರಣೆ :

हरये रोचते भक्तिः = ಹರಿಗೆ ಭಕ್ತಿಯು ಪ್ರಿಯವಾದದ್ದು.

यत्प्रभविष्णवे रोचते (ಅ.ಶಾ.II) = ಒಡೆಯನು ಇಚ್ಛಿಸಿದಂತಾಗಲಿ.

रोचते मे एष भद्रमयूरः (ಅ.ಶಾ.VII) = ಈ ಸುಂದರ ನವಿಲು ನನಗೆ ಸೇರುತ್ತದೆ.

iii) ವಿಕತ್ಥನಾರ್ಥದಲ್ಲಿ[3] **श्लाघ्** (ಹೊಗಳು), ಅಪನಯನಾರ್ಥದಲ್ಲಿ **ह्नुङ्** (ಬೇರೆಡೆಗೆ ಕರೆದೊಯ್ಯು), ಗತಿನಿವೃತ್ಯರ್ಥದಲ್ಲಿ **स्था** (ನಿಲ್ಲು), ಉಪಾಲಂಭನಾರ್ಥದಲ್ಲಿ **शप्** (ಹಳಿ, ನಿಂದಿಸು) - ಇವುಗಳ ಪ್ರಯೋಗವಿದ್ದಾಗ ಇವುಗಳ (ಸ್ವಪ್ರಯೋಜಕ) ಜ್ಞಾಪನ ಕರ್ಮೋದ್ದಿಷ್ಟವಾದ ವಸ್ತುವು ಸಂಪ್ರದಾನ ಸಂಜ್ಞೆಯನ್ನು ಹೊಂದುತ್ತದೆ ; ಆಗ ಚತುರ್ಥೀವಿಭಕ್ತಿ ಬರುತ್ತದೆ.

ಉದಾಹರಣೆ : **गोपी स्मरात् कृष्णाय** ...

श्लाघते = ಗೋಪಿಯು ತನ್ನ ಕಾಮಪ್ರಯೋಜನಾರ್ಥವಾಗಿ ಕೃಷ್ಣನನ್ನು ಹೊಗಳುತ್ತಾಳೆ.

ह्नुते = ...ದೂರ ಕರೆದೊಯ್ಯುತ್ತಾಳೆ.

तिष्ठते = ...ನಿಲ್ಲುತ್ತಾಳೆ.

शपते = ...ಹಳಿಯುತ್ತಾಳೆ.

---

[1] **क्रियया यमभिप्रैति सोऽपि सम्प्रदानम्** (ವಾರ್ತಿಕ 1085)

[2] **रुच्यर्थानां प्रीयमाणः** (ಪಾ I, 4, 33)

[3] **श्लाघह्नुङ्स्थाशपां ज्ञीप्स्यमानः** (ಪಾ I, 4, 34)

Rarest Archiver

iv) ಅವಸ್ಥಾನಾರ್ಥಕ (ನಿಯತಕಾಲದಲ್ಲಿ ಸಾಲವನ್ನು ತಿರುಗಿಕೊಡುವ ಅರ್ಥದಲ್ಲಿ) **धृञ्**[1] ಧಾತುವಿನ ಪ್ರಯೋಗವಿದ್ದಾಗ ಉತ್ತಮರ್ಣಾರ್ಥವಾಚಕ [2] ಶಬ್ದವು ಸಂಪ್ರದಾನ ಸಂಜ್ಞೆಯನ್ನು ಪಡೆಯುತ್ತದೆ ; ಆಗ ಚತುರ್ಥೀವಿಭಕ್ತಿ ಬರುತ್ತದೆ.

ಉದಾಹರಣೆ :

सः देवदत्ताय शतं धारयति = ಅವನು ದೇವದತ್ತನಿಗೆ ನೂರು (ರೂಪಾಯಿಗಳನ್ನು)ಕೊಡಬೇಕು.

वृक्षसेचने द्वे धारयसि मे (ಅ.ಶಾ.I) = ನನ್ನ ಎರಡು ಗಿಡಗಳಿಗೆ ನೀರು ಹನಿಸಿ (ನೀನು) ಕಡ ತೀರಿಸಬೇಕಾಗಿದೆ.

v) **स्पृह्**[3] ಧಾತುವಿನ ಯೋಗವಿರುವಾಗ ಕರ್ಮವಾಚಕ ಶಬ್ದವು ಸಂಪ್ರದಾನ ಸಂಜ್ಞೆಯನ್ನು ಪಡೆಯುತ್ತದೆ.

ಉದಾಹರಣೆ :

पुष्पेभ्यः स्पृहयति

= ಹೂವುಗಳಿಗೆ ಅಪೇಕ್ಷೆಪಡುತ್ತಾನೆ.

स्पृहयामि खलु दुर्ललितायास्मै (ಅ.ಶಾ.VII)

= ಈ ತುಂಟನನ್ನು ನಾನೇಕೋ ಬಯಸುತ್ತಿದ್ದೇನೆ.

ವಿ. ಸೂ.:1) --- ಇಚ್ಛಾತಿಶಯವು ವಿವಕ್ಷಿತವಾದರೆ [4] ಕರ್ಮಸಂಜ್ಞೆಯೇ ಬರುತ್ತದೆ.

ಉದಾಹರಣೆ :

रामः पुष्पाणि स्पृहयति = ರಾಮನು ಹೂವುಗಳನ್ನು (ಬೇಕೇಬೇಕೆಂದು) ಬಯಸುತ್ತಾನೆ.

सीता काञ्चनमृगं स्पृहयति = ಸೀತೆಯು ಬಂಗಾರದ ಜಿಂಕೆ (ಬೇಕೇಬೇಕೆಂದು) ಬಯಸುತ್ತಾಳೆ.

2) ವಿಷಯವಿವಕ್ಷೆ ಮಾತ್ರವಿದ್ದರೆ ಷಷ್ಠೀ ವಿಭಕ್ತಿ ಬರುತ್ತದೆ.

पुष्पाणां स्पृहयति

= ಹೂವುಗಳು (ಇದ್ದರೂ ಇರಲಿ) ಎಂದು ಅಪೇಕ್ಷಿಸುತ್ತಾನೆ.

vi) **क्रुध्, द्रुह्, ईर्ष्य्, असूय्**[5] ಧಾತುಗಳ ಪ್ರಯೋಗವಿದ್ದಾಗ ಕೋಪೋದ್ದಿಷ್ಟವಾದ ವಸ್ತುವಾಚಕದ ಮೇಲೆ ಸಂಪ್ರದಾನ ಸಂಜ್ಞೆಯು ಬರುತ್ತದೆ.

---

[1] **धारेरुत्तमर्णः** (ಪಾ I, 4, 35)

[2] **ऋणस्य अर्पयिता धनस्वामी उत्तमर्णः** ಸಾಲವೇ ಮುಂತಾದ್ದನ್ನು ಕೊಟ್ಟ ಧನಸ್ವಾಮಿಯು ಉತ್ತಮರ್ಣನು. **ऋणस्य गृहीता अधमर्णः** ಸಾಲಗಾರನು ಅಧಮರ್ಣನು.

[3] **स्पृहेरीप्सितः** (ಪಾ I, 4, 36)

[4] **प्रकर्षविवक्षायां तु परत्वात् कर्मसंज्ञा** (ಸಿ. ಕೌ 574)

[5] **क्रुधद्रुहेर्ष्यासूयार्थानां यं प्रतिकोपः** (ಪಾ I, 4, 37)

Rarest Archiver

ಉದಾಹರಣೆ :

हरये क्रुध्यति (द्रुह्यति - ईर्ष्यति - असूयति वा) स निशाचरः

= ಆ ನಿಶಾಚರನು ಹರಿಯ ಮೇಲೆ ಸಿಟ್ಟಿಗೇಳುತ್ತಾನೆ (ಹರಿಗೆ ದ್ರೋಹಗೈಯ್ಯುತ್ತಾನೆ; ಹರಿಯ ಮೇಲೆ ಈರ್ಷ್ಯೆಗೊಳ್ಳುತ್ತಾನೆ ;ಅಸೂಯೆಗೊಳ್ಳುತ್ತಾನೆ).

vii) ಉಪಸರ್ಗಯುಕ್ತ **क्रुध्**[1] , **द्रुह्** ಧಾತುಗಳ ಪ್ರಯೋಗವಿದ್ದಾಗ ಉದ್ದೇಶಿಸಲ್ಪಟ್ಟ ಕಾರಕವು ಕರ್ಮಸಂಜ್ಞೆಯನ್ನು ಹೊಂದುತ್ತದೆ.

ಉದಾಹರಣೆ : **क्रूरमभिक्रुध्यति (अभिद्रुह्यति)**

= ಕ್ರೂರನಲ್ಲಿ ಸಿಟ್ಟಿಗೇಳುತ್ತಾನೆ [ಕ್ರೂರನಲ್ಲಿ ದ್ರೋಹವೆಸಗುತ್ತಾನೆ]

संक्रुध्यसि मृषा किं त्वं दिदृक्षुं मां मृगेक्षणे (ಭಟ್ಟಿ. VIII, 76)

= [ರಾವಣನು ಸೀತೆಗೆ] ಎಲೈ, ಮೃಗನಯನೆ, ನಿನ್ನನ್ನು ನೋಡಲು ಬಯಸುವ ನನ್ನ ಮೇಲೆ ವೃಥಾ ಏಕೆ ಸಿಟ್ಟುಗೊಳ್ಳುವೆ?

viii) **राध्**[2], **ईक्ष** ಧಾತುಕ್ರಿಯಾನಿರೂಪಿತವಾದ ಕರ್ಮಪದವು ಸಂಪ್ರದಾನ ಸಂಜ್ಞೆಯನ್ನು ಹೊಂದುತ್ತದೆ.

ಉದಾಹರಣೆ :

राधा कृष्णाय राध्यति (अभिद्रुह्यति) = ರಾಧೆಯು ಕೃಷ್ಣನ ವಿಷಯಕವಾಗಿ [ಅವನ ಶುಭಾಶುಭವನ್ನು] ಪರ್ಯಾಲೋಚಿಸುತ್ತಾಳೆ.

कंसः कृष्णाय ईक्षते = ಕಂಸನು ಕೃಷ್ಣನ ಪರಿಸ್ಥಿತಿಯನ್ನು ಪರ್ಯಾಲೋಚಿಸುತ್ತಾನೆ.

ix) **प्रति**[3] ಅಥವಾ **आङ् (आ)** ಪೂರ್ವಕವಾದ **श्रु** ಧಾತುವಿನ ಪ್ರಯೋಗವಿದ್ದಾಗ ಪ್ರವರ್ತನಾ ವ್ಯಾಪಾರದ ಕರ್ತೃವಿಗೆ ಸಂಪ್ರದಾನ ಸಂಜ್ಞೆ ಬರುತ್ತದೆ. ಉದಾಹರಣೆ :

राजा विप्राय गां प्रतिशृणोति [आशृणोति वा]

= ರಾಜನು ಬ್ರಾಹ್ಮಣನಿಗೆ [ಆತನು ಬೇಡಿಕೊಂಡಾಗ] ಆಕಳನ್ನು ಕೊಡುವುದಾಗಿ ಆಶ್ವಾಸನೆಯನ್ನು ನೀಡುವನು.

प्रतिशुश्राव काकुत्स्थस्तेभ्यो विघ्नप्रतिक्रियाम् (ರಘು. XV, 4)

= ರಾಮನು ವಿಘ್ನನಿವಾರಣೆ ಮಾಡುವುದಾಗಿ ಅವರಿಗೆ [ಋಷಿಗಳು ಕೇಳಿಕೊಂಡಾಗ] ಮಾತುಕೊಟ್ಟನು.

x) **गृ**[4] ಧಾತುವಿನ ಮೇಲೆ ಉಪಸರ್ಗಗಳು ಬಂದಾಗ ಪೂರ್ವೋಕ್ತ (ಪ್ರೇರಣಾ) ವ್ಯಾಪಾರದ (ಪ್ರಶಂಸನಾ)

---

[1] **क्रुधद्रुहोरुपसृष्टयोः कर्म** (ಪಾ I, 4, 38) **सोपसर्गयोरनयोर्योगे यं प्रति कोपः तत्कारकं कर्मसंज्ञं स्यात्** (ಸಿ. ಕೌ 576) [2] **राधेक्ष्योर्यस्य विप्रश्नः** (ಪಾ I, 4, 39)

[3] **प्रत्याङ्भ्यां श्रुवः पूर्वस्य कर्ता** (ಪಾ I, 4, 40) **आभ्यां परस्य शृणोतेर्योगे पूर्वस्य प्रवर्तनारूपस्य व्यापारस्य कर्ता सम्प्रदानं स्यात्** (ಸಿ. ಕೌ 578)

[4] **अनुप्रतिगृणश्च** (ಪಾ I, 4, 41) **आभ्यां गृणातेः कारकं पूर्वव्यापारस्य कर्तृभूतमुक्तसंज्ञं स्यात्** (ಸಿ. ಕೌ 579)

Rarest Archiver

ಕರ್ತೃವಾಚಕ ಶಬ್ದದ ಮೇಲೆ ಚತುರ್ಥೀವಿಭಕ್ತಿ ಬರುತ್ತದೆ. ಉದಾಹರಣೆ :

गृणद्भ्योनुगृणन्त्यन्ये (ಭಟ್ಟಿ VIII. 77)

= ಹೊಗಳುವವರನ್ನು ಬೇರೆಯವರು ಪ್ರೋತ್ಸಾಹಿಸುತ್ತಾರೆ.

होत्रेऽनुगृणाति (प्रतिगृणाति वा)

= ಹೋತೃವನ್ನು (ಮತ್ತೆ ಹೊಗಳಲು ಅಧ್ವರ್ಯುವು) ಪ್ರೋತ್ಸಾಹಿಸುತ್ತಾನೆ.

xi) ಪರಿಕ್ರಯದ [1] ಮೌಲ್ಯಬೋಧಕ ಪ್ರಾತಿಪದಿಕದ ಮೇಲೆ ವೈಕಲ್ಪಿಕವಾಗಿ ಚತುರ್ಥೀ ವಿಭಕ್ತಿ ಬರುತ್ತದೆ.

ಉದಾಹರಣೆ : **शतेन शताय वा परिक्रीतः**

= ನೂರು ನಾಣ್ಯಗಳಿಂದ [ನಿಶ್ಚಿತ ಅವಧಿಯವರೆಗೆ ಕೆಲಸಕ್ಕಾಗಿ] ನಿಯಮಿಸಿಕೊಳ್ಳಲ್ಪಟ್ಟವನು.

xii) ತಾದರ್ಥ್ಯ[2] **[तस्मै इदं - 'तदर्थम्' ;तदर्थस्य भावः तादर्थ्यम्]** ವಾಚಕ ಶಬ್ದವು ಚತುರ್ಥೀ ವಿಭಕ್ತಿಯಲ್ಲಿ ಬರುತ್ತದೆ.

ಉದಾಹರಣೆ : **मुक्तये हरिं भजति** = ಮೋಕ್ಷಕ್ಕಾಗಿ ಹರಿಯನ್ನು ಭಜಿಸುತ್ತಾನೆ.

क्लृप्[3] ಮತ್ತು **सम्** ಪೂರ್ವಕವಾದ **पद्** ಇವುಗಳ ಪ್ರಯೋಗವಿದ್ದಾಗ ತದರ್ಥಾರ್ಥವಾಚಕವು ಚತುರ್ಥೀವಿಭಕ್ತಿಯಲ್ಲಿ ಬರುತ್ತದೆ.

ಉದಾಹರಣೆ :

मृगतृष्णिकेव नाममात्रप्रस्तावो मे विषादाय कल्पते (ಅ.ಶಾ. VII)

= (ಶಕುಂತಲೆಯ) ಹೆಸರಿನ ಪ್ರಸ್ತಾಪವೇ ನನಗೆ ವಿಷಾದವನ್ನುಂಟುಮಾಡುತ್ತದೆ.

इयं तस्मै मैथिली कल्पयिष्यते (अनर्घ III . 45)

= ಈ ಮೈಥಿಲಿಯು ಅವನಿಗೆ (ಧಾರೆಯೆರೆದು) ಕೊಡಲ್ಪಡುವಳು.

ನಿಮಿತ್ತಗಳಿಂದ ಸೂಚಿಸಲ್ಪಡುವ ಉತ್ಪಾತಬೋಧಕ [4] ಪ್ರಾತಿಪದಿಕದ ಮೇಲೆ ಚತುರ್ಥೀವಿಭಕ್ತಿ ಬರುತ್ತದೆ.

ಉದಾಹರಣೆ : **वाताय कपिला विद्युत्**

= ಕಪಿಲವರ್ಣದ ಮಿಂಚು ಬಿರುಗಾಳಿಯನ್ನು ಸೂಚಿಸುತ್ತದೆ.

ಹಿತಯೋಗದಲ್ಲಿಯೂ[5] ಚತುರ್ಥೀವಿಭಕ್ತಿ ಬರುತ್ತದೆ.

---

[1] **परिक्रयणे सम्प्रदानमन्यतरस्याम्** (ಪಾ I, 4, 44) **नियतकालं भृत्या स्वीकरणं परिक्रयणं** ಪರಿಕ್ರಯಣವೆಂದರೆ ನಿಶ್ಚಿತಕಾಲದವರೆಗೆ ಸೇವೆಗಾಗಿ (ಸಂಬಳದ ಮೂಲಕ) ಕರಾರುಮಾಡಿಕೊಳ್ಳುವುದು. **तस्मिन् साधकतमं कारकं सम्प्रदानसंज्ञं वा स्यात्** (ಸಿ. ಕೌ 580)

[2] **तादर्थ्ये चतुर्थी वाच्या** (ವಾರ್ತಿಕ 1458) [3] **क्लृपि सम्पद्यमाने च** (ವಾರ್ತಿಕ 1459)

[4] **उत्पातेन ज्ञापिते च** (ವಾರ್ತಿಕ 1450)

[5] **हितयोगे च** (ವಾರ್ತಿಕ 1461)

Rarest Archiver

ಉದಾಹರಣೆ : **देशाय हितम्** = ದೇಶಕ್ಕೆ ಹಿತವಾದುದು.

स्वामिने हितम् = ಸ್ವಾಮಿಗೆ ಹಿತವಾದುದು.

xiii) ಕ್ರಿಯೆಯೇ[1] ಪ್ರಯೋಜನವಾಗಿ ಇರುವ ಕ್ರಿಯೆಗೆ ಸಮೀಪೋಚ್ಚರಿತವಾದ ಪದದ ಸ್ಥಾನಿಯು ಅಂದರೆ ಅಧ್ಯಾಹೃತವಾದ ತುಮನ್ನಂತವು ಪ್ರಯೋಗಿಸಲ್ಪಡದಿರುವಾಗ ಉಪಪದದ ಮೇಲೆ ಕರ್ಮಾರ್ಥದಲ್ಲಿ ಚತುರ್ಥೀವಿಭಕ್ತಿ ಬರುತ್ತದೆ.

ಉದಾಹರಣೆ :

फलेभ्यो याति [फलान्याहर्तुं यातीत्यर्थः - ಸಿ. ಕೌ.] = ಹಣ್ಣಿಗಾಗಿ ಹೋಗುತ್ತಾನೆ.

नमस्कुर्मो नृसिंहाय [नृसिंहमनुकूलयितुमित्यर्थः ಸಿ. ಕೌ.]

= ನರಸಿಂಹನಿಗೆ (ಅವನ ಅನುಗ್ರಹ ಪಡೆಯಲು) ನಮಸ್ಕಾರ.

xiv) ತುಮನ್ನಂತಾರ್ಥದಂತಿರುವ[2] ಅರ್ಥವುಳ್ಳ ಭಾವವಾಚಕ ಶಬ್ದದ ಮೇಲೆ (ಕ್ರಿಯಾವಾಚಕ ನಾಮಪದದ ಮೇಲೆ) ಚತುರ್ಥೀವಿಭಕ್ತಿ ಬರುತ್ತದೆ.

ಉದಾಹರಣೆ :

यागाय याति [यष्टुं यातीत्यर्थः -ಸಿ. ಕೌ.] = ಯಜ್ಞಮಾಡಲು ಹೋಗುತ್ತಾನೆ.

xv) नमः[3], स्वस्ति, स्वाहा, स्वधा, अलम् ಮತ್ತು **वषट्** ಇವುಗಳ ಯೋಗವಿರುವಾಗ ಚತುರ್ಥೀ ವಿಭಕ್ತಿ ಬರುತ್ತದೆ.

ಉದಾಹರಣೆ : **हरये नमः** = ಹರಿಗೆ ನಮಸ್ಕಾರ

[**ವಿ.ಸೂ.: नमः** ಅವ್ಯಯವು ಕ್ರಿಯಾಪದಕ್ಕೆ ಉಪಪದವಾಗಿ[4] ಬಂದಿದ್ದಲ್ಲಿ ದ್ವಿತೀಯಾವಿಭಕ್ತಿಯಲ್ಲಿಯೇ ಉದ್ದಿಷ್ಟ ವ್ಯಕ್ತಿವಾಚಕವು ಬರುತ್ತದೆ. ಉದಾಹರಣೆ : **नमस्करोति देवान्** = ದೇವರಿಗೆ ನಮಸ್ಕರಿಸುತ್ತಾನೆ].

स्वस्ति प्रजाभ्यः = ಪ್ರಜೆಗಳಿಗೆ ಸುಖವಾಗಲಿ.

भद्र, स्वस्त्यस्तु तुभ्यम् (ವಾ.ರಾಮಾ. V. 23) = ಧನ್ಯನೆ, ನಿನಗೆ ಮಂಗಳವಾಗಲಿ.

अग्नये स्वाहा = ಅಗ್ನಿಗೆ ಅರ್ಪಿತ.

पितृभ्यः स्वधा[5] = ಪಿತೃಗಳಿಗೆ ಅರ್ಪಣೆ.

---

[1] **क्रियार्थोपपदस्य कर्मणि स्थानिनः** (ಪಾ II, 3,14) **क्रियार्था क्रिया उपपदं यस्य तस्य स्थानिनोऽप्रयुज्यमानस्य तुमनः कर्मणि चतुर्थी स्यात्** (ಸಿ. ಕೌ 581)

[2] **तुमर्थाच्च भाववचनात्** (ಪಾ II, 3, 15) **ವಿ.ಸೂ.: भाव** ಎಂದರೆ ಕ್ರಿಯೆಯೆಂದು ಹಿಂದೆಯೇ ಹೇಳಿದೆ.

[3] **नमःस्वस्तिस्वाहास्वधालं वषड्योगाच्च** (ಪಾ II, 3, 16)

[4] **उपपदविभक्तेः कारकविभक्तिर्बलीयसी** (ಸಿ. ಕೌ 583)

[5] **स्वधा** ಅವ್ಯಯವನ್ನು ಕೇವಲ ಪಿತೃಗಳಿಗಾಗಿ ಉಪಯೋಗಿಸಬೇಕು.

Rarest Archiver

दैत्येभ्यो हरिरलम् [1] = ದೈತ್ಯರಿಗೆ ಹರಿಯೊಬ್ಬ ಸಾಕು.

तस्यालमेषा क्षुधितस्य तृप्त्यै (ರಘು. II. 39) = ಈ ಹಸಿದವನ ತೃಪ್ತಿಗೆ ಇದು (ಈ ಆಕಳು) ಸಾಕು.

इन्द्राय वषट् = ಇಂದ್ರನಿಗೆ ಅರ್ಪಣೆ.

xvi) **मन्** ಧಾತುವಿಗೆ ಉದ್ದಿಷ್ಟವಾದ ಕರ್ಮಪದವು ಅಪ್ರಾಣಿವಾಚಕವಾಗಿದ್ದಲ್ಲಿ ಅನಾದರಬೋಧಕಾರ್ಥದಲ್ಲಿ[2] ಇದರ ಮೇಲೆ ವೈಕಲ್ಪಿಕವಾಗಿ ದ್ವಿತೀಯಾ ಅಥವಾ ಚತುರ್ಥೀವಿಭಕ್ತಿ ಬರುತ್ತದೆ.

ಉದಾಹರಣೆ : **तृणं मन्ये तृणाय वा** = ಹುಲ್ಲಿಗೆ ಸಮಾನವೆಂದು ಬಗೆಯುವೆ.

पितुः पदममन्यत बल्बजेभ्यः (चम्पू भा. III. 41)

= (ಪಾರ್ಥನು) ತಂದೆಯ ಆಸ್ಥಾನವನ್ನು (ಇಂದ್ರಪದವಿಯನ್ನು) ಹುಲ್ಲಿಗೆ ಸಮಾನವೆಂದು ತಿಳಿದನು.

xvii) ಗತ್ಯರ್ಥಕ[3] ಕ್ರಿಯೆಗೆ ಉದ್ದಿಷ್ಟವಾದ (ಕರ್ಮವಾಚಕದ) ಅಧ್ವಶಬ್ದ ಭಿನ್ನವಾದ ಕಾರಕದ ಮೇಲೆ ವೈಕಲ್ಪಿಕವಾಗಿ ದ್ವಿತೀಯಾ ಅಥವಾ ಚತುರ್ಥೀವಿಭಕ್ತಿ ಬರುತ್ತದೆ. ಆದರೆ ಕರ್ತೃವಿನ ಶಾರೀರಿಕ ಪರಿಸ್ಪಂದವು (ಚೇಷ್ಟೆಯು) ಸ್ಫುಟವಾಗಿರಬೇಕು.

ಉದಾಹರಣೆ :

ग्रामं ग्रामाय वा गच्छति = ಹಳ್ಳಿಗೆ ಹೋಗುತ್ತಾನೆ (ಇಲ್ಲಿ 'ಅಧ್ವ' ಅಥವಾ 'ದಾರಿ' ಶಬ್ದ ಬಂದಿಲ್ಲ.)

वनाय रामो वव्राज (चम्पू .रामा.II. 27) = ರಾಮನು ವನಕ್ಕೆ ಹೋದನು.

भोजेन दूतो रघवे विसृष्टः (ರಘು. V. 39). = ಭೋಜನಿಂದ ರಘುವಿನೆಡೆಗೆ ದೂತನು ಕಳಿಸಲ್ಪಟ್ಟನು.

(ಇ) ಪಂಚಮೀ ವಿಭಕ್ತಿ (The Ablative Case)

ಪಂಚಮೀವಿಭಕ್ತಿಯು[4] ಅಪಾದಾನಕಾರಕವಾದುದು. ಸಂಯುಕ್ತವಸ್ತುದ್ವಯಗಳಲ್ಲಿ ಒಂದಕ್ಕೆ ಚಲನೆಯುಂಟಾದಾಗ ಪೃಥಕ್ಕರಣವು (ವಿಯೋಗವು) ಏರ್ಪಡುತ್ತದೆ ; ಆಗ, ಪ್ರಕೃತ ಚಲನೆಗೆ ಆಶ್ರಯವಲ್ಲದ ವಸ್ತುವು ಧ್ರುವವೆನಿಸುತ್ತದೆ[5]; 'ಧ್ರುವ' ಎಂದರೆ 'ಅವಧಿಭೂತವಾದ' ಎಂದರ್ಥ. ವಿಶ್ಲೇಷವು (ಅಪಾಯವು) ವಿವಕ್ಷಿತವಾದಾಗ ಈ ಅವಧಿಭೂತವಾದ ಕಾರಕವು ಅಪಾದಾನಸಂಜ್ಞೆಯನ್ನು ಹೊಂದುತ್ತದೆ ; ಆಗ ಪಂಚಮೀವಿಭಕ್ತಿ ಬರುತ್ತದೆ. ಉದಾಹರಣೆ :

वृक्षात् फलं पतति = ಮರದಿಂದ ಹಣ್ಣು ಬೀಳುತ್ತದೆ.

शाखामृगाः वृक्षात् वृक्षं परिचक्रमुः = ಮಂಗಗಳು ಒಂದು ಮರದಿಂದ ಇನ್ನೊಂದು ಮರಕ್ಕೆ ಹಾರಿದವು.

---

[1] **अलं विवादेन** ಎಂದು ಮುಂತಾಗಿ ಹಿಂದೆ ವಿವರಿಸಲಾಗಿದೆ. ಇಲ್ಲಿ **अलं** ಬರುವುದು ಸಾಮರ್ಥ್ಯಸೂಚಕವಾಗಿ. ಸಾಮರ್ಥ್ಯಕ್ಕೆ ಉದ್ದಿಷ್ಟವ್ಯಕ್ತಿವಾಚಕ ಶಬ್ದವು ಚತುರ್ಥೀವಿಭಕ್ತಿಯಲ್ಲಿ ಬರುತ್ತದೆ.

[2] **मन्यकर्मण्यनादरे विभाषाप्राणिषु** (ಪಾ II, 3, 17)

[3] **गत्यर्थकर्मणिद्वितीयाचतुर्थौ चेष्टायामनध्वनि** (ಪಾ II, 3, 12)

[4] **अपदाने पञ्चमी** (ಪಾ II, 3, 28) [5] **ध्रुवमपायेऽपादानम्** (ಪಾ I, 4, 24)

Rarest Archiver

देवदत्तो ग्रामादायाति = ದೇವದತ್ತನು ಹಳ್ಳಿಯಿಂದ ಬರುತ್ತಾನೆ.

धावतोऽश्वात्पतति = ಓಡುತ್ತಿರುವ ಕುದುರೆಯಿಂದ ಬೀಳುತ್ತಾನೆ.

i) **जुगुप्सा**[1] , **विराम** ಮತ್ತು **प्रमाद** ಮುಂತಾದವುಗಳ ಅರ್ಥವುಳ್ಳ ವಾಕ್ಯದಲ್ಲಿ ಈ ಜುಗುಪ್ಸಾದಿಗಳಿಗೆ ವಿಷಯಭೂತವಾದ ವಸ್ತುವು ಅಪಾದಾನಸಂಜ್ಞೆಯನ್ನು ಹೊಂದುತ್ತದೆ.

ಉದಾಹರಣೆ :

पापात् जुगुप्सते = ಪಾಪಕ್ಕೆ ಹೇಸುತ್ತಾನೆ.

समरात् विरमति = ಯುದ್ಧವನ್ನು ಬಿಡುತ್ತಾನೆ.

धर्मात् प्रमाद्यति = ಧರ್ಮದ ವಿಷಯದಲ್ಲಿ ಎಚ್ಚರತಪ್ಪುತ್ತಾನೆ.

स्वाधिकारात् प्रमत्तः(ಕಾ.ಮೇಘ.I) = ತನ್ನ ಅಧಿಕಾರದಿಂದ ಮತ್ತನಾದವನು.

ii) ಭೀತ್ಯರ್ಥಕ[2] ಮತ್ತು ತ್ರಾಣಾ (ರಕ್ಷಾ) ರ್ಥಕ ಪ್ರಯೋಗಗಳಲ್ಲಿ ಭೀತಿ ತ್ರಾಣಗಳಿಗೆ ಕಾರಣವಾದ ವಸ್ತುವು ಅಪಾದಾನ ಸಂಜ್ಞೆಯನ್ನು ಹೊಂದಿ ಪಂಚಮೀ ವಿಭಕ್ತಿಯನ್ನು ತೆಗೆದುಕೊಳ್ಳುವುದು.

ಉದಾಹರಣೆ :

रावणात् बिभ्यतीं भृशम् (ಭಟ್ಟಿ. VIII. 70) = ರಾವಣನಿಂದ ಬಹಳ ಹೆದರಿದ (ಸೀತೆಯನ್ನು)

चोरात् बिभेति = ಕಳ್ಳನಿಗೆ ಹೆದರುತ್ತಾನೆ.

चोरात् त्रायते = ಕಳ್ಳನಿಂದ ರಕ್ಷಿಸುತ್ತಾನೆ.

iii) ಪರಾಜಯಾರ್ಥಕ[3] **परा** ಉಪಸರ್ಗಯುಕ್ತ **जि** ಧಾತುವಿನ ಪ್ರಯೋಗವಿರುವಾಗ ಸಹಿಸಲಸಾಧ್ಯವಾದ ವಸ್ತುವಿನ ಮೇಲೆ ಪಂಚಮೀ ವಿಭಕ್ತಿ ಬರುತ್ತದೆ.

ಉದಾಹರಣೆ : **अध्ययनात् पराजयते** = ಅಧ್ಯಯನ ಮಾಡಲು ಸಹನೆಯಿಲ್ಲದವನಿದ್ದಾನೆ.

ವಿ.ಸೂ.: ಆದರೆ ಸೋಲಿಸು ಅನ್ನುವ ಅರ್ಥವಿದ್ದದ್ದಾದರೆ ದ್ವಿತೀಯಾವಿಭಕ್ತಿ ಬರುತ್ತದೆ.

ಉದಾಹರಣೆ : **शत्रून् पराजयते** = ಶತ್ರುಗಳನ್ನು ಸೋಲಿಸುತ್ತಾನೆ.

iv) ನಿವಾರಣಾರ್ಥಕದಲ್ಲಿ ಈಪ್ಸಿತ ವಸ್ತುವಿನ ಮೇಲೆ [4] ಪಂಚಮೀ ವಿಭಕ್ತಿ ಬರುತ್ತದೆ.

ಉದಾಹರಣೆ : **कृषीवलो यवेभ्यो गां वारयति क्षेत्रे**
= ಒಕ್ಕಲಿಗನು ಹೊಲದಲ್ಲಿ ಗೋಧಿಯ ಬೆಳೆಯಿಂದ (ಅದರ ಹತ್ತಿರ ಹೋಗದಂತೆ) ಆಕಳನ್ನು ತಡೆಯುತ್ತಾನೆ.

---

[1] **जुगुप्साविरामप्रमादार्थानाम् उपसंख्यानाम्** (ವಾರ್ತಿಕ 1079)

[2] **भीत्रार्थानां भयहेतुः** (ಪಾ I, 4, 25) **भयार्थानां त्राणार्थानां च प्रयोगे हेतुरपादानं स्यात्** (ಸಿ. ಕೌ 588)

[3] **पराजेरसोढः** (ಪಾ I, 4, 26) **पराजेःप्रयोगेऽसह्यार्थोऽपादानं स्यात्** (ಸಿ. ಕೌ 589)

[4] **वारणार्थानामीप्सितः** (ಪಾ I, 4, 27)

Rarest Archiver

v) ಮರೆಯಲ್ಲಿ ವ್ಯವಧಾನದಲ್ಲಿ ಅಡಗುವುದಿದ್ದಾಗ[1] ಯಾರಿಗೆ ಕಾಣಿಸಿಕೊಳ್ಳುವುದು ಬೇಡವಾಗಿದೆಯೋ ಆ ವ್ಯಕ್ತಿ ಅಥವಾ ವಸ್ತುವಿನ ಮೇಲೆ ಅಪಾದಾನ ಸಂಜ್ಞೆಯು ಬರುತ್ತದೆ.

ಉದಾಹರಣೆ :

देवदत्तात् यज्ञदत्तो निलीयते = (ದೇವದತ್ತನಿಗೆ ಕಾಣದಂತೆ) ದೇವತ್ತನಿಂದ ಯಜ್ಞದತ್ತನು ಅಡಗುತ್ತಾನೆ.

रक्षोभ्योऽन्तर्दधानं मां पाहि = ರಾಕ್ಷಸರಿಗೆ ಹೆದರಿ ಅಡಗಿದ ನನ್ನನ್ನು ರಕ್ಷಿಸು.

मातुर्निलीयते कृष्णः = ಕೃಷ್ಣನು ತಾಯಿಗೆ ಕಾಣಬಾರದೆಂದು ಅಡಗಿಕೊಳ್ಳುವನು.

vi) ಗುರುವಿನಿಂದ ನಿಯಮಪೂರ್ವಕ ವಿದ್ಯಾಸ್ವೀಕಾರವು[2] (ಉಪಯೋಗವು) ವಿವಕ್ಷಿತವಾಗಿರುವಾಗ ವಕ್ತೃವಾಚಕ ಶಬ್ದದ ಮೇಲೆ ಪಂಚಮೀ ವಿಭಕ್ತಿ ಬರುತ್ತದೆ.

ಉದಾಹರಣೆ : **देवदत्तः उपाध्यायादधीते**

= ದೇವತ್ತನು ಉಪಾಧ್ಯಾಯನಿಂದ (ಅವನು ಹೇಳಿಕೊಟ್ಟದ್ದನ್ನು) ಕಲಿಯುತ್ತಾನೆ.

रामादधीतसन्देशः (ಭಟ್ಟಿ. VIII. 72)

= ರಾಮನಿಂದ ಸಂದೇಶವಾಕ್ಯಗಳನ್ನು ಪಡೆದವನಾಗಿ....

ವಿ.ಸೂ.: ಉಪಯೋಗಾತ್ಮಕವಿಲ್ಲದಿದ್ದಲ್ಲಿ ಅರ್ಥಾತ್ ನಿಯಮಪೂರ್ವಕ ವಿದ್ಯಾಸ್ವೀಕಾರವಿಲ್ಲದಿದ್ದಲ್ಲಿ ಪಂಚಮೀವಿಭಕ್ತಿಗೆ ಬದಲಾಗಿ ಷಷ್ಠೀ ವಿಭಕ್ತಿ ಬರುತ್ತದೆ.

ಉದಾಹರಣೆ : **नटस्य गाथां शृणोति** = ನಟನ ಹಾಡನ್ನು ಕೇಳುತ್ತಾನೆ.

vii) ಜನನಕ್ಕೆ ಕಾರಣೀಭೂತವಾಗಿರುವ[3] ವಸ್ತುವಿನ ಮೇಲೆ ಪಂಚಮೀ ವಿಭಕ್ತಿ ಬರುತ್ತದೆ.

ಉದಾಹರಣೆ :

ब्रह्मणः प्रजाः प्रजायन्ते = ಬ್ರಹ್ಮನಿಂದ ಜೀವಿಗಳು ಜನಿಸುತ್ತವೆ.

सङ्गात् सञ्जायते कामः(ಭ.ಗೀ.II. 62) = ಸಂಗದಿಂದ ಕಾಮವು ಜನಿಸುತ್ತದೆ.

viii) ಪ್ರಥಮ ಪ್ರಕಾಶಕ್ಕೆ[4] (ಪ್ರಥಮವಾಗಿ ಕಂಡುಬರಲು) ಕಾರಣೀಭೂತವಾದ ವಸ್ತುವು ಅಪಾದಾನ ಸಂಜ್ಞೆಯನ್ನು ಹೊಂದುವುದು.

ಉದಾಹರಣೆ : **हिमवतो गङ्गा प्रभवति**

= ಹಿಮಾಲಯದಿಂದ ಗಂಗೆಯು ಹರಿಯುವುದು ಕಂಡುಬರುತ್ತದೆ.

प्रभवन्तीमिवादित्यात् (ಭಟ್ಟಿ.VIII. 72)

= ಸೂರ್ಯನಿಂದ ಪ್ರಥಮಪ್ರಕಾಶವನ್ನು ಹೊಂದಿದಂತಿರುವ......

---

[1] **अन्तर्धौ येनादर्शनमिच्छति** (ಪಾ I, 4, 28) [2] **आख्यातोपयोगे** (ಪಾ I, 4, 29)

[3] **जनिकर्तुः प्रकृतिः** (ಪಾ I, 4, 30) **जायमानस्य हेतुरपादानं स्यात्** (ಸಿ. ಕೌ 593)

[4] **भुवः प्रभवः** (ಪಾ I, 4, 31)

Rarest Archiver

ix) ಲ್ಯಬಂತ ಪ್ರಕೃತಿಕ ಧಾತುವಿಗೆ[1] ಕರ್ಮೀಭೂತವಾಗಿರತಕ್ಕ ವಸ್ತುವಿನ ಮೇಲೆ ಪಂಚಮೀವಿಭಕ್ತಿ ಬರುತ್ತದೆ ; ಆಗ ಲ್ಯಬಂತವು ಲೋಪಗೊಂಡಿರಬೇಕು.

ಉದಾಹರಣೆ :

प्रमदा प्रासादात् प्रेक्षते = ಪ್ರಮದೆಯು ಅರಮನೆಯ

[प्रासादम् अधिरुह्य........इत्यर्थः*] ಮೇಲಿನಿಂದ ನೋಡುತ್ತಾಳೆ.

श्वशुरात् जिह्रेति [श्वशुरं वीक्ष्य इत्यर्थः] = ಮಾವನನ್ನು ನೋಡಿ ನಾಚುತ್ತಾಳೆ.

ಇದೇ ರೀತಿ **वातायनात् पतति** = ಕಿಟಕಿಯಿಂದ ಬೀಳುತ್ತಾನೆ.

ಮುಂತಾದವುಗಳು.

x) **अन्य**[2], **आरात्, इतर, ऋते** ಇವುಗಳ ಯೋಗವುಳ್ಳ ಹಾಗೂ ದಿಕ್ ಶಬ್ದ ಸೂಚಕವಾಗಿ ಉತ್ತರಪದವಾಗಿ ಬಂದ **आञ्च् (प्राञ्च्, प्राक्** ಮುಂ.), **आच् (आ) आहिच् (आहि)** ಇವುಗಳ ಯೋಗವಿರುವಾಗ ಅಪಾದಾನ ಸಂಜ್ಞೆಯು ಬರುತ್ತದೆ. ಉದಾಹರಣೆ :

न भजे कृष्णादन्यम् = ಕೃಷ್ಣನನ್ನು ಬಿಟ್ಟು ಬೇರೆ ಯಾರನ್ನೂ ಭಜಿಸುವುದಿಲ್ಲ.

आराद्वनात् = ವನಕ್ಕೆ ಹತ್ತಿರದಲ್ಲಿ....

वर्णाश्रमेभ्य इतरे धर्माः = ವರ್ಣಾಶ್ರಮಗಳನ್ನು ಬಿಟ್ಟು ಉಳಿದ ಕರ್ತವ್ಯಗಳು.

रत्नाकरादृते = ಸಮುದ್ರವನ್ನು ಬಿಟ್ಟು.

हस्तादर्श इवान्धानां भवेत् = ವ್ಯಾಕರಣಜ್ಞಾನವಿಲ್ಲದಿದ್ದರೆ ಅಂಧರ ಕೈಯಲ್ಲಿಯ
व्याकरणादृते (ಭಟ್ಟಿ. XXII, 33) ಕನ್ನಡಿಯಂತೆ ಪರಿಣಮಿಸುತ್ತದೆ.

ग्रामात् प्राक् = ಹಳ್ಳಿಯ ಪೂರ್ವದಿಕ್ಕಿನಲ್ಲಿ

दक्षिणा (दक्षिण + आच्) ग्रामात् = ಊರಿನ ಬಲಗಡೆಗೆ

समुद्रादुत्तराहि = ಸಮುದ್ರದ ಉತ್ತರಕ್ಕೆ.

xi) **अप**[3], **परि** ಇವೆರಡೂ ಕರ್ಮ ಪ್ರವಚನೀಯಗಳಿಗೆ ಸಂಬಂಧಿಸುವ ಕಾರಕದ ಮೇಲೆ ಪಂಚಮೀ ವಿಭಕ್ತಿ ಬರುತ್ತದೆ. ಮತ್ತು **आङ्** ಇಂದ ಅನ್ನುವ ಅರ್ಥದಲ್ಲಿ ಬಂದಾಗಲೂ ಪಂಚಮೀವಿಭಕ್ತಿ .

ಉದಾಹರಣೆ :

यत् सम्प्रत्यपलोकेभ्यो याति = ಇದಕ್ಕಾಗಿ ಲೋಕವನ್ನು ತ್ಯಜಿಸಿಹೋಗುವನು.

परिहरेः संसारः = ಹರಿಯನ್ನು ಬಿಟ್ಟು ಸಂಸಾರವು....

आकैलासात् = ಕೈಲಾಸದವರೆಗೆ.

---

[1] **ल्यब्लोपे कर्मण्यधिकरणे च** (ವಾರ್ತಿಕ 1474-74) *ಸಿ. ಕೌ 593

[2] **अन्यारादितरर्तेदिक्शब्दाञ्चूत्तरपदाजाहियुक्ते** (ಪಾ II, 3, 29)

[3] **पञ्चम्यपाङ्परिभिः** (ಪಾ II, 3,10)

Rarest Archiver

xii) ಅವಧಿಭೂತಾರ್ಥದಲ್ಲಿ[1] **आङ् (आ)** ಪದದ ಪ್ರಯೋಗವುಳ್ಳ ಕಾರಕಕ್ಕೆ ಅಪಾದಾನ ಸಂಜ್ಞೆ ಬರುತ್ತದೆ.

ಉದಾಹರಣೆ : **आपरितोषाद्विदुषां न साधु मन्ये** (ಅ.ಶಾ. I, 2)

= ವಿದ್ವಾಂಸರು ಸಂತೋಷಹೊಂದುವವರೆಗೆ ಸಫಲವೆಂದು ಬಗೆಯಲಾರೆ.

आरामदर्शनात् पाप (ಭಟ್ಟಿ. VIII. 88)

= ಪಾಪಿಯೇ ರಾಮದರ್ಶನವಾಗುವವರೆಗೆ.....

xiii) ಪ್ರತಿನಿಧಿ ಅಥವಾ ಪ್ರತಿದಾನಾರ್ಥದಲ್ಲಿ **प्रति**[2] ಎಂಬ ಕರ್ಮಪ್ರವಚನೀಯದ ಸಂಬಂಧವಿರುವ ಕಾರಕವು ಅಪಾದಾನ ಸಂಜ್ಞೆಯನ್ನು ಪಡೆಯುತ್ತದೆ.

ಉದಾಹರಣೆ :

कृष्णात् प्रति प्रद्युम्नो गच्छति = ಕೃಷ್ಣನಿಗೆ ಬದಲಾಗಿ ಪ್ರದ್ಯುಮ್ನನು ಹೋಗುತ್ತಾನೆ.

तिलेभ्यः प्रति माषान् यच्छति = ಎಳ್ಳಿಗೆ ಬದಲಾಗಿ ಉದ್ದನ್ನು ಕೊಡುತ್ತಾನೆ.

xiv) ಕರ್ತೃಸಂಜ್ಞಾರಹಿತವಾಗಿರುವ[3] ಋಣವಾಚಕ ಶಬ್ದವು ಪ್ರಕೃತ ಕ್ರಿಯೆಗೆ ಕಾರಣೀಭೂತವಾಗಿರುವಾಗ ಅಪಾದಾನ ಸಂಜ್ಞೆಯನ್ನು ಹೊಂದುವುದು.

ಉದಾಹರಣೆ : **शतात् बद्धः** = ನೂರಕ್ಕೆ ಸಿಕ್ಕಿಹಾಕಿಕೊಂಡವನು.

xv) ಸ್ತ್ರೀಲಿಂಗವಲ್ಲದ ಗುಣವಾಚಕವಾಗಿರತಕ್ಕ[4] ಶಬ್ದವು ಪ್ರಕೃತ ಕ್ರಿಯೆಗೆ ಕಾರಣವಾಗಿದ್ದಲ್ಲಿ ಅದರ ಮೇಲೆ ವೈಕಲ್ಪಿಕವಾಗಿ ಪಂಚಮೀ ವಿಭಕ್ತಿ ಬರುವುದು.

ಉದಾಹರಣೆ : **जाड्यात् जाड्येन वा मुक्तः** = ಜಾಡ್ಯದಿಂದ ಬಿಡುಗಡೆ ಹೊಂದಿದವನು.

ವಿ.ಸೂ.: (i) ಗುಣವಾಚಕವಿಲ್ಲದಿದ್ದಲ್ಲಿ...

धनेन कुलम् = ಹಣದಿಂದ ಕುಲವು ಎಂದು ಮುಂತಾಗಿ ತೃತೀಯೆಯೇ ಬರುತ್ತದೆ.

(ii) ಸ್ತ್ರೀಲಿಂಗದ್ದಾಗಿದ್ದಲ್ಲಿ...

बुद्ध्या मुक्तः = ಬುದ್ಧಿಪೂರ್ವಕವಾಗಿ ಬಿಡಲ್ಪಟ್ಟವ

ಎಂದು ಮುಂತಾಗಿ ತೃತೀಯೆಯೇ ಬರುತ್ತದೆ.

xvi) **पृथक्**[5], **विना, नाना** ಇವುಗಳ ಸಂಬಂಧವಿರುವಾಗ ನಾಮಪದಗಳ ಮೇಲೆ ಪಂಚಮೀ ವಿಭಕ್ತಿಯು ವೈಕಲ್ಪಿಕವಾಗಿ ಬರುತ್ತದೆ ; ದ್ವಿತೀಯೆ, ತೃತೀಯೆಗಳೂ ಬರಬಹುದು.

---

[1] **आङ् मर्यादावचने** (ಪಾ I, 4, 89) [2] **प्रतिः प्रतिनिधिप्रतिदानयोः** (ಪಾ I, 4, 92)

[3] **अकर्तर्यृणे पञ्चमी** (ಪಾ II, 3, 24) **कर्तृवर्जितं यदृणं हेतुभूतं तत् पञ्चमी स्यात्** (ಸಿ. ಕೌ 601)

[4] **विभाषा गुणेऽस्त्रियाम्** (ಪಾ II, 3, 25)

[5] **पृथग्विनानानाभिस्तृतीयान्यतरस्याम्** (ಪಾ II, 3, 32)
एभिर्योगे तृतीया स्यात् पञ्चमीद्वितीये च (ಸಿ. ಕೌ 603)

Rarest Archiver

ಉದಾಹರಣೆ : **पृथक् रामेण रामात् रामं वा** = ರಾಮನಿಗೆ ಹೊರತಾಗಿ.....

विना कारणेन कारणात् कारणं वा = ಕಾರಣವಿಲ್ಲದೆ.....

xvii) ನಾಮಪದಕ್ಕೆ ವಿಶೇಷಣವಾಗಿರದ **स्तोक**[1], **अल्प, कृच्छ्र, कतिपय** ಇವುಗಳಿಗೆ ಕರಣಾರ್ಥದಲ್ಲಿ ವೈಕಲ್ಪಿಕವಾಗಿ ತೃತೀಯಾ ಅಥವಾ ಪಂಚಮೀ ವಿಭಕ್ತಿ ಬರುತ್ತದೆ.

ಉದಾಹರಣೆ : **स्तोकेन स्तोकाद्वा मुक्तः** = ಸ್ವಲ್ಪದರಲ್ಲಿ ಬಿಡಲ್ಪಟ್ಟನು.

अल्पेन अल्पाद्वा गृहीतः = ಸಣ್ಣದಕ್ಕಾಗಿ ಹಿಡಿಯಲ್ಪಟ್ಟ.

ಆದರೆ, ನಾಮಪದಕ್ಕೆ ವಿಶೇಷಣವಾಗಿರುವಾಗ......

स्तोकेन विषेण हतः = ಸ್ವಲ್ಪ ವಿಷದಿಂದ ಸತ್ತ.

ಎಂದು ಮುಂತಾಗಿ ತೃತೀಯೆ ಮಾತ್ರ ಬರುತ್ತದೆ.

xviii) ದೂರ[2] ಮತ್ತು ಅಂತಿಕಾರ್ಥ ಶಬ್ದಗಳ ಮೇಲೆ ವೈಕಲ್ಪಿಕವಾಗಿ ದ್ವಿತೀಯಾ, ತೃತೀಯಾ, ಪಂಚಮೀ ಅಥವಾ ಸಪ್ತಮೀ ವಿಭಕ್ತಿಗಳು ಬರುತ್ತವೆ.

ಉದಾಹರಣೆ : **ग्रामस्य (ग्रामाद्वा) दूरं दूरेण दूरात् दूरे वा** = ಹಳ್ಳಿಗೆ ಹತ್ತಿರ

xix) **प्रभृति, आरभ्य, बहिः, अनन्तरं** ಮುಂತಾದವುಗಳ ಯೋಗವುಳ್ಳ ಪ್ರಾತಿಪದಿಕಗಳ ಮೇಲೆ ಪಂಚಮೀ ವಿಭಕ್ತಿ ಬರುತ್ತದೆ.

ಉದಾಹರಣೆ : **शैशवात् प्रभृति** = ಬಾಲ್ಯದಿಂದ ಮೊದಲುಗೊಂಡು

दर्शनादारभ्य = ದರ್ಶನವಾದಾಗಿನಿಂದ.

राजापि नगराद्बहिर्जगाम = ರಾಜನೂ ಕೂಡ ನಗರದ ಹೊರಗೆ ಹೋದನು.

आगमनादनन्तरम् = ಆಗಮನದ ಅನಂತರ.

ಮುಂತಾದವುಗಳು.

xx) **प्राक्** ಅವ್ಯಯಯೋಗವುಳ್ಳ ಕಾರಕಕ್ಕೆ ಪಂಚಮೀ ವಿಭಕ್ತಿ ಬರುತ್ತದೆ.

ಉದಾಹರಣೆ : **प्रागन्तरिक्षगमनात्**(ಅ.ಶಾ. V. 22)

= ಆಕಾಶದಲ್ಲಿ ಹಾರಾಡಲಿಕ್ಕೆ ಬರುವ ಪೂರ್ವದಲ್ಲಿ

xxi) ಕಾರಣವಾಚಕ ಶಬ್ದದ ಮೇಲೆ ಪಂಚಮೀ ವಿಭಕ್ತಿ ಬರುತ್ತದೆ.

---

[1] **करणे च स्तोकाल्पकृच्छ्रकतिपयस्यासत्ववचनस्य** (ಪಾ II, 3, 33)

[2] **दूरान्तिकार्थेभ्यो द्वितीया च** (ಪಾII, 3, 35) **एभ्यो द्वितीया स्यात् चात्पञ्चमी तृतीये। ... सप्तम्यधिकरणे च इति चकारात् सप्तमी** (ಸಿ. ಕೌ 605)

Rarest Archiver

ಉದಾಹರಣೆ : **पर्वतो वह्निमान् धूमात्**

= ಪರ್ವತದಲ್ಲಿ ಹೊಗೆಯಿರುವುದರಿಂದ (ಅಲ್ಲಿ) ಬೆಂಕಿಯಿದೆ.

xxii) ಜಾತಿ, ಗುಣ, ಕ್ರಿಯೆ, ಸಂಜ್ಞೆಗಳಿಂದಾಗಿ ಸಮುದಾಯದಿಂದ ಒಂದು ಭಾಗವನ್ನು ಪೃಥಕ್ಕರಿಸುವ ನಿರ್ಧಾರಣಕಾರ್ಯದಲ್ಲಿ ನಿರ್ಧಾರ್ಯ ವಸ್ತುವಿಗೂ ನಿರ್ಧಾರಕ ವಸ್ತುವಿಗೂ ಅತ್ಯಂತ ಭೇದವೇ[1] ವಿವಕ್ಷಿತವಾಗಿದ್ದಲ್ಲಿ ನಿರ್ಧಾರಕವಾದ ವಸ್ತುವಿನ ಮೇಲೆ ಪಂಚಮೀ ವಿಭಕ್ತಿ ಬರುತ್ತದೆ.

ಉದಾಹರಣೆ : **माथुराः पाटलिपुत्रकेभ्यः आढ्यतराः**

= ಮಥುರಾನಿವಾಸಿಗಳು ಪಾಟಲಿಪುತ್ರದವರಿಗಿಂತ ಆಢ್ಯರು.

(ಇಲ್ಲಿ ಅತಿಶಯದ ಆಢ್ಯವೈಶಿಷ್ಟ್ಯವು ಮಥುರೆಯವರಲ್ಲಿ ಇರುವುದರಿಂದ ಪಾಟಲೀಪುತ್ರದವರು ಇವರಿಗಿಂತ ಭಿನ್ನರು.)

(೬) ಸಪ್ತಮೀ ವಿಭಕ್ತಿ (The Locative Case)

ಸಪ್ತಮೀ ವಿಭಕ್ತಿಯು ಅಧಿಕರಣಾರ್ಥದಲ್ಲಿ[2] ಬರುತ್ತದೆ. ಕರ್ತೃ ಅಥವಾ ಕರ್ಮಗಳ ಮೂಲಕ ಕ್ರಿಯೆಗೆ ಆಧಾರವಾಗಿರುವುದು[3] ಅಧಿಕರಣವೆನಿಸುವುದು. ಈ ಅಧಿಕರಣವು ಔಪಶ್ಲೇಷಿಕ, ವೈಷಯಿಕ ಮತ್ತು ಅಭಿವ್ಯಾಪಕವೆಂದು ಮೂರು ಬಗೆಯಾಗಿರುತ್ತದೆ. ಸಂಯೋಗ ಸಂಬಂಧದಿಂದ ಔಪಶ್ಲೇಷಿಕವೂ ವಿಷಯತಾ ಸಂಬಂಧದಿಂದ ವೈಷಯಿಕವೂ ಸಕಲ ಅವಯವ ವ್ಯಾಪ್ತಿಯಿಂದ ಅಭಿವ್ಯಾಪಕತೆಯೂ ಆಧಾರದಲ್ಲಿ ಉಂಟಾಗುವುದು. ಅನುಕ್ರಮವಾಗಿ ಉದಾಹರಣೆಗಳು :

ಔಪಶ್ಲೇಷಿಕ : **कटे आस्ते**

= ಚಾಪೆಯ ಮೇಲೆ ಇರುತ್ತಾನೆ. (ಕರ್ತೃದ್ವಾರಾ ಕ್ರಿಯೆಗೆ ಆಧಾರ)

स्थाल्याम् ओदनं पचति

= ಭಾಂಡೆಯಲ್ಲಿ ಅನ್ನವನ್ನು ಬೇಯಿಸುತ್ತಾನೆ (ಕರ್ಮದ್ವಾರಾ ಕ್ರಿಯೆಗೆ ಆಧಾರ)

ವೈಷಯಿಕ : **पुत्रे स्निह्यति**

= ಮಗನನ್ನು ಪ್ರೀತಿಸುತ್ತಾನೆ.

न खलु सत्यमेव तापसकन्यायां ममाभिलाषः (ಅ.ಶಾ. II)

= ತಾಪಸಕನ್ನಿಕೆಯಲ್ಲಿ ನನಗೆ ಅಭಿಲಾಷೆಯಿದೆ ಅನ್ನವುದು ನಿಜವಲ್ಲ.

कस्मिन्नपि पूजार्हे अपराद्धा शकुन्तला (ಅ.ಶಾ. IV)

= ಯಾರೋ ಪೂಜ್ಯರಿಗೆ ಶಕುಂತಳೆಯು ಅಪರಾಧವೆಸಗಿದ್ದಾಳೆ.

मोक्षे इच्छा अस्ति

= ಮೋಕ್ಷದಲ್ಲಿ ಅಭಿಲಾಷೆಯಿದೆ.

---

[1] **पञ्चमी विभक्ते**ः (ಪಾ II, 3, 42) **निर्धार्यमाणस्य यत्र भेद एव तत्र पञ्चमी स्यात्** (ಸಿ. ಕೌ 639)

[2] **सप्तम्यधिकरणे च** (ಪಾ II, 3, 36) [3]**आधारोऽधिकरणम्** (ಪಾ I, 4, 45) **कर्तृकर्मद्वारा तन्निष्ठक्रियाया आधारः कारकमधिकरणसञ्ज्ञं स्यात्** (ಸಿ. ಕೌ 632)

Rarest Archiver

ಅಭಿವ್ಯಾಪಕ : **सर्वस्मिन् आत्मा अस्ति** = ಆತ್ಮವು ಎಲ್ಲರಲ್ಲಿ ಇದೆ.

i) ಇನಂತ (**कर्तरि इनिः - इन्**) ವಾಗಿರುವ ಕ್ತಾಂತ[1] (ಕರ್ಮಣಿಭೂತ ಕೃದಂತ) ಶಬ್ದವು ಕರ್ಮಾರ್ಥದಲ್ಲಿ ಅಧಿಕರಣಸಂಜ್ಞೆಯನ್ನು ಹೊಂದುತ್ತದೆ.

ಉದಾಹರಣೆ : **अधीती[2] व्याकरणे** = ವ್ಯಾಕರಣವನ್ನು ಕಲಿತವನು.

ii) **साधु, असाधु**[3] ಇವುಗಳ ಪ್ರಯೋಗವಿದ್ದಾಗ ಸಂಬಂಧ ಸಾಮಾನ್ಯದಲ್ಲಿ ವಿಹಿತವಾದ ಷಷ್ಠಿಗೆ ಅಪವಾದವಾಗಿ ಸಪ್ತಮೀ ವಿಭಕ್ತಿ ಬರುತ್ತದೆ.

ಉದಾಹರಣೆ : **साधु कृष्णो मातरि असाधुर्मातुले च**

= ಕೃಷ್ಣನು ತಾಯಿಗೆ ಒಳ್ಳೆಯವನು ಮತ್ತು ಸೋದರಮಾವನಿಗೆ ಕೆಟ್ಟವನು.

iii) ಕರ್ಮಪದದ ಸಂಬಂಧವಿರುವಾಗ ನಿಮಿತ್ತವಾಚಕದ[4] ಮೇಲೆ (ಫಲ[5] ಅಥವಾ ಪ್ರಯೋಜನವಾಚಕದ ಮೇಲೆ) ಸಪ್ತಮೀ ವಿಭಕ್ತಿ ಬರುತ್ತದೆ.

ಉದಾಹರಣೆ :

चर्मणि द्वीपिनं हन्ति दन्तयोर्हन्ति कुञ्जरम्
केशेषु चमरीं हन्ति सीम्नि पुष्कलको हतः (ಭಾಷ್ಯ)

= ಚರ್ಮಕ್ಕಾಗಿ ಹುಲಿಯನ್ನು ಕೊಲ್ಲುತ್ತಾನೆ ; ದಂತಗಳಿಗಾಗಿ ಆನೆಯನ್ನು ಕೊಲ್ಲುತ್ತಾನೆ ; ಕೇಶಕ್ಕಾಗಿ ಚಮರಮೃಗವನ್ನು ಕೊಲ್ಲುತ್ತಾನೆ ; ಅಂಡಕೋಶಕ್ಕಾಗಿ ಗಂಧಮೃಗವನ್ನು ಕೊಲ್ಲುತ್ತಾನೆ.

ವಿ.ಸೂ.: ಈ ನಿಯಮದಲ್ಲಿ ಕರ್ಮಪದವಾಚ್ಯ ಮತ್ತು ನಿಮಿತ್ತವಾಚ್ಯಗಳಲ್ಲಿ ಸಂಯೋಗ[6] ಅಥವಾ ಸಮವಾಯ ಸಂಬಂಧವಿರಬೇಕಾದದ್ದು ವಿಹಿತ. ಒಂದು ವೇಳೆ ಸಂಯೋಗ ಸಮವಾಯಾತ್ಮಕಗಳಿಲ್ಲದಿದ್ದಲ್ಲಿ ನಿಮಿತ್ತಬೋಧಕ ಪ್ರಾತಿಪದಿಕದ ಮೇಲೆ ತೃತೀಯಾ ವಿಭಕ್ತಿ ಬರುತ್ತದೆ.

ಉದಾಹರಣೆ :

वेतनेन धान्यं लुनाति

= ಸಂಬಳವನ್ನು ಪಡೆದು ಬೆಳೆಯನ್ನು ಕೊಯ್ಯುತ್ತಾನೆ.

iv) ಯಾವಕ್ರಿಯೆಯಿಂದ[7] ಕ್ರಿಯಾಂತರವು ಜ್ಞಾಪಿಸಲ್ಪಡುತ್ತದೆಯೋ ಆ ಕ್ರಿಯಾನಿರೂಪಿತವಾದ ಕರ್ಮಪದವು ಅಥವಾ ಕರ್ತೃವು ಸಪ್ತಮೀ ವಿಭಕ್ತಿಯನ್ನು ಹೊಂದುತ್ತದೆ. ಇದಕ್ಕೆ ಸತಿಸಪ್ತಮೀ (Locative absolute)

---

[1] **क्तस्येन्विषयस्य कर्मण्युपसंख्यानाम्** (ವಾರ್ತಿಕ 1485)

[2] **अधीत + इन् - अधीतिन् = अधीतम् अनेन इति**

[3] **साध्वसाधु प्रयोगे च** (ವಾರ್ತಿಕ 1486) [4] **निमित्तात् कर्मयोगे** (ವಾರ್ತಿಕ 1490)

[5] **निमित्तमिह फलम्** (ಸಿ. ಕೌ 633) [6] **योगः संयोगसमवायात्मकः** (ಸಿ. ಕೌ 633)

[7] **यस्य च भावेन भावलक्षणम्** (ಪಾ II, 3, 37) **यस्य क्रियया क्रियान्तरं लक्ष्यते ततः सप्तमी स्यात्** (ಸಿ. ಕೌ 534)

Rarest Archiver

ಎಂಬ ಪರ್ಯಾಯ ಸಂಜ್ಞೆಯೂ ಇದೆ. ಇಲ್ಲಿ ಸಾಮಾನ್ಯವಾಗಿ ಜ್ಞಾಪಕಕ್ರಿಯೆಯು (ಭಾವವು) ಕೃದಂತಗೊಂಡು ಸಪ್ತಮೀ ವಿಭಕ್ತಿಯನ್ನು ಹೊಂದುತ್ತದೆ.

ಉದಾಹರಣೆ :

देवदत्तः गोषु दुह्यमानासु गतः

= ಆಕಳನ್ನು ಹಿಂಡುತ್ತಿರುವಾಗಲೇ ದೇವದತ್ತನು ಹೋದನು.

कुतो धर्मक्रियाविघ्नः सतां रक्षितरि त्वयि (ಅ.ಶಾ. V. 14)

= ನೀನು ಸಂತರನ್ನು ರಕ್ಷಿಸುತ್ತಿರುವಾಗ ಧರ್ಮಕ್ರಿಯೆಗಳಿಗೆ ವಿಘ್ನವೆಲ್ಲಿಯದು?

अस्तगंते सवितरि सर्वे गृहं ययुः

= ಸೂರ್ಯನು ಮುಳುಗುತ್ತಿರುವಾಗಲೇ ಎಲ್ಲರೂ ಮನೆಗೆ ಹೋದರು.

इति चिन्तयत्येव मयि स शबरसेनापतिः पल्लवासने समुपाविशत् (ಕಾದಂ.)

= ನಾನು ಹೀಗೆ ಚಿಂತಿಸುತ್ತಿರುವಾಗಲೇ ಆ ಶಬರ ಸೇನಾಪತಿಯು ಚಿಗುರುಗಳಿಂದ ಸಿದ್ಧಗೊಳಿಸಿದ ಆಸನದಲ್ಲಿ ಆಸೀನನಾದನು.

ಯೋಗ್ಯಾಯೋಗ್ಯರಿಗೆ [1] ದೊರೆಯುವ ಪುರಸ್ಕಾರ - ತಿರಸ್ಕಾರಗಳನ್ನು ಬೋಧಿಸುವಾಗಲೂ ಸತಿಸಪ್ತಮೀ ಪ್ರಯೋಗ.

ಉದಾಹರಣೆ :

असत्सु तिष्ठत्सु सन्तस्तरन्ति

= ಅಸತ್ಯವಾದಿಗಳು ನಿಂತಿರುವಾಗಲೇ ಯೋಗ್ಯರು ದಾಟಿ ಹೋಗುತ್ತಾರೆ.

सत्सु तिष्ठत्सु असन्तस्तरन्ति

= ಯೋಗ್ಯರು ಇನ್ನೂ ನಿಂತಿರುವಾಗಲೇ ಅಯೋಗ್ಯರು ದಾಟಿಬಿಡುತ್ತಾರೆ.

आलसिषु तिष्ठत्सु उद्योगिनः कीर्तिं लभन्ते

= ಆಲಸಿಗಳು ನಿಂತಿರುವಾಗ ಉದ್ಯೋಗಿಗಳು ಕೀರ್ತಿಯನ್ನು ಪಡೆಯುತ್ತಾರೆ.

v) **स्वामी**[2]**, ईश्वर, अधिपति, दायाद, साक्षिन्, प्रतिभू, प्रसूत** ಇವುಗಳ ಯೋಗವಿರುವಾಗ ವೈಕಲ್ಪಿಕವಾಗಿ ಷಷ್ಠೀ ಅಥವಾ ಸಪ್ತಮೀ ವಿಭಕ್ತಿ ಬರುತ್ತದೆ.

ಉದಾಹರಣೆ :

गवां गोषु वा स्वामी	= ಆಕಳುಗಳ ಒಡೆಯನು.
पृथिव्याः पृथिव्यां वा ईश्वरः	= ಪೃಥ್ವಿಯ ಒಡೆಯನು
क्षेत्रेषु क्षेत्राणां वा दायादः	= ಪಿತ್ರಾರ್ಜಿತ ಹೊಲಕ್ಕೆ ದಾಯಾದಿಯು.
व्यवहारस्य व्यवहारे वा साक्षी	= ವ್ಯವಹಾರಕ್ಕೆ ಸಾಕ್ಷಿಯಾದವನು.

---

[1] अर्हाणां कर्तृत्वेऽनर्हाणामकर्तृत्वे तद्वैपरीत्ये च (ವಾರ್ತಿಕ 1487- 88)

[2] स्वामीश्वराधिपतिदायादसाक्षिप्रतिभूप्रसूतैश्च (ಪಾ II, 3, 39)

एतैस्सप्ताभिर्योगे षष्ठीसप्तम्यौ स्तः (ಸಿ. ಕೌ 636)

Rarest Archiver

दर्शनस्य दर्शने वा प्रतिभूः = ನೋಡಿದ್ದಕ್ಕೆ ಜಾಮೀನುದಾರನು.

गोषु गवां वा प्रसूतः = ಗೋಸ್ವಾಮಿಯು

vi) ಆಯುಕ್ತ[1], ಕುಶಲ ಇವುಗಳ ಸಂಬಂಧವಿರುವ ಕಾರಕದ ಮೇಲೆ ತಾತ್ಪರ್ಯಾರ್ಥದಲ್ಲಿ [ತತ್ಪರತೆ ಅಥವಾ ಔತ್ಸುಕ್ಯ - ಆ ಸೇವೆ] ಷಷ್ಠಿ ಅಥವಾ ಸಪ್ತಮೀ ವಿಭಕ್ತಿ ಬರುತ್ತದೆ.

ಉದಾಹರಣೆ : **आयुक्तः कुशलो वा हरिपूजने हरिपूजनस्य वा**
= ಹರಿಪೂಜೆಯಲ್ಲಿ ಔತ್ಸುಕ್ಯವುಳ್ಳವನು ಅಥವಾ ಕುಶಲನು.

कुशलोऽन्वेषणस्याहमायुक्तो दूतकर्मणि (ಭಟ್ಟಿ, VIII, 115)
= ಅನ್ವೇಷಣೆಯಲ್ಲಿ ಕುಶಲನಾದ ನಾನು ದೂತಕಾರ್ಯದಲ್ಲಿ ನಿಯೋಜಿಸಲ್ಪಟ್ಟಿದ್ದೇನೆ.

ಔತ್ಸುಕ್ಯಾರ್ಥ ಅಥವಾ ತತ್ಪರಾರ್ಥವಿಲ್ಲದಿದ್ದಾಗ....

आयुक्तः गौ शकटे
= ಎತ್ತನ್ನು ಬಂಡಿಗೆ ಹೂಡಲಾಗಿದೆ.

कर्मणि कुशलः
= ಕೆಲಸದಲ್ಲಿ ಕುಶಲ

ಎಂದು ಕೇವಲ ಸಪ್ತಮೀ ವಿಭಕ್ತಿ ಮಾತ್ರ ಬರುತ್ತದೆ.

vii) ಜಾತಿ, ಗುಣ, ಕ್ರಿಯೆ ಅಥವಾ ಸಂಜ್ಞೆಗಳಿಂದ ಸಮುದಾಯದಲ್ಲಿಯ ಒಂದನ್ನು (ಏಕದೇಶವನ್ನು) ಪೃಥಕ್ಕರಿಸುವ ನಿರ್ಧಾರಣದಲ್ಲಿ[2] ಸಮುದಾಯಬೋಧಕ ಶಬ್ದದ ಮೇಲೆ ಷಷ್ಠೀ ಅಥವಾ ಸಪ್ತಮೀ ವಿಭಕ್ತಿ ಬರುತ್ತದೆ.

ಉದಾಹರಣೆ :

ಜಾತಿ : **नृणां नृषु वा द्विजः श्रेष्ठः** = ಮನುಷ್ಯರಲ್ಲಿ ದ್ವಿಜನು ಶ್ರೇಷ್ಠನು.

ಗುಣ : **गवां गोषु वा कृष्णा बहुक्षीरा** = ಆಕಳುಗಳಲ್ಲಿ ಕಪ್ಪು ಆಕಳು ಹೆಚ್ಚು ಹಾಲು ಕೊಡುವಂಥಾದ್ದು.

ಕ್ರಿಯೆ : **गच्छतां गच्छत्सु वा धावन् शीघ्रः** = ಹೋಗುವವರಲ್ಲಿ ಓಡುವವನು ಶೀಘ್ರವಾಗಿ ಹೋಗುವವನು.

ಸಂಜ್ಞೆ : **छात्राणां छात्रेषु वा मैत्रः पटुः** = ವಿದ್ಯಾರ್ಥಿಗಳಲ್ಲಿ ಮೈತ್ರನು ಜಾಣನು.

viii) **प्रति ; परि, अनु** ಇವುಗಳ ಯೋಗವಿಲ್ಲದ ಹಾಗೂ ಪುರಸ್ಕಾರಾರ್ಥಕ **साधु, निपुण**[3] ಶಬ್ದಗಳ ಪ್ರಯೋಗವಿರುವಾಗ ಪ್ರಾತಿಪದಿಕಗಳ ಮೇಲೆ ಸಪ್ತಮೀ ವಿಭಕ್ತಿ ಬರುತ್ತದೆ.

---

[1] **आयुक्तकुशलाभ्यां चासेवायाम्** (ಪಾ II, 3, 40) **आभ्यां योगे षष्ठीसप्तम्यौ स्तः** (ಸಿ. ಕೌ 637)

[2] **यतश्च निर्धारणम्** (ಪಾ II, 3, 41) **जातिगुणक्रियासंज्ञाभिः समुदायादेकदेशस्य पृथक्करणं निर्धारणं यतस्तत् षष्ठीसप्तम्यौ स्तः** (ಸಿ. ಕೌ 638)

[3] **साधुनिपुणाभ्यामर्चायां सप्तम्यप्रतेः** (ಪಾ II, 3, 43)

Rarest Archiver

ಉದಾಹರಣೆ :

मातरि साधुर्निपुणो वा = ತಾಯಿಯ ವಿಷಯದಲ್ಲಿ ಹಿತವಂತನು.

ವಿ.ಸೂ.: **प्रति, परि, अनु** ಇವುಗಳ ಯೋಗವಿದ್ದಾಗ ಕರ್ಮಪ್ರವಚನೀಯವೆನಿಸಿ ದ್ವಿತೀಯಾವಿಭಕ್ತಿಯನ್ನೇ ಹೊಂದಬೇಕಾಗುತ್ತದೆ.

ಉದಾಹರಣೆ :

साधुर्निपुणो वा मातरं प्रति अनु वा = ತಾಯಿಯನ್ನು ಸೇವಿಸುವುದರಲ್ಲಿ ಜಾಣನು.

ix) **प्रसित**[1] ಹಾಗೂ **उत्सुक** ಇವುಗಳ ಯೋಗಬಂದಾಗ ವೈಕಲ್ಪಿಕವಾಗಿ ಸಪ್ತಮೀ ಅಥವಾ ತೃತೀಯಾ ಬರುತ್ತದೆ.

ಉದಾಹರಣೆ :

प्रसितः उत्सुको वा हरिणा हरौ वा
= ಹರಿಯ ವಿಷಯದಲ್ಲಿ ಆಸಕ್ತನಾದವನು / ಉತ್ಸುಕನಾದವನು.

प्रसिता स्मरकर्मणि (ಭಟ್ಟಿ V, 92) = ಕಾಮಕ್ರಿಯೆಗಳಲ್ಲಿ ಆಸಕ್ತಳಾದ.

x) ಕಾಲಾರ್ಥದಲ್ಲಿಯೇ ಬಂದ ನಕ್ಷತ್ರ ಸಂಜ್ಞಾ[2]ವಾಚಕ ಶಬ್ದವು ವೈಕಲ್ಪಿಕವಾಗಿ ತೃತೀಯಾ ಅಥವಾ ಸಪ್ತಮೀ ವಿಭಕ್ತಿಯನ್ನು ತೆಗೆದುಕೊಳ್ಳುತ್ತದೆ.

ಉದಾಹರಣೆ : **मूलेनावाहयेद्देवी श्रवणेन विसर्जयेत्** ಅಥವಾ
मूले चावाहयेद्देवी श्रवणे च विसर्जयेत् -

ಮೂಲಾನಕ್ಷತ್ರಯುಕ್ತ ಕಾಲದಲ್ಲಿ ದೇವಿಯನ್ನು ಆವಾಹಿಸಬೇಕು ಶ್ರವಣನಕ್ಷತ್ರಯುಕ್ತ ಕಾಲದಲ್ಲಿ ದೇವಿಯನ್ನು ವಿಸರ್ಜಿಸಬೇಕು.

ವಿ.ಸೂ.: ಕಾಲವಾಚಕವಲ್ಲದ ನಕ್ಷತ್ರಸಂಜ್ಞೆಯ ಮೇಲೆ ಕೇವಲ ಸಪ್ತಮೀ ವಿಭಕ್ತಿ ಮಾತ್ರ ಬರುತ್ತದೆ.

ಉದಾಹರಣೆ :

पुष्ये शनिः = ಪುಷ್ಯ ನಕ್ಷತ್ರದಲ್ಲಿ ಶನಿಯು.

xi) ಕರ್ತೃತ್ವಾದಿ ಅನೇಕ ಶಕ್ತಿಗಳ ನಡುವೆ ಪ್ರಯೋಗಿಸಿದ (ಅಥವಾ ಕೃತಿ ಮಧ್ಯಂತರವನ್ನು[3] ತೋರಿಸುವ) ಕಾಲವಾಚಕ, ಅಧ್ವವಾಚಕ (ಸ್ಥಳವಾಚಕ) ಶಬ್ದಗಳ ಮೇಲೆ ಪಂಚಮೀ ಅಥವಾ ಸಪ್ತಮೀ ವಿಭಕ್ತಿ ಬರುತ್ತದೆ.

ಉದಾಹರಣೆ : **अद्य भुक्त्वाऽयं द्व्यहे द्व्यहाद्वा भोक्ता**
= ಇಂದು ಉಂಡು ಇವನು ಎರಡು ದಿನ ಬಿಟ್ಟು ಉಣ್ಣುವನು.

---

[1] **प्रसितोत्सुकाभ्यां तृतीया च** (ಪಾ II, 3, 44) **आभ्यां योगे तृतीया स्यात् चात्सप्तमी** (ಸಿ. ಕೌ 641)

[2] **नक्षत्रे च लुपि** (ಪಾ II, 3, 45) **नक्षत्रे प्रकृत्यर्थे यो लुप्तसंज्ञया लुप्यमानस्य प्रत्ययस्यार्थस्तत्र वर्तमानात् तृतीया सप्तम्यौ स्तोऽधिकरणे** (ಸಿ. ಕೌ 642)

[3] **सप्तमीपञ्चम्यौ कारकमध्ये** (ಪಾ II, 3, 7)

Rarest Archiver

इहस्थोऽयं क्रोशात् क्रोशे वा लक्ष्यं विध्येत्

= ಇಲ್ಲಿ ನಿಂತು ಇವನು ಎರಡು ಮೈಲು ದೂರದಲ್ಲಿ ಗುರಿಯಿಡುವನು.

xii) अधि, उप ಕರ್ಮಪ್ರವಚನೀಯಗಳು ಈಶ್ವರಾರ್ಥಕ[1] (ಸ್ವಸ್ವಾಮಿ ಭಾವವಾಚಕವಾಗಿರುವಾಗ) ಮತ್ತು ಅಧಿಕಾರ್ಥಕಗಳಾಗಿರುವಾಗ ಇವುಗಳ ಯೋಗದಲ್ಲಿ ಬರುವ ಪದಗಳ ಮೇಲೆ ಸಪ್ತಮೀ ವಿಭಕ್ತಿ ಬರುತ್ತದೆ.

ಉದಾಹರಣೆ :

अधिभुवि रामः = ಭೂಮಿಗೆ ರಾಮನು ಒಡೆಯನು.

उपपरार्धे हरेर्गुणाः = ಹರಿಯ ಗುಣಗಳು ಪರಾರ್ಧಕ್ಕೂ ಹೆಚ್ಚಿಗೆ.

xiii) ಸ್ವಸ್ವಾಮಿಭಾವವನ್ನು ಬೋಧಿಸುವ **अधि** ಗೆ **कृञ् (कृ)** ಧಾತುವು ಪರವಾಗಿದ್ದಾಗ ಕರ್ಮಪ್ರವಚನೀಯ ಸಂಜ್ಞೆಯು ವಿಕಲ್ಪವಾಗಿ ಬರುತ್ತದೆ ; ಆಗ ದ್ವಿತೀಯಾ ಬರುತ್ತದೆ.

ಉದಾಹರಣೆ :

यदत्र माम् अधिकरिष्यति = ಇಲ್ಲಿ ನನ್ನನ್ನು ನಿಯೋಜಿಸುವನು.

೨. ಸಂಬಂಧಸಾಮಾನ್ಯ ಬೋಧಕ ವಿಭಕ್ತಿ

ಷಷ್ಠೀ ವಿಭಕ್ತಿ (The Genitive Case)

ಷಷ್ಠೀ ವಿಭಕ್ತಿಯು ಕ್ರಿಯಾಜನಕವಲ್ಲ ; ಆದ್ದರಿಂದ **शेषे षष्ठी**[2] ಎಂದಿರುವುದು. ಇದು ಸಂಬಂಧ[3] ಸಾಮಾನ್ಯಬೋಧಕವಾಗಿರುತ್ತದೆ. ಸಂಬಂಧವು ಸ್ವಸ್ವಾಮಿಭಾವ, ಗುರುಶಿಷ್ಯ, ಜನ್ಯಜನಕಭಾವ, ಅಂಗಾಂಗಿಭಾವ ಎಂದು ಮುಂತಾಗಿ ವಿವಿಧತೆಯುಳ್ಳದ್ದಾಗಿದೆ.

ಉದಾಹರಣೆ :

ಸ್ವಸ್ವಾಮಿಭಾವ : **राज्ञः पुरुषः** = ರಾಜನಿಗೆ ಸಂಬಂಧಿಸಿದ ಪುರುಷನು (ಸೈನಿಕನು.)

मम पुस्तकम् = ನನ್ನ ಪುಸ್ತಕವು.

ಗುರುಶಿಷ್ಯ : **द्रोणस्य शिष्यः** = ದ್ರೋಣನ ಶಿಷ್ಯನು.

ಜನ್ಯಜನಕಭಾವ : **जनकस्य सुता** = ಜನಕನ ಮಗಳು.

ಅಂಗಾಗಿ ಭಾವ : **तस्याश्वस्य चत्वारि खुरा एव** (ಉತ್ತರ. IV)

= ಆ ಕುದುರೆಗೆ ನಾಲ್ಕೇ ಖರಪುಟಗಳಿವೆ.

---

[1] **अधिरीश्वरे** (ಪಾ I, 4, 97) **यस्मादधिकं यस्य च ईश्वरवचनं तत्र सप्तमी** (ಪಾ II, 3, 9)
अत्र कर्मप्रवचनीययुक्ते सप्तमी स्यात् (ಸಿ. ಕೌ 645)

[2] (ಪಾ II, 3, 50)

[3] **कारकप्रादिपदिकार्थव्यतिरिक्तः स्वस्वामिभावादिसम्बन्धः शेषः** (ಸಿ. ಕೌ 606)

Rarest Archiver

i) ಸಂಬಂಧಮಾತ್ರ[1] ವಿವಕ್ಷೆಯಿರುವಾಗ ಕರ್ಮಾದಿ ಕಾರಕಗಳ ಮೇಲೂ ಷಷ್ಠೀ ವಿಭಕ್ತಿ ಬರುತ್ತದೆ.

ಉದಾಹರಣೆ : **सतां गतम्** = ಒಳ್ಳೆಯವರು ಹೋದ.

मातुः स्मरति = ತಾಯಿಯ ನೆನಪು ಮಾಡಿಕೊಳ್ಳುತ್ತಾಳೆ.

भजे शम्भोश्चरणयोः = ಶಂಭುವಿನ ಚರಣಗಳನ್ನು ಪೂಜಿಸುವೆ.

फलानां तृप्तः = ಹಣ್ಣಿನಿಂದ ತೃಪ್ತನಾದ.

ii) **हेतु**[2] ಶಬ್ದಪ್ರಯೋಗ ಮಾಡಿದಾಗ ಅಥವಾ ಹೇತುವು ತೋರಿದಾಗ ಆ ಹೇತು ಶಬ್ದದ ಮೇಲೆ ಮತ್ತು ಕಾರಣವಾಚಕ ಶಬ್ದದ ಮೇಲೆ ಸಂಬಂಧ ವಿವಕ್ಷೆಯಿದ್ದಲ್ಲಿ ಷಷ್ಠೀ ವಿಭಕ್ತಿ ಬರುತ್ತದೆ.

ಉದಾಹರಣೆ : **अन्नस्य हेतोर्वसति** = ಅನ್ನಕ್ಕಾಗಿ ಇರುತ್ತಾನೆ.

ವಿ.ಸೂ. ಸರ್ವನಾಮ ಶಬ್ದದ[3] ಮತ್ತು **हेतु** ಶಬ್ದದ ಪ್ರಯೋಗವಿದ್ದಾಗ, ಹೇತುವು ತೋರುವಾಗ ವೈಕಲ್ಪಿಕವಾಗಿ ತೃತೀಯಾ ಅಥವಾ ಷಷ್ಠೀ ವಿಭಕ್ತಿ ಬರುತ್ತದೆ.

ಉದಾಹರಣೆ : **रोदिषि कस्य हेतोः / रोदिषि केन हेतुना**

= ಯಾರ ಸಲುವಾಗಿ ಅಳುವೆ

iii) ಹೇತುವಿನ ಅರ್ಥದಲ್ಲಿ **निमित्त**[4] ಪರ್ಯಾಯ ಶಬ್ದವನ್ನು ಬಳಸಿದಾಗ ದ್ವಿತೀಯೆಯಿಂದ ಷಷ್ಠೀವಿಭಕ್ತಿಯವರೆಗೆ ಯಾವುದೇ ವಿಭಕ್ತಿಯೂ ಬರಬಹುದು.

ಉದಾಹರಣೆ :
किन्निमित्तं
केन निमित्तेन
कस्मै निमित्ताय
कस्मात् निमित्तात्
कस्य निमित्तस्य
} **वसति** = ಯಾರ ಸಲುವಾಗಿ ವಾಸಿಸುತ್ತಾನೆ?

iv) **अतस्**[5] **(अतः)** ಅವ್ಯಯವು **दिक्** ಶಬ್ದದೊಡನೆ ಬಂದಾಗ ಈ ಯೋಗದಲ್ಲಿ ಬರುವ ಪ್ರಾತಿಪದಿಕದ ಮೇಲೆ ಷಷ್ಠೀ ವಿಭಕ್ತಿಯು ಬರುತ್ತದೆ.

ಉದಾಹರಣೆ : **ग्रामस्य दक्षिणतः** = ಹಳ್ಳಿಯ ಬಲಗಡೆಗೆ .

ವಿ.ಸೂ.: **अन्य , आरात्, पूर्व** ಮುಂತಾದವುಗಳು ಬಂದಾಗ **ग्रामात् पूर्वः** ಎಂದು ಮುಂತಾಗಿ (ಪಾ II, 3, 29) ಪಂಚಮೀ ವಿಭಕ್ತಿ ಬರುತ್ತದೆ ಎಂದು ಹಿಂದೆ ಹೇಳಲಾಗಿದೆ. ಅದಕ್ಕೆ ಈ ನಿಯಮವು ಅಪವಾದವಾದುದು.

---

[1] **कर्मादीनामपि सम्बन्धमात्रविवक्षायां षष्ठ्येव** (ಸಿ. ಕೌ 606)

[2] **षष्ठी हेतुप्रयोगे** (ಪಾ II, 3, 26)

[3] **सर्वनाम्नो हेतुशब्दस्य च प्रयोगे हेतौ द्योत्ये तृतीया स्यात् षष्ठी च** (ಸಿ. ಕೌ 608)

[4] **निमित्तपर्यायप्रयोगे सर्वासां प्रायदर्शनम्** (ವಾರ್ತಿಕ 1473)

[5] **षष्ठ्यतसर्थप्रत्ययेन** (ಪಾ II, 3, 30)

Rarest Archiver

अग्रतः, अग्रे, अधः, उपरि, पुरः, पुरतः, पुरस्तात्, मध्ये ಈ ಅವ್ಯಯಗಳ ಯೋಗದಲ್ಲಿಯ ಪ್ರಾತಿಪದಿಕಗಳ ಮೇಲೆ ಷಷ್ಠೀ ಬರುತ್ತದೆ.

ಉದಾಹರಣೆ : **मातः संहर बाष्पवृत्तिमधुना कस्याग्रतो रुद्यते** (ನಾಗಾ. IV)
= ತಾಯಿಯೆ, ನಿನ್ನ ಕಣ್ಣೀರಿನ ವೇಗವನ್ನು ತಡೆ. ಈಗ ಯಾರ ಎದುರಿಗೆ ಅಳುವೆ ?

सद्मद्रुमाणामधः (ನಾಗಾ. IV) = ಮರಗಳಡಿಯೇ ಮನೆ.

गण्डस्योपरि पिण्डकः संवृत्थ (ಅ.ಶಾ.II)
= ಕುರುವಿನ ಮೇಲೆ ಬೊಕ್ಕೆಯುಂಟಾಯಿತು.

न युक्तमस्य भीमस्य पुरतः स्थातुम्
= ಈ ಭೀಮನೆದುರು ನಿಲ್ಲುವುದು ಯೋಗ್ಯವಲ್ಲ .

तेषां मध्ये स रघुसूनुर्धाम्ना रराज
= ಅವರ ಮಧ್ಯದಲ್ಲಿ ಆ ರಘುಸುತನು ತೇಜಸ್ಸಿನಿಂದ ಶೋಭಿಸಿದನು.

पुरुषपशोश्च पशोश्च को विशेषः
= ಪುರುಷಪಶುವಿಗೂ ಪಶುವಿಗೂ (ಈ ಎರಡರ ಮಧ್ಯೆ) ಯಾವ ವ್ಯತ್ಯಾಸ ?

v) ಏನಬಂತ[1] ದಿಕ್ ಶಬ್ದದ ಯೋಗವುಳ್ಳ ಪ್ರಾತಿಪದಿಕದ ಮೇಲೆ ವೈಕಲ್ಪಿಕವಾಗಿ ದ್ವಿತೀಯಾ ಅಥವಾ ಷಷ್ಠೀ ವಿಭಕ್ತಿ ಬರುತ್ತದೆ.

ಉದಾಹರಣೆ : **दक्षिणेन ग्रामं ग्रामस्य वा** = ಹಳ್ಳಿಯ ಬಲದಿಕ್ಕಿನಲ್ಲಿ.

धनपति गृहानुत्तरेण(ಮೇಘ. II, 15) = ಕುಬೇರನ ಮನೆಯ ಉತ್ತರದಲ್ಲಿ...

इतो जटायुशिखरस्य दक्षिणेन (ಉತ್ತರ. III) = ಈ ಕಡೆಯಿಂದ ಜಟಾಯು ಶಿಖರದ ಬಲಗಡೆಗೆ.

vi) **दूर** ಮತ್ತು **अन्तिक** [2] ಇವುಗಳ ಹಾಗೂ ಇವುಗಳ ಅರ್ಥವನ್ನು ಕೊಡುವ **निकटम्** ಮುಂತಾದ ಶಬ್ದಗಳ ಯೋಗದಲ್ಲಿ ಬರುವ ಪ್ರಾತಿಪದಿಕಗಳ ಮೇಲೆ ವೈಕಲ್ಪಿಕವಾಗಿ ಪಂಚಮೀ ಅಥವಾ ಷಷ್ಠೀ ವಿಭಕ್ತಿ ಬರುತ್ತದೆ.

ಉದಾಹರಣೆ : **दूरं ग्रामस्य ग्रामाद्वा** = ಹಳ್ಳಿಗೆ ದೂರದಲ್ಲಿ.

अन्तिकं (निकटं) वनात्, वनस्य वा = ವನಕ್ಕೆ ಹತ್ತಿರವಾಗಿ.

vii) ಜ್ಞಾನಾರ್ಥಕ್ಕೆ ಭಿನ್ನವಾದ ಅರ್ಥವನ್ನು ಬೋಧಿಸುವ **ज्ञा**[3] ಧಾತುವಿನ ಪ್ರಯೋಗವಿದ್ದಾಗ ಕರಣಕಾರಕವು ಸಂಬಂಧ ಸಾಮಾನ್ಯ ವಿವಕ್ಷಿತವಾಗಿದ್ದಲ್ಲಿ ಷಷ್ಠೀ ಬರುತ್ತದೆ.

---

[1] **एनपा द्वितीया** (ಪಾ II, 3, 31) **एनबन्तेन योगे द्वितीया स्यात्** (ಸಿ. ಕೌ 610)
उत्तर + एनप् = उत्तरेण, दक्षिण + एनप् = दक्षिणेन ಮುಂತಾದವುಗಳು.

[2] **दूरान्तिकार्थैः षष्ठ्यन्यतरस्याम्** (ಪಾ II, 3, 34)

[3] **ज्ञोऽविदर्थस्य करणे** (ಪಾ II, 3, 51)

Rarest Archiver

ಉದಾಹರಣೆ : **सर्पिषः ज्ञानम्** = ತುಪ್ಪದ ಸಂಬಂಧವಾಗಿ (ಕರಿಯುವುದಕ್ಕೆ) ತೊಡಗಿರುವುದು.

viii) ಅಧೀಗ[1] ರ್ಥ[2] ಕ ಧಾತುಗಳಿಗೆ (= ಸ್ಮರಣಾರ್ಥಕ ಧಾತುಗಳಿಗೆ) ಮತ್ತು **दय्, ईश्** ಇವುಗಳಿಗೆ ಕರ್ಮವಾಗಿರತಕ್ಕ ಪ್ರಾತಿಪದಿಕಗಳ ಮೇಲೆ ಸಂಬಂಧ ಸಾಮಾನ್ಯವಿವಕ್ಷೆಯಿರುವಾಗ ಷಷ್ಠೀ ವಿಭಕ್ತಿ ಬರುತ್ತದೆ.

ಉದಾಹರಣೆ :

मातुः स्मरणं करोति = ತಾಯಿಯ ನೆನಪು ಮಾಡಿಕೊಳ್ಳುತ್ತಾನೆ.

कच्चिद्भर्तुः स्मरसि रसिके (ಮೇಘ.II, 22)
= ರಸಿಕಳೇ, ನೀನು ನಿನ್ನ ಪತಿಯನ್ನು ನೆನಪಿಸಿಕೊಳ್ಳುವಿಯಾ?

सस्मार वनवासमहोत्सवानाम् (ಮಾಘ.V, 50)
= ...ವನವಾಸ ಮಹೋತ್ಸವವನ್ನು ನೆನಪಿಸಿಕೊಂಡನು.

एतेऽपि भद्रमुखास्तव दयन्ताम् (ದಶ.ಕು.II)
= ಈ ಪೂಜ್ಯರು ನಿನ್ನನ್ನು ದಯೆಯಿಂದ ಕಾಣಲಿ.

तेषां दयसे न कस्मात् (ಭಟ್ಟಿ.II, 33) = ನೀನೇಕೆ ಅವರನ್ನು ದಯೆಯಿಂದ ಕಾಣುತ್ತಿಲ್ಲ?

अर्थानामीशिषे त्वम् (ಭರ್ತೃ.ವೈ.ಶ.53) = ನೀನು ಐಶ್ವರ್ಯಗಳಿಗೊಡೆಯನು.

प्र + भू ಧಾತುಯೋಗವುಳ್ಳ ಪ್ರಾತಿಪದಿಕದ ಮೇಲೆ ಷಷ್ಠೀ ವಿಭಕ್ತಿ ಬರುತ್ತದೆ.

ಉದಾಹರಣೆ :

मदनसन्तप्तापि न खल्वात्मनः प्रभवामि (ಅ.ಶಾ. IV)
= ಮನಸಂತೃಪ್ತಳಾದರೂ ನನ್ನ ಮೇಲೆ ನನಗೆ ಅಧಿಕಾರವಿಲ್ಲ.

ix) ಪ್ರತಿಯತ್ನಾರ್ಥ[3] (ಗುಣಾಧಾನಾರ್ಥ)ವನ್ನು ಬೋಧಿಸುವ **कृञ् (कृ)** ಧಾತುವಿನ ಕರ್ಮಪದಕ್ಕೆ ಶೇಷತ್ವವಿವಕ್ಷೆಯಿದ್ದಾಗ ಷಷ್ಠೀವಿಭಕ್ತಿ ಬರುತ್ತದೆ.

ಉದಾಹರಣೆ :

एधोदकस्य उपस्करम्
= ಕಟ್ಟಿಗೆಯು ನೀರಿಗೆ ಗುಣಾಂತರವನ್ನುಂಟುಮಾಡುತ್ತದೆ.

यामि त्वरावान् शैलेन्द्र मा कस्यचिदुपस्कृथाः(ಭಟ್ಟಿ. VIII, 19)
= ಶೈಲೇಂದ್ರನೇ ಬೇಗಬೇಗನೆ ಹೋಗುತ್ತೇನೆ ; ನೀನು ಯಾವುದಕ್ಕೂ ಬೇಸರಿಸಬೇಡ.

---

[1] **अधि + इक् = इक् स्मरणे** - ಸ್ಮರಣಾರ್ಥಕ ಶಬ್ದವೆಂದರ್ಥ.

[2] **अधीगर्थदयेशां कर्मणि** (ಪಾ II, 3, 52)

[3] **कृञः प्रतियत्ने** (ಪಾ II, 3, 53)
प्रतियत्नो गुणाधानम् कृञः कर्मणि शेषे षष्ठी स्यात् गुणाधाने (ಸಿ. ಕೌ 614)

Rarest Archiver

x) ಜ್ವರವ್ಯತಿರಿಕ್ತವಾದ ಭಾವಕರ್ತೃಕಗಳಾದ ರುಜಾರ್ಥಕ [1] ಧಾತುಗಳಿಗೆ ಕರ್ಮೀಭೂತವಾದ ವಸ್ತುವಿನ ಶೇಷತ್ವವಿವಕ್ಷೆಯಿದ್ದಲ್ಲಿ ಷಷ್ಠೀ ಬರುತ್ತದೆ.

ಉದಾಹರಣೆ :

चौरस्य रोगस्य रुजा = ಕಳ್ಳನಿಗೆ ರೋಗವು ಕೊಡುವ ಪೀಡೆ.

पुरुषस्य रुजयत्यतिसारः = ಅತಿಸಾರವು (Dysentery) ಮನುಷ್ಯನನ್ನು ಬಾಧಿಸುತ್ತದೆ.

ವಿ.ಸೂ.: 'ಜ್ವರ' ಮತ್ತು 'ಸಂತಾಪ' ಶಬ್ದಗಳು ಕರ್ತೃವಾಚಕವಿದ್ದಲ್ಲಿ ಕರ್ಮಾರ್ಥವಾಚಕಶಬ್ದವು ದ್ವಿತೀಯಾ ವಿಭಕ್ತಿಯನ್ನೇ ಹೊಂದುತ್ತದೆ.

ಉದಾಹರಣೆ :

तं रुजयति ज्वरः = ಜ್ವರವು ಅವನನ್ನು ಬಾಧಿಸುತ್ತದೆ.

xi) ಅಪೇಕ್ಷಾರ್ಥದಲ್ಲಿಯ[2] (ಆಶಿಷಿ) **नाथ्** ಧಾತುವಿನ ಕ್ರಿಯಾನಿರೂಪಿತವಾದ ಕರ್ಮಕ್ಕೆ ಶೇಷತ್ವವಿವಕ್ಷೆಯಿರುವಾಗ ಷಷ್ಠೀ ವಿಭಕ್ತಿ ಬರುತ್ತದೆ.

ಉದಾಹರಣೆ :

सर्पिषः नाथनम् = ತುಪ್ಪವಿರಲೆಂದು ಬಯಸುವುದು.

अधिकारस्य नाथनम् = ಅಧಿಕಾರವಿರಲೆಂದು ಬಯಸುವುದು.

xii) ಹಿಂಸಾರ್ಥಬೋಧಕವಾಗಿ **जास्**[3], **नि + हन्, प्र + हन्, नट्, क्रथ्, पिष्** ಈ ಧಾತುಗಳು ಬಂದಿರುವಾಗ ಇವುಗಳ ಕರ್ಮಪದಕ್ಕೆ ಶೇಷತ್ವವಿವಕ್ಷೆಯಿದ್ದರೆ ಷಷ್ಠೀ ವಿಭಕ್ತಿ ಬರುತ್ತದೆ.

ಉದಾಹರಣೆ :

राजा चौरस्य उज्जासयति = ರಾಜನು ಕಳ್ಳತನವನ್ನು ನಿರ್ಮೂಲ ಮಾಡುತ್ತಾನೆ.

निजौजसोज्जासयितुं जगद्द्रुहाम् (ಶಿಶು. I.37)
= ತನ್ನ ಶಕ್ತಿಯಿಂದ ಜಗತ್ತಿನ ಶತ್ರುಗಳನ್ನು ನಾಶಗೊಳಿಸಲು....

राक्षसानां निहनिष्यति प्रहणिष्यति वा = ರಾಕ್ಷಸರನ್ನು ಕೊಲ್ಲುವನು.

चोरः पथिकस्य उन्नाटयति क्राथयति वा = ಕಳ್ಳನು ದಾರಿಕಾರನನ್ನು ಹಿಂಸಿಸುತ್ತಾನೆ.

सन्तः वृषलस्य पेषणं न सहन्ते = ಯೋಗ್ಯರು ಶೂದ್ರನಿಗೆ ಆಗುತ್ತಿರುವ ಹಿಂಸೆಯನ್ನು ಸಹಿಸುವುದಿಲ್ಲ.

---

[1] **रुजार्थानां भाववचनानामज्वरेः** (ಪಾ II, 3, 54)
भावकर्तृकाणां ज्वरवर्जितानां रुजार्थानां कर्मणि शेषे षष्ठी स्यात् (ಸಿ. ಕೌ 615)

[2] **आशिषिनाथः** (ಪಾ II, 3, 55)

[3] **जासिनिप्रहणनाटक्राथपिषां हिंसायाम्** (ಪಾ II, 3, 56)

Rarest Archiver

xiii) **वि, अव**[1] ಎಂಬ ಉಪಸರ್ಗದ್ವಯಾತ್ಮಕವಾದ **हृ (व्यवहृ)** ಮತ್ತು **पण्** ಈ ಧಾತುಗಳು ವ್ಯವಹಾರಾರ್ಥದಲ್ಲಿ ಮತ್ತು ದ್ಯೂತದಲ್ಲಿ ಸಮಾನಾರ್ಥಕವನ್ನು ಹೊಂದಿರಲು ಶೇಷತ್ವವಿವಕ್ಷೆಯಿರುವಾಗ ಇವುಗಳ ಕರ್ಮಕಾರಕದ ಮೇಲೆ ಷಷ್ಠೀವಿಭಕ್ತಿ ಬರುತ್ತದೆ. **दिव्**[2] ಧಾತುವೂ ದ್ಯೂತಾರ್ಥದಲ್ಲಿದ್ದರೆ ಇದೇ ನಿಯಮವು ಅನ್ವಯಿಸುತ್ತದೆ.

ಉದಾಹರಣೆ :

शतस्य व्यवहरति = ನೂರು ರೂ.ಗಳನ್ನು ವ್ಯವಹಾರಕ್ಕೆ ತೊಡಗಿಸುತ್ತಾನೆ. (ನೂರರ ವ್ಯವಹಾರ ಮಾಡುತ್ತಾನೆ.)

शतस्य दीव्यति[3] = ನೂರರ (ನೂರು ರೂ.ಗಳ ಪಣದ) ಪಗಡೆಯಾಡುತ್ತಾನೆ.

युधिष्ठिरो राज्यसम्पदाम् अपणिष्ट = ಯುಧಿಷ್ಠಿರನು ರಾಜ್ಯಕೋಶವನ್ನೇ ಪಣವಾಗಿ ಒಡ್ಡಿದನು.

xiv) ಉಪಸರ್ಗ ವಿಶಿಷ್ಟವಾಗಿರುವ[4] **दिव्** ಧಾತುಕ್ರಿಯಾ ನಿರೂಪಿತವಾದ ಕರ್ಮಪದಕ್ಕೆ ವೈಕಲ್ಪಿಕವಾಗಿ ಷಷ್ಠೀ ವಿಭಕ್ತಿ ಬರುತ್ತದೆ.

ಉದಾಹರಣೆ :

शतस्य शतं वा प्रतिदीव्यति = ನೂರರ (ನೂರು ರೂ.ಗಳ) ಪಣವುಳ್ಳ ದಾಳವುರುಳಿಸುತ್ತಾನೆ.

xv) ಕೃತ್ವೋಽರ್ಥವಿರುವಾಗ[5] (**संख्याया क्रियाभ्यावृत्तिगणने कृत्वसुच् ----> कृत्व ---> एककृत्वः** ಒಂದು ಸಾರೆ ಎಂದು ಮುಂತಾಗಿ) ಕಾಲವಾಚಕವಾದ ಅಧಿಕರಣಕ್ಕೆ ಶೇಷತ್ವವಿವಕ್ಷೆಯಿದ್ದರೆ ಷಷ್ಠೀ ವಿಭಕ್ತಿ ಬರುತ್ತದೆ.

ಉದಾಹರಣೆ : **पञ्चकृत्वोऽह्नो भोजनम्** = ದಿನಕ್ಕೆ ಐದು ಸಾರೆ ಊಟ.

त्रिःकृत्वोऽह्नो पूजनम् = ದಿನಕ್ಕೆ ಮೂರು ಸಾರೆ ಪೂಜೆ.

xvi) ಕರ್ತ್ರರ್ಥ ಅಥವಾ ಕರ್ಮಾರ್ಥದಲ್ಲಿರುವ ಕೃದಂತ[6] ಶಬ್ದದ ಯೋಗವಿರುವಾಗ ಶೇಷತ್ವ ವಿವಕ್ಷೆಯಿದ್ದಲ್ಲಿ ಷಷ್ಠೀ ವಿಭಕ್ತಿ ಬರುತ್ತದೆ. ಉದಾಹರಣೆ :

कृष्णस्य कृतिः [कृष्णकर्तृका सृष्टिरित्यर्थः] = ಕೃಷ್ಣನ (ಕೃಷ್ಣನು ಮಾಡಿದ) ಕೆಲಸ.

सतां पालकः = ಒಳ್ಳೆಯವರನ್ನು ರಕ್ಷಿಸುವವ.

आहर्ता क्रतूनाम् = ಯಜ್ಞಗಳನ್ನು ನಡೆಸುವವ.

---

[1] **व्यवहृपणोः समर्थयोः** (ಪಾ II, 3, 57) **द्यूते क्रयविक्रयव्यवहारे चानयोस्तुल्यार्थता** (ಸಿ. ಕೌ 618)

[2] **दिवस्तदर्थस्य** (ಪಾ II, 3, 58)

[3] **दिव्** ಧಾತುವು 'ಸ್ತುತಿಸು' ಎಂಬ ಅರ್ಥದಲ್ಲಿದ್ದರೆ '**इन्द्रं दीव्यति**' (ಇಂದ್ರನನ್ನು ಸ್ತುತಿಸುತ್ತಾನೆ) ಎನ್ನುವಲ್ಲಿ ಬಂದಂತೆ ದ್ವಿತೀಯಾ ವಿಭಕ್ತಿ ಬರುತ್ತದೆ.

[4] **विभाषोपसर्गे** (ಪಾ II, 3, 59)

[5] **कृत्वोऽर्थप्रयोगे कालेऽधिकरणे** (ಪಾ II, 3, 64)

[6] **कर्तृकर्मणोः कृतिः** (ಪಾ II, 3, 65) **कृद्योगे कर्तरि कर्मणि च षष्ठी स्यात्** (ಸಿ. ಕೌ 623)

Rarest Archiver

xvii) ಒಂದೇ ಕೃದಂತದಲ್ಲಿ ಕರ್ತೃ ಕರ್ಮಗಳೆರಡಕ್ಕೂ[1] ಷಷ್ಠೀ ಪ್ರಸಂಗ ಬಂದಾಗ ಕರ್ಮ ಪದಾರ್ಥದ ಮೇಲೆಯೇ ಷಷ್ಠೀ ಬರುತ್ತದೆ.

ಉದಾಹರಣೆ : **आश्चर्यो गवां दोहोऽगोपेन**

= ಗೋಪನಲ್ಲದವನು ಆಕಳನ್ನು ಹಿಂಡುವುದು ಆಶ್ಚರ್ಯ.

xviii) ವರ್ತಮಾನಾರ್ಥದಲ್ಲಿ ವಿಹಿತವಾದ **क्त**[2] ಪ್ರತ್ಯಯಾಂತ [ಭೂತ ಕೃದಂತ] ಶಬ್ದದ ಯೋಗವುಳ್ಳ ಪ್ರಾತಿಪದಿಕದ ಮೇಲೆ ಷಷ್ಠೀ ಬರುತ್ತದೆ.

ಉದಾಹರಣೆ : **राज्ञां पूजितः सः** = ರಾಜನಿಂದ ಪೂಜಿಸಲ್ಪಟ್ಟವನಾದ ಅವನು.

ಇದೇ ರೀತಿ **राज्ञां बुद्धः मतो वा** = ರಾಜನಿಂದ ತಿಳಿಯಲ್ಪಟ್ಟವನು / ಗೌರವಿಸಲ್ಪಟ್ಟವನು

xix) ಅಧಿಕರಣಾರ್ಥದಲ್ಲಿ[3] ಬಂದ **क्त** ಪ್ರತ್ಯಯಾಂತ ಶಬ್ದದ ಯೋಗವಿದ್ದಾಗ ಪ್ರಾತಿಪದಿಕವು ಷಷ್ಠೀ ವಿಭಕ್ತಿಯಲ್ಲಿ ಬರುತ್ತದೆ.

ಉದಾಹರಣೆ :

रामस्य शयितं भुक्तं जल्पितं हसितं स्थितम् ।
प्रक्रान्तं च मुहुः पृष्ट्वा हनूमन्तं व्यसर्जयत् ॥ (ಭಟ್ಟಿ VIII, 126)

= ರಾಮನು ನಿದ್ರೆಗೈಯುವ (ಎಲ್ಲಿ ನಿದ್ರೆಗೈಯುತ್ತಾನೋ ಎಂದು ಮುಂತಾದ) ಊಟ ಮಾಡುವ, ಮಾತನಾಡುವ, ನಗುವ, ಇರುವ, ತಿರುಗಾಡುವ ವಿಷಯಗಳನ್ನು ಪದೇ ಪದೇ ಕೇಳುತ್ತಾ (ಸೀತೆಯು) ಹನುಮಂತನನ್ನು ಬೀಳ್ಕೊಟ್ಟಳು.

ಮತ್ತೊಂದು ಉದಾಹರಣೆ :

इदं मयूरस्य नृत्तं प्रदेशम्

= ಇದು ಮಯೂರವು ನರ್ತಿಸಿದ ಸ್ಥಳ.

xx) ಕರ್ಮಣಿ ವಿಧ್ಯರ್ಥ[4] ಕೃದಂತ (**कृत्य**) ಯೋಗವಿದ್ದಲ್ಲಿ ಕರ್ತೃವಾಚಕ ಶಬ್ದದ ಮೇಲೆ ವೈಕಲ್ಪಿಕವಾಗಿ ಷಷ್ಠೀ ಬರುತ್ತದೆ.

ಉದಾಹರಣೆ :

मया मम वा सेव्यो हरिः = ಹರಿಯು ನನ್ನಿಂದ ಸೇವಿಸಲ್ಪಡಬೇಕು.

भवानेवास्माकं पूज्यः (ನಾಗಾ.I) = ನೀನೇ ನಮಗೆ ಪೂಜ್ಯನು.

---

[1] **उभयप्राप्तौ कर्मणि** (ಪಾ II, 3, 66)

[2] **क्तस्य च वर्तमाने** (ಪಾ II, 3, 67) [3] **अधिकरणवाचिनश्च** (ಪಾ II, 3, 68)

[4] **कृत्यानां कर्तरि** (ಪಾ II, 3, 71)

Rarest Archiver

xxi) ಸದೃಶಾರ್ಥಕವಾದ[1] **तुल्य , सदृश, सम** ಮುಂತಾದವುಗಳ ಯೋಗವಿದ್ದಾಗ ವೈಕಲ್ಪಿಕವಾಗಿ ಷಷ್ಠೀ ಅಥವಾ ತೃತೀಯಾ ವಿಭಕ್ತಿ ಬರುತ್ತದೆ.

ಉದಾಹರಣೆ :

तुल्यः / समः /सदृशः / उपमा कृष्णेन कृष्णस्य वा कोऽपि नास्ति

= ಕೃಷ್ಣನಿಗೆ ಸಮನಾದವನು ಯಾವನೂ ಇಲ್ಲ.

xxii) ಹಾರೈಕೆಯೇ ಮುಂತಾದ ಅರ್ಥಗಳಲ್ಲಿ **आयुष्य**[2], **मद्र, भद्र, कुशल, सुख, अर्थ, हित** ಶಬ್ದಗಳ ಮತ್ತು ಇವುಗಳ ಅರ್ಥವನ್ನು ಕೊಡುವ ಶಬ್ದಗಳ ಯೋಗದಲ್ಲಿ ಬರುವ ಪ್ರಾತಿಪದಿಕಗಳ ಮೇಲೆ ಚತುರ್ಥೀ ಅಥವಾ ಷಷ್ಠೀ ವಿಭಕ್ತಿ ಬರುತ್ತದೆ.

ಉದಾಹರಣೆ :

आयुष्यं चिरं जीवितं कृष्णस्य कृष्णाय वा भूयात्

= ಕೃಷ್ಣನಿಗೆ ದೀರ್ಘಾಯುಷ್ಯವುಂಟಾಗಲಿ.

राघवाभ्यां राघवाणां वा शिवम् = ರಾಘವರಿಗೆ ಹಿತಕರವಾದ.

अपि कुशलं भवते भवतो वा = ನಿಮಗೆ ಕ್ಷೇಮವಷ್ಟೇ !

स्वागतं महाभागस्य = ಮಹಾಭಾಗ್ಯಶಾಲಿಗೆ ಸ್ವಾಗತವು.

भर्तुर्बहुमता भव (ಅ.ಶಾ. IV) = ಪತಿಗೆ ಪ್ರೀತಿಯವಳಾಗು.

xxiii) ಅನುಕರಣಾರ್ಥಕ ವಾಕ್ಯದಲ್ಲಿ ಕರ್ಮವಾಚಕ ಶಬ್ದದ ಮೇಲೆ ಷಷ್ಠೀವಿಭಕ್ತಿ ಬರುತ್ತದೆ.

ಉದಾಹರಣೆ :

अनुकरोति भगवतो नारायणस्य

= ಭಗವಂತನಾದ ನಾರಾಯಣನನ್ನು ಹೋಲುತ್ತಾನೆ.

xxiv) **कृते** ಮತ್ತು **समक्षम्** ಇವುಗಳ ಯೋಗವುಳ್ಳ ಪ್ರಾತಿಪದಿಕಗಳ ಮೇಲೆ ಷಷ್ಠೀ ವಿಭಕ್ತಿ ಬರುತ್ತದೆ.

ಉದಾಹರಣೆ : **मया खलु मदनिकायाः कृते साहसमनुष्ठितम्**

= ಮದನಿಕೆಗಾಗಿ ನನ್ನಿಂದ ಸಾಹಸವು ಆಚರಿಸಲ್ಪಟ್ಟಿತು.

परिणीतं वह्नेः समक्षम्

= ಅಗ್ನಿಯ ಎದುರು ಮದುವೆಯಾಯಿತು.

---

[1] **तुल्यार्थैरतुलोपमाभ्यां तृतीयान्यतरस्याम्** (ಪಾ II, 3, 72)

[2] **चतुर्थीचाशिष्यायुष्यमद्रभद्रकुशलसुखार्थहितैः** (ಪಾ II, 3, 73)

Rarest Archiver

xxv) ಅನಾದರವು[1] ತೋರುತ್ತಿರುವಾಗ ಯಾವ ಕ್ರಿಯೆಯಿಂದ ಕ್ರಿಯಾಂತರವು ತೋರಲ್ಪಡುತ್ತದೆಯೋ ಅದರ ಮೇಲೆ ವೈಕಲ್ಪಿಕವಾಗಿ ಷಷ್ಠೀ ಅಥವಾ ಸಪ್ತಮೀ ವಿಭಕ್ತಿ ಬರುತ್ತದೆ. ಇದಕ್ಕೆ ' ಸತಃ ಷಷ್ಠೀ'(**Genitive Absolute**) ಎಂದೂ ಕರೆಯಬಹುದು; (ಸಪ್ತಮೀ ವಿಭಕ್ತಿ ಬಂದಲ್ಲಿ ಸತಿ ಸಪ್ತಮೀ).

ಉದಾಹರಣೆ :

रुदति रुदतो वा प्राव्राजीत्

= ಅಳುತ್ತಿರುವಾಗಲೇ (ಮಗುವಿನ ಅಳುವನ್ನು ಅನಾದರಿಸಿ) ಹೋದನು.

पश्यन्त्या एव च मे / पश्यन्त्याम् एव च मयि

सर्वे एव ते तारागणमध्यमविशन् (ಕಾದಂ.)

= ನಾನು ನೋಡುತ್ತಿರುವಂತೆಯೇ ಎಲ್ಲರೂ ತಾರಾಗಣಮಧ್ಯವನ್ನು ಸೇರಿದರು.

तस्माच्चु मिथुनादेकं पुमांसं पापनिश्चयः ।

जघान वैरनिलयो निषादस्तस्य पश्यतः । ।

(ರಾ.ಬಾ.ಕಾಂ.. II; 10)

ಅವನು ನೋಡುತ್ತಿರುವಂತೆಯೇ ವೈರತ್ವದ ನಿಲಯನಾದ ಬೇಡನೊಬ್ಬನು ಪಾಪವನ್ನಾಚರಿಸಲು ನಿಶ್ಚಯಿಸಿದವನಾಗಿ ಗಂಡು ಹಕ್ಕಿಯನ್ನು ಕೊಂದನು.

। ।वाचामेव प्रसादेन लोकयात्रा प्रवर्तते। ।

इति शम्

[1] **षष्ठी चानादरे** (ಪಾ II, 3, 38) **अनादराधिक्ये भावलक्षणे षष्ठीसप्तम्यौ स्तः** (ಸಿ. ಕೌ 535)

ಕೆ.ಸಂ. ೭೪೫೪ - ಎಂ.ಯು.ಪಿ.ಎಂ - ೩,೦೦೦ ಪ್ರತಿಗಳು - ೨೭.೧೧.೨೦೦೨

Rarest Archiver

ಪ್ರಸಾರಾಂಗದ ಕೆಲವು ಪ್ರಕಟಣೆಗಳು

1	ಪಂಪಭಾರತ – ಭಾಗ–1 (1–8 ಆಶ್ವಾಸಗಳು)	ರೂ. 75–00
2	ಪಂಪಭಾರತ – ಭಾಗ–2 (9–14 ಆಶ್ವಾಸಗಳು)	ರೂ. 60–00
3	ಭಾರತೀಯ ಕಾವ್ಯಮೀಮಾಂಸೆ – ತೀ.ನಂ.ಶ್ರೀ	ರೂ.100–00
4	ಮಕ್ಕಳ ಸಂವೇಗಗಳು ಮತ್ತು ಸಂವೇಗಾತ್ಮಕ ಸಮಸ್ಯೆಗಳು – ಪ್ರಾ. ಬಿ. ನಟರಾಜ್	ರೂ. 50–00
5	ಕನ್ನಡ ಗ್ರಂಥಸೂಚಿ – ಸಂ.9	ರೂ.350–00
6	ಮರಾಠರ ಅತಿಕ್ರಮಣ – ಮೈಸೂರು ಪ್ರತಿಭಟನೆ – ಡಾ. ಬಿ. ಮುದ್ದಾಚಾರಿ	ರೂ.120–00
7	ಭಾರತದ ಪ್ರೌಢ ಇತಿಹಾಸ – ಮೂಲ: ಮಜುಂದಾರ್, ಅನು. ಶಾರದಾಪ್ರಸಾದ್	ರೂ.500–00
8	ಕಾವೇರಿ ಮಾಹಾತ್ಮ್ಯೆ – ಸಂ. ಎಂ.ಪಿ.ಮಂಜಪ್ಪಶೆಟ್ಟಿ	ರೂ.400–00
9	ಶ್ರೀ ಸಿದ್ದೇಶ್ವರ ಪುರಾಣ – ಸಂ. ಮೈಲಹಳ್ಳಿ ರೇವಣ್ಣ	ರೂ.200–00
10	ಧರ್ಮಶಾಸ್ತ್ರದ ಇತಿಹಾಸ – ಸಂ. 1, ಭಾಗ 2 ಮೂಲ: ಪಾಂಡುರಂಗ ವಾಮನ ಕಾಣೆ	ರೂ.350–00
11	ಶ್ರೀ ವ್ಯಾಸರಾಯರ ಕೃತಿಗಳು (ಜನಪ್ರಿಯ) – ಸಂ. ಟಿ.ಎನ್. ನಾಗರತ್ನ	ರೂ. 60–00
12	ಶ್ರೀ ವ್ಯಾಸರಾಯರ ಕೃತಿಗಳು (ಪಂಡಿತ) – ಸಂ. ಟಿ.ಎನ್. ನಾಗರತ್ನ	ರೂ.150–00
13	ಎಪಿಗ್ರಾಫಿಯಾ ಕರ್ನಾಟಿಕ ಸಂ. 12 (ಚಿಕ್ಕಮಗಳೂರು ಜಿಲ್ಲೆ)	ರೂ.750–00
14	ಇಂಗ್ಲಿಷ್–ಕನ್ನಡ ನಿಘಂಟು (ಪರಿಷ್ಕೃತ) (A-D)	ರೂ.200–00
15	ಇಂಗ್ಲಿಷ್–ಕನ್ನಡ ನಿಘಂಟು (ಪರಿಷ್ಕೃತ) (E-L)	ರೂ.200–00
16	ಇಂಗ್ಲಿಷ್–ಕನ್ನಡ ನಿಘಂಟು (ಪರಿಷ್ಕೃತ) (M-R)	ರೂ.150–00
17	ಇಂಗ್ಲಿಷ್–ಕನ್ನಡ ನಿಘಂಟು (ಪರಿಷ್ಕೃತ) (S-Z)	ರೂ.200–00
18	ಸಿವಿಲ್ ಎಂಜಿನಿಯರಿಂಗ್ ಮೇಲೆ ವಿಜ್ಞಾನದ ಪ್ರಭಾವ – ಶ್ರೀ ಎಂ.ಜಿ. ಶ್ರೀನಿವಾಸನ್	ರೂ. 55–00